ಮಂಗಳೂರು
ಬುಧವಾರ, 1 ಜುಲೈ 2026
ಸಂಪುಟ 48, ಸಂಚಿಕೆ 104 ಪುಟಗಳು 12+12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕರಗುತ್ತಿದೆ ರಸ್ತೆ, ಬಾಗುತ್ತಿದೆ ಹಳಿ! | ೦೩
ಸ್ವಾತಂತ್ರ್ಯಕ್ಕಾಗಿ ಪಿಒಕೆ ಜನರ ಹೋರಾಟ | ೦೩
ವಿದೇಶಿ ದೇಣಿಗೆ ಮೇಲೆ ಕಣ್ಗಾವಲು | ೦೩

ಬಂಡಿಪುರ, ನಾಗರಹೊಳೆ ಸಫಾರಿ ಆರಂಭಕ್ಕೆ ಸೂಚನೆ

ಸಫಾರಿಗೆ ಸುರಕ್ಷತಾ ಕ್ರಮ ಪಾಲಿಸಿ: ಸಿಎಂ

ಬೆಂಗಳೂರು: ಅಗತ್ಯ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಬಂಡಿಪುರ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳಲ್ಲಿನ ಸಫಾರಿ ಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಪುನರಾರಂಭಿಸಲು ಸಿಎಂ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವಿಧಾನಸೌಧದಲ್ಲಿ ಮಂಗಳವಾರ ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಸಭೆಯಲ್ಲಿ ಅಧಿಕಾರಿಗಳು ನೀಡಿದ ಮಾಹಿತಿಯಂತೆ, ಬಂಡಿಪುರ ಮತ್ತು ನಾಗರಹೊಳೆ ಪರಿಸರ ಪ್ರವಾಸೋದ್ಯಮ ಹಾಗೂ ಸಫಾರಿ ಪ್ರದೇಶಗಳಲ್ಲಿ ಹುಲಿಗಳು ಮತ್ತು ಚಿರತೆಗಳ ಸಾಂದ್ರತೆ, ಮಾನವ ವನ್ಯಜೀವಿ ಸಂಘರ್ಷ ಹೆಚ್ಚಿರುವ ಪ್ರದೇಶಗಳಿಗಿಂತ ಅಧಿಕವಾಗಿದೆ. ಈ ಹಿನ್ನೆಲೆಯಲ್ಲಿ ಪ್ರವಾಸಿಗರ ಸುರಕ್ಷತೆಗೆ ಯಾವುದೇ ಧಕ್ಕೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಹಾಗೂ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಸಫಾರಿ ಚಟುವಟಿಕೆಗಳನ್ನು ಆರಂಭಿಸುವಂತೆ ಸೂಚಿಸಿದರು.



ಅಧಿಕಾರಿಗಳ ಪ್ರಕಾರ, ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ಅನುಮತಿ ನೀಡುವ ಸಂದರ್ಭದಲ್ಲಿ ವನ್ಯಜೀವಿಗಳ ಸುರಕ್ಷಿತ ಸಂಚಾರಕ್ಕಾಗಿ ಅಗತ್ಯ ಮೇಲ್ಸೇತುವೆ, ಕೆಳಸೇತುವೆ ಮತ್ತು ವನ್ಯಜೀವಿ ಕಾರಿಡಾರ್‌ಗಳನ್ನು ನಿರ್ಮಿಸುವ ಷರತ್ತು ವಿಧಿಸಲಾಗಿತ್ತು. ಆದರೆ ರಸ್ತೆ ನಿರ್ಮಾಣದ ವೇಳೆ ಈ ಷರತ್ತುಗಳನ್ನು ಸಮರ್ಪಕವಾಗಿ ಪಾಲಿಸಲಾಗಿಲ್ಲ ಎಂಬ ವಿಚಾರವನ್ನು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಣಗಿರುವ ಹಾಗೂ ಅಪಾಯದ ಸ್ಥಿತಿಯಲ್ಲಿರುವ ಮರಗಳು ಮತ್ತು ಕೊಂಬೆ ತೆರವುಗೊಳಿಸುವ ಕುರಿತು ಈಗಾಗಲೇ ಸ್ಪಷ್ಟ ಸೂಚನೆ ನೀಡಲಾಗಿದ್ದರೂ, ಪರಿಣಾಮಕಾರಿ ಅನುಷ್ಠಾನವಾಗದ ಹಿನ್ನೆಲೆಯಲ್ಲಿ ಮಳೆ ಮತ್ತು ಗಾಳಿಯಿಂದ ಮರಗಳು ಹಾಗೂ ಕೊಂಬೆಗಳು ಬಿದ್ದು ಅಪಘಾತಗಳು ಸಂಭವಿಸುತ್ತಿವೆ ಎಂದು ಸ್ಥಾಯಿ ಸಮಿತಿ ಸದಸ್ಯರು ಸಿಎಂ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ ಅವರು, ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡಿ ಅಪಾಯಕಾರಿಯಾಗಿರುವ ಮರಗಳು ಮತ್ತು ಕೊಂಬೆಗಳ ಗುರುತು ಪತ್ತೆ, ತೆರವು ಹಾಗೂ ತಡೆಗಟ್ಟುವ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಕಾರಿಡಾರ್‌ನಿಂದ ಮಾನವ ವನ್ಯಜೀವಿ ಸಂಘರ್ಷ

ಬಿಎಂಐಸಿ ಕಾರಿಡಾರ್ ನಿರ್ಮಾಣದಿಂದ ಆನೆ, ಹುಲಿ ಹಾಗೂ ಚಿರತೆಗಳ ಸಾಂಪ್ರದಾಯಿಕ ಸಂಚಾರ ಮಾರ್ಗಗಳಿಗೆ ಅಡ್ಡಿಯಾಗಿದೆ ಎಂದು ಅಧಿಕಾರಿಗಳು ಸಭೆಗೆ ವಿವರಿಸಿದರು. ಇದರ ಪರಿಣಾಮವಾಗಿ ವನ್ಯಜೀವಿಗಳು ಅರಣ್ಯ ಪ್ರದೇಶಗಳಿಂದ ಹೊರಬಂದು ಚನ್ನಪಟ್ಟಣ ಹಾಗೂ ರಾಮನಗರ ಭಾಗಗಳತ್ತ ಚಲಿಸುತ್ತಿದ್ದು, ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗಲು ಇದೂ ಪ್ರಮುಖ ಕಾರಣವಾಗಿದೆ ಎಂದು ತಿಳಿಸಲಾಯಿತು.

> ಮೇಕೆದಾಟು ಯೋಜನೆಗೆ ಸಣ್ಣಪುಟ್ಟ ನೆಪಗಳನ್ನು ಮುಂದಿಟ್ಟು ಸುಪ್ರೀಂ ಕೋರ್ಟ್‌ನಲ್ಲಿ ತಕರಾರು ಮಾಡಲು ತಮಿಳುನಾಡು ಪ್ರಯತ್ನಿಸುತ್ತಿದೆ. ಅಧಿಕಾರಿಗಳು ಸಣ್ಣ-ಪುಟ್ಟ ತಾಂತ್ರಿಕ ಸಮಸ್ಯೆಗಳು ಇವೆಯೂ ಎಂದು ಪರಿಶೀಲಿಸಿ ಪರಿಣಾಮಕಾರಿಯಾಗಿ ಬಗೆಹರಿಸಲು ಮುಂದಾಗಬೇಕು.
> ■ ಡಿ.ಕೆ ಶಿವಕುಮಾರ್, ಸಿಎಂ

ಕ್ರಿಮಿನಲ್ ಕೇಸ್ ರದ್ಧತಿಗೆ ಹೈ ನಕಾರ

ಬೆಂಗಳೂರು: ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುವವರ ವಿರುದ್ಧ ಕಾನೂನು ಕ್ರಮ ಅನಿವಾರ್ಯ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಆಂಧ್ರಪ್ರದೇಶದ ಉಗ್ರ ನಿಗ್ರಹ ದಳಕ್ಕೆ (ಎಟಿಎಸ್) ಬೇಕಾಗಿರುವ ಶಂಕಿತ ಉಗ್ರ ಸೇರಿದಂತೆ ಹಲವರಿಗೆ ಅಕ್ರಮವಾಗಿ ಪಾಸ್‌ಪೋರ್ಟ್ ನವೀಕರಣಕ್ಕೆ ನೆರವು ನೀಡಿದ ಆರೋಪ ಎದುರಿಸುತ್ತಿರುವ ಮಂಗಳೂರಿನ ಟ್ರಾವೆಲ್ ಏಜೆಂಟ್ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಲು ನಿರಾಕರಿಸಿದೆ.

ವಿವರ ಪುಟ ೩

ಇಂದಿನಿಂದ ಗೃಹಜ್ಯೋತಿ ಫಲಾನುಭವಿಗಳ ಪರಿಶೀಲನೆ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ಗೃಹ ಜ್ಯೋತಿ (GJY) ಯೋಜನೆಯ ಫಲಾನುಭವಿಗಳ ಮನೆ ಮನೆ ಪರಿಶೀಲನೆ ಕಾರ್ಯವನ್ನು ರಾಜ್ಯಾದ್ಯಂತ ಜುಲೈ 1ರಿಂದ ಎಲ್ಲಾ ಎಸ್ಕಾಂ ಸಿಬ್ಬಂದಿ ಕೈಗೊಳ್ಳಲಿದ್ದಾರೆ. 2023ರ ಜುಲೈ ತಿಂಗಳಲ್ಲಿ ಜಾರಿಗೆ ಬಂದಿರುವ ಗೃಹಜ್ಯೋತಿ ಯೋಜನೆಯ ಪುನರ್ ಪರಿಶೀಲನಾ ಕಾರ್ಯ ನಡೆಯಲಿದ್ದು, ರಾಜ್ಯದ ಎಲ್ಲಾ ಎಸ್ಕಾಂಗಳ ಮೀಟರ್ ರೀಡರ್‌ಗಳು ಹಾಗೂ ಎಲ್ಲಾ ಎಸ್ಕಾಂ ಸಿಬ್ಬಂದಿ ಗ್ರಾಹಕರ ಮನೆಗಳಿಗೆ ಭೇಟಿ ನೀಡಿ, ಫಲಾನುಭವಿಗಳ ದಾಖಲೆ ಪರಿಶೀಲನೆ ನಡೆಸಿ ಅವರ ಮಾಹಿತಿ ಸಂಗ್ರಹಿಸಿ, ಮೊಬೈಲ್ ಆ್ಯಪ್ ಹಾಗೂ ಘೋಷಣಾ ಪತ್ರ ಮೂಲಕ ಅರ್ಜಿ ಭರ್ತಿ ಪ್ರಕ್ರಿಯೆನ್ನು ಪೂರ್ಣಗೊಳಿಸಲಿದ್ದಾರೆ.



ಅಗತ್ಯ ದಾಖಲೆ ಇದ್ದರೆ ಮಾತ್ರ ಉಚಿತ ವಿದ್ಯುತ್: ಎಸ್ಕಾಂ ಸಿಬ್ಬಂದಿ ಮನೆ-ಮನೆ ಭೇಟಿ ಸಂದರ್ಭದಲ್ಲಿ ಹಲವು ಮಹತ್ವದ ದಾಖಲೆಗಳನ್ನು ಸಿಬ್ಬಂದಿಗೆ ತೋರಿಸಲು ಇಂಧನ ಇಲಾಖೆ ವಿನಂತಿಸಿದೆ. ಆಧಾರ್ ಕಾರ್ಡ್, ಫಲಾನುಭವಿಯ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಮತದಾರರ ಗುರುತಿನ ಚೀಟಿ (ವೋಟರ್ ಐಡಿ), ಪ್ಯಾನ್ ಕಾರ್ಡ್, ಬಾಡಿಗೆ ಒಪ್ಪಂದದ ಪತ್ರಗಳು (ಅನ್ವಯಿಸುವಲ್ಲಿ ಮಾತ್ರ), ರೇಷನ್ ಕಾರ್ಡ್ ಹಾಗೂ ಜಾತಿ ಪ್ರಮಾಣಪತ್ರವನ್ನು ತೋರಿಸಲು ಇಲಾಖೆ ಮನವಿ ಮಾಡಿದೆ.

➡ಪುಟ ४

ಗ್ರಾಮೀಣರಿಗೆ ವಿಬಿ ಜಿ ರಾಮ್ ಜಿ ಬಲ

ಹೊಸದಿಲ್ಲಿ: ಗ್ರಾಮೀಣ ಬಡಕುಟುಂಬಗಳ ಜೀವನೋಪಾಯ ವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ವಿಕಸಿತ ಭಾರತ ರೋಜ್ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ)(ವಿಬಿ ಜಿ ರಾಮ್ ಜಿ) ಕಾಯ್ದೆ, 2025 ಬುಧವಾರದಿಂದ ದೇಶಾದ್ಯಂತ ಜಾರಿಗೆ ಬರಲಿದೆ. ಈ ಹೊಸ ಕಾಯ್ದೆಯಲ್ಲಿ ಅರ್ಹ ಗ್ರಾಮೀಣ ಕುಟುಂಬಗಳಿಗೆ ದೊರೆಯುತ್ತಿದ್ದ 100 ದಿನಗಳ ಕೂಲಿ ಉದ್ಯೋಗ ಖಾತರಿಯನ್ನು 125 ದಿನಗಳಿಗೆ ಹೆಚ್ಚಿಸಲಾಗಿದೆ.

ವಿವರ ಪುಟ ೩

ಎಸ್‌ಐಆರ್‌ಗೆ ಮೊದಲ ದಿನ ಸಕಾರಾತ್ಮಕ ಸ್ಪಂದನೆ

ಬೆಂಗಳೂರು: ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ದೋಷಮುಕ್ತ ಹಾಗೂ ಪಾರದರ್ಶಕವಾಗಿ ರೂಪಿಸಲು




ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ(ಎಸ್‌ಐಆರ್)ಗೆ ರಾಜ್ಯದಲ್ಲಿ ಚಾಲನೆ ದೊರೆತಿದೆ. ರಾಜ್ಯದಲ್ಲಿ ಎಸ್‌ಐಆರ್ ಆರಂಭಗೊಂಡ ಮಂಗಳವಾರ 12.48 ಲಕ್ಷ ಎಸ್‌ಐಆರ್ ಅರ್ಜಿ ವಿತರಿಸಲಾಗಿದ್ದು, ಶೇ.2.25ರಷ್ಟು ಪ್ರಗತಿ ಕಂಡಿದೆ.

ವಿವರ ಪುಟ ೩

ಕಿರುಸುದ್ದಿ


ಡಾ. ಎಂ. ಪ್ರಭಾಕರ ಜೋಶಿಗೆ ಪು. ಶ್ರೀನಿವಾಸ ಭಟ್ಟ ಪ್ರಶಸ್ತಿ

ಕಿನ್ನಿಗೋಳಿ: ನಾಡಿನ ಹಿರಿಯ ಬಹುಶ್ರುತ ವಿದ್ವಾಂಸ, ಲೇಖಕ, ಕಲಾವಿದ ಡಾ.ಎಂ. ಪ್ರಭಾಕರ ಜೋಷಿ ಅವರಿಗೆ ಈ ಬಾರಿಯ 'ಕಟೀಲು ಪು. ಶ್ರೀನಿವಾಸ ಭಟ್ಟ ಪ್ರಶಸ್ತಿ' ಘೋಷಿಸಲಾಗಿದೆ. ಡಾ. ಜೋಶಿಯವರು ಯಕ್ಷಗಾನ ಕಲಾವಿದ, ವಿಮರ್ಶೆ ಮೌಲ್ಯರಕ್ಷಣೆ, ಶಿಕ್ಷಣ, ಸಂಸ್ಕೃತಿ, ತತ್ವಶಾಸ್ತ್ರ, ಭಾಷೆ, ಸಾಂಸ್ಕೃತಿಕ ಸೇವೆಗಳಲ್ಲಿ ಆರು ದಶಕಗಳಿಗೂ ಮಿಕ್ಕಿ ಸಕ್ರಿಯರು. ತಾಳಮದ್ದಲೆ ಕಲಾವಿದ, ನಾಲ್ಕು ತಲೆಮಾರುಗಳ ಸಹ ಅರ್ಥಧಾರಿ, ಹಲವು ಗ್ರಂಥಗಳನ್ನು, ನೂರಾರು ಲೇಖನಗಳನ್ನು ಬರೆದವರು, ಅಕಾಡೆಮಿ ಪಾರ್ತಿಸುಬ್ಬ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕಸಾಪ ಗೌರವಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಮಣಿಪಾಲ ಪ್ರಶಸ್ತಿ, ಕಲ್ಕೂರ ಪ್ರಶಸ್ತಿ, ಕಲಾರಂಗ ಪ್ರಶಸ್ತಿ, ಪಟ್ಟ ಪ್ರಶಸ್ತಿ ಸಹಿತ ನೂರಾರು ಮನ್ನಣೆಗಳಿಗೆ ಭಾಜನರಾಗಿರುವರು. ಜು. 11 ರಂದು ಯುಗಪುರುಷ ನೇತೃತ್ವದಲ್ಲಿ ಕಿನ್ನಿಗೋಳಿಯ ಯುಗಪುರುಷ ಸಭಾಭವನದಲ್ಲಿ ಅಧ್ಯಾಪಕ, ಕಲಾವಿದ, ಸಂಶೋಧಕ, ಭಾಗವತ, ಅರ್ಥಧಾರಿ, ಸಂಶೋಧಕರಾಗಿ ಪ್ರಸಿದ್ಧರಾಗಿದ್ದ ಪು. ಶ್ರೀನಿವಾಸ ಭಟ್‌ರವರ ಸ್ಮೃತಿ ದಿನ ಕಾರ್ಯಕ್ರಮವು ಜರಗಲಿರುವುದು. ಅಂದು ಡಾ. ಎಂ. ಪ್ರಭಾಕರ ಜೋಶಿಯವರಿಗೆ ಗಣ್ಯ ಉಪಸ್ಥಿತಿಯಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ಎಂದು ಯುಗಪುರುಷದ ಕೆ. ಭುವನಾಭಿರಾಮ ಉಡುಪ ಹಾಗೂ ಪು. ಗುರುಪ್ರಸಾದ ಭಟ್ ತಿಳಿಸಿದ್ದಾರೆ.




ಪ್ರತಿಷ್ಠಿತ 'ವೈದ್ಯ ಚೇತನ ಪ್ರಶಸ್ತಿ'ಗೆ ಡಾ. ಬಿ. ಸಚ್ಚಿದಾನಂದ ರೈ ಆಯ್ಕೆ

ಮಂಗಳೂರು: ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ರಾಜ್ಯ ಶಾಖೆಯ ವತಿಯಿಂದ ವೈದ್ಯರ ದಿನಾಚರಣೆ ಅಂಗವಾಗಿ ಪ್ರದಾನ ಮಾಡುವ ಪ್ರತಿಷ್ಠಿತ 'ಐಎಂಎ ಕೆಎಸ್‌ಬಿ ವೈದ್ಯ ಚೇತನ ಪ್ರಶಸ್ತಿ–2026'ಗೆ ಮಂಗಳೂರಿನ ಖ್ಯಾತ ಅಸ್ಥಿ ಮತ್ತು ಸಂಧಿ ತಜ್ಞ ಡಾ. ಬಿ. ಸಚ್ಚಿದಾನಂದ ರೈ ಅವರು ಆಯ್ಕೆಯಾಗಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯುತ್ತಮ ವೃತ್ತಿಪರ ಸಾಧನೆ, ನಿಸ್ವಾರ್ಥ ಹಾಗೂ ಸಮರ್ಪಿತ ಸೇವೆ, ನೈತಿಕ ವೈದ್ಯಕೀಯ ಅಭ್ಯಾಸ ಮತ್ತು ಸಮಾಜದ ಆರೋಗ್ಯ ಕ್ಷೇತ್ರಕ್ಕೆ ನೀಡಿರುವ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಐಎಂಎ ಕರ್ನಾಟಕ ರಾಜ್ಯ ಶಾಖೆ ಪ್ರಕಟಿಸಿದೆ. ಡಾ. ಸಚ್ಚಿದಾನಂದ ರೈ ಅವರು ಪ್ರಸ್ತುತ ಕರ್ನಾಟಕ ಅಸ್ಥಿ ಶಸ್ತ್ರಚಿಕಿತ್ಸಕರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಪ್ರಶಸ್ತಿಯನ್ನು ಜು.1ರಂದು ಬೆಂಗಳೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡಾ. ಬಸವರಾಜೇಂದ್ರ ಸಭಾಂಗಣದಲ್ಲಿ ನಡೆಯುವ ವೈದ್ಯರ ದಿನಾಚರಣೆ ಸಮಾರಂಭದಲ್ಲಿ, ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಯು.ಟಿ. ಖಾದರ್ ಅವರು ಪ್ರದಾನ ಮಾಡಲಿದ್ದಾರೆ.



ಸಿಎ ಪರೀಕ್ಷೆಯಲ್ಲಿ ಉತ್ತೀರ್ಣ

ಕುಂದಾಪುರ: ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ನಡೆಸಿದ ಸಿ.ಎ. ಇಂಟರ್ ಮೀಡಿಯೇಟ್ ಮೇ– 2026ರ ಪರೀಕ್ಷೆಯಲ್ಲಿ ಕುಂಭಾಶಿಯ ಸುರೇಶ ಎಸ್. ಎ. ಮತ್ತು ಪುಷ್ಪ ದಂಪತಿ ಪುತ್ರ, ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಪ್ರಾಕ್ತನ ವಿದ್ಯಾರ್ಥಿ ಪನ್ನಗ ಅವರು ಉತ್ತೀರ್ಣರಾಗಿದ್ದಾರೆ. ಪನ್ನಗ ಅವರ ಈ ಗಮನಾರ್ಹ ಸಾಧನೆಗಾಗಿ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.



ಪೆರ್ನಾಜೆ ಶಾಲೆಯಲ್ಲಿ ಮಕ್ಕಳ ದಾಖಲಾತಿಗೆ ಅವಕಾಶವಿಲ್ಲ

ಮಂಗಳೂರು: ಪುತ್ತೂರು ತಾಲೂಕಿನ ಪೆರ್ನಾಜೆ ಶ್ರೀ ಸೀತಾ ರಾಘವ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಶಾಲೆಯಲ್ಲಿ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಶೂನ್ಯ ದಾಖಲಾತಿ ಇರುವ ಕಾರಣದಿಂದ ಹಾಗೂ ಅನುದಾನ ಸಂಹಿತೆ ನಿಯಮದಂತೆ ಒಂದು ಬಾರಿಗೆ ಮಾತ್ರ ದಾಖಲಾತಿ ಮನ್ನಾ ಮಾಡಲು ಅವಕಾಶ ವಿದೆ. ಶಾಲೆಯಲ್ಲಿ ಹಿಂದಿನ ಎರಡು ಶೈಕ್ಷಣಿಕ ವರ್ಷಗಳಲ್ಲಿ ನಿಗದಿತ ದಾಖಲಾತಿ–ಹಾಜರಾತಿ ಇಲ್ಲದ ಪ್ರಯುಕ್ತ ಶಾಲೆಯ ಮಾನ್ಯತೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ ಅನ್ವಯ ಷರತ್ತುಗಳಪಡಿಸಿ, ರದ್ದುಪಡಿಸಲಾಗಿದೆ. ಪ್ರಸ್ತುತ ಈ ಶಾಲೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶವಿಲ್ಲ. ಇದನ್ನು ಮೀರಿ ಪೋಷಕರು ಈ ಶಾಲೆಯಲ್ಲಿ ಮಕ್ಕಳನ್ನು ದಾಖಲಾತಿ ಮಾಡಿದ್ದಲ್ಲಿ ಶಾಲಾ ಶಿಕ್ಷಣ ಇಲಾಖೆ ಜವಾಬ್ದಾರರಲ್ಲವೆಂದು ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈಲು ಪ್ರಯಾಣಿಕ ನಾಪತ್ತೆ

ಬೈಂದೂರು: ಜೂ.23ರಂದು ಅಜ್ಮೀರ್‌ಗೆ ತೆರಳಿ ಅಲ್ಲಿ ದರ್ಗಾದ ದರ್ಶನ ಮಾಡಿ ಜೂ.26ರಂದು ಅಲ್ಲಿಂದ ಮುರುಸಾದ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಕಾಸರಗೋಡಿಗೆ ಪ್ರಯಾಣಿಸುತ್ತಿರುವ ಮುಸಾ ಯಾನೆ ಅಬುಸಾಲಿ (68) ರಾತ್ರಿ 10 ಗಂಟೆಗೆ ಕಾರವಾರ ಸಮೀಪ ರೈಲಿನಲ್ಲಿ ಊಟ ಮಾಡಿ ಮಲಗಿಕೊಂಡಿದ್ದರು. ಜೂ. 27ರಂದು ಮಧ್ಯಾಹ್ನ ಒಂದು ಗಂಟೆಗೆ ರೈಲು ಮಂಗಳೂರಿನ ಸಮೀಪ ತಲುಪಿದಾಗ ಮುಸಾ ಯಾನೆ ಅಬುಸಾಲಿ ಅವರ ಸೀಟಿನಲ್ಲಿ ಇಲ್ಲದೇ ಕಾಣೆಯಾಗಿದ್ದಾರೆ. ಈ ಚಹರೆಯುಳ್ಳ ವ್ಯಕ್ತಿ ಪತ್ತೆಯಾದಲ್ಲಿ ಬೈಂದೂರು ಠಾಣೆಗೆ ಮಾಹಿತಿ ನೀಡುವಂತೆ ಠಾಣಾಧಿಕಾರಿ ಮನವಿ ಮಾಡಿದ್ದಾರೆ.



ಬೋಳೂರು ಚಿತಾಗಾರ ದುರಸ್ತಿ

ಮಂಗಳೂರು: ಬೋಳೂರು ವಿದ್ಯುತ್ ಚಿತಾಗಾರವು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಶವ ಸಂಸ್ಕಾರಕ್ಕೆ ಬಳಕೆಯಲ್ಲಿರುವ ಪ್ರಮುಖ ವಿದ್ಯುತ್ ಚಿತಾಗಾರವಾಗಿದೆ. ವಿದ್ಯುತ್ ಚಿತಾಗಾರದ ಚಿಮಣಿಯು ಇತ್ತೀಚೆಗೆ ಬಿದ್ದ ಮಳೆ ಮತ್ತು ಗಾಳಿಗೆ ಮುರಿದು ಬಿದ್ದಿರುವುದರಿಂದ ಚಿತಾಗಾರವನ್ನು ಶವ ಸಂಸ್ಕಾರಕ್ಕೆ ಸ್ಥಗಿತಗೊಳಿಸಲಾಗಿದ್ದು, ಹೊಸದಾಗಿ ಅಳವಡಿಸಿ ಕಾರ್ಯಾಚರಣೆಗೆ ಸಿದ್ಧವಾಗುವವರೆಗೆ ಸುರತ್ಕಲ್ ವಿದ್ಯುತ್ ಚಿತಾಗಾರದಲ್ಲಿ ಶವ ಸಂಸ್ಕಾರಕ್ಕೆ ಅನುಕೂಲ ಮಾಡಿ ಕೊಡಲಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 9880250617, 9743145481 ಸಂಪರ್ಕಿಸಬಹುದು ಎಂದು ಮಹಾನಗರಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಳೆದೆರಡು ದಿನಗಳಿಂದ ತೃಪ್ತಿದಾಯಕವಾಗಿ ಸುರಿಯುತ್ತಿರುವ ಮಳೆಯಿಂದಾಗಿ ನೇತ್ರಾವತಿ ಹಾಗೂ ಕುಮಾರಧಾರಾ ನದಿಗಳೆರಡರಲ್ಲಿ ನೀರಿನ ಹರಿವಿನಲ್ಲಿ ಹೆಚ್ಚಳ ಕಂಡು ಬಂದಿದ್ದು, ಮಂಗಳವಾರದಂದು ನದಿಯ ಒಡಲನ್ನಾವರಿಸಿ ನೀರು ಹರಿಯತೊಡಗಿದೆ.

ಅಖಿಲ ಭಾರತ ನೌ ಸೈನಿಕ್ ಕ್ಯಾಂಪ್‌ಗೆ ದಿಗಂತ್ ಆಯ್ಕೆ

ಪುತ್ತೂರು: ನಗರದ ಸಂತ ಫಿಲೋಮಿನಾ (ಸ್ವಾಯತ್ತ) ಕಾಲೇಜಿನ ಎನ್‌ಸಿಸಿ ನೌಕಾದಳ ವಿಭಾಗದ ಕೆಡೆಟ್ ಕ್ಯಾಪ್ಟನ್ ದಿಗಂತ್ ವಿ.ಎಸ್. ಅವರು 2026ನೇ ಸಾಲಿನ ಪ್ರತಿಷ್ಠಿತ ಅಖಿಲ ಭಾರತ ನೌ ಸೈನಿಕ್ ಕ್ಯಾಂಪ್‌ಗೆ ಆಯ್ಕೆಯಾಗಿದ್ದಾರೆ. ಅವರು ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯವನ್ನು ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸಲಿದ್ದಾರೆ.

ದೇಶದ ಎನ್‌ಸಿಸಿ ನೌಕಾದಳ ವಿಭಾಗದ ಅತ್ಯುನ್ನತ ತರಬೇತಿ ಹಾಗೂ ಸ್ಪರ್ಧಾತ್ಮಕ ಶಿಬಿರವೆಂದು ಪರಿಗಣಿಸಲ್ಪಡುವ ಈ ಕ್ಯಾಂಪ್ ಮಹಾರಾಷ್ಟ್ರದ ಲೋನಾವಾಲದ ಐಎನ್‌ಎಸ್ ಶಿವಾಜಿನಲ್ಲಿ ಜೂ.30ರಿಂದ ಜು.10ರವರೆಗೆ ನಡೆಯಲಿದೆ.



ಗ್ರೂಪ್ ಮಟ್ಟಹಾಗೂ ನಿರ್ದೇಶನಾಲಯ ಮಟ್ಟದಲ್ಲಿ ನಡೆದ ಕಠಿಣ ಆಯ್ಕೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ದಿಗಂತ್ ಅವರು ನೌಕಾ ಕೌಶಲ್ಯ, ಶಿಸ್ತು, ನಾಯಕತ್ವ ಮತ್ತು ತಂಡದ ಕಾರ್ಯಕ್ಷಮತೆಯಲ್ಲಿ ಅತ್ಯುತ್ತಮ ಸಾಧನೆ ತೋರಿದ ಹಿನ್ನೆಲೆಯಲ್ಲಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಶಿಬಿರದಲ್ಲಿ ಬೋಟ್ ಪುಲ್ಲಿಂಗ್, ಬೋಟ್ ರಿಗ್ಗಿಂಗ್, ಶಿಪ್ ಮಾಡೆಲಿಂಗ್, ಡ್ರಿಲ್, ಸೆಮಾಫೋರ್, ಗಂಟು ಕಟ್ಟುವಿಕೆ (ನಾಟ್ ಟೈಯಿಂಗ್) ಹಾಗೂ ಸರ್ವಿಸ್ ಸಬ್ಜೆಕ್ಟ್ ಪರೀಕ್ಷೆಗಳು ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿದ್ದು, ದೇಶದ ವಿವಿಧ ಎನ್‌ಸಿಸಿ ನಿರ್ದೇಶನಾಲಯಗಳಿಂದ ಆಗಮಿಸುವ ಶ್ರೇಷ್ಠ ಕೆಡೆಟ್‌ಗಳು ಭಾಗವಹಿಸಲಿದ್ದಾರೆ. ದಿಗಂತ್ ಅವರ ಆಯ್ಕೆ ವೈಯಕ್ತಿಕ ಸಾಧನೆಯಷ್ಟೇ ಅಲ್ಲದೆ, ಕರ್ನಾಟಕ–ಗೋವಾ ನಿರ್ದೇಶನಾಲಯ ಹಾಗೂ ಸಂತ ಫಿಲೋಮಿನಾ (ಸ್ವಾಯತ್ತ) ಕಾಲೇಜಿನ ಎನ್‌ಸಿಸಿ ನೌಕಾದಳ ವಿಭಾಗದ ಗುಣಮಟ್ಟದ ತರಬೇತಿಗೆ ದೊರೆತ ಮಾನ್ಯತೆಯಾಗಿದೆ. ಎನ್‌ಸಿಸಿ ನೌಕಾದಳ ವಿಭಾಗದ ಅಧಿಕಾರಿ ಸಬ್ ಲೆಫ್ಟಿನೆಂಟ್ ತೇಜಸ್ವಿ ಭಟ್ ಕೆ. ಮಾರ್ಗದರ್ಶನ ನೀಡಿದ್ದರು.

ಸಂಟ್ಯಾರಿನ ವನಿತಾಗೆ ಜೀವನ ನಿರ್ವಹಣೆ ಕಲಿಸಿದ ಕೋವಿಡ್ ಕಾಲ

ಬದುಕಲ್ಲಿ ಅರಳಿತು ಮಲ್ಲಿಗೆ ಕಂಪು

ದಿಗಂತ ವಿಶೇಷ

ಪುತ್ತೂರು: ಕೊರೋನಾ ಮಹಾಮಾರಿ ಬಾಧೆಯ ಸಂಕಷ್ಟದ ಸಮಯದಲ್ಲಿ ಕೆಲವರು ಉದ್ಯೋಗ ಕಳೆದುಕೊಂಡರೆ, ಇನ್ನು ಕೆಲವರು ಹೊಸ ಸ್ವ ಉದ್ಯೋಗ ನೆಚ್ಚಿಕೊಂಡು ಯಶಸ್ವಿಯಾಗಿದ್ದಾರೆ. ಅಂದು ಹಲವರನ್ನು ಬದುಕಿಸಿದ ಹಲವಾರು ಉಪಕಸುಬುಗಳಲ್ಲಿ ಮಲ್ಲಿಗೆ ಕೃಷಿಯೂ ಒಂದಾಗಿದೆ. ಮಲ್ಲಿಗೆ ಕೃಷಿಯಿಂದಲೇ ಕೊರೋನಾದ ಸಂಕಷ್ಟದ ದಿನವನ್ನು ಸಂತೃಪ್ತಿಯಿಂದ ಕಳೆದು, ಅದರಿಂದ ಬಂದ ಆದಾಯದಿಂದಲೇ ಪುಟ್ಟದೊಂದು ಅಡಿಕೆ ತೋಟವನ್ನೂ ಮಾಡಿಕೊಂಡ ಪುತ್ತೂರು ತಾಲೂಕಿನ ಆರ್ಯಾಪು ಗ್ರಾಮದ ಸಂಟ್ಯಾರು ಮರಿಕೆ ನಿವಾಸಿ ವನಿತಾ ಇಂದು ಮಲ್ಲಿಗೆ ಕೃಷಿಯನ್ನೇ ಜೀವನಾಧಾರವನ್ನಾಗಿ ಯಶಸ್ಸು ಕಂಡುಕೊಂಡಿದ್ದಾರೆ.

ಸವಾಲಿನ ಜೀವನ

ಇರುವ ಸಣ್ಣ ಜಮೀನಿನಲ್ಲಿ 50ಕ್ಕೂ ಮಿಕ್ಕಿದ ಮಲ್ಲಿಗೆ ಬುಡಗಳನ್ನು ಮಾಡಿಕೊಂಡಿರುವ ವನಿತಾ ಇಂದು ಓರ್ವ ಯಶಸ್ವಿ ಮಲ್ಲಿಗೆ ಬೆಳೆಗಾರ್ತಿ. ಮಲ್ಲಿಗೆ ಗಿಡದಿಂದ ಬಂದ ಆದಾಯವನ್ನು ಕುಟುಂಬದ ನಿರ್ವಹಣೆಯನ್ನು ಮಾಡಿಕೊಂಡು ಬರುತ್ತಿರುವ ಇವರು ಮಲ್ಲಿಗೆ ಮಾರಾಟ ಮಾಡಿ ಬಂದ ಹಣದಿಂದಲೇ ಪುಟ್ಟದೊಂದು ಅಡಿಕೆ ತೋಟವನ್ನೂ ಮಾಡಿದ್ದಾರೆ. ವನಿತಾ ಪತಿ ಗಾರೆ ಕೆಲಸಕ್ಕೆ ಹೋಗುತ್ತಿದ್ದು, ವನಿತಾ ಮನೆಯ ಜವಾಬ್ದಾರಿಯನ್ನು ನೋಡಿಕೊಂಡಿದ್ದರು. ಕೊರೊನಾ ಮಹಾಮಾರಿ ವಕ್ಕರಿಸಿದ ಸಮಯದಲ್ಲಿ ಪತಿ ಕೆಲಸಕ್ಕೆ ಹೋಗಲಾರದೆ ಮನೆಯಲ್ಲೇ ಇರುವಂತಾಯಿತು. ಮಕ್ಕಳು ಸೇರಿದಂತೆ ಒಟ್ಟು ಏಳು ಸದಸ್ಯರಿದ್ದ ವನಿತಾ ಕುಟುಂಬಕ್ಕೆ ಅಂದು ಜೀವನ ನಿರ್ವಹಣೆಯೇ ಒಂದು ಸವಾಲಾಗಿತ್ತು. ಆ ಸಮಯದಲ್ಲಿ ಮನೆಯ ಉಪಯೋಗಕ್ಕಾಗಿ ನೆಟ್ಟಿದ್ದ ಮಲ್ಲಿಗೆ ಹೂವನ್ನು ಮಾರಾಟ ಮಾಡಲು ಆರಂಭಿಸಿದ್ದ ವನಿತಾ ಅವರಿಗೆ ಅಂದು ಮಲ್ಲಿಗೆಯಿಂದ ಉತ್ತಮ ಆದಾಯವೂ ದೊರೆತಿತ್ತು. ಸತತ ಪರಿಶ್ರಮದಿಂದ ವನಿತಾ ಇಂದು ಓರ್ವ ಯಶಸ್ವೀ ಗೃಹೋದ್ಯಮಿಯಾಗಿಯೂ ಗುರುತಿಸಲ್ಪಟ್ಟಿದ್ದಾರೆ.





ಕೈ ಹಿಡಿದ ಮಲ್ಲಿಗೆ

ಸಂಕಷ್ಟದ ಸಮಯದಲ್ಲಿ ಮಲ್ಲಿಗೆ ಕೃಷಿ ನಮ್ಮ ಕುಟುಂಬದ ಕೈ ಹಿಡಿದಿದೆ. ಆನಂತರದಲ್ಲಿ ಇತರ ಉತ್ಪಾದನೆಗೂ ಮಲ್ಲಿಗೆಯಲ್ಲಿ ಬಂದ ಆದಾಯ ಶಕ್ತಿ ತುಂಬಿದೆ. ಇದು ಅತ್ಯಂತ ಖುಷಿ ನೀಡಿದೆ.

ವನಿತಾ, ಮಲ್ಲಿಗೆ ಕೃಷಿಕೆ

- **ಸಣ್ಣ ಜಮೀನಿನಲ್ಲೇ 50ಕ್ಕೂ ಅಧಿಕ ಮಲ್ಲಿಗೆ ಗಿಡ ನೆಟ್ಟು ಯಶಸ್ವೀ ಕೃಷಿ ನಡೆಸಿದ ವನಿತಾ**
- **ಸಂಟ್ಯಾರಿನ ನಿವಾಸಿ ಈ ಗೃಹಿಣಿಯ ಪರಿಶ್ರಮ ಈಗ ಎಲ್ಲರಿಗೂ ಮಾದರಿ**

ಹಪ್ಪಳ, ಸೆಂಡಿಗೆ

ವನಿತಾ ಮಲ್ಲಿಗೆಯ ಜೊತೆಗೆ ಒಂದು ಹಸುವನ್ನೂ ಸಾಕುತ್ತಿದ್ದು, ಹಸುವಿನ ಸೆಗಣಿಯಿಂದ ಬಯೋ ಗ್ಯಾಸ್ ಕೂಡಾ ಉತ್ಪಾದಿಸುತ್ತಿದ್ದಾರೆ. ಕೊಟ್ಟಿಗೆ ಗೊಬ್ಬರವನ್ನು ಅಡಿಕೆ ಮತ್ತು ಮಲ್ಲಿಗೆ ತೋಟಕ್ಕೆ ಬಳಸುತ್ತಿದ್ದು, ಮನೆಗೆ ಬೇಕಾಗುವಷ್ಟು ತರಕಾರಿಯನ್ನು ಬೆಳೆಸುತ್ತಿದ್ದಾರೆ. ಹಲಸಿನ ಹಪ್ಪಳ, ಸೆಂಡಿಗೆ, ಅರಸಿನ ಹುಡಿ, ಮೆಣಸಿನ ಹುಡಿಯನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ.

ಅಡಿಕೆ ತೋಟ ಮಾಡಿದರು

ಹೀಗೆ ಆರಂಭಗೊಂಡ ಮಲ್ಲಿಗೆಯ ಮಾರಾಟ ಇಂದಿನವರೆಗೂ ಮುಂದುವರಿದುಕೊಂಡು ಬಂದಿದೆ. ಕೇವಲ 15 ಮಲ್ಲಿಗೆ ಬುಡದಿಂದ ಇಂದು 50ಕ್ಕೂ ಮಿಕ್ಕಿದ ಸಂಖ್ಯೆಯ ಮಲ್ಲಿಗೆ ಬುಡಗಳು ವನಿತಾರ ಕೈತೋಟದಲ್ಲಿದೆ. ಮಲ್ಲಿಗೆಯಲ್ಲಿ ಬಂದ ಆದಾಯದಲ್ಲಿ ಖಾಲಿ ಇದ್ದ ಸ್ವಲ್ಪ ಜಾಗದಲ್ಲಿ ಸುಮಾರು 150ಕ್ಕೂ ಮಿಕ್ಕಿದ ಅಡಿಕೆ ಗಿಡಗಳನ್ನು ನೆಟ್ಟು, ಇಂದು ಅವುಗಳು ಫಲ ನೀಡುತ್ತಿವೆ.

ಜು. 9ರಂದು ಕಾರ್ಕಳದಲ್ಲಿ ಬೃಹತ್ ಉದ್ಯೋಗ ಮೇಳ

ಕಾರ್ಕಳ: ವಿಕಾಸ ಸೇವಾ ಸಂಸ್ಥೆಯ ನೇತೃತ್ವದಲ್ಲಿ ವಿಕಾಸ ಉದ್ಯೋಗ ಸೇತು ಕಾರ್ಯಕ್ರಮದಡಿ ಕಾರ್ಕಳದಲ್ಲಿ ಜುಲೈ 9 ರಂದು ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಶಾಸಕ ವಿ. ಸುನೀಲ್ ಕುಮಾರ್ ಹೇಳಿದರು.

ಮಂಗಳವಾರ ವಿಕಾಸ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ 5–6 ವರ್ಷಗಳ ಹಿಂದೆ ಕಾರ್ಕಳದಲ್ಲಿ ಇಂತಹ ಉದ್ಯೋಗ ಮೇಳಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ಅಂದು 100ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿ, ಸುಮಾರು 500 ವಿದ್ಯಾರ್ಥಿಗಳಿಗೆ ವಿಕಾಸ ಸಂಸ್ಥೆ ನೆರವಾಗಿತ್ತು. ಆದರೆ ಈ ಬಾರಿ ಸ್ವಲ್ಪ ವಿಭಿನ್ನವಾಗಿ ಹಾಗೂ ಹೆಚ್ಚು ಪರಿಣಾಮಕಾರಿಯಾಗಿ ಮೇಳವನ್ನು ರೂಪಿಸಲಾಗಿದೆ ಎಂದರು.



ನೇರ ಸಂದರ್ಶನ ಮೂಲಕ 400ಕ್ಕೂ ಹೆಚ್ಚು ಜನರಿಗೆ ಉದ್ಯೋಗದ ನಿರೀಕ್ಷೆ

ಈ ಬಾರಿಯ ಉದ್ಯೋಗ ಮೇಳದಲ್ಲಿ ಪ್ರಮುಖ 20 ಕಂಪನಿಗಳನ್ನು ಆಯ್ಕೆ ಮಾಡಲಾಗಿದ್ದು, ಅವು ನೇರವಾಗಿ ಸಂದರ್ಶನ ನಡೆಸಿ ಯುವಕರನ್ನು ನೇಮಕಾತಿ ಮಾಡಿಕೊಳ್ಳಲಿವೆ. ಈ ಮೂಲಕ ಕನಿಷ್ಠ 400ಕ್ಕೂ ಹೆಚ್ಚು ಯುವಕ–ಯುವತಿಯರಿಗೆ ಉದ್ಯೋಗ ದೊರೆಯುವ ಸಾಧ್ಯತೆ ಇದೆ ಎಂದು ಶಾಸಕರು ಆಶಯ ವ್ಯಕ್ತಪಡಿಸಿದರು.

ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಐ.ಟಿ.ಐ ಹಾಗೂ ಪಾಲಿಟೆಕ್ನಿಕ್ ಪದವೀಧರರು ಭಾಗವಹಿಸಲು ಅರ್ಹರು. ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ನಡೆಸಲು ಕೇವಲ 1000 ಅರ್ಜಿಗಳಿಗೆ ಮಾತ್ರ ಮಿತಿ ಹೇರಲಾಗಿದ್ದು, ಮೊದಲು ಅರ್ಜಿ ಸಲ್ಲಿಸುವ 1000 ಮಂದಿ ಅಭ್ಯರ್ಥಿಗೆ ಆದ್ಯತೆ ನೀಡಲಾಗುತ್ತದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಜುಲೈ 9 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಸಂದರ್ಶನಗಳು ನಡೆಯಲಿವೆ. ಭಾಗವಹಿಸುವ ಅಭ್ಯರ್ಥಿಗಳು ತಮ್ಮ ಎಲ್ಲಾ ಮೂಲ ದಾಖಲೆಗಳನ್ನು ತರಲು ಕೋರಲಾಗಿದೆ.

ಗ್ರಾಮೀಣ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯ ವ್ಯವಸ್ಥೆ

ಇದೇ ಸಂದರ್ಭದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗಾಗಿ, ಎಂಎನ್‌ಸಿ ಕಂಪನಿಗಳ ಸಹಯೋಗ ದೊಂದಿಗೆ ವಿದ್ಯಾರ್ಥಿನಿಯರಿಗೆ ಉಚಿತ ವಸತಿ ಸೌಲಭ್ಯ ಒದಗಿಸಲಾಗುತ್ತಿದೆ. ತಾಲೂಕಿನ ನಿರುದ್ಯೋಗಿ ಯುವಜನತೆ ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸುನೀಲ್ ಕುಮಾರ್ ಮನವಿ ಮಾಡಿದ್ದಾರೆ.

ಹಾಂಗ್‌ಕಾಂಗ್‌ನಲ್ಲಿ ನಡೆಯಲಿರುವ ಲಯನ್ಸ್ ಅಂತರಾಷ್ಟ್ರೀಯ ಸಮ್ಮೇಳನ

ಕೊಡಗಿನ ನಾಲ್ವರು ಪ್ರತಿನಿಧಿಗಳು





ಮಡಿಕೇರಿ: ಜು. 3ರಿಂದ 7ರವರೆಗೆ ಹಾಂಗ್‌ಕಾಂಗ್‌ನಲ್ಲಿ ನಡೆಯಲಿರುವ ಲಯನ್ಸ್ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಲಯನ್ಸ್ ಜಿಲ್ಲೆ 317ಡಿ ಅನ್ನು ಪ್ರತಿನಿಧಿಸುವ ಅಧಿಕೃತ ಮತದಾನ ಪ್ರತಿನಿಧಿಗಳಾಗಿ ಕೊಡಗು ಜಿಲ್ಲೆಯ ನಾಲ್ವರು ಲಯನ್ಸ್ ಸದಸ್ಯರು ಭಾಗವಹಿಸಲಿದ್ದಾರೆ.

ಲಯನ್ಸ್ ಸಂಸ್ಥೆ, ಮೂರ್ನಾಡಿನ ಖಜಾಂಚಿ ಲಯನ್ ಅರುಣ್ ಅಪ್ಪಚ್ಚು, ಲಯನ್ ಕನ್ನು ಅಪ್ಪಚ್ಚು, ಲಯನ್ಸ್ ಸಂಸ್ಥೆ, ಮಡಿಕೇರಿಯ ಕಾರ್ಯದರ್ಶಿ ಲಯನ್ ಮಧುಕರ್ ಕೆ. ಹಾಗೂ ಲಯನ್ ಗೀತಾ ಮಧುಕರ್ ಅವರು ಈ ಸಮ್ಮೇಳನದಲ್ಲಿ ಜಿಲ್ಲೆ 317ಡಿ ಪರವಾಗಿ ಮತದಾನ ಪ್ರತಿನಿಧಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ವಿಶ್ವದ 200ಕ್ಕೂ ಹೆಚ್ಚು ದೇಶಗಳು ಮತ್ತು ಭೌಗೋಳಿಕ ಪ್ರದೇಶಗಳಿಂದ ಸಾವಿರಾರು ಲಯನ್ಸ್ ಸದಸ್ಯರು ಈ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ಸಂಘಟನೆಯ ನೀತಿ–ನಿರ್ಧಾರಗಳು, ಅಂತಾರಾಷ್ಟ್ರೀಯ ಪದಾಧಿಕಾರಿಗಳ ಚುನಾವಣೆ, ಸೇವಾ ಚಟುವಟಿಕೆಗಳ ವಿನಿಮಯ ಹಾಗೂ ವಿಶ್ವ ಲಯನ್ಸ್ ಸದಸ್ಯರ ಪರಸ್ಪರ ಸ್ನೇಹ–ಸಹಕಾರಕ್ಕೆ ಈ ಮಹಾಸಭೆ ವೇದಿಕೆಯಾಗಲಿದೆ.

ಈ ಮಹಾಸಭೆಯಲ್ಲಿ ಜಿಲ್ಲಾ 317 ಅಯಿಂದ 70 ಸದಸ್ಯರ ನಿಯೋಗ ಭಾಗವಹಿಸುತ್ತಿದ್ದು, ಈ ನಿಯೋಗದಲ್ಲಿ ದಕ್ಷಿಣ ಕನ್ನಡ, ಹಾಸನ, ಚಿಕ್ಕಮಗಳೂರು ಹಾಗೂ ಕೊಡಗು ಎಂಬ ನಾಲ್ಕು ಕಂದಾಯ ಜಿಲ್ಲೆಗಳ ಪ್ರತಿನಿಧಿಗಳು ಸೇರಿದ್ದಾರೆ. ಕೊಡಗು ಜಿಲ್ಲೆಯ ನಾಲ್ವರು ಲಯನ್ಸ್ ಸದಸ್ಯರು ಅಂತಾರರಾಷ್ಟ್ರೀಯ ಮಟ್ಟದಲ್ಲಿ ಜಿಲ್ಲೆಯ ಪ್ರತಿನಿಧಿಗಳಾಗಿ ಭಾಗವಹಿಸುತ್ತಿರುವುದು ಜಿಲ್ಲೆಯ ಲಯನ್ಸ್ ಕುಟುಂಬಕ್ಕೆ ಹೆಮ್ಮೆಯ ವಿಷಯವಾಗಿದೆ. ಅವರ ಯಶಸ್ವಿ ಭಾಗವಹಿಸುವಿಕೆಗೆ ಜಿಲ್ಲೆಯ ಲಯನ್ಸ್ ಸದಸ್ಯರು ಹಾಗೂ ಸಾರ್ವಜನಿಕರು ಶುಭ ಹಾರೈಸಿದ್ದಾರೆ.

ಲವ್ ಜಿಹಾದ್–ಮತಾಂತರ ವಿರೋಧಿಸಿ ಕುಶಾಲನಗರ ಸ್ವಯಂಪ್ರೇರಿತ ಬಂದ್‌ಗೆ ಕರೆ

ಶಿಸ್ತುಬದ್ಧ ಜನಾಂದೋಲನ ಜಾಗೃತಿ ಜಾಥಾ ಯಶಸ್ವಿ

ಮಡಿಕೇರಿ: ಲವ್ ಜಿಹಾದ್ ಹಾಗೂ ಬಲವಂತದ ಮತಾಂತರವನ್ನು ವಿರೋಧಿಸಿ ಹಿಂದೂ ಸುರಕ್ಷಾ ಸಮಿತಿ ಕರೆ ನೀಡಿದ್ದ ಸ್ವಯಂಪ್ರೇರಿತ ಕುಶಾಲನಗರ ಬಂದ್ ಹಾಗೂ ಬೃಹತ್ ಜನಾಂದೋಲನ ಜಾಗೃತಿ ಜಾಥಾ ಮಂಗಳವಾರ ಯಶಸ್ವಿಯಾಗಿ ನಡೆಯಿತು.

ಮಂಗಳವಾರ ಪೂರ್ವಾಹ್ನ ಕಾವೇರಿ ನಿಸರ್ಗಧಾಮದಿಂದ ಆರಂಭವಾದ ಜಾಥಾದಲ್ಲಿ ಮಹಿಳೆಯರಾದಿಯಾಗಿ ಸಹಸ್ರಾರು ಸಂಖ್ಯೆಯ ಹಿಂದೂ ಬಾಂಧವರು ಕೇಸರಿ ಧ್ವಜಗಳನ್ನು ಹಿಡಿದು 'ಜೈ ಶ್ರೀರಾಮ್', 'ಭಾರತ್ ಮಾತಾ ಕೀ ಜೈ' ಘೋಷಣೆಗಳೊಂದಿಗೆ ಹೆಜ್ಜೆ ಹಾಕಿದರು.

ನಿಸರ್ಗಧಾಮದಿಂದ ಮಡಿಕೇರಿ–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಮೂಲಕ ಕುಶಾಲನಗರದ ಗಣಪತಿ ದೇವಸ್ಥಾನದವರೆಗೆ ಶಿಸ್ತುಬದ್ಧವಾಗಿ ಸಾಗಿದ ಜಾಥಾ, ಇಲ್ಲಿನ ಕಾರು ನಿಲ್ದಾಣದಲ್ಲಿ ಸಮಾವೇಶಗೊಂಡಿತು.

ಹಿಂದೂ ಜಾಗರಣ ವೇದಿಕೆ, ಬಜರಂಗದಳ, ವಿಶ್ವ ಹಿಂದೂ ಪರಿಷತ್ ಸೇರಿದಂತೆ ಹಿಂದೂಪರ ಸಂಘಟನೆಗಳು ಹಾಗೂ 20ಕ್ಕೂ ಅಧಿಕ ವಿವಿಧ ಸಮಾಜಗಳ ಪ್ರತಿನಿಧಿಗಳು, ಕಾರ್ಯಕರ್ತರು, ಮಹಿಳೆಯರು, ಯುವಕರು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಸ್ವಯಂಪ್ರೇರಿತ ಬಂದ್

ಮಂಗಳವಾರ ಕುಶಾಲನಗರದ ಸಂತೆ ದಿನವಾಗಿದ್ದರೂ, ಹಿಂದೂ ಧರ್ಮದ ಅಸ್ಮಿತೆಯನ್ನು ಉಳಿಸುವ ಹೋರಾಟಕ್ಕೆ ಕುಶಾಲನಗರ ಪಟ್ಟಣದ ವರ್ತಕರು ಸ್ವಯಂ ಪ್ರೇರಣೆಯಿಂದ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ತಮ್ಮ ಬೆಂಬಲ ಸೂಚಿಸಿದರು.

ಕುಶಾಲನಗರಪಟ್ಟಣದಮುಖ್ಯರಸ್ತೆ, ಐ.ಬಿ.ಸರ್ಕಲ್, ಬಸ್ ನಿಲ್ದಾಣ ರಸ್ತೆ, ಮಾತ್ರವಲ್ಲದೆ ನಿಸರ್ಗಧಾಮದ ಎನ್.ಟಿ.ಸಿ ವಾಣಿಜ್ಯ ಸಂಕೀರ್ಣ ಸೇರಿದಂತೆ ಎಲ್ಲಾ ವ್ಯಾಪಾರ ವಹಿವಾಟುಗಳು ಸ್ಥಗಿತಗೊಂಡಿದ್ದವು. ಹೋಟೆಲ್, ದಿನಸಿ ಅಂಗಡಿ, ಬಟ್ಟೆ ಅಂಗಡಿ, ಜ್ಯುವೆಲ್ಲರಿ, ವಾಹನ ಶೋರೂಂಗಳು ಸಂಪೂರ್ಣ ಮುಚ್ಚಿದ್ದವು.

ವಿಶೇಷವೆಂದರೆ ಇದು ಯಾವುದೇ ಬಲವಂತದ ಬಂದ್ ಆಗಿರಲಿಲ್ಲ. ಸಮುದಾಯದ ಹಿತದೃಷ್ಟಿಯಿಂದ ವರ್ತಕರೆಲ್ಲರೂ ಸ್ವಯಂಪ್ರೇರಿತರಾಗಿ ಅಂಗಡಿಗಳನ್ನು ಮುಚ್ಚಿ ಜಾಥಾಕ್ಕೆ ಬೆಂಬಲ ಸೂಚಿಸಿದರು.

'ಧಾರ್ಮಿಕ ಅಸ್ಮಿತೆ ಉಳಿಸುವ ಹೋರಾಟಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಆದ್ದರಿಂದ ಇಂದು ಸ್ವಯಂ ಪ್ರೇರಣೆಯಿಂದ ವ್ಯಾಪಾರ ಬಂದ್ ಮಾಡಿದ್ದೇವೆ' ಎಂದು ವರ್ತಕರ ಸಂಘದ ಪ್ರಮುಖರು ತಿಳಿಸಿದರು.

ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚುರಂಜನ್, ಹಿಂದೂ ಸುರಕ್ಷಾ ಸಮಿತಿಯ ಮುಖಂಡ ಅಮೃತ್ ರಾಜ್ ಸೇರಿದಂತೆ ವಿವಿಧ ಸಂಘಸಂಸ್ಥೆಗಳ ಪ್ರಮುಖರು ಜಾಥಾದಲ್ಲಿ ಪಾಲ್ಗೊಂಡಿದ್ದರು. ಜನಾಂದೋಲನ ಜಾಥಾದ ಹಿನ್ನೆಲೆಯಲ್ಲಿ ಕುಶಾಲನಗರದಾದ್ಯಂತ ಬಿಗು ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.



ಶಾಂತಿಯುತ ಮೆರವಣಿಗೆ

ಅಕ್ರಮ ಮತಾಂತರವನ್ನು ಖಂಡಿಸಿ, ಹಿಂದೂ ಸಮಾಜವನ್ನು ಜಾಗೃತಗೊಳಿಸುವ ಉದ್ದೇಶದಿಂದ ಈ ಶಾಂತಿಯುತ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಕಾನೂನು ಚೌಕಟ್ಟಿನಲ್ಲಿ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಜನಾಂದೋಲನ ಸಮಿತಿಯ ಪ್ರಮುಖರು ತಿಳಿಸಿದರು.

ಅಧಿಕಾರಾವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ದಾಖಲೆ ಹಿನ್ನೆಲೆ | ದಾನಿಗಳು ಹಾಗೂ ಸ್ಥಳೀಯ ಕಾರ್ಯಕರ್ತರಿಂದ ಸಹಾಯಹಸ್ತ

ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನಿಂದ ವೃದ್ಧ ದಂಪತಿಯ ಮನೆ ನವೀಕರಣ

ನಿಡ್ಪಳ್ಳಿ: ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಅತ್ಯಂತ ದೀರ್ಘಾವಧಿ ಅಧಿಕಾರ ನಡೆಸಿದ ಚುನಾಯಿತ ಪ್ರಧಾನಿಯಾಗಿ ಹೊಸ ದಾಖಲೆ ಬರೆದಿರುವ ಪ್ರಧಾನಿ ನರೇಂದ್ರ ಮೋದಿ ಅವರ ಸಾಧನೆಯ ಶುಭ ಸಂದರ್ಭದಲ್ಲಿ ಅವರ ಸ್ವಚ್ಛ ಭಾರತ ಅಭಿಯಾನದ ಆಶಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ವಿಶೇಷ ಸೇವಾ ಕಾರ್ಯವನ್ನು ಕೈಗೊಂಡಿದೆ.

ಇದರ ಅಂಗವಾಗಿ ಪಾಣಾಜೆ ಗ್ರಾಮದ ತೂಂಬಡ್ಕದ ವೃದ್ಧ ದಂಪತಿಗಳಾದ ಗೌರಿ ನಾರಾಯಣ ನಾಯ್ಕ ಅವರ ಮನೆಯಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದಿರುವುದನ್ನು ಗಮನಿಸಿದ ಟ್ರಸ್ಟ್ ಅವರಿಗೆ ನೂತನ ಶೌಚಾಲಯ ನಿರ್ಮಿಸಿ ಕೊಡುವುದರ ಜೊತೆಗೆ ಮನೆಗೆ ಅಗತ್ಯ ನವೀಕರಣ ಕಾರ್ಯಗಳನ್ನೂ ಪೂರ್ಣಗೊಳಿಸಿದೆ. ಪಾಣಾಜೆ ಗ್ರಾಮದ ಕಾರ್ಯಕರ್ತರೊಬ್ಬರ ಮನೆಯ ಶುಭ ಸಮಾರಂಭಕ್ಕೆ ಆಗಮಿಸಿದ್ದ ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಸಂಚಾಲಕ ಅರುಣ್ ಕುಮಾರ್ ಪುತ್ತಿಲ ಅವರ ಬಳಿ ವೃದ್ಧ ದಂಪತಿ ತಮ್ಮ ಮನೆಯಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದೆ, ಹುಟ್ಟಿನಿಂದಲೂ ಶೌಚಾಲಯ ಬಳಸಿಲ್ಲ ಎಂಬ ನೋವನ್ನು ಹಂಚಿಕೊಂಡಿದ್ದರು.



ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಅರುಣ್ ಕುಮಾರ್ ಪುತ್ತಿಲ ಅವರು ತಕ್ಷಣವೇ ಗ್ರಾಮ ಸಮಿತಿ ಕಾರ್ಯಕರ್ತರೊಂದಿಗೆ ಚರ್ಚಿಸಿ ವೃದ್ಧ ದಂಪತಿಗೆ ಶೌಚಾಲಯ ನಿರ್ಮಿಸಿ ಕೊಡುವಂತೆ ಸೂಚಿಸಿದರು. ಅವರ ಮನೆಯಲ್ಲಿ ಕಿಟಕಿ ಹಾಗೂ ಬಾಗಿಲುಗಳೂ ಇಲ್ಲದಿರುವುದನ್ನು ಗಮನಿಸಿ ಅವುಗಳನ್ನು ಅಳವಡಿಸುವುದರೊಂದಿಗೆ ಮನೆಗೆ ಅಗತ್ಯ ನವೀಕರಣ ಕಾರ್ಯವನ್ನೂ ಕೈಗೆತ್ತಿಕೊಳ್ಳಲಾಯಿತು.

ಈ ಸಂದರ್ಭ ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಸಂಚಾಲಕ ಅರುಣ್ ಕುಮಾರ್ ಪುತ್ತಿಲ, ಅಧ್ಯಕ್ಷ ಶ್ರೀರಾಮ್ ಭಟ್ ಪಾತಾಳ, ಪ್ರಧಾನ ಕಾರ್ಯದರ್ಶಿ ಪ್ರೇಮ್‌ರಾಜ್ ಆರ್ಲಪದವು, ಸಂಘಟನಾ ಕಾರ್ಯದರ್ಶಿ ಪ್ರಶಾಂತ್ ನೆಕ್ಕಿಲಾಡಿ, ನಿರ್ದೇಶಕರಾದ ಸುಜಿತ್ ಕಜೆ, ಮನೀಶ್ ಕುಲಾಲ್, ಧೀರನ್, ಪಾಣಾಜೆ ಕೃಷಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ನಾರಾಯಣ ಪ್ರಕಾಶ್ ನೆಲ್ಲಿತ್ತಿಮಾರು, ಟ್ರಸ್ಟ್‌ನ ಮಾರ್ಗದರ್ಶಕರಾದ ರಾಕೇಶ್ ರೈ ಕಡಮಾಜೆ, ಹರಿಪ್ರಸಾದ್ ಕಾಸರಗೋಡು ಹಾಗೂ ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಪಾಣಾಜೆ ಗ್ರಾಮ ಸಮಿತಿ ಅಧ್ಯಕ್ಷ ಶ್ರೀನಿವಾಸ ಕುಲಾಲ್ ಉಡ್ಡಂಗಳ, ಪ್ರಧಾನ ಕಾರ್ಯದರ್ಶಿ ಸುಹಿನ್ ರಾಜ್ ಕೊಂದಲ್ಕಾನ, ಪದಾಧಿಕಾರಿಗಳಾದ ಪ್ರದೀಪ್ ಪಾಣಾಜೆ, ವಸಂತ ಕುಮಾರ್ ಭರಣ್ಯ, ಸಂದೀಪ್ ಕೆ. ಕಡಮಾಜೆ, ರವಿಚಂದ್ರ ಭರಣ್ಯ, ಶಶಿಕಾಂತ್ ವಾಣಿಯನ್, ರವಿಚಂದ್ರ ಕೊಂದಲಡ್ಕ, ಮೋಹನ್ ನಾಯ್ಕ ತೂಂಬಡ್ಕ, ಕೀರ್ತಿರಾಜ್ ಉಡ್ಡಂಗಳ, ಸುರೇಶ್ ತೂಂಬಡ್ಕ, ವಿನಯ ಭರಣ್ಯ, ಜಯಪ್ರಸಾದ್ ರೈ ಕೋಟೆ, ಮಹೇಶ್ ಭರಣ್ಯ ಮತ್ತಿತರರು ಉಪಸ್ಥಿತರಿದ್ದರು.

ಕೃತಜ್ಞತೆ ಸಲ್ಲಿಕೆ

ಈ ಸೇವಾ ಕಾರ್ಯಕ್ಕೆ ದಾನಿಗಳು ಹಾಗೂ ಸ್ಥಳೀಯ ಕಾರ್ಯಕರ್ತರು ಕೈ ಜೋಡಿಸಿದ್ದು ವೃದ್ಧ ದಂಪತಿ ಕೃತಜ್ಞತೆ ಸಲ್ಲಿಸಿ ಹರಸಿದ್ದಾರೆ. ಸಮಾಜದ ಅಗತ್ಯವಿರುವ ಕುಟುಂಬಗಳಿಗೆ ನೆರವಾಗುವ ಇಂತಹ ಸೇವಾ ಚಟುವಟಿಕೆಗಳು ಮುಂದೆಯೂ ನಿರಂತರವಾಗಿ ನಡೆಯಲಿವೆ ಎಂದು ಟ್ರಸ್ಟ್ ತಿಳಿಸಿದೆ.

ಮಂಗಳೂರು

ಬುಧವಾರ, 1 ಜುಲೈ 2026

ಸಂಪುಟ 48, ಸಂಚಿಕೆ 104 ಪುಟಗಳು 12+12

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ವಾಟ್ಸ್ಆ್ಯಪ್‌ಗೂ ಯೂಸರ್‌ನೇಮ್! | ೦೭

ತ.ನಾಡಲ್ಲಿ ಇನ್ನು ಎಸಿ ಬಸ್ | ೦೭

ಸೇನಾ ಮುಖ್ಯಸ್ಥರಾಗಿ ಜ.ಸೇಠ್ ಅಧಿಕಾರ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ಮಿತವ್ಯಯವೇ ಅತಿ ದೊಡ್ಡ ವರಮಾನ.

▲ನಾಣ್ನುಡಿ

ಪಠ್ಯದಲ್ಲಿರುವ ಮೌಲ್ಯ ಜೀವನದಲ್ಲಿಲ್ಲ

ಖಾರಾ ಬಾತ್

◆ ವಿನಾಯಕ ಭಟ್ಟ ಮೂರೂರು

◆ ಪುಟ ೬

ಕಿರುಸುದ್ದಿ

ಅಮೆರಿಕ: ಜನ್ಮಸಿದ್ಧ ಪೌರತ್ವಕ್ಕೆ ಸುಪ್ರೀಂಕೋರ್ಟ್ ಮುದ್ರೆ

◆ **ವಾಷಿಂಗ್ಟನ್:** ಅಮೆರಿಕದಲ್ಲಿ ಜನಿಸಿದ ಬಹುತೇಕ ಪ್ರತಿ ಮಗುವಿಗೂ ಸ್ವಯಂಚಾಲಿತವಾಗಿ ದೊರೆಯುವ ಜನ್ಮಸಿದ್ಧ ಪೌರತ್ವ ನಿರ್ಬಂಧಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಸಿದ್ದ ಯತ್ನಕ್ಕೆ ಭಾರೀ ಹಿನ್ನಡೆಯಾಗಿದೆ. ಟ್ರಂಪ್ ಅವರ ಕಾರ್ಯಕಾರಿ ಆದೇಶವನ್ನು ಅಮೆರಿಕದ ಸರ್ವೋಚ್ಚ ನ್ಯಾಯಾಲಯ ಮಂಗಳವಾರ 6–3 ಬಹುಮತದಿಂದ ತಿರಸ್ಕರಿಸಿ, ಜನ್ಮಸಿದ್ಧ ಪೌರತ್ವದ ಸಾಂವಿಧಾನಿಕ ಹಕ್ಕನ್ನು ಎತ್ತಿಹಿಡಿದಿದೆ.

◆ ಪುಟ ೭

ಮೋದಿಗೆ ಇರಾನ್ ಅಧ್ಯಕ್ಷ ಕರೆ, ಮಧ್ಯಪ್ರಾಚ್ಯ ಬೆಳವಣಿಗೆ ಮಾಹಿತಿ

◆ **ಹೊಸದಿಲ್ಲಿ :** ಇರಾನ್‌ನ ಅಧ್ಯಕ್ಷ ಮಸೌದ್ ಪೆಝೆಶ್ಕಿಯನ್ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿಯವರಿಗೆ ಕರೆ ಮಾಡಿ ಮಧ್ಯಪ್ರಾಚ್ಯ ಬಿಕ್ಕಟ್ಟಿಗೆ ಸಂಬಂಧಿಸಿದ ಹೊಸ ಬೆಳವಣಿಗೆಗಳ ಬಗ್ಗೆ ವಿವರಣೆ ನೀಡಿದರು.ಬಿಕ್ಕಟ್ಟಿಗೆ ಸಂಬಂಧಿಸಿ ಪರಸ್ಪರ ತಿಳುವಳಿಕಾ ಒಪ್ಪಂದಕ್ಕೆ ಬಂದಿರುವುದನ್ನು ಸ್ವಾಗತಿಸಿದ ಪ್ರಧಾನಿಯವರು ಎಲ್ಲ ವಿಷಯಗಳನ್ನೂ ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಪರಿಹರಿಸಿಕೊಳ್ಳಬೇಕಾದ ಅಗತ್ಯವನ್ನು ತಿಳಿಸಿದರು.

ದೂರವಾಣಿ ಮಾತುಕತೆಯ ವೇಳೆ ಇರಾನಿನ ಅಧ್ಯಕ್ಷರು ಪ್ರಧಾನಿಯವರಿಗೆ ಮಧ್ಯ ಏಷ್ಯಾದಲ್ಲಿನ ಇತ್ತೀಚಿನ ಬೆಳವಣಿಗೆಗಳು ಮತ್ತು ಮುಂದಿರುವ ದಾರಿಗಳ ಬಗ್ಗೆ ಮಾಹಿತಿ ನೀಡಿದರು ಎಂದು ಪ್ರಧಾನಿ ಕಾರ್ಯಾಲಯ ತಿಳಿಸಿದೆ.ಪ್ರದೇಶದಲ್ಲಿನ ಸ್ಥಿರತೆ ಮತ್ತು ಶಾಂತಿ ಸ್ಥಾಪನೆಯನ್ನು ಖಾತ್ರಿಪಡಿಸುವಲ್ಲಿ ದೃಢವಾದ ಪ್ರಯತ್ನಗಳ ಅಗತ್ಯವಿರುವುದನ್ನು ಮೋದಿಯವರು ಒತ್ತಿ ಹೇಳಿದ್ದು, ಜೊತೆಗೆ ಹಾರ್ಮುಜ್ ಜಲಸಂಧಿಯಲ್ಲಿ ಭಾರತ ಮತ್ತು ಜಾಗತಿಕ ನೌಕೆಗಳ ಸಂಚಾರಕ್ಕೆ ಮುಕ್ತ ಸ್ವಾತಂತ್ರ್ಯ ಮತ್ತು ಸುರಕ್ಷತೆಯ ಖಾತ್ರಿಯ ಮಹತ್ವವನ್ನೂ ತಿಳಿಸಿದ್ದಾರೆ.ಇದಕ್ಕೂ ಮುನ್ನ ಜು.5ರಂದು ನಡೆಯಲಿರುವ ಇರಾನಿನ ಸರ್ವೋಚ್ಚ ನ್ಯಾಯ ಆಯತೊಲ್ಲಾ ಖಮೇನಿ ಅವರ ಅಂತ್ಯಕ್ರಿಯೆಯಲ್ಲೂ ಭಾಗ ವಹಿಸುವಂತೆ ಅವರು ಮೋದಿಯವರಿಗೆ ಆಹ್ವಾನ ನೀಡಿದರು.



ಜುಲೈ ಬಂದಿದೆ ನೆನಪಿಡಿ

◆ ಪುಟ ೭

ಸುದ್ದಿ ಸಮಗ್ರ

ಇಂದಿನಿಂದ ದೇಶಾದ್ಯಂತ ವಿಬಿ ಜಿ ರಾಮ್ ಜಿ ಯೋಜನೆ ಜಾರಿ

ಗ್ರಾಮೀಣ ಉದ್ಯೋಗ ಖಾತರಿ 125 ದಿನಕ್ಕೆ ಏರಿಸಿದ ಕೇಂದ್ರ

ಗ್ರಾಮೀಣರಿಗೆ ಬಲ

ಮುಖ್ಯ ಅಂಶಗಳು

ಜು.1, 2026ರಿಂದ ವಿಬಿ ಜಿ ರಾಮ್ ಜಿ ಕಾಯ್ದೆ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಜಾರಿ

ಗ್ರಾಮೀಣ ಕುಟುಂಬಗಳಿಗೆ 100 ದಿನದಿಂದ 125 ದಿನಗಳ ಕೂಲಿ ಉದ್ಯೋಗ ಖಾತರಿ

ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ₹ **95,692** ಕೋಟಿ ರೂ. ಮಧ್ಯಂತರ ಅನುದಾನ

- ಹಾಲಿ ಕಾಮಗಾರಿಗಳು ನಿರಂತರವಾಗಿ ಮುಂದುವರಿಕೆ
- ಇ-ಕೆವೈಸಿ ಪೂರ್ಣಗೊಂಡ ಜಾಬ್ ಕಾರ್ಡ್‌ಗಳು ಹೊಸ ಕಾರ್ಡ್ ವಿತರಣೆವರೆಗೆ ಮಾನ್ಯ
- ಗ್ರಾಮ ಪಂಚಾಯಿತಿಗಳಿಗೆ ಕೇಂದ್ರ ಸ್ಥಾನ
- ನೀರಿನ ಸಂರಕ್ಷಣೆ, ಕೃಷಿ, ಗ್ರಾಮೀಣ ಮೂಲಸೌಕರ್ಯ, ಮಹಿಳಾ ಸಬಲೀಕರಣಕ್ಕೆ ಒತ್ತು



◆ **ಹೊಸದಿಲ್ಲಿ:** ಗ್ರಾಮೀಣ ಬಡಕುಟುಂಬಗಳ ಜೀವನೋಪಾಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ವಿಕಸಿತ ಭಾರತ ರೋಜ್ಗಾರ್ ಮತ್ತು ಆಜೀವಿಕಾ ಮಿಷನ್(ಗ್ರಾಮೀಣ)(ವಿಬಿ ಜಿ ರಾಮ್ ಜಿ) ಕಾಯ್ದೆ, 2025 ಬುಧವಾರದಿಂದ ದೇಶಾದ್ಯಂತ ಜಾರಿಗೆ ಬರಲಿದೆ. ಈ ಹೊಸ ಕಾಯ್ದೆಯಲ್ಲಿ ಅರ್ಹ ಗ್ರಾಮೀಣ ಕುಟುಂಬಗಳಿಗೆ ದೊರೆಯುತ್ತಿದ್ದ 100 ದಿನಗಳ ಕೂಲಿ ಉದ್ಯೋಗ ಖಾತರಿಯನ್ನು 125 ದಿನಗಳಿಗೆ ಹೆಚ್ಚಿಸಲಾಗಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಹಾಗೂ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಾತನಾಡಿ, ಒಬ್ಬರೂ ಅರ್ಹ ಗ್ರಾಮೀಣ ಕಾರ್ಮಿಕ ಉದ್ಯೋಗವಿಲ್ಲದೆ ಒಂದು ದಿನವೂ ಉಳಿಯಬಾರದು ಎಂಬುದು ಸರ್ಕಾರದ ಸಂಕಲ್ಪ ಎಂದು ಹೇಳಿದ್ದಾರೆ.



➡ಪುಟ ೪


ಹೊಸ ಕಾಯ್ದೆ ವಿಶೇಷ

- ಗ್ರಾಮೀಣ ಆಸ್ತಿ ನಿರ್ಮಾಣಕ್ಕೆ ಒತ್ತು: ಶಾಶ್ವತ, ಸಮುದಾಯ ಪರ ಕಾಮಗಾರಿಗಳಿಗೆ ಆದ್ಯತೆ
- ಪಂಚಾಯಿತಿಗಳ ಪಾತ್ರ ಹೆಚ್ಚಳ: ಸ್ಥಳೀಯ ಮಟ್ಟದಲ್ಲೇ ಯೋಜನೆ ಅನುಷ್ಠಾನ
- ಪಾರದರ್ಶಕತೆ: ತಂತ್ರಜ್ಞಾನ ಬಳಕೆಯ ಮೂಲಕ ಉತ್ತಮ ಮೇಲ್ವಿಚಾರಣೆ
- ಮಹಿಳೆಯರಿಗೆ ನೆರವು: ಸ್ವಸಹಾಯ ಗುಂಪುಗಳ ಸಬಲೀಕರಣಕ್ಕೆ ಪ್ರೋತ್ಸಾಹ

ರಾಜ್ಯಗಳ ಸಿದ್ಧತೆ

- ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಸಮ್ಮೇಳನದಲ್ಲಿ ರಾಜ್ಯಗಳ ಸಿದ್ಧತೆ ಪರಿಶೀಲನೆ
- 29 ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಬಜೆಟ್ ಮೀಸಲಿಟ್ಟಿವೆ
- 24 ರಾಜ್ಯಗಳು ಈಗಾಗಲೇ ರಾಜ್ಯ ಯೋಜನೆಗೆ ಅಧಿಸೂಚನೆ ಹೊರಡಿಸಿವೆ

ರಾಜ್ಯದಲ್ಲೂ ಯೋಜನೆ ಆರಂಭ



◆ **ಬೆಂಗಳೂರು:** ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವೆ ಸಂಘರ್ಷಕ್ಕೆ ಕಾರಣವಾಗಿದ್ದ ವಿಬಿ ಜಿ ರಾಮ್ ಜೀ ಯೋಜನೆ ರಾಜ್ಯದಲ್ಲೂ ಇಂದಿನಿಂದ ಪ್ರಾರಂಭವಾಗಲಿದೆ.

➡ಪುಟ ೪

12,48,314 ಗಣತಿ ಅರ್ಜಿಗಳು ವಿತರಣೆ

ಎಸ್‌ಐಆರ್‌ಗೆ ಮೊದಲ ದಿನ ಸಕಾರಾತ್ಮಕ ಸ್ಪಂದನೆ



- ಮನೆಯ ಎಲ್ಲ ಸದಸ್ಯರ ಅರ್ಜಿ ಒಬ್ಬರೇ ಭರ್ತಿ ಮಾಡಬಹುದು
- ಗ್ರಾಮೀಣ ಪ್ರದೇಶದ ಹಲವೆಡೆ ತಾಂತ್ರಿಕ ಸಮಸ್ಯೆ

◆ **ಬೆಂಗಳೂರು:** ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ದೋಷಮುಕ್ತ ಹಾಗೂ ಪಾರದರ್ಶಕವಾಗಿ ರೂಪಿಸಲು ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ(ಎಸ್‌ಐಆರ್)ಗೆ ರಾಜ್ಯದಲ್ಲಿ ಚಾಲನೆ ದೊರೆತಿದೆ. ರಾಜ್ಯದಲ್ಲಿ ಎಸ್‌ಐಆರ್ ಆರಂಭಗೊಂಡ ಮಂಗಳವಾರ 12.48 ಲಕ್ಷ ಎಸ್‌ಐಆರ್ ಅರ್ಜಿ ವಿತರಿಸಲಾಗಿದ್ದು, ಶೇ.2.25ರಷ್ಟು ಪ್ರಗತಿ ಕಂಡಿದೆ.

ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ–ಮನೆಗೆ ಭೇಟಿ ನೀಡಿ ಮತದಾರರಿಗೆ ಗಣತಿ ಅರ್ಜಿಗಳನ್ನು (ಎನ್ಯುಮರೇಷನ್ ಫಾರಮ್) ವಿತರಿಸುವ ಕಾರ್ಯ ಆರಂಭಿಸಿದ್ದಾರೆ. ಮೊದಲ ದಿನ ರಾಜ್ಯದಲ್ಲಿ ಒಟ್ಟು 12,48,314 ಗಣತಿ ಅರ್ಜಿಗಳನ್ನು ವಿತರಿಸಲಾಗಿದ್ದು, ಇದು ಒಟ್ಟು ಪ್ರಕ್ರಿಯೆಯ ಶೇ.2.25ರಷ್ಟಾಗಿದೆ. ವಿತರಿಸಲಾದ ಅರ್ಜಿಗಳ ಪೈಕಿ 47,817 ಅರ್ಜಿಗಳನ್ನು ಈಗಾಗಲೇ ಡಿಜಿಟಲೀಕರಿಸಲಾಗಿದ್ದು, ಶೇ.0.09ರಷ್ಟು ಪ್ರಗತಿ ಕಂಡಿದೆ.

2026 ಜೂನ್ 16, 2026ರ ಅಂಕಿ–ಅಂಶಗಳ ಪ್ರಕಾರ ರಾಜ್ಯದಲ್ಲಿ ಒಟ್ಟು 5,54,32,314 ಮತದಾರರು ಎಸ್ ಐಆರ್ ಪ್ರಕ್ರಿಯೆಗೆ ಒಳಪಡಿಸಿದ್ದು, ಜುಲೈ 29ರವರೆಗೆ ಅರ್ಜಿ ವಿತರಿಸಲಾಗುವುದು ಎಂದು ಚುನಾವಣಾ ಆಯೋಗ ತಿಳಿಸಿದೆ. ಆನ್‌ಲೈನ್‌ನಲ್ಲೂ ಗಣತಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಮೊದಲ ದಿನ 6,840 ಮತದಾರರು ಅರ್ಜಿ ಸಲ್ಲಿಸಿದ್ದಾರೆ. ಪರಿಶೀಲನೆ ವೇಳೆ ಒಟ್ಟು 488 ಮತದಾರರನ್ನು ವಿಶೇಷ ವರ್ಗದಲ್ಲಿ ಗುರುತಿಸಲಾಗಿದೆ.

➡ಪುಟ ೪

ಮುಖ್ಯಮಂತ್ರಿ ಮನೆಯಿಂದಲೇ ಚಾಲನೆ


ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಅವರ ಪತ್ನಿ ಉಷಾ ಅವರು ಗಣತಿ ನಮೂನೆ ತುಂಬುವ ಮೂಲಕ ಸಿಎಂ ಮನೆಯಿಂದಲೇ ರಾಜ್ಯದ ಎಸ್‌ಐಆರ್ ಪ್ರಕ್ರಿಯೆ ಆರಂಭವಾಗಿದೆ. ಸದಾಶಿವನಗರ ನಿವಾಸದಲ್ಲಿ ಮಂಗಳವಾರ ಬೆಂಗಳೂರು ದಕ್ಷಿಣ ಜಿಲ್ಲೆ ಡಿಸಿ, ಅಧಿಕಾರಿಗಳ ಸಮ್ಮುಖದಲ್ಲಿ ಎನ್ಯುಮರೇಷನ್ ಅರ್ಜಿ ಭರ್ತಿ ಮಾಡಿ ಸಹಿ ಮಾಡಿ ಸಲ್ಲಿಸಿದ್ದಾರೆ. ಈ ವೇಳೆ ಮಾತನಾಡಿದ ಅವರು, ಬಿಎಲ್‌ಒಗಳ ಮೂಲಕ ಅರ್ಜಿ ಪಡೆದು ಆಫ್‌ಲೈನ್ ಮೂಲಕವೇ ಅರ್ಜಿ ತುಂಬಬಹುದು.

➡ಪುಟ ೪

ಉಗ್ರನಿಗೆ ನೆರವಾದ ಮಂಗಳೂರು ಟ್ರಾವೆಲ್ ಏಜೆಂಟ್ ಅರ್ಜಿ ವಜಾ

ಕ್ರಿಮಿನಲ್ ಕೇಸ್ ರದ್ದತಿಗೆ ಹೈ ನಕಾರ

◆ **ಬೆಂಗಳೂರು:** ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುವವರ ವಿರುದ್ಧ ಕಾನೂನು ಕ್ರಮ ಅನಿವಾರ್ಯ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಆಂಧ್ರಪ್ರದೇಶದ ಉಗ್ರ ನಿಗ್ರಹ ದಳಕ್ಕೆ (ಎಟಿಎಸ್) ಬೇಕಾಗಿರುವ ಶಂಕಿತ ಉಗ್ರ ಸೇರಿದಂತೆ ಹಲವರಿಗೆ ಅಕ್ರಮವಾಗಿ ಪಾಸ್ ಪೋರ್ಟ್ ನವೀಕರಣಕ್ಕೆ ನೆರವು ನೀಡಿದ ಆರೋಪ ಎದುರಿಸುತ್ತಿರುವ ಮಂಗಳೂರಿನ ಟ್ರಾವೆಲ್ ಏಜೆಂಟ್ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಲು ನಿರಾಕರಿಸಿದೆ.



ಟ್ರಾವೆಲ್ ಏಜೆಂಟ್ ಹೈದರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ, ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಗಂಭೀರ ಆರೋಪಗಳಿರುವ ಹಿನ್ನೆಲೆ ಪ್ರಕರಣವನ್ನು ಈ ಹಂತದಲ್ಲಿ ರದ್ದುಪಡಿಸಲು ಅವಕಾಶವಿಲ್ಲ ಎಂದು ಹೇಳಿ ಅರ್ಜಿಯನ್ನು ವಜಾಗೊಳಿಸಿದೆ. ಉಗ್ರ ಕೃತ್ಯಗಳಲ್ಲಿ ನೇರವಾಗಿ ಭಾಗಿಯಾಗುವವರಷ್ಟೇ ಅಲ್ಲ, ಅವರಿಗೆ ನಕಲಿ ದಾಖಲೆ ಸೃಷ್ಟಿಸಿ ನೆರವು ನೀಡುವವರೂ ಅಪರಾಧಿಗಳೇ.

➡ಪುಟ ೪

ಪ್ರಕರಣ ಹಿನ್ನೆಲೆ

ಮಂಗಳೂರಿನಲ್ಲಿ ಟ್ರಾವೆಲ್ ಏಜೆನ್ಸಿ ನಡೆಸುತ್ತಿದ್ದ ಆರೋಪಿಯು ಆಂಧ್ರಪ್ರದೇಶದ ಮೋಸ್ಟ್ ವಾಂಟೆಡ್ ಶಂಕಿತ ಉಗ್ರ ಇಬ್ರಾಹಿಂ ಖಲೀಲ್ ಸೇರಿ 15 ಮಂದಿಗೆ ತನ್ನದೇ ವಿಳಾಸ ಬಳಸಿ ಅಕ್ರಮವಾಗಿ ಪಾಸ್‌ಪೋರ್ಟ್ ನವೀಕರಣ ಮಾಡಿಕೊಟ್ಟಿದ್ದಾನೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ಮಂಗಳೂರು ಈಶಾನ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಪೂರ್ಣಗೊಳಿಸಿದ ಪೊಲೀಸರು ಆರೋಪಪಟ್ಟಿ ಸಲ್ಲಿಸಿದ್ದರು. ಬಳಿಕ ಪ್ರಕರಣ ರದ್ದುಪಡಿಸುವಂತೆ ಆರೋಪಿ ಹೈಕೋರ್ಟ್ ಮೊರೆ ಹೋಗಿದ್ದರೂ, ನ್ಯಾಯಾಲಯ ಅರ್ಜಿ ತಿರಸ್ಕರಿಸಿದೆ.

ಹಿಂದು ಯುವಕರ ಮೇಲೆ ಹಲ್ಲೆ | ನರೇಗಲ್‌ಗೆ ಬಿವೈವಿ ಭೇಟಿ

ಹಲ್ಲೆಕೋರರ ಬಂಧಿಸದಿದ್ರೆ ಪ್ರತಿಭಟನೆ

◆ **ಹಾನಗಲ್ಲ:** ತಾಲೂಕಿನ ನರೇಗಲ್ ಗ್ರಾಮದಲ್ಲಿ ಕಾರಹುಣ್ಣಿಮೆ ಹಬ್ಬದ ಹಿನ್ನೆಲೆಯಲ್ಲಿ ಹೋರಿಗಳನ್ನು ಓಡಿಸುವ ಸ್ಪರ್ಧೆಯ ವೇಳೆ ನಡೆದ ಗಲಾಟೆಯಲ್ಲಿ ಹಿಂದು ಯುವಕನೋರ್ವನ ಕೈ ಕಡಿದಿರುವ ಪ್ರಕರಣ ವ್ಯಾಪಕ ಜನಾಕ್ರೋಶಕ್ಕೆ ಒಳಗಾಗುತ್ತಿದ್ದಂತೆಯೇ ಮಂಗಳವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಗ್ರಾಮಕ್ಕೆ ಭೇಟಿ ನೀಡಿ ಗಾಯಗೊಂಡವರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ್ದಾರೆ.

ಸರ್ಕಾರ ಈ ಘಟನೆಯಲ್ಲಿ ರಾಜಕೀಯ ಬೆರೆಸಿ ಕೇವಲ ಹಿಂದುಗಳನ್ನು ಗುರಿಯಾಗಿಸಿ ಪ್ರಕರಣ ದಾಖಲಿಸಿದರೆ ಬಿಜೆಪಿ ತೀವ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿದ ವಿಜಯೇಂದ್ರ, ಘಟನೆ ನಡೆದು ಒಂದು ದಿನ ಕಳೆದರೂ, ಸ್ಥಳೀಯ ಶಾಸಕರು ಸ್ಥಳಕ್ಕೆ ಭೇಟಿ ನೀಡಿಲ್ಲ. ಇಲ್ಲಿನ ಶಾಸಕರಿಗೆ ಮುಸ್ಲಿಮರಷ್ಟೇ ಮತ ಹಾಕಿಲ್ಲ. ಹಿಂದುಗಳೂ ಮತ ನೀಡಿದ್ದಾರೆ. ಹಿಂದುಗಳ ರಕ್ಷಣೆಯ ಹೊಣೆ ಶಾಸಕರು ಹೊರಬೇಕು. ಘಟನೆಗೆ ಸಂಬಂಧಿಸಿ ಅನಾವಶ್ಯಕವಾಗಿ ಕೌಂಟರ್ ಕೇಸ್ ಹಾಕಿ ದಾಳಿ ಮಾಡಿದವರ ಪರ ವಹಿಸುವ ಕೆಲಸ ನಡೆದರೆ, ಜನರೇ ಬೀದಿಗಿಳಿದು ಹೋರಾಡುತ್ತಾರೆ ಎಂದರು.

➡ಪುಟ ೪



ಪಟಾಕಿ ಸಿಡಿಸಿದ್ದಕ್ಕೆ ಘರ್ಷಣೆ

ಹಾನಗಲ್ಲ ತಾಲೂಕಿನ ನರೇಗಲ್ ಗ್ರಾಮದಲ್ಲಿ ಸೋಮವಾರ ಕಾರಹುಣ್ಣಿಮೆ ಹಬ್ಬದ ಹಿನ್ನೆಲೆ ಹೋರಿಗಳನ್ನು ಓಡಿಸುವ ಸ್ಪರ್ಧೆಯ ಸಂದರ್ಭದಲ್ಲಿ ಮಸೀದಿ ಎದುರು ಪಟಾಕಿ ಸಿಡಿಸಿದರೆಂಬ ಕಾರಣಕ್ಕೆ ಘರ್ಷಣೆ ನಡೆದಿದೆ.

➡ಪುಟ ೪

ಸ್ವಾತಂತ್ರ್ಯಕ್ಕಾಗಿ ಪಿಒಕೆ ಜನರ ಹೋರಾಟ

◆ **ರಾವಲಕೋಟ್:** ಪಾಕಿಸ್ತಾನದ ದಬ್ಬಾಳಿಕೆ ಮತ್ತು ಆಡಳಿತ ವೈಫಲ್ಯದ ವಿರುದ್ಧ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಜನಾಕ್ರೋಶ ಭುಗಿಲೆದ್ದಿದ್ದು, ಈ ಪ್ರದೇಶ ಪಾಕಿಸ್ತಾನದ ಭಾಗವಲ್ಲ ಎಂದು ಸಾವಿರಾರು ಪ್ರತಿಭಟನಾಕಾರರು ಘೋಷಿಸಿದ್ದಾರೆ. ಆಹಾರ ಮತ್ತು ಅಗತ್ಯ ವಸ್ತುಗಳ ಪೂರೈಕೆಗೆ ತಡೆಯೊಡ್ಡುವುದನ್ನು ಮುಂದುವರಿಸಿದರೆ ಭಾರತದ ನೆರವು ಪಡೆಯಬೇಕಾಗುತ್ತದೆ ಎಂದೂ ಪಾಕ್‌ಗೆ ಎಚ್ಚರಿಕೆ ನೀಡಿದ್ದಾರೆ. ರಾವಲಕೋಟ್‌ನ ಈದ್ಗಾ ಮೈದಾನದಲ್ಲಿ ನಡೆಯುತ್ತಿರುವ ಪ್ರತಿಭಟನೆ ಮಂಗಳವಾರ 22ನೇ ದಿನ ಪೂರೈಸಿದೆ. ಪಾಕಿಸ್ತಾನದ ಆಡಳಿತ ನಿಯಂತ್ರಣವನ್ನು ಪ್ರತಿಭಟನಾಕಾರರು ತಿರಸ್ಕರಿಸಿದರು.

ಪಿಒಕೆ ಪಾಕ್ ಭಾಗವಲ್ಲ, ಪಾಕಿಸ್ತಾನಕ್ಕೆ ಸ್ಥಳೀಯರಿಂದಲೇ ತಿರುಗೇಟು

➡ಪುಟ ೪

ಏಕೆ ಈ ಜನಾಕ್ರೋಶ?

- ಆಡಳಿತ ವ್ಯವಸ್ಥೆಯ ಸಂಪೂರ್ಣ ವೈಫಲ್ಯ
- ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ಹಣದುಬ್ಬರ
- ಆಹಾರ ಹಾಗೂ ಔಷಧ ಪೂರೈಕೆಗೆ ನಿರ್ಬಂಧ
- ಪಾಕಿಸ್ತಾನ ಸೇನೆಯ ದಬ್ಬಾಳಿಕೆ
- ರಾಜಕೀಯ ಮತ್ತು ಆಡಳಿತಾತ್ಮಕ ನಿರ್ಲಕ್ಷ್ಯ
- ಜನರ ಹಕ್ಕುಗಳ ಹತ್ತಿಕ್ಕುವಿಕೆ
- ಅಂತರ್ಜಾಲ ಸ್ಥಗಿತಗೊಳಿಸಿ ಮಾಹಿತಿ ನಿರ್ಬಂಧ

ಜು.6ಕ್ಕೆ ಅಯೋಧ್ಯಾ ಟ್ರಸ್ಟ್ ಸಭೆ

◆ **ಅಯೋಧ್ಯೆ:** ಇಬ್ಬರು ಹಿರಿಯ ಸದಸ್ಯರು ರಾಜೀನಾಮೆ ನೀಡಿರುವುದರಿಂದ ಮುಂದಿನ ಕ್ರಮಗಳ ಬಗ್ಗೆ ಚರ್ಚಿಸಲು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಜುಲೈ 6ರಂದು ಸಭೆ ಸೇರಲಿದೆ. ಜುಲೈ 7ರಂದು ಟ್ರಸ್ಟ್ ಸಭೆ ನಡೆಯುವುದೆಂದು ವಿಹಿಂಪ ಮುಖ್ಯಸ್ಥ ಆಲೋಕ್ ಕುಮಾರ್ ಈ ಹಿಂದೆ ಸುದ್ದಿಗಾರರಿಗೆ ತಿಳಿಸಿದ್ದರಾದರೂ, ಇದೀಗ ಒಂದು ದಿನ ಮುಂಚಿತವಾಗಿ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ದೇಗುಲ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಚಂಪತ್‌ರಾಯ್ 2020ರಲ್ಲಿ ರೂಪುಗೊಂಡ ಟ್ರಸ್ಟ್‌ನ ಪ್ರಮುಖರಾಗಿದ್ದು, ಚಂಪತ್ ರಾಯ್ ಮತ್ತು ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ ರಾಜೀನಾಮೆ ಬಗ್ಗೆ ಸಭೆಯಲ್ಲಿ ಚರ್ಚೆಯಾಗಲಿದೆ. ಈ ಇಬ್ಬರು ಟ್ರಸ್ಟಿಗಳ ರಾಜೀನಾಮೆಯಿಂದ ಟ್ರಸ್ಟ್‌ನಲ್ಲಿ ಇದೀಗ ಒಟ್ಟು ಮೂರು ಸ್ಥಾನಗಳು ತೆರವಾದಂತಾಗಿದೆ.

- ಒಂದು ದಿನ ಮುಂಚಿತವಾಗಿಯೇ ಸಭೆ
- ಚಂಪತ್ ರಾಯ್, ಮಿಶ್ರಾ ರಾಜೀನಾಮೆ ಕುರಿತು ಚರ್ಚೆ

➡ಪುಟ ೪

ಯುರೋಪ್‌ನಲ್ಲಿ ದಾಖಲೆ ಮಟ್ಟದ ತಾಪಮಾನ | 1,300ಕ್ಕೂ ಹೆಚ್ಚು ಸಾವು

ಕರಗುತ್ತಿವೆ ರಸ್ತೆಗಳು, ಬಾಗುತ್ತಿವೆ ಹಳಿಗಳು!

◆ **ಲಂಡನ್:** ಯುರೋಪ್‌ನ ಹಲವು ದೇಶಗಳಲ್ಲಿ ತೀವ್ರವಾಗಿ ಹೆಚ್ಚುತ್ತಿರುವ ತಾಪಮಾನವ 40 ಸೆಂಟಿಗ್ರೇಡ್ ದಾಟಿದ್ದು, ರಸ್ತೆಗಳು ಕರಗುತ್ತಿವೆ, ಟ್ರಾಮ್ ಹಳಿಗಳು ಬಾಗುತ್ತಿವೆ ಮತ್ತು ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ತೀವ್ರಗೊಂಡಿದೆ ಎಂದು ಜಾಗತಿಕ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್‌ಒ) ತಿಳಿಸಿದೆ.

ಜೂ.21ರಿಂದ ತೀವ್ರ ತಾಪಮಾನದಿಂದ 1,300ಕ್ಕೂ ಹೆಚ್ಚು ಹೆಚ್ಚುವರಿ ಸಾವುಗಳು ದಾಖಲಾಗಿವೆ. ಇದರಲ್ಲಿ ಲಾಕ್ ಆಗಿದ್ದ ಕಾರುಗಳಲ್ಲಿ ಮೃತಪಟ್ಟ ಮಕ್ಕಳು ಮತ್ತು ಅಸುರಕ್ಷಿತ ಸ್ಥಳಗಳಲ್ಲಿ ಈಜಲು ಹೋಗಿ ಮುಳುಗಿದ ಯುವಕರು ಸೇರಿದ್ದಾರೆ ಎಂದು ಡಬ್ಲ್ಯುಎಚ್‌ಒ ಹೇಳಿದೆ. ಪ್ಯಾರಿಸ್‌ನಲ್ಲಿ ಮರಣೋತ್ತರ ಪರೀಕ್ಷಾ ಕೇಂದ್ರಗಳು ಮತ್ತು ಶವಾಗಾರಗಳು ಭರ್ತಿಯಾಗಿವೆ. ಜೂನ್ 18ರಿಂದ ಫ್ರಾನ್ಸ್‌ನಲ್ಲಿ ಕನಿಷ್ಠ 74 ಜನರು ಮುಳುಗಿ ಸತ್ತಿದ್ದು, ರಾಷ್ಟ್ರೀಯ ಹವಾಮಾನ ಸಂಸ್ಥೆ ಜುಲೈನಲ್ಲಿ ಮತ್ತೊಂದು ಬಿಸಿಗಾಳಿಯ ಎಚ್ಚರಿಕೆ ನೀಡಿದೆ.

ಸರ್ಕಾರಗಳ ಮುನ್ನೆಚ್ಚರಿಕೆ: ಹಂಗೇರಿಯ ಅಸ್ಜೋಡ್‌ನಲ್ಲಿ ತಾಪಮಾನ 41.8 ಸೆಂಟಿಗ್ರೇಡ್ ತಲುಪಿದೆ. ಪ್ರಧಾನಮಂತ್ರಿ ಪೀಟರ್ ಮಗ್ಯಾರ್, ಸರ್ಕಾರಿ ನೌಕರರಿಗೆ ಮನೆಯಿಂದಲೇ ಕೆಲಸ ಮಾಡಲು, ಹೊರಾಂಗಣ



ಕೆಲಸಗಳ ಸಮಯ ಬದಲಾವಣೆ ಮಾಡಿಕೊಳ್ಳಲು ಮತ್ತು ರೆಸ್ಟೋರೆಂಟ್‌ಗಳಿಗೆ ಕುಡಿಯುವ ನೀರು ವಿತರಿಸಲು ವಿನಂತಿಸಿದ್ದಾರೆ. ಇದೇ ವೇಳೆ, ಉಕ್ರೇನ್‌ನಲ್ಲಿ 35–38 ಸೆಂಟಿಗ್ರೇಡ್ ತಾಪಮಾನ ಮುನ್ಸೂಚನೆ ಇರುವುದರಿಂದ ಇಂಧನ ಜಾಲ ಅಸ್ತವ್ಯಸ್ತಗೊಂಡಿದ್ದು, ತುರ್ತು ವಿದ್ಯುತ್ ಕಡಿತವನ್ನು ಜಾರಿಗೊಳಿಸಲಾಗಿದೆ. ಜನರು ಮನೆಯ ಹೊರಗಡೆ ಬಿಸಿಯಾದ ಪಾತ್ರೆಗಳಲ್ಲಿ ಮೊಟ್ಟೆ ಬೇಯಿಸುವುದು, ಕಾರುಗಳ ಮೇಲಿನ ಪ್ಲಾಸ್ಟಿಕ್ ಪೇಂಟ್ ಕರಗುವುದು ಮತ್ತು ಶಾಪಿಂಗ್ ಕಾರ್ಟ್‌ಗಳು ನೀರಾಗುತ್ತಿರುವ ವೀಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ದಾಖಲೆಗಳನ್ನು ಮುರಿದ ತಾಪಮಾನ

ಪೂರ್ವದ ಕಡೆಗೆ ಚಲಿಸಿದ ಈ ಬಿಸಿಗಾಳಿ ಪೋಲೆಂಡ್, ಚೆಕ್ ಗಣರಾಜ್ಯ ಮತ್ತು ಜರ್ಮನಿಯಲ್ಲಿ ಹೊಸ ದಾಖಲೆ ನಿರ್ಮಿಸಿದೆ. ಜರ್ಮನಿಯಲ್ಲಿ ತಾಪಮಾನ 41 ಸೆಂಟಿಗ್ರೇಡ್ ದಾಟಿದೆ. ಸ್ವಿಟ್ಜರ್ ಲ್ಯಾಂಡ್‌ನ ಬೇಸೆಲ್‌ನಲ್ಲಿ 38.8 ಸೆಂಟಿಗ್ರೇಡ್ ದಾಖಲಾಗಿದ್ದರೆ, 1874 ರ ನಂತರ ಡೆನ್ಮಾರ್ಕ್ ತನ್ನ ಅತ್ಯಂತ ಸೆಖೆಯ ದಿನವನ್ನು ಕಂಡಿದೆ. ಯುಕೆಯಲ್ಲಿ ಜೂನ್ ತಿಂಗಳ ಸಾರ್ವಕಾಲಿಕ ದಾಖಲೆ ಉಷ್ಣಾಂಶ ದಾಖಲಾಗಿದೆ. ಹೈಡ್ರೋಮೆಟಿಯರಾಲಜಿಕಲ್ ಇನ್‌ಸ್ಟಿಟ್ಯೂಟ್ ಪ್ರಕಾರ, ಸ್ಲೋವಾಕಿಯಾದ ತುರ್ನಾನಾದ್ ಬೋಡ್ವೌನಲ್ಲಿ 41 ಸೆಂಟಿಗ್ರೇಡ್ ಉಷ್ಣಾಂಶ ವರದಿಯಾಗಿದೆ.

ಹೊಸ ಎಫ್‌ಸಿಆರ್‌ಎ ಪೋರ್ಟಲ್, ಇ–ಒಸಿಐ ಕಾರ್ಡ್‌ಗೆ ಶಾ ಚಾಲನೆ

ವಿದೇಶಿ ದೇಣಿಗೆ ಮೇಲೆ ಡಿಜಿಟಲ್ ಕಣ್ಗಾವಲು

◆ **ಹೊಸದಿಲ್ಲಿ:** ವಿದೇಶಿ ದೇಣಿಗೆಗಳ ಸ್ವೀಕಾರ ಮತ್ತು ಬಳಕೆ ಮೇಲೆ ಪರಿಣಾಮಕಾರಿ ನಿಗಾ ಇರಿಸುವುದರ ಜತೆಗೆ ಸಂಘ–ಸಂಸ್ಥೆಗಳ ಅರ್ಜಿ ಪ್ರಕ್ರಿಯೆ ಸರಳಗೊಳಿಸುವ ನೂತನ ಎಫ್‌ಸಿಆರ್‌ಎ 2.0 ಪೋರ್ಟಲ್ ಹಾಗೂ ಸಾಗರೋತ್ತರ ಭಾರತೀಯ ನಾಗರಿಕರಿಗಾಗಿ ಸಂಪೂರ್ಣ ಡಿಜಿಟಲ್ ಸ್ವರೂಪದ ಇ–ಒಸಿಐ ಕಾರ್ಡ್‌ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಚಾಲನೆ ನೀಡಿದರು.

ತಂತ್ರಜ್ಞಾನದ ಗರಿಷ್ಠ ಬಳಕೆಯ ಮೂಲಕ ಸಾರ್ವಜನಿಕ ಸೇವೆಗಳನ್ನು ಸುಲಭಗೊಳಿಸುವುದು, ಆಡಳಿತದಲ್ಲಿ ಪಾರದರ್ಶಕತೆ ತರುವುದು ಹಾಗೂ ರಾಷ್ಟ್ರೀಯ ಭದ್ರತೆ ಬಲಪಡಿಸುವುದು ಈ ಎರಡೂ ಯೋಜನೆಗಳ ಪ್ರಮುಖ ಉದ್ದೇಶವಾಗಿದೆ. ಕಾರ್ಯಕ್ರಮದಲ್ಲಿ ಮಾತನಾಡಿದ ಅಮಿತ್ ಶಾ, 2014ಕ್ಕೂ ಮೊದಲು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ ವ್ಯವಸ್ಥೆಯು ಕಡತಗಳು, ಸಂಕೀರ್ಣ ಪ್ರಕ್ರಿಯೆಗಳಲ್ಲಿ ಸಿಲುಕಿಕೊಂಡಿತ್ತು. ಸಮರ್ಪಕ ಮೇಲ್ವಿಚಾರಣೆಯೂ ಸಾಧ್ಯವಾಗುತ್ತಿರಲಿಲ್ಲ. ಪ್ರಧಾನಿ ಮೋದಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದ ಬಳಿಕ ವ್ಯವಸ್ಥೆಯನ್ನು ಬಲಪಡಿಸಲಾಗಿದೆ ಎಂದರು.



ಪೋರ್ಟಲ್‌ನ ನವೀಕರಣದಿಂದ ಸಂಘ–ಸಂಸ್ಥೆಗಳ ಕಾರ್ಯನಿರ್ವಹಣೆ ಮತ್ತಷ್ಟು ಸುಲಭವಾಗಲಿದೆ. ತಪ್ಪು ಉದ್ದೇಶದಿಂದ ದೇಶಕ್ಕೆ ಹರಿದುಬರುವ ವಿದೇಶಿ ಹಣದ ಮೇಲೆ ನಿಗಾ ಇನ್ನಷ್ಟು ಬಿಗಿಯಾಗಲಿದೆ ಎಂದು ಹೇಳಿದರು.

ಕಾಗದಪತ್ರ ಸಲ್ಲಿಕೆ ಇನ್ನು ಬೇಡ: ಹೊಸ ಪೋರ್ಟಲ್‌ನಲ್ಲಿ ಎಫ್‌ಸಿಆರ್‌ಎ ನೋಂದಣಿ, ಪರವಾನಗಿ ನವೀಕರಣ, ವಾರ್ಷಿಕ ಲೆಕ್ಕಪತ್ರ ಸಲ್ಲಿಕೆ ಸೇರಿದಂತೆ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ ಸಂಬಂಧಿಸಿದ ಪ್ರಮುಖ ಪ್ರಕ್ರಿಯೆಗಳನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸಲಾಗಿದೆ. 2026ರ ಎಫ್ ಸಿಆರ್‌ಎ ತಿದ್ದುಪಡಿ ನಿಯಮಗಳ ಪ್ರಮುಖ ಅಂಶಗಳನ್ನೂ ಪೋರ್ಟಲ್‌ನಲ್ಲಿ ಅಳವಡಿಸಲಾಗಿದೆ.

ಅನುಮಾನಾಸ್ಪದ ಹಣ ಹರಿವಿಗೆ ತಡೆ

ಸರಕಾರದ ಮೇಘರಾಜ್ ಕ್ಲೌಡ್ ವೇದಿಕೆಯಲ್ಲಿ ಹೊಸ ಪೋರ್ಟಲ್ ಕಾರ್ಯನಿರ್ವಹಿಸಲಿದೆ. ವಿವಿಧ ಸರಕಾರಿ ದತ್ತಾಂಶ ವ್ಯವಸ್ಥೆಗಳೊಂದಿಗೆ ನೇರ ಸಂಪರ್ಕ ಹೊಂದಿರುವುದರಿಂದ ಅರ್ಜಿದಾರರ ವಿವರಗಳನ್ನು ತ್ವರಿತವಾಗಿ ಮತ್ತು ನಿಖರವಾಗಿ ಪರಿಶೀಲಿಸಬಹುದಾಗಿದೆ. ವಿದೇಶಿ ದೇಣಿಗೆಯ ಸ್ವೀಕಾರ, ವರ್ಗಾವಣೆ ಮತ್ತು ಬಳಕೆಯನ್ನು ನೈಜ ಸಮಯದಲ್ಲೇ ಮೇಲ್ವಿಚಾರಣೆ ಮಾಡಲು ಈ ವ್ಯವಸ್ಥೆ ನೆರವಾಗಲಿದೆ. ಇದರಿಂದ ಕಾನೂನು ಪಾಲನೆಯ ಪರಿಶೀಲನೆ ಬಲಗೊಳ್ಳುವುದರ ಜತೆಗೆ ಅನುಮಾನಾಸ್ಪದ ಹಣದ ಹರಿವನ್ನು ತಡೆಯಲು ಸಾಧ್ಯವಾಗಲಿದೆ ಎಂದು ಗೃಹ ಸಚಿವಾಲಯ ತಿಳಿಸಿದೆ.

ಇಂದಿನಿಂದ ಗೃಹಜ್ಯೋತಿ ಫಲಾನುಭವಿಗಳ ಪರಿಶೀಲನೆ

ಪುಟ ೧ ➜ ಈ ಪ್ರಕ್ರಿಯೆಗೆ ಮೀಟರ್ ರೀಡರ್ ಮೂಲಕ ಸ್ಥಳದಲ್ಲೇ ಪರಿಶೀಲನೆ ಮಾಡುವುದು ಏಕೈಕ ಮಾರ್ಗವಾಗಿದ್ದು, ಗ್ರಾಹಕರು ಮತ್ತು ಫಲಾನುಭವಿಗಳು ಮೀಟರ್ ರೀಡರ್‌ಗಳಿಗೆ ಸಂಪೂರ್ಣ ಸಹಕಾರ ನೀಡಿ, ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳಿಸಲು ಇಂಧನ ಇಲಾಖೆ ಮನವಿ ಮಾಡಿದೆ. ರಾಜ್ಯದ ಐದು ಎಸ್ಕಾಂಗಳಾದ ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂ ಹಾಗೂ ಸೆಸ್ಕ್‌ಗಳ ವ್ಯಾಪ್ತಿಯಲ್ಲಿ ಪರಿಶೀಲನಾ ಕಾರ್ಯ ನಡೆಯಲಿದೆ. ಇದು ಗೃಹಜ್ಯೋತಿ ಉಪಯೋಗಿಸುತ್ತಿರುವ ಫಲಾನುಭವಿಗಳ ಮಾಹಿತಿಯನ್ನು ಸಂಗ್ರಹಿಸುವ ಹಾಗೂ ಪರಿಶೀಲನೆ ನಡೆಸುವ ಕ್ರಮವಾಗಿದ್ದು, ಯೋಜನೆ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಎಂದು ಇಲಾಖೆ ಸ್ಪಷ್ಟಪಡಿಸಿದೆ.

ಬೇಕಾದ ಅಗತ್ಯ ದಾಖಲೆಗಳು

ಆಧಾರ್ ಕಾರ್ಡ್, ಫಲಾನುಭವಿಯ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ,

- **ಮತದಾರರ ಗುರುತಿನ ಚೀಟಿ (ವೋಟರ್ ಐಡಿ),**
- **ಪ್ಯಾನ್ ಕಾರ್ಡ್,**
- **ಬಾಡಿಗೆ ಒಪ್ಪಂದದ ಪತ್ರಗಳು (ಅನ್ವಯಿಸುವಲ್ಲಿ ಮಾತ್ರ),**
- **ರೇಷನ್ ಕಾರ್ಡ್, ಜಾತಿ ಪ್ರಮಾಣ ಪತ್ರ**

- **ಗೃಹಜ್ಯೋತಿ ಸ್ಥಾವರದ ಮಾಲೀಕ / ಬಾಡಿಗೆದಾರರು ಹೆಚ್ಚುವರಿ ಮಾಹಿತಿ ನೀಡಿರುವ ಬಗ್ಗೆ ಮಾಲೀಕ /ಬಾಡಿಗೆದಾರರಿಂದ ದೃಢೀಕರಣ ಪಡೆಯುವುದು.**
- **ಗೃಹಜ್ಯೋತಿ ಸ್ಥಾವರಗಳ ಹೆಚ್ಚುವರಿ ಮಾಹಿತಿ ಸಂಗ್ರಹಣೆ ಕಾರ್ಯವನ್ನು ದಿನಾಂಕ: 01.07.2026 ರಿಂದ ಜಾರಿಗೆ ಬರುವಂತೆ ಕೈಗೆತ್ತಿಕೊಳ್ಳುವುದು. ಸದರಿ ಪ್ರಕ್ರಿಯೆಯನ್ನು ಎರಡು ತಿಂಗಳೊಳಗಾಗಿ ಪೂರ್ಣಗೊಳಿಸುವುದು.**
- **ವಿದ್ಯುತ್ ಸರಬರಾಜು ಕಂಪನಿಗಳು ಗೃಹಜ್ಯೋತಿ ಯೋಜನೆಯ ಹೆಚ್ಚುವರಿ ಮಾಹಿತಿಯನ್ನು ಒಡೆದು ಇಂಧೀಕರಿಸುವ / ದಾಖಲಿಸಿ ರುವ ದೈನಂದಿನ ಪ್ರಗತಿಯ ಮಾಹಿತಿ ಸರ್ಕಾರಕ್ಕೆ ನೀಡುವುದು.**
- **ಗೃಹ ಜ್ಯೋತಿ ಫಲಾನುಭವಿಗಳ ಮನೆ-ಮನೆ ಪರಿಶೀಲನೆ ಕಾರ್ಯಕ್ಕೆ ಬೆಸ್ಕಾಂ ಮೀಟರ್ ರೀಡರ್‌ಗಳು ನಿಯೋಜನೆಗೊಂಡಿರುವುದರಿಂದ ಜುಲೈ ತಿಂಗಳ ನಿಯಮಿತ ಮೀಟರ್ ರೀಡಿಂಗ್ ಇರುವುದಿಲ್ಲ, ಗ್ರಾಹಕರಿಗೆ ಸರಾಸರಿ (Average Bills) ಬಿಲ್ ಗಳನ್ನು ನೀಡಲಾಗುತ್ತದೆ.**
- **ಜುಲೈ ತಿಂಗಳ ಬಿಲ್ಲಿಂಗ್ ಅವಧಿಯಲ್ಲಿ ಗ್ರಾಹಕರಿಗೆ ಕಳೆದ ಮೂರು ತಿಂಗಳ ಸರಾಸರಿ ವಿದ್ಯುತ್ ಬಳಕೆ ಆಧಾರದ ಮೇಲೆ ಸರಾಸರಿ ಬಿಲ್ ನೀಡಲಾಗುವುದು**

ರಾಮ ಬಾಣ



ಮಳೆಗೆ ಭದ್ರಾ ನದಿ ನೀರಿನ ಹರಿವು ಹೆಚ್ಚಳ

• **ಚಿಕ್ಕಮಗಳೂರು:** ಜಿಲ್ಲೆಯ ಮಲೆನಾಡು ಭಾಗದಲ್ಲಿ 2 ದಿನಗಳಿಂದ ಸಾಧಾರಣ ಪ್ರಮಾಣದಲ್ಲಿ ಮಳೆ ಸುರಿಯುತ್ತಿದ್ದು, ಬರ ಪರಿಸ್ಥಿತಿಯ ನಡುವೆ ವರುಣ ಕೃಪೆ ತೋರ ಬಹುದು ಎನ್ನುವ ಆಶಾಭಾವನೆ ಮೂಡಿಸಿದೆ. ಸಾಮಾನ್ಯವಾಗಿ ಜುಲೈ ಆರಂಭದ ವೇಳೆಗೆ ಮುಂಗಾರಿನ ವೈಭವಕ್ಕೆ ಮಲೆನಾಡು ತೋಯ್ದು ನಿಂತು ನದಿಗಳು, ಹಳ್ಳ, ಕೊಳ್ಳಗಳು ಮೈದುಂಬಿ ಹರಿಯುವುದು ಸಾಮಾನ್ಯ. ಈ ಬಾರಿ ಪೂರ್ವ ಮುಂಗಾರು, ಮುಂಗಾರು ತೀವ್ರ ದುರ್ಬಲಗೊಂಡಿರುವ ಹಿನ್ನೆಲೆಯಲ್ಲಿ ಬರದ ವಾತಾವರಣ ನಿರ್ಮಾಣವಾಗಿದೆ. ಈ ಹಂತದಲ್ಲಿ ಕಳೆದ2 ದಿನಗಳಿಂದ ಮಲೆನಾಡು ತಾಲೂಕುಗಳಲ್ಲಿ ಸಾಧಾರಣ ಪ್ರಮಾಣದಲ್ಲಿ ಮಳೆ ಸುರಿಯ ಲಾರಂಭಿಸಿರುವುದು ಮತ್ತೆ ಮುಂಗಾರು ಚುರುಕುಗೊಳ್ಳುವ ನಿರೀಕ್ಷೆಯನ್ನು ಹುಟ್ಟು ಹಾಕಿದೆ. ಆದರೆ ಮಂಗಳವಾರಕ್ಕೆ ಹೋಲಿಸಿದಲ್ಲಿ ಸ್ವಲ್ಪ ಕ್ಷೀಣಿಸಿದೆ. ಕಳಸ ತಾಲೂಕಿನ ಕೆಲವೆಡೆ ಜೋರು ಮಳೆ ಸುರಿದಿದ್ದು, ಭದ್ರಾ ನದಿ ನೀರಿನ ಹರಿವು ಹೆಚ್ಚಾಗಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಸಂಗೀತ ಕೇವಲ ಕಲೆ ಅಲ್ಲ, ಭಗವಂತನ ಉಪಾಸನೆಗೆ ಮಾರ್ಗವೂ ಹೌದು

– ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿ

-ಸಾಮಾನ್ಯ ಸಂಗೀತಗಾರ ಆದರಿಂದ ಹಣ , ಪ್ರಸಿದ್ಧಿಯನ್ನು ಸಂಪಾದಿಸುತ್ತಾನೆ. ಅಸಾಮಾನ್ಯ ಸಂಗೀತಗಾರ ಭಗವಂತನನ್ನು ಭಕ್ತಿಯಿಂದ ಭಜಿಸಿ ಅನಂತ ಆನಂದವನ್ನು ಅನುಭವಿಸುತ್ತಾನೆ!

ದಿನ ಭವಿಷ್ಯ

ಮೇಷ ಕಳೆದ ಕೆಲವು ದಿನಗಳ ವೃತ್ತಿ ಒತ್ತಡ ಕಡಿಮೆಯಾಗಲಿದೆ. ಸಂಬಂಧದಲ್ಲಿ ಮೂರನೇ ವ್ಯಕ್ತಿ ಪ್ರವೇಶಕ್ಕೆ ಅವಕಾಶ ಕೊಡಬೇಡಿ. ಧನಾಗಮ.

ವೃಷಭ ಫಲಪ್ರದ ದಿನ. ಕಡಿಮೆ ಶ್ರಮದಲ್ಲಿ ಕಾರ್ಯ ಸಂಪೂರ್ಣ. ಪ್ರೀತಿಪಾತ್ರರ ಕಡೆಗೆ ಹೆಚ್ಚು ಗಮನ ಕೊಡಿ. ತೊಡಕಿನ ಸಾಧ್ಯತೆ ಕಾಣುತ್ತಿದೆ.

ಮಿಥುನ ಅತಿ ಒತ್ತಡದಿಂದ ಬಸವಳಿಯುವಿರಿ. ಮಧ್ಯಾಹ್ನದ ವೇಳೆಗೆ ನಿರಾಳತೆ ಸಿಗಲಿದೆ. ಕೌಟುಂಬಿಕ ಬೆಂಬಲ. ಆರೋಗ್ಯ ಸಮಸ್ಯೆ.

ಕಟಕ ನಿರಾಳ ಮನಸ್ಸು. ಹಾಗಾಗಿ ಇನ್ನಿತರ ವಿಷಯಗಳ ಬಗ್ಗೆ ಗಮನ ಹರಿಸಲು ಅವಕಾಶ. ಆರೋಗ್ಯ ಸಮಸ್ಯೆ ನಿವಾರಣೆ. ಧನಲಾಭ.

ಸಿಂಹ ಪ್ರೀತಿಗೆ ಹಿರಿಯರ ಸಮ್ಮತಿ ಸಿಗಬಹುದು. ವೃತ್ತಿ ಕಾರ್ಯದಲ್ಲಿ ತೊಡಕು. ಹಿರಿಯರಿಗೆ ಉಸಿರಾಟದ ಸಮಸ್ಯೆ ಕಾಣಿಸಬಹುದು. ಆರ್ಥಿಕ ಉನ್ನತಿ.

ಕನ್ಯಾ ಅಪೇಕ್ಷಿಸಿದ ಪ್ರಗತಿ ಕಾಣುವಿರಿ. ಪ್ರಮುಖ ನಿರ್ಧಾರ ಕೈಗೊಳ್ಳಲು ಸಕಾಲ. ಹಳೆಯ ಹೂಡಿಕೆ ಧನಲಾಭ ತರಲಿದೆ. ಜ್ವರದ ಸಮಸ್ಯೆ ಕಾಡಬಹುದು.

ತುಲಾ ವ್ಯವಹಾರದಲ್ಲಿ ತಪ್ಪಭಿಪ್ರಾಯ ಮೂಡದಂತೆ ಎಚ್ಚರ ವಹಿಸಿ. ಬಂಧು ಭೇಟಿ ಸಂತಸ ತರಲಿದೆ. ಭಾವನಾತ್ಮಕ ಏರುಪೇರು.

ವೃಶ್ಚಿಕ ನಿಮಗಿದು ಪೂರಕ ದಿನವಲ್ಲ. ಹೊಸ ಸವಾಲು ಹುಟ್ಟಿಕೊಳ್ಳಲಿದೆ. ಹಣದ ವಿಚಾರದಲ್ಲಿ ಎಚ್ಚರ ವಹಿಸಿ. ಸಂಬಂಧದಲ್ಲಿ ಏರುಪೇರು ಸಾಧ್ಯತೆ.

ಧನು ದಂಪತಿಗೆ ಶುಭಕರ ದಿನ. ಉದ್ಯೋಗ ಅಪೇಕ್ಷಿತರಿಗೆ ಪೂರಕ ದಿನ. ಏಕಾಂಗಿಗಳಿಗೆ ಸಂಗಾತಿ ಲಭ್ಯ. ಹಣಕಾಸು ವ್ಯವಹಾರ ಸುಗಮ.

ಮಕರ ಇಂದು ಅದೃಷ್ಟ ನಿಮ್ಮ ಜತೆಗಿಲ್ಲ. ವೃತ್ತಿ ಒತ್ತಡ ಅಧಿಕ. ಆರ್ಥಿಕ ವ್ಯವಹಾರ ಹಿನ್ನಡೆ ಕಂಡೀತು. ಮನಸ್ಸಿಗೆ ಉದಾಸ ಭಾವ. ಯೋಗ, ಧ್ಯಾನ ಸಹಕಾರಿ.

ಕುಂಭ ದಂಪತಿ ಮಧ್ಯೆ ಸಣ್ಣ ವಿಷಯಕ್ಕೆ ವಾಗ್ವಾದ ನಡೆದೀತು. ಹೊಂದಾಣಿಕೆ ಮುಖ್ಯ. ಖರ್ಚು ಅಧಿಕ ಚಿಂತೆಗೆ ಕಾರಣ. ಆರೋಗ್ಯ ಸ್ಥಿರತೆಯಿಂದ ಸಮಾಧಾನ.

ಮೀನ ವ್ಯವಸ್ಥಿತವಾಗಿ ಕೆಲಸ ಮಾಡಿ. ಇಲ್ಲವಾದರೆ ಗೊಂದಲಕ್ಕೆ ಸಿಲುಕುವಿರಿ. ಕೌಟುಂಬಿಕ ವಾಗ್ವಾದ. ಅನಿರೀಕ್ಷಿತ ಖರ್ಚು ಒದಗಲಿದೆ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ :5,7,9,2

ಬರಪೀಡಿತ ಜಿಲ್ಲೆಗಳಿಗೆ ನೀರು ಪೂರೈಸಲು ಕೇಂದ್ರಕ್ಕೆ ಖಂಡ್ರೆ ಮನವಿ

ಜೆಜೆಎಂನಲ್ಲಿ ವೆಚ್ಚ ಭರಿಸಲಿ

• **ಹೊಸದಿಲ್ಲಿ:** ಬರ ಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಎತ್ತಿನಹೊಳೆ ಯೋಜನೆಯ ವೆಚ್ಚದ ಪೈಕಿ 4,708.14 ಕೋಟಿ ರೂ.ಗಳನ್ನು ಜಲ ಜೀವನ್ ಮಿಷನ್ ಅಡಿಯಲ್ಲಿ ಭರಿಸುವಂತೆ ಕೇಂದ್ರ ಸರ್ಕಾರಕ್ಕೆ ಕೋರಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಮಂಗಳವಾರ ಹೊಸದಿಲ್ಲಿಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಹಾಗೂ ರಾಜ್ಯ ಸಚಿವ ವಿ. ಸೋಮಣ್ಣ ಅವರನ್ನು ಭೇಟಿ ಮಾಡಿ, ನೀರಿನ ಕೊರತೆಯಿರುವ ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಜಿಲ್ಲೆಗಳ ಸುಮಾರು 6,657 ಹಳ್ಳಿಗಳು ಮತ್ತು 38 ಪಟ್ಟಣಗಳ 75.59 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಸುವ ಈ ಯೋಜನೆಯನ್ನು ಜೆಜೆಎಂ ಯೋಜನೆಯಲ್ಲಿ ಪರಿಗಣಿಸುವಂತೆ ಕೋರಿದ್ದಾರೆ.

ಪ್ರಸ್ತುತ ರಾಜ್ಯದಲ್ಲಿ ವಿಜೆಎನ್‌ಎಲ್ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿರುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ರಾಜ್ಯ ಸರ್ಕಾರವೇ ಬಹುತೇಕ ಪೂರ್ಣಗೊಳಿಸಿದೆ. ಇನ್ನೂ ಸುಮಾರು 9,416.28 ಕೋಟಿ ರೂ. ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೇಂದ್ರ ಸರ್ಕಾರದಿಂದ ಶೇ. 50ರಷ್ಟು ತನ್ನ ಪಾಲು ನೀಡಲು ಮನವಿ ಪತ್ರ ಸಲ್ಲಿಸಲಾಗಿದೆ ಎಂದರು.

ಇದೇ ವೇಳೆ ಸಂವರ್ಧನೆ ಮತ್ತು ಮರು ಸುಧಾರಣೆ ಕಾಮಗಾರಿಗಳ ವೆಚ್ಚವನ್ನು ಜಲ ಜೀವನ ಮಿಷನ್ ಅಡಿ ಕೇಂದ್ರ ಸರ್ಕಾರ ಭರಿಸಬೇಕು ಎಂದು ಸಚಿವ ಈಶ್ವರ ಖಂಡ್ರೆ ಮನವಿ ಮಾಡಿದರು.

ಜಲ ಶಕ್ತಿ ಸಚಿವಾಲಯದ ಎನ್‌ಜೆಜೆಎಂ ಕಳೆದ ಆಗಸ್ಟ್ 26ರಂದು ಹಾಗೂ ಡಿಸೆಂಬರ್ 29ರಂದು ರಾಜ್ಯಕ್ಕೆ ಬರೆದಿರುವ ಪತ್ರದಲ್ಲಿ ಜೆಜೆಎಂ ಕಾಮಗಾರಿಗಳ ನವೀಕರಣ ಮತ್ತು ತ್ವರಿತ ಯೋಜನೆ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದಿಂದ ವೆಚ್ಚವನ್ನು ಭರಿಸುವುದಿಲ್ಲ ಮತ್ತು ಅಂತಹ ಕಾಮಗಾರಿಗಳನ್ನು ರಾಜ್ಯ ಸಂಪನ್ಮೂಲದ ಮೂಲಕ ಪೂರ್ಣಗೊಳಿಸಬೇಕು ಎಂದು ತಿಳಿಸಲಾಗಿದ್ದು, ಇದರಿಂದ ರಾಜ್ಯದ ಮೇಲೆ ಹೆಚ್ಚಿನ ಹೊರೆ ಹೊರಿಸಿದಂತಾಗಿದೆ ಎಂದು ವಿವರಿಸಿದರು.

ಇಂತಹ ಯೋಜನೆಗಳ ಅಂದಾಜು ವೆಚ್ಚ 25,451 ಕೋಟಿ ರೂ.ಗಳಾಗಿದ್ದು, ಇದರಲ್ಲಿ, ರಾಜ್ಯವು ಈಗಾಗಲೇ ಈ ಅನುಮೋದಿತ ಕಾಮಗಾರಿಗಳಿಗೆ 14,382 ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ, ಸುಮಾರು 11,069 ಕೋಟಿ ರೂ. ಮರು ಪಾವತಿ ಮಾಡಬೇಕಿದೆ. ಈ ಹಣವನ್ನು ಕೇಂದ್ರ ಸರ್ಕಾರ ಭರಿಸಬೇಕು ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಮುಂದಿನ 30 ವರ್ಷಗಳವರೆಗೆ ಶಾಶ್ವತ, ಸುಸ್ಥಿರ ಮತ್ತು ಮೇಲ್ಮೈ ನೀರು ಆಧಾರಿತ ಕುಡಿಯುವ ನೀರಿನ ಪರಿಹಾರವನ್ನು ರಾಜ್ಯ ಸರ್ಕಾರ ಮುಂದಾಗಿದ್ದು, ನಾರಾಯಣಪುರ ಜಲಾಶಯದ ನೀರನ್ನು ಎತ್ತುವ ಉದ್ದೇಶ ಹೊಂದಿದ್ದು, ಇದರ ಒಟ್ಟು ಅಂದಾಜು ವೆಚ್ಚ 7200 ಕೋಟಿ ರೂ. ಆಗುತ್ತದೆ. ಬೀದರ್ ಮತ್ತು ಕಲಬುರಗಿ ಜಿಲ್ಲೆಗಳ ಒಟ್ಟು 28.09 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಸಲು ಈ ಯೋಜನೆ ಸಹಕಾರಿ ಆಗಲಿದೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.




ಕಲ್ಯಾಣ ಕರ್ನಾಟಕಕ್ಕೆ ಯೋಜನೆ: ಖಂಡ್ರೆ

ಕಲ್ಯಾಣ ಕರ್ನಾಟಕದ ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಿಗೆ ಸುಸ್ಥಿರ ಕುಡಿಯುವ ನೀರು ಖಾತ್ರಿಪಡಿಸುವ ಯೋಜನೆ ಕುರಿತಂತೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರಿಗೆ ಸಚಿವ ಈಶ್ವರ ಖಂಡ್ರೆ ಮನವಿ ಮಾಡಿದ್ದಾರೆ.

ಅನಗತ್ಯ ಆತಂಕ ಬೇಡ: ಇಂಧನ ಸಚಿವ ಜಾರ್ಜ್

ಖಾಸಗೀಕರಣ ಇಲ್ಲ

• **ಶಿವಮೊಗ್ಗ:** ಸರ್ಕಾರ ವಿದ್ಯುತ್ ಖಾಸಗೀಕರಣದ ಪರವಾಗಿಲ್ಲ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟನೆ ನೀಡಿದರು. ನಗರದಲ್ಲಿ ಮಂಗಳವಾರ ಮಾಧ್ಯಮದವರ ಜೊತೆ ಮಾತನಾಡಿ, ವಿದ್ಯುತ್ ಖಾಸಗೀಕರಣದ ಬಗ್ಗೆ ಜನರಲ್ಲಿ ಅನಗತ್ಯ ಆತಂಕ ಬೇಡ. 2003ರಲ್ಲಿ ಕೇಂದ್ರ ಸರ್ಕಾರವೇ ವಿದ್ಯುತ್ ಕಾಯ್ದೆಗೆ ತಿದ್ದುಪಡಿ ಮಾಡಿ ಖಾಸಗೀಕರಣಕ್ಕೆ ಅವಕಾಶ ಕಲ್ಪಿಸಿತ್ತು.



ಆದರೆ ಕರ್ನಾಟಕದಲ್ಲಿ ಇದುವರೆಗೆ ಖಾಸಗೀಕರಣ ಆಗಿಲ್ಲ. ಈಗ ಕೆಇಆರ್‌ಸಿಗೆ ಖಾಸಗಿ ಕಂಪನಿ ಸಲ್ಲಿಸಿರುವ ಅರ್ಜಿಯ ಹಿನ್ನೆಲೆಯಲ್ಲಿ ಎಸ್ಕಾಂಗಳಿಗೆ ಆಕ್ಷೇಪಣೆ ಸಲ್ಲಿಸಲು ಸೂಚಿಸಲಾಗಿದೆ. ಅಂತಿಮ ಆದೇಶ ಬಂದ ಬಳಿಕ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಗೃಹಜ್ಯೋತಿ ಯೋಜನೆ: ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳಿಗೆ ಯಾವುದೇ ಆತಂಕ ಬೇಡ. ಈಗಾಗಲೇ 1.64 ಕೋಟಿ ಫಲಾನುಭವಿಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಅರ್ಹರ ಸೌಲಭ್ಯವನ್ನು ಸರ್ಕಾರ ರದ್ದುಪಡಿಸುವುದಿಲ್ಲ. ಅನರ್ಹರು ಸೌಲಭ್ಯ ಪಡೆದಿರುವ ಬಗ್ಗೆ ಮಾಹಿತಿ ಬಂದಿರುವುದರಿಂದ ವಿವರಗಳನ್ನು ಪಡೆದು ಪರಿಶೀಲನೆ ನಡೆಸಲಾಗುತ್ತಿದೆ. ಯಾರ ವಿದ್ಯುತ್ ಸಂಪರ್ಕವನ್ನೂ ಕಡಿತಗೊಳಿಸುವುದಿಲ್ಲ ಎಂದು ತಿಳಿಸಿದರು. ಒಂದು ಕುಟುಂಬಕ್ಕೆ ನಿಗದಿಪಡಿಸಿರುವ ಯೂನಿಟ್‌ಗಿಂತ ಹೆಚ್ಚಾಗಿ ಬಳಕೆ ಮಾಡಿದರೆ 200 ಯೂನಿಟ್‌ವರೆಗೆ ಹೆಚ್ಚುವರಿ ಬಳಕೆಗೆ ಮಾತ್ರ ಹಣ ಪಾವತಿಸಬೇಕಾಗುತ್ತದೆ. 200 ಯೂನಿಟ್ ಮೀರಿದರೆ ಪೂರ್ಣ ವಿದ್ಯುತ್ ಬಿಲ್ ಅನ್ವಯವಾಗುತ್ತದೆ. ಬಿಲ್‌ನಲ್ಲಿ ವ್ಯತ್ಯಾಸ ಕಂಡುಬಂದರೆ ಇಂಜಿನಿಯರ್‌ಗಳ ಮೂಲಕ ಪರಿಶೀಲಿಸಿ ತಪ್ಪಿದ್ದರೆ ಸರಿಪಡಿಸಲಾಗುವುದು ಎಂದರು.

ಎಸ್‌ಐಆರ್ ಕುರಿತು: ಎಸ್ ಐಆರ್ ಪ್ರಕ್ರಿಯೆ ಮೂಲಕ ಮತದಾರರು ಭಾರತೀಯ ಪ್ರಜೆ ಎಂಬುದನ್ನು ಸಾಬೀತುಪಡಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಪಶ್ಚಿಮ ಬಂಗಾಳ ಅಥವಾ ಅಸ್ಸಾಂನಲ್ಲಿ ನುಸುಳುಕೋರರನ್ನು ತಡೆಯುವುದು ಕೇಂದ್ರ ಸರ್ಕಾರದ ಹೊಣೆ. ಆದರೆ ವರ್ಷಗಳಿಂದ ಮತ ಚಲಾಯಿಸುತ್ತಿರುವವರಿಂದಲೇ ಈಗ ದಾಖಲೆ ಕೇಳಲಾಗುತ್ತಿದೆ. ದಾಖಲೆ ಸಲ್ಲಿಸದಿದ್ದರೆ ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕುವ ಸಾಧ್ಯತೆ ಇದೆ. ಆದ್ದರಿಂದ ಅಗತ್ಯ ದಾಖಲೆಗಳನ್ನು ಎಲ್ಲರೂ ಸಲ್ಲಿಸಬೇಕು ಎಂದು ಕಾಂಗ್ರೆಸ್ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿರುವುದಾಗಿ ಹೇಳಿದರು.

ಸ್ವಾತಂತ್ರ್ಯಕ್ಕಾಗಿ ಪಿಒಕೆ ಜನರ ಹೋರಾಟ

ಪುಟ ೧ ➜ ತಮ್ಮ ಹಕ್ಕುಗಳಿಗೆ ಮನ್ನಣೆ ದೊರೆಯದಿದ್ದರೆ ಭಾರತದೊಂದಿಗೆ ಬಾಂಧವ್ಯ ವೃದ್ಧಿಸುವ ದಾರಿಯನ್ನು ಆಯ್ಕೆ ಮಾಡಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

ನಾಗರಿಕ ಹಕ್ಕುಗಳ ಹೋರಾಟಗಾರ ಸರ್ದಾರ್ ಅಮಾನ್ ಖಾನ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯುತ್ತಿದೆ. ಪಾಕಿಸ್ತಾನ ಸರಕಾರವು ಎರಡು ವಾರಗಳ ಕಾಲ ಆಹಾರ, ಔಷಧ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆಯನ್ನು ತಡೆದ ಬಳಿಕ ಹೋರಾಟ ಮತ್ತಷ್ಟು ತೀವ್ರಗೊಂಡಿದೆ.

ಪಾಕ್ ಆಕ್ರಮಿತ ಕಾಶ್ಮೀರವು ಪಾಕಿಸ್ತಾನದ ಭಾಗವಲ್ಲ. ನಮಗೆ ಪಾಕಿಸ್ತಾನಕ್ಕಿಂತ, ಅಲ್ಲಿನವರಿಗೇ ನಮ್ಮ ಪ್ರದೇಶದ ಅಗತ್ಯವೇ ಹೆಚ್ಚಾಗಿದೆ. ಆಹಾರ ಮತ್ತು ಅಗತ್ಯ ವಸ್ತುಗಳ ಮೇಲಿನ ನಿರ್ಬಂಧ ಮುಂದುವರಿದರೆ ಭಾರತದತ್ತ ಮುಖ ಮಾಡಬೇಕಾಗುತ್ತದೆ ಎಂದು ಅಮಾನ್ ಖಾನ್ ಎಚ್ಚರಿಸಿದ್ದಾರೆ. ಇದರಿಂದ ಈ ಪ್ರದೇಶದ ರಾಜಕೀಯ ಪರಿಸ್ಥಿತಿಯೇ ಬದಲಾಗಲಿದ್ದು, ಇಸ್ಲಾಮಾಬಾದ್ ಮೇಲೆ ಭಾರೀ ಒತ್ತಡ ಬೀಳಲಿದೆ ಎಂದಿದ್ದಾರೆ.

ಪಾಕ್ ಸೇನಾ ಮುಖ್ಯಸ್ಥನ ವಿರುದ್ಧ ಆಕ್ರೋಶ: ಪ್ರತಿಭಟನಾಕಾರರು ಪಾಕಿಸ್ತಾನ ಸೇನಾ ಮುಖ್ಯಸ್ಥ ಅಸೀಂ ಮುನೀರ್ ವಿರುದ್ಧವೇ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ವಾಧಿಕಾರಿಯ ಆಡಳಿತವನ್ನು ಸಹಿಸುವುದಿಲ್ಲ ಎಂದು ಘೋಷಣೆ ಕೂಗಿರುವ ಜನರು, ಪಾಕಿಸ್ತಾನದ ಸೇನೆ ಮತ್ತು ಸರಕಾರ ತಮ್ಮ ಪ್ರದೇಶದ ಸಂಪನ್ಮೂಲಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿದ್ದಾರೆ.

ಗಡಿ ನಿಯಂತ್ರಣ ರೇಖೆಯ ಸಮೀಪ ಜೂ.9ರಿಂದ ಪ್ರತ್ಯೇಕ ಧರಣಿಯೂ ನಡೆಯುತ್ತಿದೆ. ಪಾಕ್ ಆಕ್ರಮಿತ ಕಾಶ್ಮೀರದ ಜನರ ಹೋರಾಟಕ್ಕೆ ಬೆಂಬಲ ಸೂಚಿಸಿ ವಿವಿಧ ದೇಶಗಳಲ್ಲಿರುವ ಕಾಶ್ಮೀರಿಗಳು ಪಾಕಿಸ್ತಾನದ ರಾಜತಾಂತ್ರಿಕ ಕಚೇರಿಗಳ ಎದುರು ಪ್ರತಿಭಟನೆ ನಡೆಸಿದ್ದಾರೆ.

ಅಂತರ್ಜಾಲ ಸ್ಥಗಿತ: ಪ್ರತಿಭಟನೆಯ ಮಾಹಿತಿ ಹೊರಜಗತ್ತಿಗೆ ತಲುಪದಂತೆ ತಡೆಯಲು ಪಾಕಿಸ್ತಾನ ಆಡಳಿತವು ಜೂನ್ 5ರಿಂದ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸಿದೆ. ಆದರೂ ಪ್ರತಿಭಟನೆ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದ್ದು, ರಾಜಕೀಯ ಬೇಡಿಕೆಗಳು ಈಡೇರುವವರೆಗೆ ಹೋರಾಟ ಹಿಂತೆಗೆದುಕೊಳ್ಳುವುದಿಲ್ಲ ಎಂದು ಮುಖಂಡರು ಘೋಷಿಸಿದ್ದಾರೆ.

ಎಸ್‌ಐಆರ್‌ಗೆ ಮೊದಲ ದಿನ ಸಕಾರಾತ್ಮಕ ಸ್ಪಂದನೆ

ಪುಟ ೧ ➜ 291 ಮೃತಪಟ್ಟ ಮತದಾರರು, 116 ಶಾಶ್ವತವಾಗಿ ವಲಸೆ ಹೋದವರು, 77 ಈಗಾಗಲೇ ಹೆಸರು ನೋಂದಾಯಿತವಾಗಿರುವವರು, ಪತ್ತೆಯಾಗದ/ ಗೈರುಹಾಜರಾದ ಇಬ್ಬರು ಮತದಾರರನ್ನು ಗುರುತಿಸಲಾಗಿದೆ ಎಂದು ಆಯೋಗ ತಿಳಿಸಿದೆ.

ಮೊದಲ ದಿನವೇ ಅತ್ಯಧಿಕ ಅರ್ಜಿ ವಿತರಣೆಯಲ್ಲಿ ಹಾಸನ ಜಿಲ್ಲೆ (1,46,025 ಅರ್ಜಿಗಳು) ಮುಂಚೂಣಿಯಲ್ಲಿದ್ದರೆ, ಅರ್ಜಿಗಳ ತಾಂತ್ರಿಕ ಡಿಜಿಟಲೀಕರಣ ಪ್ರಕ್ರಿಯೆಯಲ್ಲಿ ರಾಯಚೂರು ಜಿಲ್ಲೆ (7,866 ಅರ್ಜಿಗಳು) ಗರಿಷ್ಠ ಸಾಧನೆ ಮಾಡಿದೆ.

ಮೊದಲ ದಿನವೇ ಗಣ್ಯರು ಭಾಗಿ: ಮೊದಲ ದಿನದ ಎಸ್ ಐಆರ್ ಪ್ರಕ್ರಿಯೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಸಚಿವರು, ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು, ಚಲನಚಿತ್ರ ನಟ, ನಟಿಯರು, ಸಮಾಜದ ಪ್ರಮುಖರು ಸೇರಿ ಸಾವಿರಾರು ಗಣ್ಯರು ಎಸ್‌ಐಆರ್ ಅರ್ಜಿ ಸ್ವೀಕರಿಸಿ, ಸಹಿ ಮಾಡಿ ಹಿಂತಿರುಗಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ತಾಂತ್ರಿಕ ಸಮಸ್ಯೆ: ರಾಜ್ಯದ ಗ್ರಾಮೀಣ ಭಾಗದಲ್ಲಿ ನೆಟ್‌ವರ್ಕ್ ಸಮಸ್ಯೆಯಿಂದ ಎಸ್ ಐಆರ್ ಅರ್ಜಿ ಡಿಜಿಟಲೀಕರಿಸಲು ಬಿಎಲ್‌ಒಗಳು ತೊಂದರೆ ಅನುಭವಿಸಿದ ಪ್ರಸಂಗ ಕೆಲವು ಕಡೆ ಎದುರಾಗಿದೆ. ಆದರೆ ಪ್ರತಿ ತಾಲ್ಲೂಕಿನಲ್ಲಿ ಬಿಎಲ್‌ಒ ಫೆಸಿಲಿಟಿ ಸೆಂಟರ್ ಸ್ಥಾಪಿಸಲಾಗಿದ್ದು, ತಾಂತ್ರಿಕ ಸಮಸ್ಯೆ ಎದುರಿಸುವಲ್ಲಿ ಸಹಕಾರಿಯಾಗಿದೆ.

ಸಿಎಂ ಮನೆಯಿಂದಲೇ ಚಾಲನೆ

ಪುಟ ೧ ➜ **ಕುಟುಂಬದ ಸದಸ್ಯರ ಪೈಕಿ ಒಬ್ಬರು ಸಹಿ ಮಾಡಿದರೂ ಸಾಕು. ಕುಟುಂಬದವರ ಪರವಾಗಿ ಒಬ್ಬರೇ ಎಲ್ಲರ ಅರ್ಜಿ ತುಂಬಬಹುದು. ಹೊಸ ಮತದಾರರು ನಿವಾಸ ದೃಢೀಕರಣ ಪತ್ರ ನೀಡಬೇಕು. ಸರ್ಕಾರ ರಾಜ್ಯದ ಜನರಿಗೆ ಅಗತ್ಯ ಪ್ರಮಾಣಪತ್ರ ನೀಡಲು ಮುಂದಾಗಿದೆ ಎಂದು ತಿಳಿಸಿದ್ದಾರೆ.**

ಎಲ್ಲರೂ ತಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಬೇಕು. ಉಳಿಸಿಕೊಳ್ಳದಿದ್ದರೆ ಸರ್ಕಾರ ಸೌಲಭ್ಯ, ಕಾರ್ಯಕ್ರಮಗಳನ್ನು ಪಡೆಯುವುದು ಕಷ್ಟವಾಗಲಿದೆ. ಬೇರೆ ರಾಜ್ಯಗಳಲ್ಲಿ ಸರ್ಕಾರದ ಸೌಲಭ್ಯಗಳನ್ನು ಕೇವಲ ಮತದಾರರಿಗೆ ಮಾತ್ರ ನೀಡುತ್ತಿದ್ದು, ಮತದಾನ ಹಕ್ಕು ಇಲ್ಲದವರಿಗೆ ಸೌಲಭ್ಯ ಹಿಂಪಡೆಯಲಾಗುತ್ತಿದೆ. ಅದೇ ವ್ಯವಸ್ಥೆ ರಾಜ್ಯದಲ್ಲೂ ಬರಬಹುದು.

■ **ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ**

ಶೀಘ್ರದಲ್ಲೇ ಸಚಿವ ಸಂಪುಟ ವಿಸ್ತರಣೆ

• **ಬಾಗಲಕೋಟೆ:** ನಾನು ತಾತ್ಕಾಲಿಕ ಉಸ್ತುವಾರಿ ಸಚಿವ. ಇನ್ನೂ ಹತ್ತು ಹದಿನೈದು ದಿನಗಳಲ್ಲಿ ಸಚಿವ ಸಂಪುಟ ವಿಸ್ತರಣೆಯಾಗಲಿದ್ದು, ಜಿಲ್ಲೆಯವರೇ ಉಸ್ತುವಾರಿ ಸಚಿವರಾಗುತ್ತಾರೆ ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ನಗರದ ಜಿಲ್ಲಾ ಪಂಚಾಯತ್ ನೂತನ ಸಭಾಭವನದಲ್ಲಿ ಮುಂಗಾರು ಮಳೆ ಅವಧಿಯ ಪೂರ್ವಸಿದ್ಧತೆ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಸಚಿವ ಸ್ಥಾನ ಕುರಿತು ಸ್ಪಷ್ಟನೆ ನೀಡಿದರು. ನಾನು ಸದ್ಯ ತಾತ್ಕಾಲಿಕವಾಗಿ ಜಿಲ್ಲೆಯ ಉಸ್ತುವಾರಿ ಸಚಿವನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಸಚಿವ ಸಂಪುಟ ವಿಸ್ತರಣೆ ಪ್ರಕ್ರಿಯೆ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ. ಹತ್ತು ಹದಿನೈದು ದಿನಗಳಲ್ಲಿ ಹೊಸ ಸಚಿವರಿಗೆ ಜವಾಬ್ದಾರಿ ನೀಡಲಾಗುತ್ತದೆ. ಜಿಲ್ಲೆಯ ಶಾಸಕರಲ್ಲೊಬ್ಬರು ಉಸ್ತುವಾರಿ ಸಚಿವರಾಗುವ ಸಾಧ್ಯತೆ ಇದೆ. ಆದರೆ, ಯಾರು ಸಚಿವರಾಗುತ್ತಾರೆ ಎಂಬುದನ್ನು ನಾನು ನಿರ್ಧರಿಸುವುದಿಲ್ಲ. ಅದು ಸಂಪೂರ್ಣವಾಗಿ ಹೈಕಮಾಂಡ್ ನಿರ್ಧಾರವಾಗಿದೆ ಎಂದು ಹೇಳಿದರು.

ಜು.6ಕ್ಕೆ ಅಯೋಧ್ಯಾ ಟ್ರಸ್ಟ್ ಸಭೆ

ಪುಟ ೧ ➜ ಟ್ರಸ್ಟಿ ಬಿಮಲೇಂದ್ರ ಮೋಹನ್ ಪ್ರತಾಪ್ ಮಿಶ್ರಾ ನಿಧನದಿಂದ ಒಂದು ಸ್ಥಾನ ಒಂದು ವರ್ಷದಿಂದಲೇ ತೆರವಾಗಿದೆ. ಟ್ರಸ್ಟ್ ಅಧ್ಯಕ್ಷ ನೃತ್ಯಗೋಪಾಲ್ ದಾಸ್, ಸದಸ್ಯ ಕೆ.ಪರಾಶರನ್ ಮತ್ತಿತರ ಟ್ರಸ್ಟಿಗಳು ಆರೋಗ್ಯ ಸಮಸ್ಯೆ ಮತ್ತು ವೃದ್ಧಾಪ್ಯದಿಂದಾಗಿ ಸಕ್ರಿಯರಾಗಿಲ್ಲ. ಇಂತಹ ಸನ್ನಿವೇಶದಲ್ಲಿ ಟ್ರಸ್ಟ್‌ನ್ನು ಪುನಾರಚಿಸಿದಲ್ಲಿ ತೆರವಾದ ಸ್ಥಾನಗಳಿಗೆ ಹೊಸ ಮುಖಗಳನ್ನು ನೇಮಿಸುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಸಿಇಒ ನಿಯೋಜನೆ: ಒಂದು ವೇಳೆ ಕೇಂದ್ರ ಸರಕಾರ ಟ್ರಸ್ಟ್‌ಗೆ ವೃತ್ತಿಪರ ಸಿಇಒ ಒಬ್ಬರನ್ನು ನಿಯೋಜಿಸಿದಲ್ಲಿ ಬೈಲಾಗಳನ್ನು ಮೊದಲಾಗಿ ಬದಲಿಸಬೇಕಾಗುವುದು. ಟ್ರಸ್ಟ್‌ನ ನಿಯಮಾವಳಿಗಳನ್ನು ಬದಲಿಸದೆ ವಿನಾ ಸಿಇಒರನ್ನು ನೇಮಿಸುವಂತಿಲ್ಲ ಎಂಬುದು ಕಾನೂನು ತಜ್ಞರ ಅಭಿಮತ. ಶ್ರೀರಾಮ ದೇವಾಲಯ ಟ್ರಸ್ಟ್‌ಗೆ ವೃತ್ತಿಪರ ಸಿಇಒ ಒಬ್ಬರ ನೇಮಕವಾಗಬೇಕೆಂಬುದು ವಿಹಿಂಪ ಮತ್ತು ವಿವಿಧ ತಜ್ಞರ ಆಶಯವಾಗಿದೆ. ಈ ಮಧ್ಯೆ ಶ್ರೀರಾಮ ಮಂದಿರ ನಿರ್ಮಾಣ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ ಅವರ ಹೆಸರು ಸಿಇಒ ಹುದ್ದೆಗೆ ಚರ್ಚೆಯಲ್ಲಿದೆ. ಸಿಇಒ ಸ್ಥಾನಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಯೋಗೇಶ್ವರ ರಾಮ್ ಮಿಶ್ರಾ ಹೆಸರು ಕೂಡ ಚಾಲ್ತಿಯಲ್ಲಿದೆ.

ಗ್ರಾಮೀಣರಿಗೆ ಬಲ

ಪುಟ ೧ ➜ ಹೊಸ ವ್ಯವಸ್ಥೆಯ ಸುಗಮ ಜಾರಿಗೆ ಅಗತ್ಯವಿರುವ ಆಡಳಿತಾತ್ಮಕ, ಹಣಕಾಸು ಹಾಗೂ ತಾಂತ್ರಿಕ ಸಿದ್ಧತೆಗಳನ್ನೆಲ್ಲ ಪೂರ್ಣಗೊಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕಾಯ್ದೆಯ ನಿರಂತರ ಜಾರಿಗೆ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ 95,692 ಕೋಟಿ ರೂ. ಮಧ್ಯಂತರ ಅನುದಾನ ನೀಡಲಾಗಿದೆ. ಇದರಿಂದ ಕೂಲಿ ಪಾವತಿಯಲ್ಲಿ ವ್ಯತ್ಯಯವಾಗದೇ, ಹೊಸ ವ್ಯವಸ್ಥೆಗೆ ತಕ್ಷಣದ ಮಾರ್ಪಾಡು ಸುಗಮವಾಗಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಪ್ರಸ್ತುತ ನಡೆಯುತ್ತಿರುವ ಕಾಮಗಾರಿಗಳು ಯಾವುದೇ ಅಡಚಣೆಯಿಲ್ಲದೆ ಮುಂದುವರಿಯಲಿವೆ. ಹಾಗೆಯೇ ಇ-ಕೈವೈಸಿ ಪೂರ್ಣಗೊಂಡಿರುವ ಹಾಲಿ ಜಾಬ್ ಕಾರ್ಡ್‌ಗಳು, ಹೊಸ ಗ್ರಾಮೀಣ ರೋಜ್ಗಾರ್ ಗ್ಯಾರಂಟಿ ಕಾರ್ಡ್‌ಗಳು ವಿತರಣೆ ಆಗುವವರೆಗೆ ಮಾನ್ಯವಾಗಿರಲಿವೆ. ಹೊಸ ಕಾಯ್ದೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಪ್ರಮುಖ ಪಾತ್ರ ನೀಡಲಾಗಿದ್ದು, ನೀರಿನ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಕೃಷಿ, ಗ್ರಾಮೀಣ ಮೂಲಸೌಕರ್ಯ, ಮಹಿಳಾ ಸ್ವಸಹಾಯ ಗುಂಪುಗಳ ಬಲವರ್ಧನೆ ಹಾಗೂ ತಂತ್ರಜ್ಞಾನ ಆಧಾರಿತ ಪಾರದರ್ಶಕ ಆಡಳಿತಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

ನಾಳೆ ಉದ್ಘಾಟನಾ ಕಾರ್ಯಕ್ರಮ: ವಿಬಿ ಜಿರಾಮ್‌ಜಿ ರಾಷ್ಟ್ರೀಯ ಉದ್ಘಾಟನಾ ಕಾರ್ಯಕ್ರಮವನ್ನು ಜು.2ರಂದು ಆಂಧ್ರಪ್ರದೇಶದ ತಿರುಪತಿ ಜಿಲ್ಲೆಯ ಮುಕ್ಕವರಿಪಲ್ಲಿ ಗ್ರಾಮದಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಸೇರಿ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ರಾಜ್ಯದಲ್ಲೂ ಯೋಜನೆ ಆರಂಭ

ಪುಟ ೧ ➜ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹೆಸರನ್ನು ಕೇಂದ್ರ ಸರ್ಕಾರ ವಿಬಿ ಜಿ ರಾಮ್ ಜೀ ಎಂದು ಬದಲಾಯಿಸಿದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದ ರಾಜ್ಯ ಸರ್ಕಾರವು ವಿಶೇಷ ಅಧಿವೇಶನ ಕರೆಯುವ ಮೂಲಕ ಮನ್‌ರೇಗಾ ಯೋಜನೆಯನ್ನು ಮರು ಸ್ಥಾಪಿಸಬೇಕೆಂದು ವಿಧಾನಸಭೆಯಲ್ಲಿ ನಿರ್ಣಯ ಮಂಡಿಸಿತ್ತು. ಯೋಜನೆ ಮರು ಸ್ಥಾಪನೆ ಕುರಿತಂತೆ ದಿಲ್ಲಿಯಲ್ಲಿ ಸೋಮವಾರ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆ ನಡೆಸಿರುವ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರ ಅವರು ಮಾರ್ಪಾಡುಗೊಂಡಿರುವ ಯೋಜನೆಯ ಕುರಿತು ಚರ್ಚೆ ನಡೆಸಿದ್ದರು.

ಯಾವುದೇ ಅರ್ಹ ಗ್ರಾಮೀಣ ಕಾರ್ಮಿಕ ಒಂದು ದಿನವೂ ಕೆಲಸವಿಲ್ಲದೆ ಉಳಿಯಬಾರದು. ಕೇಂದ್ರ ಮತ್ತು ರಾಜ್ಯಗಳು ಸೇರಿ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಿವೆ.

■ **ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಸಚಿವ**

ಕ್ರಿಮಿನಲ್ ಕೇಸ್ ರದ್ದತಿಗೆ ಹೈ ನಕಾರ

ಪುಟ ೧ ➜ ಅಪರಾಧದ ಜಾಲದಲ್ಲಿರುವ ಕೊನೆಯ ಕೊಂಡಿಯವರೆಗೂ ಕಾನೂನು ತಲುಪಬೇಕು ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಅರ್ಜಿದಾರರು ನಿರಪರಾಧಿಯಾಗಿದ್ದರೆ ನ್ಯಾಯಾಲಯದ ವಿಚಾರಣೆ ಎದುರಿಸಿ ದೋಷಮುಕ್ತರಾಗಬಹುದು. ಆದರೆ ಆರೋಗ್ಯ, ಅಂಗವೈಕಲ್ಯ ಅಥವಾ ವೈಯಕ್ತಿಕ ಕಾರಣಗಳನ್ನು ಆಧರಿಸಿ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಗಂಭೀರ ಪ್ರಕರಣಗಳನ್ನು ರದ್ದುಪಡಿಸಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಪೊಲೀಸ್‌ಗೆ ತರಾಟೆ: ಇದೇ ವೇಳೆ, ಒಂದೇ ವಿಳಾಸದಲ್ಲಿ 15 ಮಂದಿ ವಿಭಿನ್ನ ವ್ಯಕ್ತಿಗಳ ಪಾಸ್‌ಪೋರ್ಟ್ ಅರ್ಜಿಗಳನ್ನು ಯಾವುದೇ ಸಮರ್ಪಕ ಪರಿಶೀಲನೆ ನಡೆಸದೆ ಅನುಮೋದಿಸಿದ್ದ ಪೊಲೀಸ್ ಕಾನ್‌ಸ್ಟೇಬಲ್ ಅವರ ಕಾರ್ಯವೈಖರಿಯನ್ನು ಹೈಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಇದು ಕೇವಲ ಆಡಳಿತಾತ್ಮಕ ಲೋಪವಲ್ಲ, ದೇಶದ ಸಾರ್ವಭೌಮತೆಗೆ ಧಕ್ಕೆ ತರುವಂತಹ ಗಂಭೀರ ಕರ್ತವ್ಯಲೋಪವಾಗಿದೆ ಎಂದು ನ್ಯಾಯಪೀಠ ಹೇಳಿದೆ. ಸಂಬಂಧಪಟ್ಟ ಕಾನ್‌ಸ್ಟೇಬಲ್ ವಿರುದ್ಧ ಕಾನೂನು ಕ್ರಮ ಜರುಗಿಸಲು ಅನುಮತಿ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಶೀಘ್ರವಾಗಿ ಇತ್ಯರ್ಥ ಪಡಿಸಬೇಕು ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ.

ಹಲ್ಲೆಕೋರರ ಬಂಧಿಸದಿದ್ರೆ ಪ್ರತಿಭಟನೆ

ಪುಟ ೧ ➜ ಕಾರ ಹುಣ್ಣಿಮೆಯಂದು ಹೋರಿ ಬೆದರಿಸಲು ಪಟಾಕಿ ಸಿಡಿಸಿದರು ಎಂಬ ಒಂದೇ ಕಾರಣಕ್ಕಾಗಿ ಹಿಂದು ಯುವಕರ ಮೇಲೆ ಮುಸ್ಲಿಮ್ ದುಷ್ಕರ್ಮಿಗಳು ಮಾರಣಾಂತಿಕ ದಾಳಿ ನಡೆಸಿದ್ದಾರೆ. ಪೊಲೀಸರು ಆಡಳಿತ ಪಕ್ಷದ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆ. ಹಿಂದೂಗಳು ಶಾಂತಿಯುತವಾಗಿ ಹಬ್ಬ ಆಚರಣೆ ಮಾಡದ ಸ್ಥಿತಿ ನಿರ್ಮಾಣವಾಗಿರುವುದು ದುರಂತ. ಹಿಂದುಗಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದವರನ್ನು ತಕ್ಷಣ ಬಂಧಿಸದಿದ್ದರೆ ಜನರೇ ಬೀದಿಗಿಳಿದು ಕುಡಗೋಲು ಕೈಗೆ ತೆಗೆದುಕೊಳ್ಳುವ ಪರಿಸ್ಥಿತಿ ಬಂದರೆ, ಅದಕ್ಕೆ ಪೊಲೀಸ್ ವ್ಯವಸ್ಥೆಯೇ ಕಾರಣವಾಗುತ್ತದೆ. ಸ್ಥಳೀಯ ಶಾಸಕರೇ ಹೊಣೆಗಾರಿಕೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ವಿಜಯೇಂದ್ರ ಎಚ್ಚರಿಕೆ ನೀಡಿದರು. ಮಾಜಿ ಶಾಸಕ ಶಿವರಾಜ್ ಸಜ್ಜನರ, ಅರುಣಕುಮಾರ ಪೂಜಾರ, ಬಿಜೆಪಿ ಮುಖಂಡರಾದ ಭರತ ಬೊಮ್ಮಾಯಿ, ರಾಜಶೇಖರ ಕಟ್ಟೆಗೌಡ್ರ, ಕಲ್ಯಾಣಕುಮಾರ ಶೆಟ್ಟರ, ಸಿದ್ಲಿಂಗಪ್ಪ ಕಮಡೊಳ್ಳಿ, ಮಾಲತೇಶ ಸೊಪ್ಪಿನ್, ಮಹೇಶ ಕಮಡೊಳ್ಳಿ, ಬಸವರಾಜ ಹಾದಿಮನಿ, ಮಲ್ಲಿಕಾರ್ಜುನ ಅಂಗಡಿ, ಶೋಭಾ ನಿಸ್ಸಿಮಗೌಡ್ರ, ಸಿದ್ಲಿಂಗಪ್ಪ ಶಂಕ್ರಿಕೊಪ್ಪ ಮತ್ತಿತರರು ಇದ್ದರು.

ಹಿಂದುಗಳನ್ನು ಕುಡಗೋಲಿನಿಂದ ಕಡಿದಿರುವ ದುಷ್ಕರ್ಮಿಗಳನ್ನು ಬಂಧಿಸಿಲ್ಲ. ರಾಜ್ಯದಲ್ಲಿ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಾಗಿವೆ. ಜಿಲ್ಲೆಯಲ್ಲಿ ಗೋವು ರಕ್ಷಕರು, ಭಜರಂಗ ದಳದ ಕಾರ್ಯಕರ್ತರ ಕುಟುಂಬಕ್ಕೆ ಬೆದರಿಕೆ ಹಾಕುವುದು, ಪೊಲೀಸ್ ಕೇಸ್, ರೌಡಿ ಶೀಟರ್ ತೆರೆಯುವ ಪ್ರಯತ್ನಗಳು ನಡೆಯುತ್ತಿವೆ.ಬಿಜೆಪಿ ಇದನ್ನು ಸಹಿಸುವುದಿಲ್ಲ

■ **ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಪಟಾಕಿ ಸಿಡಿಸಿದ್ದಕ್ಕೆ ಘರ್ಷಣೆ

ಪುಟ ೧ ➜ ಬಾಷಾಸಾಬ ಗೌಂಡಿ ಎಂಬುವರು ಲೋಹಿತ್ ಜಯಪ್ಪ ಎಂಬುವರ ಮೇಲೆ ಕುಡುಗೋಲಿನಿಂದ ಹಲ್ಲೆ ನಡೆಸಿದ್ದು ಇದರಿಂದ ಆತನ ಕೈ ಘಾಸಿಗೊಂಡಿತ್ತು. ಈ ಘಟನೆ ನಂತರ ಹಿಂದು ಮತ್ತು ಮುಸ್ಲಿಂ ಗುಂಪುಗಳ ಮಧ್ಯೆ ಘರ್ಷಣೆಗೆ ಕಾರಣವಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಆಡೂರು ಪೊಲೀಸ್ ಠಾಣೆಯಲ್ಲಿ ಹರೀಶ್ ತಂದೆ ರಾಮಪ್ಪ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದು, ಖ್ವಾಜಾ, ಭಾಷಾಸಾಬ, ಮೆಹಬೂಬ್ ಅಲಿ, ಮಹಬೂಬಸಾಬ ಸೇರಿದಂತೆ ಒಟ್ಟು 26 ಜನರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ. ಈ ಘಟನೆ ಹಿನ್ನೆಲೆಯಲ್ಲಿ ಪ್ರತಿದೂರು ಸಹ ದಾಖಲಾಗಿದೆ. ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಸ್ಥಿತಿ ಬೂದಿಮುಚ್ಚಿದ ಕೆಂಡದಂತಿದೆ.

ಧರ್ಮಸ್ಥಳದಲ್ಲಿ ಬೇಲೂರು ಶಾಸಕ ಸುರೇಶ್ ಆಣೆ ಪ್ರಮಾಣ

• **ಧರ್ಮಸ್ಥಳ:** ರಾಜ್ಯ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿ ವಲಯದಲ್ಲಿ ಅಡ್ಡಮತದಾನದ ಬಗ್ಗೆ ತೀವ್ರ ಚರ್ಚೆಯಾಗುತ್ತಿದ್ದಂತೆ ಮಂಗಳವಾರ ಬೇಲೂರು ಶಾಸಕ ಎಚ್.ಕೆ.ಸುರೇಶ್ ಮುನ್ನೂರಕ್ಕೂ ಮಿಕ್ಕಿ ಬೆಂಬಲಿಗರೊಂದಿಗೆ ನೂರಕ್ಕೂ ಮಿಕ್ಕಿ ಕಾರುಗಳಲ್ಲಿ ಧರ್ಮಸ್ಥಳಕ್ಕೆ ಆಗಮಿಸಿ ಆಣೆ ಪ್ರಮಾಣ ಮಾಡಿದ್ದಾರೆ.

ಬಳಿಕ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರನ್ನು ಭೇಟಿಯಾಗಿ ಅವರ ಆಶೀರ್ವಾದ ಪಡೆದರು.



ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ವಿವಾದ

ದೇವರ ದರ್ಶನ ಮಾಡಿ, ವಿಶೇಷ ಪೂಜೆ ಸಲ್ಲಿಸಿ, ತನ್ನ ಮೇಲೆ ಅಪಪ್ರಚಾರ ಮಾಡಿದವರಿಗೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಿದರು. ಹುಂಡಿಗೆ ಕಾಣಿಕೆ ಹಾಕಿದರು. ನಾನು ಬಿಜೆಪಿ ನಿಷ್ಠಾವಂತ ಕಾರ್ಯಕರ್ತನಾಗಿದ್ದು ಪಕ್ಷಕ್ಕೆ ದ್ರೋಹ ಮಾಡಿಲ್ಲ. ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ಮಾಡಿಲ್ಲ. ಪಕ್ಷದ ವರಿಷ್ಠರು ಸೂಚಿಸಿದ ವ್ಯಕ್ತಿಗೆ ಮತದಾನ ಮಾಡಿದ್ದೇನೆ ಎಂದು ಮಂಜುನಾಥಸ್ವಾಮಿ ಸನ್ನಿಧಿಯಲ್ಲಿ ಪ್ರಮಾಣ ಮಾಡುತ್ತೇನೆ ಎಂದು ಅವರು ಹೇಳಿದರು. ನನ್ನ ಬೆಳವಣಿಗೆಯನ್ನು ಸಹಿಸದ ಕೆಲವರು ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದು ಅವರು ಮಾಧ್ಯಮಗಳಿಗೆ ತಿಳಿಸಿದರು. ದೇವಸ್ಥಾನಕ್ಕೆ ಹೋಗುವ ಮೊದಲು ಅಣ್ಣಪ್ಪಸ್ವಾಮಿ ಬೆಟ್ಟದಲ್ಲಿ ವಿಶೇಷ ಪ್ರಾರ್ಥನೆ ಮಾಡಿ, ನಾನು ಮೋಸ ಮಾಡಿಲ್ಲ. ಅಪಪ್ರಚಾರ ಮಾಡಿದವರಿಗೆ ದೇವರು ಒಳ್ಳೆ ಬುದ್ಧಿ ಕೊಡಲಿ ಎಂದು ಹೇಳಿ ತೆಂಗಿನ ಕಾಯಿ ಒಡೆದರು. ನೇತ್ರಾವತಿಯಲ್ಲಿ ತೀರ್ಥ ಪ್ರೋಕ್ಷಣೆ ಮಾಡಿ, ವಂದಿಸಿ, ಬಳಿಕ ದೇವರ ದರ್ಶನ ಮಾಡಿ, ಪೂಜೆ ಸಲ್ಲಿಸಿ ಶಾಸಕರು ಕಾರ್ಯಕರ್ತರ ಜತೆ ಆಣೆ ಪ್ರಮಾಣ ಮಾಡಿದರು.



ಬೆಂಗಳೂರು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಮಂಗಳವಾರ ಸಂಜೆ ಬಂದಿಳಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಿಎಂ ಡಿ.ಕೆ. ಶಿವಕುಮಾರ್ ಆತ್ಮೀಯವಾಗಿ ಬರಮಾಡಿಕೊಂಡರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಉಪಸ್ಥಿತರಿದ್ದರು.

ಹೊಸ ಬದುಕಿನ ನಿರೀಕ್ಷೆಯಲ್ಲಿದ್ದ ಸಾಯಿ ಸುರಭಿ: ಕಮರಿದ ಕನಸು

• **ಚಿಕ್ಕಬಳ್ಳಾಪುರ:** ನಂದಿಗಿರಿಧಾಮದ ಮುದ್ದೇನಹಳ್ಳಿಯ ಹೋಂಸ್ಟೇನಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟ ಸಾಯಿ ಸುರಭಿ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದ್ದು, ಆಕೆಯ ಸಾವಿಗೆ ಕೆಲ ತಿಂಗಳ ಮೊದಲು ಬರೆದಿದ್ದ ಗ್ರಾಟಿಟ್ಯೂಡ್ ಜರ್ನಲ್ ಇದೀಗ ಬೆಳಕಿಗೆ ಬಂದಿದೆ. ಜರ್ನಲ್‌ನಲ್ಲಿ ಸುರಭಿಯ ಮನಸ್ಥಿತಿ, ಹಳೆಯ ಬದುಕಿನಿಂದ ಹೊರಬಂದು ಹೊಸ ಜೀವನ ಕಟ್ಟಿಕೊಳ್ಳುವ ಆಸೆ ಹಾಗೂ ಭವಿಷ್ಯದ ಬಗ್ಗೆ ಹೊಂದಿದ್ದ ನಿರೀಕ್ಷೆಗಳು ವ್ಯಕ್ತವಾಗಿವೆ ಎಂದು ಬರೆದುಕೊಂಡಿದ್ದಾರೆ. ಹಳೆಯ ಬದುಕಿನಿಂದ ಹೊರಬಂದು, ಹೊಸ ಜೀವನ ಕಟ್ಟಿಕೊಳ್ಳುವ ಕನಸು ಕಂಡಿದ್ದ ಯುವತಿಯ ಬದುಕು ಸಾವಿನಲ್ಲಿ ಅಂತ್ಯಗೊಂಡಿದೆ.

2025ರ ಡಿಸೆಂಬರ್ 30ರಂದು ಬರೆದಿರುವ ಈ ದಿನಚರಿಯಲ್ಲಿ ಸಂಚೀತ್ ಅಲಿ ಜೊತೆಗಿನ ಬ್ರೇಕಪ್ ಬಳಿಕ ತನ್ನ ಬದುಕಿನಲ್ಲಿ ಆಗಿದ್ದ ಬದಲಾವಣೆಗಳ ಬಗ್ಗೆ ಕೃತಜ್ಞತೆ ವ್ಯಕ್ತಪಡಿಸಿರುವುದು ಕಂಡುಬಂದಿದೆ. ಜರ್ನಲ್‌ನಲ್ಲಿ ತಾನು ಇನ್ನೂ ಜೀವಂತವಾಗಿರುವುದಕ್ಕೂ, ಜೀವನದಲ್ಲಿ ಮತ್ತೊಂದು ಅವಕಾಶ ಸಿಕ್ಕಿರುವುದಕ್ಕೂ ದೇವರಿಗೆ ಧನ್ಯವಾದ ಹೇಳಿದ್ದಾರೆ. ಜೀವನದಲ್ಲಿ ಎರಡನೇ ಅವಕಾಶ ಸಿಕ್ಕಿದೆ. ನನ್ನ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಮತ್ತು ಒಳ್ಳೆಯ ವ್ಯಕ್ತಿಯಾಗಲು ಸಾಧ್ಯವಾಗಿದೆ. ತನ್ನ ತಪ್ಪುಗಳಿಂದ ಪಾಠ ಕಲಿತಿದ್ದು, ಪರಿಸ್ಥಿತಿ ಇನ್ನಷ್ಟು ಹದಗೆಡದಂತೆ ತಡೆಯಲು ಸಾಧ್ಯವಾಗಿದೆ ಎಂದು ಕೂಡ ಉಲ್ಲೇಖಿಸಿದ್ದಾರೆ. ಕುಟುಂಬ, ದೇವರು ಮತ್ತು ಉತ್ತಮ ಮೌಲ್ಯಗಳತ್ತ ಮತ್ತಷ್ಟು ಹತ್ತಿರವಾಗಿರುವುದಕ್ಕೂ ಆಕೆ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಹಳೆಯ ನೋವುಗಳನ್ನು ಮರೆತು ಹೊಸ ಬದುಕು ಆರಂಭಿಸುವ ಪ್ರಯತ್ನದಲ್ಲಿದ್ದಳು ಎಂಬುದು ಜರ್ನಲ್‌ನಿಂದ ತಿಳಿದುಬರುತ್ತದೆ. ಆದರೆ ಜರ್ನಲ್‌ನಲ್ಲಿರುವ ಒಂದು ಸಾಲು ಎಲ್ಲರ ಗಮನ ಸೆಳೆದಿದೆ. ನನ್ನ ತಪ್ಪಾದ ಆಯ್ಕೆಯಿಂದ ದೂರವಿಟ್ಟಿದ್ದಕ್ಕೆ ಹಾಗೂ ದುಷ್ಟ ವ್ಯಕ್ತಿಯನ್ನು ಮದುವೆಯಾಗದಂತೆ ತಡೆದಿದ್ದಕ್ಕೆ ನಾನು ಕೃತಜ್ಞಳಾಗಿದ್ದೇನೆ ಎಂದು ಸುರಭಿ ಬರೆದಿದ್ದಾರೆ. ಈ ಜರ್ನಲ್ ಬೆಳಕಿಗೆ ಬಂದಿರುವುದು ಸುರಭಿ ಸಾವಿನ ತನಿಖೆಯಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ. ಪೊಲೀಸರು ಪ್ರಕರಣದ ತನಿಖೆ ಮುಂದುವರಿಸಿದ್ದಾರೆ.

ಕಿರುಸುದ್ದಿ

ಎಸ್‌ಐಆರ್‌ಗೆ ಕಾಂಗ್ರೆಸ್ ಅಡ್ಡಗಾಲು: ಅಶೋಕ

• **ಬೆಂಗಳೂರು:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಯನ್ನು ವಿರೋಧಿಸುತ್ತಿರುವ ಕಾಂಗ್ರೆಸ್ ಸರ್ಕಾರವು ಮತಗಟ್ಟೆ ಮಟ್ಟದ ಅಧಿಕಾರಿ (ಬಿಎಲ್‌ಒ)ಗಳನ್ನು ನೇಮಿಸಲು ಕೂಡ ಅಡ್ಡಗಾಲು ಹಾಕಿದೆ. ಅನೇಕ ಕಡೆ ಅಧಿಕಾರಿಗಳನ್ನು ನೇಮಿಸದೆ ಎಸ್‌ಐಆರ್ ನಡೆಯದಂತೆ ಮಾಡಲಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕೇಂದ್ರ ಸರ್ಕಾರದಿಂದ ಎಸ್‌ಐಆರ್ ಆರಂಭವಾಗಿದೆ. ಆದರೆ ಕಾಂಗ್ರೆಸ್ ಸರ್ಕಾರ ಬಿಎಲ್‌ಒಗಳನ್ನು ಸರಿಯಾಗಿ ನೇಮಿಸಿಲ್ಲ. ಮೂವತ್ತು ಬಿಎಲ್‌ಒ ಇರಬೇಕಾದಲ್ಲಿ ಕೇವಲ ಹತ್ತು ಮಂದಿ ಕಾಣಸಿಕ್ಕಿದ್ದಾರೆ. ಸರ್ಕಾರ ಟಿಎ, ಡಿಎ ನೀಡಿಲ್ಲ, ಹಾಜರಾತಿಗಳು ಅನುಮತಿ ನೀಡಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ದೂರಿದರು.

ಮತದಾರರ ಪಟ್ಟಿಯಲ್ಲಿ ಮತದಾರರ ಹೆಸರು ಮಾತ್ರ ಇರಬೇಕೆಂಬುದು ಎಸ್‌ಐಆರ್‌ನ ಉದ್ದೇಶ. ಜಯನಗರದಲ್ಲಿ 20 ಕಡೆ ಅಧಿಕಾರಿ ಅಲ್ಲದ ಮುಖಂಡರನ್ನು ಬಿಎಲ್‌ಒ ಆಗಿ ನೇಮಿಸಲಾಗಿದೆ ಎಂದು ಆರೋಪಿಸಿದರು.

ಎಸ್‌ಟಿಎಫ್ ಸಿಬ್ಬಂದಿ ಮೇಲೆಯೇ ಹುಲಿ ದಾಳಿ

• **ಮೈಸೂರು:** ಹುಲಿ ಸೆರೆಹಿಡಿಯಲು ತೆರಳಿದ್ದ ಎಸ್‌ಟಿಎಫ್ ಸಿಬ್ಬಂದಿಯ ಮೇಲೆಯೇ ಹುಲಿ ನಡೆಸಿದ ದಾಳಿಯಿಂದ ಸಿಬ್ಬಂದಿಯೊಬ್ಬರು ಗಾಯಗೊಂಡಿರುವ ಘಟನೆ ಜಿಲ್ಲೆಯ ಸರಗೂರು ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ನಡೆದಿದೆ. ಎಸ್‌ಟಿಎಫ್ ಗಾರ್ಡ್ ಕುಮಾರ್ (37) ಗಾಯಗೊಂಡವರು. ಮುಳ್ಳೂರು ಗ್ರಾಮದ ರೈತ ಕಿರಣ್ ಅವರ ಮೇಲೆ ನಡೆದ ಹುಲಿ ದಾಳಿ ಬಳಿಕ ಸ್ಥಳ ಪರಿಶೀಲನೆ ಹಾಗೂ ಹುಲಿ ಸೆರೆ ಕಾರ್ಯಾಚರಣೆಗಾಗಿ ಡಿಸಿಎಫ್ ನಂದೀಶ್ ನೇತೃತ್ವದಲ್ಲಿ ಅರಣ್ಯ ಇಲಾಖೆ ಮತ್ತು ಎಸ್‌ಟಿಎಫ್ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿತ್ತು. ಥರ್ಮಲ್ ಡ್ರೋನ್ ಕ್ಯಾಮರಾ ಮೂಲಕ ಕಾರ್ಯಾಚರಣೆ ನಡೆಯುತ್ತಿತ್ತು. ಈ ವೇಳೆ ಪೊದೆಯೊಳಗಿದ್ದ ಹುಲಿ ಏಕಾಏಕಿ ದಾಳಿ ನಡೆಸಿ ಎಸ್‌ಟಿಎಫ್ ಗಾರ್ಡ್ ಕುಮಾರ್ (37) ಅವರ ಎಡಗೈ ತೋಳಿಗೆ ಕಚ್ಚಿ ಗಾಯಗೊಳಿಸಿದೆ. ತಕ್ಷಣವೇ ಸಿಬ್ಬಂದಿ ಅವರನ್ನು ಸುರಕ್ಷಿತವಾಗಿ ರಕ್ಷಿಸಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಸಹಕಾರ ಬ್ಯಾಂಕ್ ಅವ್ಯವಹಾರ: ಅಧ್ಯಕ್ಷ ಆತ್ಮಹತ್ಯೆ

• **ಯಾದಗಿರಿ:** ಹೇಮರೆಡ್ಡಿ ಮಲ್ಲಮ್ಮ ಸಹಕಾರ ಬ್ಯಾಂಕ್‌ನಲ್ಲಿ ಕೋಟ್ಯಾಂತರ ರೂ. ಗೋಲ್ಮಾಲ್ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪ ಎದುರಿಸುತ್ತಿದ್ದ ಬ್ಯಾಂಕ್ ಅಧ್ಯಕ್ಷ ಎಂಟು ಪುಟಗಳ ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ ಘಟನೆ ಜಿಲ್ಲೆಯ ಶಹಾಪುರ ಪಟ್ಟಣದಲ್ಲಿ ಮಂಗಳವಾರ ನಡೆದಿದೆ. ಬ್ಯಾಂಕ್ ಅಧ್ಯಕ್ಷ ಬಸನಗೌಡ ಪಾಟೀಲ ಆತ್ಮಹತ್ಯೆ ಮಾಡಿಕೊಂಡವರು. ಬ್ಯಾಂಕ್‌ನ 16 ಕೋಟಿ ರೂ.ವ್ಯವಹಾರದಲ್ಲಿ 13 ಕೋಟಿಯಷ್ಟು ಗೋಲ್ಮಾಲ್ ಮಾಡಲಾಗಿತ್ತು. ನಮ್ಮ ಹಣ ನಮಗೆ ನೀಡಿ ಅಂತ ಠೇವಣಿದಾರರು ಬ್ಯಾಂಕ್ ಮುಂದೆ ಧರಣಿ ನಡೆಸುತ್ತಿದ್ದರು. ಧರಣಿ ಆರಂಭವಾಗುತ್ತಿದ್ದ ಹಾಗೆ ಊರು ಬಿಟ್ಟು ಹೋಗಿದ್ದ ಬಸನಗೌಡ, ಸೋಮವಾರ ರಾತ್ರಿ ಮನೆಗೆ ವಾಪಸ್ ಮರಳಿದ್ದರು. ಶಹಾಪುರದ ತಮ್ಮ ನಿವಾಸದಲ್ಲಿ ಮೊಬೈಲ್‌ನಲ್ಲಿ ವಿಡಿಯೋ ಮಾಡಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮಾದಕವಸ್ತು ಮುಕ್ತ, ನಶೆಮುಕ್ತ ಕರ್ನಾಟಕ ಗುರಿ: ಸಿಎಂ ಡಿಕೆಶಿ

ವ್ಯಸನ ತಡೆಗೆ ಕೈಜೋಡಿಸಿ

• **ಬೆಂಗಳೂರು:** 2028ರ ವೇಳೆಗೆ ಮಾದಕವಸ್ತು ಮುಕ್ತ, ನಶೆ ಮುಕ್ತ ಕರ್ನಾಟಕ ನಿರ್ಮಿಸುವುದು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗುರಿಯಾಗಿದ್ದು, ಈ ಹೋರಾಟದಲ್ಲಿ ಸಾರ್ವಜನಿಕರು, ಯುವಜನತೆ, ವಿದ್ಯಾರ್ಥಿಗಳು ಹಾಗೂ ಪೋಷಕರು ಸರ್ಕಾರ ಮತ್ತು ಪೊಲೀಸ್ ಇಲಾಖೆ ಯೊಂದಿಗೆ ಕೈಜೋಡಿಸಿದರೆ ಡ್ರಗ್ಸ್ ಜಾಲವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾಧ್ಯ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ವತಿಯಿಂದ ಮಂಗಳವಾರ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳಸಾಗಣೆ ವಿರೋಧಿ ದಿನ-2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡ್ರಗ್ಸ್ ವಿರುದ್ಧದ ಹೋರಾಟವನ್ನು ಜನಾಂದೋಲನವಾಗಿ ರೂಪಿಸುವ ಅಗತ್ಯವಿದೆ ಎಂದು ಹೇಳಿದರು.

ನಶೆ ಬಿಡಿ, ಖುಷಿ ಪಡಿ ಎಂಬ ಸಂದೇಶವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಂದು ಮಾಡಿರುವ ಸಂಕಲ್ಪ ಕೇವಲ ಕಾರ್ಯಕ್ರಮಕ್ಕೆ ಸೀಮಿತವಾಗದೆ ಜೀವನ ದುದ್ದಕ್ಕೂ ಪಾಲನೆಯಾಗಬೇಕು. ಯುವಕರು ಮತ್ತು ವಿದ್ಯಾರ್ಥಿಗಳು ಯಾವುದೇ ಆಮಿಷ ಅಥವಾ ಒತ್ತಡಕ್ಕೆ ಮಣಿಯದೆ ತಮ್ಮ ದೇಹ ಮತ್ತು ಮನಸ್ಸಿನ ಮೇಲೆ ನಿಯಂತ್ರಣ ಹೊಂದಬೇಕು. ತಮ್ಮ ಸುತ್ತಮುತ್ತಲಿನ ಪರಿಸರದಲ್ಲೂ ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಜವಾಬ್ದಾರಿ ವಹಿಸಬೇಕು ಎಂದು ಕರೆ ನೀಡಿದರು.

ಕಳೆದ ಮೂರು ವರ್ಷಗಳಲ್ಲಿ ಹಿಂದಿನ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ನೇತೃತ್ವದಲ್ಲಿ ಸುಮಾರು 89 ಕೋಟಿ ರೂ. ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡು ನಾಶಪಡಿಸಲಾಗಿದೆ. ಡ್ರಗ್ಸ್ ಜಾಲವನ್ನು ಭೇದಿಸಲು ಶ್ರಮಿಸಿದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಹಾಗೂ ಕಾನ್‌ಸ್ಟೇಬಲ್‌ಗಳ ಕಾರ್ಯವನ್ನು ಶ್ಲಾಘಿಸಿದರು. ಮಕ್ಕಳಲ್ಲಿ ಮಾದಕ ವ್ಯಸನದ ಲಕ್ಷಣಗಳು ಕಂಡುಬಂದರೆ ಸಮಾಜದಲ್ಲಿ ಮಾನಹಾನಿಯಾಗಬಹುದು ಎಂಬ ಭಯದಿಂದ ಪೋಷಕರು ಅದನ್ನು ಮುಚ್ಚಿಡಬಾರದು. ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಿ ಜಾಲದ ಮೂಲವನ್ನು ಪತ್ತೆಹಚ್ಚಲು ನೆರವಾಗಬೇಕು. ಮಾಹಿತಿ ನೀಡುವ ಮಕ್ಕಳ ಅಥವಾ ಕುಟುಂಬದ ಹೆಸರು ಯಾವುದೇ ಕಾರಣಕ್ಕೂ ಬಹಿರಂಗವಾಗದಂತೆ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಿರುವುದಾಗಿ ತಿಳಿಸಿದರು.

ಪಾನ್ ಮಸಾಲಾ ಹಾಗೂ ಗುಟ್ಕಾಗಳಲ್ಲಿ ಅಮಲು ಪದಾರ್ಥಗಳನ್ನು ಬೆರೆಸುತ್ತಿರುವ ಪ್ರಕರಣಗಳು ಗಮನಕ್ಕೆ ಬಂದಿವೆ. ಮೊಬೈಲ್ ಮೂಲಕ ಸಂಪರ್ಕಿಸಿ ಮನೆಗಳಿಗೇ ಮಾದಕ ವಸ್ತುಗಳನ್ನು ಪೂರೈಸುತ್ತಿರುವ ಜಾಲವೂ ಪತ್ತೆಯಾಗಿದೆ. ಇಂತಹ ಕೃತ್ಯಗಳಲ್ಲಿ ತೊಡಗಿರುವವರ ವಿರುದ್ಧ ಯಾವುದೇ ರಾಜಿ ಇಲ್ಲದೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದರು.

ಶಾಸಕ ರಿಜ್ವಾನ್ ಅರ್ಷದ್, ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಇತರರಿದ್ದರು.



ಸಾರ್ವಜನಿಕರು ಸಹಕರಿಸಿ: ಸಿಎಂ ಮನವಿ

ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ತಂಬಾಕು ಸೇವನೆಯಿಂದ ದೇಶದಲ್ಲಿ ಪ್ರತಿವರ್ಷ 13 ರಿಂದ 14 ಲಕ್ಷ ಜನರು ಸಾವನ್ನಪ್ಪುತ್ತಿದ್ದಾರೆ. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಅರಿತು ವ್ಯಸನಮುಕ್ತ ಜೀವನವನ್ನು ಅಳವಡಿಸಿಕೊಳ್ಳಬೇಕು. ರಾಜ್ಯದ ಶಾಲೆ ಮತ್ತು ಕಾಲೇಜುಗಳಲ್ಲಿ ಈಗಾಗಲೇ ಸ್ಟೂಡೆಂಟ್ ಪೊಲೀಸಿಂಗ್ ವ್ಯವಸ್ಥೆ ಜಾರಿಗೊಳಿಸಲಾಗಿದ್ದು, ಡ್ರಗ್ಸ್ ಸೇರಿದಂತೆ ಇತರೆ ಕಾನೂನುಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ನಿರಂತರ ಸಹಕಾರ ನೀಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

> **ಡ್ರಗ್ಸ್ ಸೇವನೆಗೆ ಸಹಪಾಠಿಗಳ ಒತ್ತಡ ಪ್ರಮುಖ ಕಾರಣವಾಗುತ್ತಿರುವ ಹಿನ್ನೆಲೆ, ಒಬ್ಬ ಸ್ನೇಹಿತನ ತಪ್ಪು ಒತ್ತಡ ಜೀವನವನ್ನೇ ಹಾಳು ಮಾಡಬಹುದು ಎಂಬ ಸಂದೇಶವನ್ನು ಬೇಡ ಬ್ರೋ ಅಭಿಯಾನದ ಮೂಲಕ ಯುವಜನರಿಗೆ ತಲುಪಿಸಲಾಗುವುದು.**
> ■ ಪ್ರಿಯಾಂಕ್ ಖರ್ಗೆ, ಗೃಹಸಚಿವ

ಪಂಪ್‌ಹೌಸ್ ಯೋಜನೆಗೆ 25 ಎಕರೆ ಸಾಕು: ಸಚಿವ

ಪಂಪ್ಡ್ ಸ್ಟೋರೇಜ್ ರಾಜ್ಯಕ್ಕೆ ಅನುಕೂಲ

• **ಶಿವಮೊಗ್ಗ:** ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಯಿಂದ ಶಿವಮೊಗ್ಗ ಸೇರಿದಂತೆ ರಾಜ್ಯದ ಜನರಿಗೆ ಪ್ರಯೋಜನವಾಗಲಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಸಮರ್ಥಿಸಿಕೊಂಡಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿ, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯಿಂದ ಪರಿಸರಕ್ಕೆ ದೊಡ್ಡ ಮಟ್ಟದ ಹಾನಿಯಾಗುವುದಿಲ್ಲ. ಕೇವಲ 25 ಎಕರೆ ಪ್ರದೇಶ ಮಾತ್ರ ಪಂಪ್‌ಹೌಸ್‌ಗೆ ಬೇಕಾಗಲಿದೆ. ಪೈಪ್ ಲೈನ್ ಅಳವಡಿಸಿದ ಬಳಿಕ ಮತ್ತೆ ಮಣ್ಣಿನಿಂದ ಮುಚ್ಚಿ ಅರಣ್ಯವನ್ನು ಪುನಃ ಬೆಳೆಸಲಾಗುತ್ತದೆ. ಯೋಜನೆಯಿಂದ ರಾಜ್ಯಕ್ಕೆ ಹೆಚ್ಚುವರಿಯಾಗಿ ಸುಮಾರು 2,000 ಮೆಗಾವ್ಯಾಟ್ ವಿದ್ಯುತ್ ದೊರೆಯಲಿದೆ ಎಂದರು.

ಲಿಂಗನಮಕ್ಕಿ ಅಣೆಕಟ್ಟಿನಿಂದ ವಿದ್ಯುತ್ ಉತ್ಪಾದನೆಯಾದ ಬಳಿಕ ನೀರು ಸಮುದ್ರಕ್ಕೆ ಹರಿದು ಹೋಗುತ್ತದೆ. ಆ ನೀರನ್ನು ಪಂಪ್ ಮಾಡಿ ವಾಪಸ್ ಅಣೆಕಟ್ಟಿಗೆ ತಂದು ಕೆಲವೇ ನಿಮಿಷಗಳಲ್ಲಿ ವಿದ್ಯುತ್ ಉತ್ಪಾದಿಸುವುದೇ ಪಂಪ್ಡ್ ಸ್ಟೋರೇಜ್ ಯೋಜನೆ ಎಂದು ವಿವರಿಸಿದರು. ಯೋಜನೆಗಾಗಿ 125 ಎಕರೆ ಪ್ರದೇಶ ಬಳಸಲಾಗುತ್ತದೆ ಎಂಬ ಹೇಳಿಕೆಗಳ ಕುರಿತು ಪ್ರತಿಕ್ರಿಯಿಸಿ, ಅಷ್ಟೂ ಪ್ರದೇಶ ಮುಳುಗುವುದಿಲ್ಲ. ಪೈಪ್‌ಲೈನ್ ಕಾಮಗಾರಿಗೆ ಹೆಚ್ಚಿನ ಜಾಗ ಬೇಕಾಗಲಿದೆ. ಕೇವಲ 25 ರಿಂದ 30 ಎಕರೆ ಮಾತ್ರ ಪಂಪ್ ಹೌಸ್‌ಗೆ ಶಾಶ್ವತವಾಗಿ ಬಳಸಲಾಗುತ್ತದೆ. ಬೆಂಗಳೂರು ನೀರು ಸರಬರಾಜು ಯೋಜನೆಯಂತೆ ದೊಡ್ಡ ಪೈಪ್‌ಗಳನ್ನು ಅಳವಡಿಸಿ ನೀರನ್ನು ಮೇಲಕ್ಕೆ ಎತ್ತಲಾಗುತ್ತದೆ ಎಂದು ಹೇಳಿದರು.

ಇತ್ತೀಚೆಗೆ ಆಂಧ್ರಪ್ರದೇಶದಲ್ಲಿ ಗ್ರೀನ್ ಕೋ ಸಂಸ್ಥೆ ಕೈಗೊಂಡಿರುವ ಪಂಪ್ಡ್ ಸ್ಟೋರೇಜ್ ಯೋಜನೆ ಪ್ರದೇಶಕ್ಕೆ ಭೇಟಿ ಮಾಡಿ ಪರಿಶೀಲಿಸಿದ್ದೇನೆ. ಅಲ್ಲಿ ಅತ್ಯುತ್ತಮ ರೀತಿಯಲ್ಲಿ ಯೋಜನೆ ಜಾರಿಯಾಗಿದೆ. ಈ ವ್ಯವಸ್ಥೆಯಲ್ಲಿ ನೀರಿನ ಆವಿಯಾಗುವಿಕೆ ಕೇವಲ ಶೇ.5ರಷ್ಟೇ ಇರುತ್ತದೆ. ನಿರಂತರವಾಗಿ ನೀರನ್ನು ಮರುಬಳಕೆ ಮಾಡಿಕೊಂಡು ವಿದ್ಯುತ್ ಉತ್ಪಾದನೆ ಮಾಡಬಹುದು ಎಂದರು. ಯೋಜನೆಯಿಂದ ಅರಣ್ಯ, ವನ್ಯಜೀವಿ ಹಾಗೂ ಪಕ್ಷಿಗಳಿಗೆ ಹಾನಿಯಾಗುತ್ತದೆ ಎಂಬ ಆಕ್ಷೇಪಕ್ಕೆ ಪ್ರತಿಕ್ರಿಯಿಸಿ, ದೇಶದ ವಿವಿಧ ಭಾಗಗಳಲ್ಲಿ, ಹಿಮಾಚಲ ಪ್ರದೇಶ ಹಾಗೂ ರಾಷ್ಟ್ರೀಯ ಹೆದ್ದಾರಿ ಸುರಂಗ ನಿರ್ಮಾಣ ಕಾಮಗಾರಿಗಳೂ ಪರಿಸರ ನಿಯಮಗಳ ಪ್ರಕಾರವೇ ನಡೆಯುತ್ತಿವೆ. ಅದೇ ರೀತಿ ಈ ಯೋಜನೆಯೂ ಎಲ್ಲಾ ನಿಯಮಗಳನ್ನು ಪಾಲಿಸಿಕೊಂಡೇ ಜಾರಿಯಾಗಲಿದೆ ಎಂದು ಸ್ಪಷ್ಟಪಡಿಸಿದರು.



ಬಲವಂತವಾಗಿ ಹೇರಿಲ್ಲ

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಸಂಬಂಧಿಸಿ ಜನರಿಗೆ ತಪ್ಪು ಮಾಹಿತಿ ನೀಡಲಾಗುತ್ತಿದೆ. ಯೋಜನೆಯ ಸಂಪೂರ್ಣ ಮಾಹಿತಿ ತಿಳಿದರೆ ವಿರೋಧಿಸುವ ಅಗತ್ಯ ಇರುವುದಿಲ್ಲ. ಸರ್ಕಾರ ಯಾರ ಮೇಲೂ ಬಲವಂತವಾಗಿ ಯೋಜನೆ ಹೇರಲು ಮುಂದಾಗಿಲ್ಲ. ನಿಯಮಾನುಸಾರ ಅನುಮತಿ ದೊರೆತ ಬಳಿಕವೇ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಶಸ್ತ್ರಚಿಕಿತ್ಸೆ ಕೊಠಡಿಯಲ್ಲಿ ಸ್ಫೋಟ: ತಪ್ಪಿದ ಅನಾಹುತ

• **ದಾವಣಗೆರೆ:** ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಮಂಗಳವಾರ ಶಸ್ತ್ರಚಿಕಿತ್ಸೆ ಕೊಠಡಿಯ ಅನಸ್ತೇಶಿಯಾ ವರ್ಕ್ ಸ್ಟೇಷನ್‌ನಲ್ಲಿ ಸ್ಫೋಟ ಸಂಭವಿಸಿದ್ದು ಭಾರೀ ಅನಾಹುತ ತಪ್ಪಿದೆ.

ಆಸ್ಪತ್ರೆಯ ಆಪರೇಷನ್ ಥಿಯೇಟರ್ 5 ಮತ್ತು 6ರ ಕಣ್ಣಿನ ಶಸ್ತ್ರ ವಿಭಾಗದಲ್ಲಿ ರೋಗಿಯೊಬ್ಬರ ಕಣ್ಣಿನ ಶಸ್ತ್ರಚಿಕಿತ್ಸೆಗೆ ತಯಾರಿ ಮಾಡುವ ಸಂದರ್ಭದಲ್ಲಿ ಅನಸ್ತೇಶಿಯಾ ವರ್ಕ್ ಸ್ಟೇಷನ್‌ನಲ್ಲಿ ಏಕಾಏಕಿ ಸ್ಫೋಟ ಸಂಭವಿಸಿ ಬೆಂಕಿ ಹೊತ್ತಿಕೊಂಡಿದೆ. ಘಟನೆ ಸಂಭವಿಸಿದ ವೇಳೆ 10ಕ್ಕೂ ಹೆಚ್ಚು ಸಿಬ್ಬಂದಿ ಕರ್ತವ್ಯದಲ್ಲಿದ್ದರು. ಬೆಂಕಿ ಕಾಣಿಸಿಕೊಂಡ ತಕ್ಷಣ ಸಿಬ್ಬಂದಿ ಸುರಕ್ಷಿತ ಸ್ಥಳಕ್ಕೆ ತೆರಳಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಸ್ಫೋಟದ ಪರಿಣಾಮ ಆಪರೇಷನ್ ಥಿಯೇಟನರ್‌ನಲ್ಲಿದ್ದ ಅನಸ್ತೇಶಿಯಾ ಯಂತ್ರ ಸೇರಿದಂತೆ ಹಲವು ವೈದ್ಯಕೀಯ ಉಪಕರಣಗಳು ಬೆಂಕಿಗೆ ಆಹುತಿಯಾಗಿವೆ. ಅಗ್ನಿ ಅವಘಡದ ಬಳಿಕ ಆಸ್ಪತ್ರೆ ಸಿಬ್ಬಂದಿ ಮತ್ತು ಸಂಬಂಧಿತ ಅಧಿಕಾರಿಗಳು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ.



ಬಿ.ಎನ್.ಮೂರ್ತಿ ಧ್ಯೇಯನಿಷ್ಠ ಕಾರ್ಯಕರ್ತ

• **ಬೆಂಗಳೂರು:** ಬಿ.ಎನ್.ಮೂರ್ತಿ ಅವರು ಧ್ಯೇಯನಿಷ್ಠ ಕಾರ್ಯಕರ್ತರಾಗಿದ್ದರು. ಜೀವನಪೂರ್ತಿ ಆ ಮಾರ್ಗದಲ್ಲಿ ನಡೆದವರು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಸುಧೀರ್ ಹೇಳಿದರು. ವಿಶ್ವ ಹಿಂದು ಪರಿಷತ್ ಕರ್ನಾಟಕವು ಬಸವನಗುಡಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಮಂಗಳವಾರ ಆಯೋಜಿಸಿದ ಬಿ.ಎನ್. ಮೂರ್ತಿ ಅವರ ಸ್ಮರಣ ಸಂಚಯ ಧ್ಯೇಯಮೂರ್ತಿ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಘ ಮತ್ತು ಪರಿವಾರ ಸಂಘಟನೆಗಳಲ್ಲಿ ಪ್ರಚಾರಕರಾಗಿ ಸೇವೆ ಸಲ್ಲಿಸಿದವರ ಕುರಿತಾದ ಅನೇಕ ಪುಸ್ತಕಗಳು ಬಂದಿವೆ. ಆದರೆ ಗೃಹಸ್ಥ ಕಾರ್ಯಕರ್ತರಿಗೆ ಸಮರ್ಪಿತವಾದ ಪುಸ್ತಕ ಬಂದಿರುವುದು ತುಂಬಾ ಕಡಿಮೆ. ಈ ಪುಸ್ತಕ ಆ ಕೊರಗನ್ನು ನೀಗಿಸುತ್ತದೆ ಎಂದರು.

ಬಿ.ಎನ್.ಮೂರ್ತಿ ಅವರು ತಮ್ಮಲ್ಲಿರುವ ಎಲ್ಲವನ್ನು ಹಿಂದುತ್ವ ಮತ್ತು ಸಂಘಟನೆಯ ಕಾರ್ಯಕ್ಕೆ ಧಾರೆ ಎರೆದರು. ಅವರ ನಡೆ, ನುಡಿ, ಸಂಘಟನಾ ಕೌಶಲ ಇವೆಲ್ಲದರಿಂದ ಅವರು ಅನೇಕರಿಗೆ ಮೇಲ್ಪಂಕ್ತಿಯಾದರು. ನಮ್ಮೆಲ್ಲರಿಗೂ ಅನುಕರಣೀಯರಾದರು. ನಮ್ಮ ಸಂಘಟನೆಗಳಲ್ಲಿ ಕೆಲಸ ಮಾಡುವ ಕಾರ್ಯಕರ್ತರು ಯಾವುದೇ ಪ್ರತಿಫಲದ ಅಪೇಕ್ಷೆಯಿಲ್ಲದೇ ಕೆಲಸ ಮಾಡುತ್ತಾರೆ. ಇಲ್ಲಿ ಸ್ವಂತಕ್ಕೆ ಏನು ಸಿಗುವುದಿಲ್ಲ. ನಮ್ಮ ಕೆಲಸ ಮಾಡುತ್ತಾ ಕೆಲವನ್ನು ಕಳೆದುಕೊಳ್ಳಬೇಕು, ಕೆಲವನ್ನು ಬಿಡಬೇಕು ಮತ್ತು ಕೆಲವನ್ನು ಕೊಡಬೇಕಾಗುತ್ತದೆ. ಮೂರ್ತಿ ಅವರು ಸ್ವಂತಕ್ಕೆ ಏನು ಅಪೇಕ್ಷಿಸಲಿಲ್ಲ. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎನ್ನುವ ದಾಸೋಕ್ತಿಗೆ ಅನ್ವರ್ಥವಾಗಿ ಬದುಕಿದರು. ಜೀವನಪೂರ್ತಿ ಅನಾಮಿಕರಾಗಿ ಕೆಲಸ ಮಾಡಿದರು ಎಂದರು.

ಶ್ರೀ ಬೇಲಿಮಠ ಮಹಾಸಂಸ್ಥಾನದ ಶ್ರೀ ಚರಮೂರ್ತಿ ಶಿವರುದ್ರಸ್ವಾಮೀಜಿ ಮಾತನಾಡಿ, ಮೂರ್ತಿ ಅವರ ಸಾಧನೆ ಅಮೂರ್ತವಾದುದು, ಧರ್ಮ ಸಂಸತ್, ಶಿಲಾ ಪೂಜನಾ ಇತ್ಯಾದಿ ಕಾರ್ಯಕ್ರಮಗಳಲ್ಲಿ ತನ್ಮಯತೆಯಿಂದ ಕೆಲಸ ಮಾಡಿದವರು ಎಂದು ತಿಳಿಸಿದರು. ಹಿರಿಯ ಪತ್ರಕರ್ತ ದು.ಗು. ಲಕ್ಷ್ಮಣ ಅವರು ಪುಸ್ತಕ ಪರಿಚಯಿಸಿದರು. ವೇದಿಕೆಯಲ್ಲಿ ವಿಶ್ವ ಹಿಂದು ಪರಿಷತ್ ಕರ್ನಾಟಕ ದಕ್ಷಿಣದ ಅಧ್ಯಕ್ಷ ದೀಪಕ್ ರಾಜಗೋಪಾಲ್, ಬಿ.ಎನ್. ಮೂರ್ತಿ ಅವರ ಸಹೋದರಿ ಹಾಗೂ ರಾಷ್ಟ್ರ ಸೇವಿಕಾ ಸಮಿತಿಯ ವಸಂತಾ ಸ್ವಾಮಿ ಉಪಸ್ಥಿತರಿದ್ದರು.

ಇದೇ ವೇಳೆ ಬಿ.ಎನ್. ಮೂರ್ತಿ ಮತ್ತು ಬಿ.ಎನ್. ವಿಜಯಕುಮಾರ್ ಅವರ ಸ್ಮರಣಾರ್ಥ ಸ್ಥಾಪಿಸಲಾಗಿರುವ ಸಮರ್ಪಣೆ ಟ್ರಸ್ಟ್ ಕುರಿತು ಡಾ. ಭರಣಿ ಪರಿಚಯಿಸಿದರು. ವಿಶ್ವ ಹಿಂದು ಪರಿಷತ್ ಕರ್ನಾಟಕ ದಕ್ಷಿಣದ ಕಾರ್ಯದರ್ಶಿ ಬಿ.ಇ. ಸುರೇಶ್ ಸ್ವಾಗತಿಸಿದರು.



ಸ್ಮರಣ ಸಂಚಯ ಧ್ಯೇಯಮೂರ್ತಿ ಪುಸ್ತಕ ಲೋಕಾರ್ಪಣೆ

ಸೌಹಾರ್ದಕ್ಕೆ ಸಾಕ್ಷಿಯಾದ ನಿಡಘಟ್ಟ ಗ್ರಾಮದ ಆಂಜನೇಯ ದೇವಸ್ಥಾನ

5 ದಶಕ ಬಳಿಕ ದಲಿತರು ದೇಗುಲ ಪ್ರವೇಶ

• **ಕಡೂರು:** ತಾಲೂಕಿನ ನಿಡಘಟ್ಟ ಗ್ರಾಮದ ಶ್ರೀಆಂಜನೇಯ ಸ್ವಾಮಿ ದೇವಸ್ಥಾನವು ಸಮಾನತೆ, ಸೌಹಾರ್ದದ ಅಪೂರ್ವ ಘಟನೆಗೆ ಸಾಕ್ಷಿಯಾಯಿತು.

ಐದು ದಶಕಗಳ ನಂತರ ಇದೇ ಮೊದಲ ಬಾರಿಗೆ ದಲಿತ ಸಮುದಾಯದ ಜನರು ಗ್ರಾಮಸ್ಥರೆಲ್ಲರ ಸಹಕಾರದೊಂದಿಗೆ ಯಾವುದೇ ಅಡೆತಡೆಗಳಿಲ್ಲದೆ ಮಂಗಳವಾರ ದೇವಸ್ಥಾನವನ್ನು ಪ್ರವೇಶಿಸಿದರು. ಈ ಮೂಲಕ ನಿಡಘಟ್ಟ ಗ್ರಾಮವು ಇಡೀ ರಾಜ್ಯದಲ್ಲೇ ಶ್ಲಾಘನೆಗೆ ಪಾತ್ರವಾಗಿದೆ.ಇಲ್ಲಿ ಮಹಾತ್ಮ ಗಾಂಧೀಜಿಗೆ ಗುಡಿ ನಿರ್ಮಿಸಿ ಪೂಜಿಸಲಾಗುತ್ತದೆ. ಈ ಕಾರಣಕ್ಕೆ ಪ್ರಸಿದ್ಧಿಯಾಗಿರುವ ಗ್ರಾಮದಲ್ಲಿ ಮೂಢನಂಬಿಕೆ ಕಾರಣಕ್ಕೆ ದಶಕಗಳಿಂದಲೂ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ದಲಿತರಿಗೆ ಪ್ರವೇಶಾವಕಾಶವಿರಲಿಲ್ಲ. ಬದಲಾದ ಕಾಲಮಾನದಲ್ಲಿ ದಲಿತರಿಗೂ ಪ್ರವೇಶಾವಕಾಶ ನೀಡಬೇಕೆಂಬ ಮನವಿಯನ್ನು ಗ್ರಾಮದ ದಲಿತ ಮುಖಂಡರು ತಹಸೀಲ್ದಾರ್ ಸಿ.ಎಸ್. ಪೂರ್ಣಿಮಾ ಅವರಿಗೆ ಸಲ್ಲಿಸಿದ್ದರು.

ಈ ಹಿನ್ನೆಲೆ ತಹಸೀಲ್ದಾರ್ ನೇತೃತ್ವದಲ್ಲಿ ದೇವಸ್ಥಾನದ ಆಡಳಿತ ಮಂಡಳಿ ಒಳಗೊಂಡಂತೆ ದಲಿತ ಮುಖಂಡರನ್ನೊಳಗೊಂಡ ಸೌಹಾರ್ದ ಸಭೆ ತಾಲೂಕು ಕಚೇರಿಯಲ್ಲಿ ನಡೆಯಿತು. ಸಭೆಯಲ್ಲಿ ದಲಿತರ ಬೇಡಿಕೆಗೆ ಎಲ್ಲರಿಂದಲೂ ಸಕಾರಾತ್ಮಕ ಸ್ಪಂದನೆ ವ್ಯಕ್ತವಾಯಿತು.

ಇದರ ಫಲವಾಗಿ ಮಂಗಳವಾರ ದೇವಾಲಯದ ಪ್ರಾಂಗಣದ ಬಳಿ ಸೇರಿದ ಗ್ರಾಮದ ದಲಿತರು ಅಧಿಕಾರಿಗಳ ಸಮ್ಮುಖದಲ್ಲಿ ದೇವಾಲಯವನ್ನು ಪ್ರವೇಶಿಸಿ ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು. ಈ ವೇಳೆ ತಹಸೀಲ್ದಾರ್ ಸಿ.ಎಸ್. ಪೂರ್ಣಿಮಾ, ತಾಪಂ ಇಒ ಸಿ.ಆರ್. ಪ್ರವೀಣ್, ಸಮಾಜ ಕಲ್ಯಾಣಾಧಿಕಾರಿ ನಟರಾಜ್, ಡಿವೈಎಸ್ಪಿ ಪರಶುರಾಮಪ್ಪ, ಸಿಪಿಐ ರಫೀಕ್ ನೇತೃತ್ವದ ಪೊಲೀಸ್ ಸಿಬ್ಬಂದಿ, ಕಂದಾಯ ವಿಭಾಗದ ಅಧಿಕಾರಿಗಳು ಮತ್ತು ದಲಿತ ಸಂಘಟನೆಯ ಮುಖಂಡರು ಹಾಗೂ ಗ್ರಾಮಸ್ಥರು ಇದ್ದರು. ತಹಸೀಲ್ದಾರ್ ಸಿ.ಎಸ್.ಪೂರ್ಣಿಮಾ ಮಾತನಾಡಿ, ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದಲ್ಲಿ ಪ್ರತೀ ದೇಶವಾಸಿಗಳು ಸಮಾನರು ಎಂಬ ಅಂಶ ಅಡಕವಾಗಿದೆ. ಈ ನಿಟ್ಟಿನಲ್ಲಿ ಗ್ರಾಮದಲ್ಲಿ ಸಹಬಾಳ್ವೆಯ ಬದುಕಿನೊಂದಿಗೆ ಒಗ್ಗಟ್ಟು ಕಾಪಾಡಿಕೊಳ್ಳಬೇಕಿದೆ ಎಂಬುದು ನಮ್ಮ ಆಶಯವಾಗಿದೆ ಎಂದರು.



> **ದಲಿತರಿಗೆ ದೇವಾಲಯದಲ್ಲಿ ಪ್ರವೇಶವಿಲ್ಲ ಎಂಬುದರ ಬಗ್ಗೆ ಬೇಸರ ತಂದಿತ್ತು. ಆದರೆ ಅಂಬೇಡ್ಕರ್ ಸಮಾನತೆ ಆಂಶದಲ್ಲಿ ಇಲ್ಲಿನ ಯುವಕರು ಗ್ರಾಮದ ಹಿರಿಯರ ಸಮ್ಮುಖದಲ್ಲಿ ದೇವಾಲಯ ಪ್ರವೇಶ ಮಾಡಿದ್ದು ಸಂತಸ ತಂದಿದೆ. ಜಾತಿಯತೆಯನ್ನು ಮುಕ್ತಗೊಳಿಸಿದೆ.**
> ■ ಕೂದ್ರ ಶ್ರೀನಿವಾಸ್, ಕರ್ನಾಟಕ ಬ್ಲೂ ಆರ್ಮಿ ಸಂಘಟನೆ ರಾಜ್ಯಾಧ್ಯಕ್ಷ

6ನೇ ಸೆಮಿಸ್ಟರ್ ಬಿಇ, ಬಿ.ಟೆಕ್ ಪರೀಕ್ಷೆ | ಹೊಸ ಇತಿಹಾಸ ನಿರ್ಮಿಸಿದ ವಿಟಿಯು

ಪರೀಕ್ಷೆ ಮುಗಿದ 5 ನಿಮಿಷಗಳಲ್ಲೇ ಫಲಿತಾಂಶ

• **ಬೆಂಗಳೂರು:** ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಪರೀಕ್ಷಾ ವ್ಯವಸ್ಥೆಯಲ್ಲಿ ಮತ್ತೊಂದು ಅಪರೂಪದ ಸಾಧನೆ ಮಾಡಿದ್ದು, 6ನೇ ಸೆಮಿಸ್ಟರ್ ಬಿಇ ಮತ್ತು ಬಿ.ಟೆಕ್ ಪರೀಕ್ಷೆ ಮುಗಿದ ಕೇವಲ ಐದು ನಿಮಿಷಗಳಲ್ಲೇ ಫಲಿತಾಂಶ ಪ್ರಕಟಿಸುವ ಮೂಲಕ ಹೊಸ ಇತಿಹಾಸ ನಿರ್ಮಿಸಿದೆ.



ಪರೀಕ್ಷೆ ಅಂತ್ಯಗೊಂಡ ಕೆಲವೇ ನಿಮಿಷಗಳಲ್ಲಿ ಫಲಿತಾಂಶ ಪ್ರಕಟಿಸಿರುವುದು ದೇಶದ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲೇ ಅಪರೂಪದ ಸಾಧನೆಯಾಗಿ ಪರಿಗಣಿಸಲಾಗಿದೆ.

ಮಂಗಳವಾರ ಸಂಜೆ 5.30ಕ್ಕೆ 6ನೇ ಸೆಮಿಸ್ಟರ್ ಪರೀಕ್ಷೆ ಮುಕ್ತಾಯಗೊಂಡಿದ್ದು, ಸಂಜೆ 5.35ಕ್ಕೆ ಫಲಿತಾಂಶವನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಯಿತು. ವಿಟಿಯು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ಕುಲಸಚಿವ (ಮೌಲ್ಯಮಾಪನ) ಪ್ರೊ.ಯು.ಜೆ. ಉಜ್ವಲ್ ಹಾಗೂ ಕುಲಸಚಿವ ಡಾ. ಪ್ರಸಾದ್ ಬಿ. ರಾಂಪುರೆ ಅವರು ಜಂಟಿಯಾಗಿ ಫಲಿತಾಂಶ ಪ್ರಕಟಿಸಿದರು.

ಈ ಬಾರಿ 6ನೇ ಸೆಮಿಸ್ಟರ್ ಪರೀಕ್ಷೆಗೆ ಒಟ್ಟು 60,856 ವಿದ್ಯಾರ್ಥಿಗಳು ಹಾಜರಾಗಿದ್ದು, ಶೇ.76.84ರಷ್ಟು ಫಲಿತಾಂಶ ದಾಖಲಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಮೌಲ್ಯಮಾಪನ ಪ್ರಕ್ರಿಯೆಯನ್ನು 21 ದಿನಗಳ ಮುಂಚಿತವಾಗಿಯೇ ಪೂರ್ಣಗೊಳಿಸಿದೆ.

ಫಲಿತಾಂಶ ಪ್ರಕಟಿಸಿದ ಬಳಿಕ ಮಾತನಾಡಿದ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ಪರೀಕ್ಷೆ ಬರೆದ ವಿದ್ಯಾರ್ಥಿಗಳು ಫಲಿತಾಂಶಕ್ಕಾಗಿ ಹೆಚ್ಚಿನ ನಿರೀಕ್ಷೆಯಿಂದ ಕಾಯುತ್ತಾರೆ. ಆ ನಿರೀಕ್ಷೆಯನ್ನು ಸಾಧ್ಯವಾದಷ್ಟು ಬೇಗ ಈಡೇರಿಸುವ ಉದ್ದೇಶದಿಂದಲೇ ಪೂರ್ವಸಿದ್ಧತೆ ಮಾಡಿಕೊಂಡು ಕಾರ್ಯನಿರ್ವಹಿಸಿದ್ದೇವೆ. ಅದರ ಫಲವಾಗಿ ಪರೀಕ್ಷೆ ಮುಗಿದ ಕೇವಲ ಐದು ನಿಮಿಷಗಳಲ್ಲೇ ಫಲಿತಾಂಶ ಪ್ರಕಟಿಸಲು ಸಾಧ್ಯವಾಗಿದೆ ಎಂದರು. 6ನೇ ಸೆಮಿಸ್ಟರ್ ಫಲಿತಾಂಶ ಪ್ರಕಟಣೆಯ ಇತಿಹಾಸವನ್ನು ಗಮನಿಸಿದರೆ, 2024-25ನೇ ಸಾಲಿನಲ್ಲಿ 58,232 ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲು 10 ದಿನಗಳು ಬೇಕಾಗಿತ್ತು. 2023-24ರಲ್ಲಿ 49,997 ವಿದ್ಯಾರ್ಥಿಗಳ ಫಲಿತಾಂಶವನ್ನು 11 ದಿನಗಳಲ್ಲಿ ಪ್ರಕಟಿಸಲಾಗಿತ್ತು. 2022-23ರಲ್ಲಿ 41,835 ವಿದ್ಯಾರ್ಥಿಗಳ ಫಲಿತಾಂಶವನ್ನು 10 ದಿನಗಳಲ್ಲಿ ಪ್ರಕಟಿಸಲಾಗಿತ್ತು. ಆದರೆ ಈಗ ಕೇವಲ ಐದು ನಿಮಿಷಗಳಲ್ಲಿ 60,856 ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸುವ ಮೂಲಕ ವಿಟಿಯು ತನ್ನದೇ ದಾಖಲೆಯನ್ನು ಮುರಿದು ಹೊಸ ಮೈಲಿಗಲ್ಲು ಸ್ಥಾಪಿಸಿದೆ.

ಫಲಿತಾಂಶ ಪ್ರಕಟದ ಇತಿಹಾಸ

ವಿಟಿಯು ಕಳೆದ ಕೆಲವು ವರ್ಷಗಳಿಂದ ಪರೀಕ್ಷಾ ಫಲಿತಾಂಶ ಪ್ರಕಟಣೆಯಲ್ಲಿ ನಿರಂತರವಾಗಿ ಹೊಸ ದಾಖಲೆಗಳನ್ನು ನಿರ್ಮಿಸುತ್ತಿದೆ. 2026ರಲ್ಲಿ ಅಂತಿಮ ವರ್ಷದ ಸುಮಾರು 56 ಸಾವಿರ ವಿದ್ಯಾರ್ಥಿಗಳ ಫಲಿತಾಂಶವನ್ನು ಪರೀಕ್ಷೆ ಮುಗಿದ 10 ನಿಮಿಷಗಳಲ್ಲಿ ಪ್ರಕಟಿಸಿ ದೇಶದ ಗಮನ ಸೆಳೆದಿತ್ತು. ಅದಕ್ಕೂ ಮುನ್ನ 2025ರಲ್ಲಿ 50,321 ವಿದ್ಯಾರ್ಥಿಗಳ ಫಲಿತಾಂಶವನ್ನು ಕೇವಲ ಒಂದು ಗಂಟೆಯೊಳಗೆ ಪ್ರಕಟಿಸಲಾಗಿತ್ತು.

ಸಂಪಾದಕೀಯ

ಮತದಾನದ ಹಕ್ಕು ಗಟ್ಟಿಗೊಳಿಸಿಕೊಳ್ಳೋಣ

ನಿನ್ನೆಯಿಂದ ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಆರಂಭವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಆದರಲ್ಲೂ ಮತದಾನ ಪ್ರಕ್ರಿಯೆಗಳಲ್ಲಿ ಪರಿಶುದ್ಧತೆಯನ್ನು ತರಲು ಇವು ಕಾಲಕಾಲಕ್ಕೆ ಆಗಬೇಕಾದದ್ದು. ಹಾಗಾಗಿ ಇದು ಅತ್ಯಂತ ಸಹಜವಾದ ಪ್ರಕ್ರಿಯೆ. ಹೇಗೆ ದೇಹಕ್ಕೆ ದಿನನಿತ್ಯ ಸ್ನಾನಾದಿ ಶೌಚ ಕರ್ಮಗಳು ಅಗತ್ಯವೋ ಹಾಗೆ. ಬೃಹತ್ ಜನಸಂಖ್ಯೆಯಿರುವ ಭಾರತದಂಥ ದೇಶದಲ್ಲಿ ಪರಿಸ್ಥಿತಿಗಳು ಕ್ಷಣಕ್ಷಣಕ್ಕೂ ಬದಲಾಗುತ್ತಿರುತ್ತವೆ. ಅಂಥಲ್ಲಿ ಅನೇಕ ತಾಂತ್ರಿಕ ಗೊಂದಲಗಳು ಕಂಡುಬರುವುದು ಕೂಡ ಸಾಮಾನ್ಯ. ಹೀಗೆ ಕೆಲವು ಅಚಾತುರ್ಯಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ದೇಶಾದ್ಯಂತ ಎಸ್‌ಐಆರ್ ಅನ್ನು ಆರಂಭಿಸಲಾಗಿದೆ. ಅನೇಕ ರಾಜ್ಯಗಳಲ್ಲಿ ಯಶಸ್ವಿಯಾಗಿ ಮತದಾನದಲ್ಲಿ ಪರಿಶುದ್ಧತೆ ಕಂಡುಬಂದಿದೆ. ಅಂದರೆ ಜಾಲರಿ ಹಿಡಿದು ಸೋಸಿದ್ದರ ಪರಿಣಾಮ ಮತದಾನದ ಶೇಕಡಾವಾರು ಪ್ರಮಾಣದಲ್ಲಿ ಏರಿಕೆಯಾಗಿದೆ. ಇದೀಗ ಕರ್ನಾಟಕದಲ್ಲೂ ಜಾರಿಯಾಗುತ್ತಿದೆ. ಆದ್ದರಿಂದ ಇದೊಂದು ಸ್ವಾಗತಾರ್ಹವಾದ ವಿಧಿವಿಧಾನ.

ಇಂಥ ನೇರ, ನಿಷ್ಠೆಯ ಹಾಗು ಪ್ರಜಾಪ್ರಭುತ್ವಕ್ಕೆ ಮತ್ತಷ್ಟು ಶಕ್ತಿಯನ್ನು ತುಂಬುವ ಕಾರ್ಯಕ್ರಮವನ್ನು ರಾಜಕೀಯ ಕಾರಣಗಳಿಗಾಗಿ ಟೀಕಿಸುತ್ತಿರುವುದು ಅತ್ಯಂತ ವಿಷಾದನೀಯ. ಮುಖ್ಯವಾಗಿ ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಇದನ್ನು ಬಿಜೆಪಿಯ ಹುನ್ನಾರ, ಬಿಜೆಪಿಯು ಚುನಾವಣಾ ಆಯೋಗವನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡಿದೆ ಎಂದು ಅವಲತ್ತುಕೊಳ್ಳುತ್ತಿದೆ. ಹೀಗೆ ಹೇಳುವ ಕಾಂಗ್ರೆಸ್ ಪದಾಧಿಕಾರಿಗಳೇನೂ ಶತದಡ್ಡರಲ್ಲ. ಏಕೆಂದರೆ ಎಂಥ ಶತದಡ್ಡನಾದರೂ ಹಾಗೆ ಹೇಳಲು ಸಾಧ್ಯವಿಲ್ಲ. ಆದರೆ ಅವರು ಜನರನ್ನು ದಡ್ಡರನ್ನಾಗಿಸಲು ತಾವು ದಡ್ಡರಾದವರಂತೆ ಮುಖವಾಡ ಹೊದ್ದು ಬಂದಿದ್ದಾರೆ. ಎಸ್‌ಐಆರ್ ಮತದಾನದಲ್ಲಿ ನಿಖರತೆಯನ್ನು ತರಲು ಉದ್ದೇಶಿತವಾದ ಯೋಜನೆಯೇ ಹೊರತು ಬಿಜೆಪಿಗಾಗಿ ಮಾಡಿದ್ದಲ್ಲ. ಏಕೆಂದರೆ ಮನೆಮನೆಗೆ ಬರುವ ಅಧಿಕಾರಿಗಳು ಮತದಾರರನ್ನು 'ಯಾವ ಪಕ್ಷದ ಮತದಾರರು?' ಎಂದು ಕೇಳುವುದಿಲ್ಲ. ಕೇಳಲು ಸಾಧ್ಯವೂ ಇಲ್ಲ. ತಮ್ಮ ಮತಚೀಟಿಯಲ್ಲಿ ಎಲ್ಲವೂ ಪಕ್ವವಾಗಿದೆಯೇ? ಬೇರೆಬೇರೆ ಕಾರಣಗಳಿಂದ ಬೇರೆ ಕಡೆಗಳಲ್ಲಿ ಮತಚೀಟಿ ಮಾಡಿಸಿಕೊಂಡಿದ್ದಿದೆಯೇ ಎಂದು ಕೇಳುವುದು ಅಪರಾಧವಲ್ಲ. ಅಷ್ಟಕ್ಕೂ ರಾಜ್ಯಾದ್ಯಂತ ಮನೆಮನೆಗೆ ತೆರಳುವ ಅಧಿಕಾರಿಗಳಿಗೆ ಕೇವಲ ಬಿಜೆಪಿಯವರ ಹೆಸರನ್ನು ಮಾತ್ರ ಉಳಿಸಿಕೊಂಡು ಕಾಂಗ್ರೆಸಿಗರನ್ನು ಪಟ್ಟಿಯಿಂದ ಅಳಿಸಿಹಾಕಲೂ ಸಾಧ್ಯವಿಲ್ಲ. ಜೊತೆಗೆ ಅಕ್ರಮ ವಲಸಿಗರು ಮತದಾರರ ಪಟ್ಟಿಯಲ್ಲಿ ಸೇರಿರುವ ಗುಮಾನಿ ಅನೇಕ ರಾಜ್ಯಗಳಲ್ಲಿವೆ. ಹೀಗೆ ಅನೇಕ ರಾಜ್ಯಗಳಲ್ಲಿ ಅಭಿವೃದ್ಧಿಗೆ ಕಂಟಕರಾಗಿದ್ದ ಅಕ್ರಮ ವಲಸಿಗರನ್ನು ಎಸ್‌ಐಆರ್ ಪತ್ತೆ ಹಚ್ಚಿದೆ. ಭದ್ರತೆಯ ದೃಷ್ಟಿಯಿಂದಲೂ ಇದು ಅತ್ಯುತ್ತಮ ಕ್ರಮ. ಅಕ್ರಮ ವಲಸಿಗರು ಪತ್ತೆಯಾದರೆ ಕಾಂಗ್ರೆಸ್ ಯಾಕೆ ಆತಂಕಪಟ್ಟುಕೊಳ್ಳಬೇಕು? ಬೀದಿಗಳನ್ನು ಗುಡಿಸುವುದನ್ನು, ಮನೆ ಗುಡಿಸಿ ಸಾರಿಸುವುದನ್ನು, ರಸ್ತೆಯಲ್ಲಿ ಬಿದ್ದ ಮರದ ಕೊಂಬೆಯನ್ನು ಬದಿಗೆ ಸರಿಸುವುದನ್ನು ಯಾರಾದರೂ ಕೂಡದು ಎಂದರೆ ಹೇಗೆ? ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕೂಡ ಅದೇ ರೀತಿ ಸರಿಪಡಿಸುವ ಕ್ರಮ. ಟೀಕಾಕಾರರು ಟೀಕಿಸುತ್ತಿರಲಿ, ಮನೆಗೆ ಬಂದ ಅಧಿಕಾರಿಗಳಿಗೆ ಅಗತ್ಯ ಮಾಹಿತಿಗಳನ್ನು ನೀಡಿ ನಮ್ಮ ಮತದ ಹಕ್ಕನ್ನು ಗಟ್ಟಿಗೊಳಿಸಿಕೊಳ್ಳೋಣ.

ಕಾಲನ ಚೆಲ್ಲಾಟ

ಅದ್ಯೈವ ಹಸಿತಂ ಗೀತಂ ಕ್ರೀಡಿತಂ ಯೈಃ ಶರೀರಿಭಾಃ ।
ಅದ್ಯೈವ ತೇ ನ ದೃಶ್ಯಂತೇ ಪಶ್ಯ ಕಾಲಸ್ಯ ಚೇಷ್ಟಿತಮ್ ॥ -ವೇತಾಲ ಪಂಚವಿಂಶತಿ

ಈಗ ತಾನೆ ನಕ್ಕಿದ್ದರು, ಹಾಡಿದ್ದರು, ಆಡಿದ್ದರು. ಆದರೆ ಈಗ ಅವರು ಕಾಣಿಸುವುದೇ ಇಲ್ಲವಲ್ಲ. ಆಹಾ! ಕಾಲನ ಚೆಲ್ಲಾಟವನ್ನು ನೋಡು– ಎಂಬುದು ಶ್ಲೋಕಾರ್ಥ.

'ಅನಿತ್ಯಾನಿ ಶರೀರಾಣಿ' ಎಂಬ ಸುಭಾಷಿತವಿದೆ. ಶರೀರವೆಂದೂ ಶಾಶ್ವತವಲ್ಲ ಎಂಬುದು ಇದರ ಅರ್ಥ. ಶಾಶ್ವತವಾದ ಆತ್ಮ ಅಶಾಶ್ವತವಾದ ಶರೀರವನ್ನು ಆಶ್ರಯಿಸಿದ್ದಾನೆ. ಶರೀರವನ್ನು ಯಾವಾಗಬೇಕಾದರೂ ಆತ್ಮ ಬಿಟ್ಟು ತೆರಳಬಹುದು. ತನ್ನ ಉದ್ದೇಶ ಪೂರ್ತಿಯಾದಾಗ ಶರೀರವನ್ನು ಬಿಟ್ಟು ತೆರಳುತ್ತಾನೆ. ಆಗ ಕೆಲವರು ಅಳುತ್ತಾರೆ. ಇನ್ನು ಕೆಲವರು ವ್ಯಥೆ ಪಡುತ್ತಾರೆ. ಆದರೆ ಭವಬಂಧನದ ಮುಕ್ತಿಯನ್ನು ಪಡೆದ ಆತ್ಮ ನಗುತ್ತಾ ತೆರಳುತ್ತಾನೆ. ಇದು ಕಾಲದ ನಿಯಮ. ಶರೀರವೆಂಬ ಬಾಡಿಗೆಯ ಮನೆಯಲ್ಲಿದ್ದ ಆತ್ಮ ತನ್ನ ಸಮಯ ಮುಗಿದಾಗ ತೆರಳುತ್ತಾನೆ. ಇದನ್ನೇ ಕವಿ 'ಈ ಜಗವೆಲ್ಲವೂ ಬಾಡಿಗೆ ಮಂದಿರ ಬಾಡಿಗೆದಾರರು ನಾವೆಲ್ಲ, ಬಾಡಿಗೆ ಮುಗಿಯಲು ಕ್ಷಣಶಃ ಇರಗೊಡ ಹೊರದೂಡುವ ತಾ ಇಲ್ಲಿಂದ' ಎಂದಿದ್ದಾನೆ.

ಇದು ಜಗದಗಲ ನಿತ್ಯ ನಡೆಯುವ ನಾಟಕ. ಜೀವನ ಆಟ. ಇದನ್ನೇ ಕವಿ ಈ ಶ್ಲೋಕದಲ್ಲಿ ಹೇಳಹೊರಟಿದ್ದಾನೆ. ಅನೇಕರು ಆಡುವುದನ್ನು ನಾವೇ ಕೇಳಿದ್ದೇವೆ. ಕೆಲವೊಮ್ಮೆ ನಾವೇ ಆಡಿದ್ದೇವೆ.'ಅವರು ಸ್ವಲ್ಪ ಸಮಯದ ಹಿಂದೆ ನಕ್ಕಿದ್ದರು, ನಗುನಗುತ್ತಾ ಮಾತನಾಡಿದ್ದರು. ಈಗ ಅವರಿಲ್ಲ ಎಂಬುದು ನಂಬುವುದಕ್ಕಾಗುವುದಿಲ್ಲ' ಎಂಬುದಾಗಿ. "ನಾನು ಇತ್ತೀಚೆಗಷ್ಟೇ ಕೇಳಿದ್ದೆ. ಎಷ್ಟು ಚೆನ್ನಾಗಿ ಹಾಡಿ ಜನರನ್ನು ರಂಜಿಸಿದ್ದರು. ಈಗ ಅವರಿಲ್ಲ ಎಂಬ ಮಾತನ್ನು ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ" ಎಂದು ಹೇಳುವುದನ್ನೂ ಕೇಳಿದ್ದೇವೆ. "ನನ್ನೊಂದಿಗೆ ಎಷ್ಟು ಚೆನ್ನಾಗಿ ಮಾತನಾಡಿದ್ದರು. ತಮ್ಮ ಯೋಚನೆ, ಯೋಜನೆಗಳನ್ನೆಲ್ಲಾ ಹಂಚಿಕೊಂಡಿದ್ದರು. ತುಂಬಾ ಚೆನ್ನಾಗಿಯೇ ಇದ್ದರು. ಆದರೆ ಅವರಿಂದಿಲ್ಲ ಎನ್ನುವುದನ್ನು ಊಹಿಸಿಕೊಳ್ಳುವುದು ಕಷ್ಟ" ಎನ್ನುತ್ತೇವೆ.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಇವೆಲ್ಲವೂ ಕಾಲದ ಮಹಿಮೆ. ಮೃತ್ಯುವಿನ ಆಟ. ಇಲ್ಲಿ ಯಾರೂ ಶಾಶ್ವತರಲ್ಲ. ಒಂದಂತೂ ಸತ್ಯ. ಸಾಯುವವನನ್ನು ಬದುಕಿಸಲು ಸಾಧ್ಯವಿಲ್ಲ. ಆಯುಷ್ಯ ಇರುವವನನ್ನು ಕೊಲ್ಲಲು ಆಗುವುದಿಲ್ಲ. ಎಲ್ಲವೂ ವಿಧಿ ನಿಯಮದಂತೆ ಸಾಗುತ್ತದೆ.

ಯಾವುದೇ ರೋಗವಿಲ್ಲದ ಗಟ್ಟಿಮುಟ್ಟಾದ ವ್ಯಕ್ತಿ ಆಕಸ್ಮಿಕ ಮರಣಕ್ಕೆ ತುತ್ತಾಗುತ್ತಾನೆ. ಹಾಸಿಗೆಯಲ್ಲಿ ನರಳಿ ಸಾವು ಬರಲೆಂದು ಬಯಸುವವನು ಸಾಯುವುದೇ ಇಲ್ಲ. ಹಣ್ಣು ಹಣ್ಣು ಮುದುಕರು ಮನೆಯಲ್ಲಿರುವಾಗ ತರುಣರೂ, ಬಾಲಕರೂ ಸಾವನ್ನಪ್ಪುತ್ತಾರೆ. ಊಹಿಸದಿರುವುದು ಸಂಭವಿಸುತ್ತದೆ. ಇದನ್ನೇ ಕಾಲನ ಚೆಲ್ಲಾಟ ಎನ್ನುವುದು. ಸಾವು ಯಾವಾಗ ಸಂಭವಿಸುತ್ತದೆ ಎಂಬುದನ್ನು ಅರಿತವರಿಲ್ಲ. ಯಾರು ಎಷ್ಟು ಕಾಲ ಬದುಕುತ್ತಾರೆ ಎಂಬುದನ್ನು ಹೇಳುವವರೂ ಇಲ್ಲ. ಎಲ್ಲವೂ ವಿಧಿನಿಯಮದಂತೆ ನಡೆಯುತ್ತದೆ. ಯಾರೊಬ್ಬರೂ ಈ ನಿಯಮಕ್ಕೆ ಹೊರತಲ್ಲ. 'ಜಾತಸ್ಯ ಮರಣಂ ಧ್ರುವಮ್' ಹುಟ್ಟಿದವರಿಗೆ ಸಾವು ಕಟ್ಟಿಟ್ಟದ್ದು. ಹೀಗಿರುವಾಗ ಬದುಕನ್ನು ಧೈರ್ಯದಿಂದ ನಿರ್ವಹಿಸುವುದನ್ನು ಕಲಿಯಬೇಕು. ಎಷ್ಟು ದಿನ ಬದುಕಿದ್ದೇವೆ ಎಂಬುದು ಮುಖ್ಯವಲ್ಲ. ಹೇಗೆ ಬದುಕಿದ್ದೇವೆ ಎಂಬುದು ಮುಖ್ಯವೆನಿಸುತ್ತದೆ. ಎಷ್ಟು ಗಳಿಸಿದ್ದೇವೆ ಎಂಬುದು ಲೆಕ್ಕಕ್ಕೆ ಬರುವುದಿಲ್ಲ. ಗಳಿಕೆಯಲ್ಲಿ ಎಷ್ಟು ಭಾಗವನ್ನು ಲೋಕ ಹಿತದ ಕಾರ್ಯಕ್ಕಾಗಿ ಬಳಸಿದ್ದೇವೆ ಎಂಬುದು ಮುಖ್ಯವಾಗುತ್ತದೆ.ನಿತ್ಯವೂ ಕಾಲನ ಆಟ ಸಾಗಿರುವುದರಿಂದ ಸಾಧ್ಯವಾದಷ್ಟು ಒಳ್ಳೆಯ ಕೆಲಸ ಮಾಡಿ ಹೆಸರನ್ನು ಗಳಿಸಬೇಕು. ಸಮಾಜ ನೆನೆಯುವುದು ಎಷ್ಟರ ಮಟ್ಟಿಗೆ ಲೋಕ ಹಿತದ ಕಾಯಕ ಮಾಡಿದ್ದಾನೆ ಎಂಬ ಹಿನ್ನೆಲೆಯಿಂದ. ಇವನು ಇನ್ನೂ ಇರಬೇಕಿತ್ತು. ಕಾಲನು ಬೇಗನೆ ಕೊಂಡೊಯ್ದು ಲೋಕಕ್ಕೆ ನಷ್ಟ ಮಾಡಿದ ಎಂದು ಜನರು ಆಡಿಕೊಳ್ಳುವಂತಾದರೆ ಅವನ ಬದುಕು ಅರ್ಥಪೂರ್ಣ.

ಪಠ್ಯದಲ್ಲಿರುವ ಮೌಲ್ಯ ಜೀವನದಲ್ಲಿಲ್ಲ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
vakradanta@gmail.com

ವಿಷ್ಣು ಪುರಾಣದಲ್ಲಿ ಹೇಳಿರುವ ಪ್ರಕಾರ ಕಲಿಯುಗದಲ್ಲಿ ನೈತಿಕ ಅಧಃಪತನ, ಅಧರ್ಮದ ನಡವಳಿಕೆಗಳು ಉಚ್ಛ್ರಾಯ ಸ್ಥಿತಿ ತಲುಪುತ್ತವೆ. ಬಹುಶಃ ನಾವೆಲ್ಲ ಅದಕ್ಕೆ ಸಾಕ್ಷಿಯಾಗುತ್ತಿದ್ದೇವೆ. ಇತ್ತೀಚಿನ ಘಟನೆಗಳು ಅದಕ್ಕೆ ಪಕ್ಕಾ ಸಾಕ್ಷಿ ಒದಗಿಸುತ್ತಿವೆ.

ತುಂಬಾ ಪ್ರಚಾರ ಗಳಿಸಿದ್ದು ಮಹಾರಾಷ್ಟ್ರದ ಪುಣೆಯ ಕೇತನ್ ಅಗರವಾಲ್ ಪ್ರಕರಣ. ಕ್ಷುಲ್ಲಕ ಕಾರಣಕ್ಕೆ ಒಬ್ಬ ವ್ಯಕ್ತಿಯಿಂದ ಬೆಟ್ಟದ ಮೇಲಿನಿಂದ ದೂಡಿ ಕೊಲ್ಲಲಾಗುತ್ತದೆ ಮತ್ತು ಮನೆಯಲ್ಲಿ ಆತನ ಜತೆ ಮದುವೆ ಬೇಡ ಎಂದು ಹೇಳುವುದಕ್ಕಿಂತ ಆತನನ್ನು ದೂಡುವುದೆ ಸುಲಭ ಎಂದು ಆಕೆ ಹೇಳಿರುವುದನ್ನು ಗಮನಿಸಿದರೆ ಆಕೆಯ ಮನಸ್ಥಿತಿ ಅರ್ಥವಾಗುತ್ತದೆ. ಇಷ್ಟಕ್ಕೂ 26 ವರ್ಷದ ಕೇತನ್ ಅಗರವಾಲ್ ಮಾಡಿದ ತಪ್ಪೇನು? ಮನೆಯವರು ನಿಶ್ಚಯಿಸಿದ ಹುಡುಗಿಯನ್ನು ಒಪ್ಪಿಕೊಂಡಿದ್ದಷ್ಟೇ ಆತನ ತಪ್ಪು. ಸಿಯಾ ಗೋಯಲ್ ಪ್ರೀತಿಯ ವಿಷಯವನ್ನು ಆತನ ಬಳಿ ಹೇಳಿದ್ದರೆ ಆತನೇ ಮದುವೆ ಬೇಡ ಎಂದು ಹೇಳುತ್ತಿದ್ದನೇನೊ. ಆತನ ಬಳಿ ಅಥವಾ ಮನೆಯವರ ಬಳಿ ಹೇಳುವುದಕ್ಕಿಂತ ಯಾವ ತಪ್ಪೂ ಮಾಡದ ಆತನನ್ನು ಗುಡ್ಡದ ಮೇಲಿಂದ ತಳ್ಳಿಬಿಡುವುದೇ ಆಕೆಗೆ ಸುಲಭ ಅನ್ನಿಸಿಬಿಟ್ಟರೆ ಅದಕ್ಕೆ ಏನನ್ನೋಣ. ಇಷ್ಟಕ್ಕೂ ಆತನನ್ನು ದೂಡಿ ಹಾಕಿದರೆ ಆಕೆಯ ಸಮಸ್ಯೆ ಪರಿಹಾರವಾಯಿತು ಎಂದೇನಿಲ್ಲ. ಯಾಕೆಂದರೆ ಆತನಲ್ಲದಿದ್ದರೆ ಮನೆಯವರು ಇನ್ನೊಬ್ಬನನ್ನು ಹುಡುಕಿ ಮದುವೆ ಮಾಡಿಸಬಹುದು. ಯಾಕೆಂದರೆ ಮನೆಯವರು ಈಕೆಯ ಪಠ್ಯೇತರ ಚಟುವಟಿಕೆಗಳ ಅರಿವಿದ್ದೇ ಇಷ್ಟು ಬೇಗ ಮದುವೆ ನಿಶ್ಚಯ ಮಾಡಿದ್ದರು.

ಇನ್ನೊಂದು ಪ್ರಕರಣ ನಮ್ಮದೇ ರಾಜ್ಯದ ತುಮಕೂರಿನಲ್ಲಿ ಸಂಭವಿಸಿದ್ದು. ಪ್ರೀತಿಸಿದ ಹುಡುಗಿ ಮದುವೆಗೆ ಒಪ್ಪುತ್ತಿಲ್ಲ ಎಂಬ ಕಾರಣಕ್ಕೆ ನಾಗೇಂದ್ರ ಗೌಡ ಎಂಬಾತ ಹುಡುಗಿಗೆ ಚೂರಿಯಿಂದ ಇರಿದಿದ್ದಲ್ಲದೆ, ತಾನು ಕುಳಿತ ಕಾರಿನಲ್ಲೇ ಕಚ್ಚಾ ಬಾಂಬ್ ಸ್ಫೋಟಿಸಿ ಕಾರಿನ ಸಹಿತ ಸುಟ್ಟು ಹೋಗಿದ್ದಾನೆ. ಆಕಸ್ಮಾತ್ ಹುಡುಗಿ ಒಪ್ಪಲಿಲ್ಲವೆಂದರೆ ಅವಳನ್ನೂ ಕೊಂದು ತಾನೂ ಸಾಯುತ್ತೇನೆ ಎಂಬ ಹಠದಿಂದ ಆತ ಸಾಧಿಸಿದ್ದಾದರೂ ಏನು? ಮನವೊಲಿಸಲು ಪ್ರಯತ್ನಿಸಬಹುದಿತ್ತು. ಅದಕ್ಕೂ ಆಕೆ ಒಪ್ಪದಿದ್ದರೆ ಅವಳಿಗೂ ಇವನಿಗೂ ಇನ್ನೊಂದು ಜೀವದೊಂದಿಗೆ ಜೀವನ ಮುಂದುವರಿಸುವ ಅವಕಾಶ, ಸಾಧ್ಯತೆಗಳಿದ್ದವು. ಇಂದಿನ ಕಾಲದಲ್ಲಿ 15–20 ವರ್ಷ ಒಟ್ಟಿಗೆ ಸಂಸಾರ ಮಾಡಿದವರೇ ನಂತರ ವಿಚ್ಛೇದನ ಪಡೆದುಕೊಳ್ಳುತ್ತಿದ್ದಾರೆ. ಹೀಗಿರುವಾಗ ಇನ್ನೂ ಮದುವೆಯೇ ಆಗದವರು ದೂರಾದರೆ ಅದೊಂದು ಸಾಯುಷ್ಟು ದೊಡ್ಡ ಸಂಗತಿಯೇ ಅಲ್ಲ. ಉಗುರಲ್ಲಿ ಹೋಗೋದಕ್ಕೆ ಬಾಂಬ್ ತೆಗೆದುಕೊಂಡರೆ ಇದೇ ಆಗೋದು. ನಮ್ಮ ಜಗತ್ತು ವಿಶಾಲವಾಗುತ್ತ ಹೋದಷ್ಟು ನಮ್ಮ ಮನಸ್ಸು ಸಂಕುಚಿತಗೊಳ್ಳುತ್ತಿರುವ ಸಂಕೇತವಿದು.

ತೀರಾ ಮನಕಲಕಿದ ಅಥವಾ ಅಧೀರಗೊಳಿಸಿದ ಘಟನೆಯೆಂದರೆ ಅಯೋಧ್ಯೆ ರಾಮ ಮಂದಿರದಲ್ಲಿ ಕೆಲಸ ಮಾಡುವವರೆ ಹಣ ಲಪಟಾಯಿಸಿದ್ದು. ಅಯೋಧ್ಯಾ ರಾಮನ ಸನ್ನಿಧಾನದಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದ್ದೇ ಪುಣ್ಯ ಎಂದು ಭಾವಿಸುವ ಕೋಟ್ಯಂತರ ಜನರು ದೇಶದಲ್ಲಿದ್ದಾರೆ. ಅಯೋಧ್ಯೆಗೆ ಒಮ್ಮೆ ಹೋಗಿ ರಾಮನಲಲಾನ ದರ್ಶನ ಮಾಡಿ ಪಾವನರಾಗಬೇಕು ಎಂದು ಕನಸು ಕಾಣುತ್ತಿರುವ ಜನರಿದ್ದಾರೆ. ಅಯೋಧ್ಯೆಗೆ ಹೋಗಿ ಬಂದು ಜೀವನ ಪಾವನವಾಯಿತು ಎಂದು ಧನ್ಯತಾಭಾವ ಹೊಂದಿದ ಭಕ್ತರಿದ್ದಾರೆ. ಹೀಗಿರುವಾಗ ರಾಮಲಲಾನ ಸನ್ನಿಧಿಯಲ್ಲಿ ಕೆಲಸ ಮಾಡುವ ಕೆಲವರಿಗೆ ಅಲ್ಲೇ ದುಡ್ಡು ಲಪಟಾಯಿಸುವ



ಸ್ವಾರ್ಥ ತಲೆಎತ್ತಿತಲ್ಲ ಇದು ಕಲಿಯುಗದ ಪ್ರಭಾವ ಯಾವ ಪ್ರಮಾಣದಲ್ಲಿ ನಮ್ಮ ಮೇಲಾಗಿದೆ ಎಂಬುದಕ್ಕೆ ಅತ್ಯಂತ ಒಳ್ಳೆಯ ಸಾಕ್ಷ್ಯ.

ರಾಮ ಜನ್ಮಭೂಮಿ ಹೋರಾಟದಲ್ಲಿ ನೂರಾರು ಜನ ಜೀವ ತೆತ್ತಿದ್ದಾರೆ. ರಾಮನಿಗಾಗಿ, ರಾಮನ ಜನ್ಮಭೂಮಿಗಾಗಿ ಜನ ನಡೆಸಿದ್ದು ಒಟ್ಟು 500 ವರ್ಷಗಳ ಹೋರಾಟ. ನ್ಯಾಯಾಲಯದಲ್ಲೂ ಹೋರಾಟ ನಡೆದು, ಅಂತಿಮವಾಗಿ ರಾಮ ಮಂದಿರ ನಿರ್ಮಾಣವಾದಾಗ ಅದು ದೇಶದ ಹೆಮ್ಮೆಯಾಗಿ ಪ್ರತಿಧ್ವನಿಸಿತ್ತು. ಇಡೀ ದೇಶ ಸಂಭ್ರಮಿಸಿತ್ತು. ಅದು ಹಿಂದುಗಳ ಹೆಮ್ಮೆಯ ಪ್ರತೀಕವಾಗಿ ನಿರ್ಮಾಣವಾಗಿತ್ತು. ದೇಶದ ಒಗ್ಗಟ್ಟಿನ ದ್ಯೋತಕವಾಗಿತ್ತು. ಆದರೆ ಎಲ್ಲೋ ಕೆಲವರ ಸ್ವಾರ್ಥದಿಂದ ಹಿಂದುಗಳ ಹೆಮ್ಮೆಯ ಸ್ಥಳದಲ್ಲಿ ತಲೆತಗ್ಗಿಸುವ ಕೆಲಸ ಮಾಡಿದ್ದಾರೆ. ನಮ್ಮ ಧಾರ್ಮಿಕ ಕೇಂದ್ರಗಳನ್ನು ಹಾಳು ಮಾಡಲು ನಾವು ಹಿಂದುಗಳೇ ಸಾಕು ಎಂದು ಮಾತನಾಡಿಕೊಳ್ಳಲು ಉಳಿದವರಿಗೆ ಅವಕಾಶ ಮಾಡಿಕೊಟ್ಟಂತಾಗಿದೆ. ಬಹುಶಃ ದೇಶದ ಒಬ್ಬ ಹಿಂದು ಕೂಡ ರಾಮ ಮಂದಿರದಿಂದ ಏನನ್ನಾದರೂ ಕದಿಯುವ ಅದರಿಂದ ಏನಾದರೂ ಲಾಭ ಮಾಡಿಕೊಳ್ಳುವ ಕನಸಿನಲ್ಲೂ ಕಾಣಲಾರ. ಆಕಸ್ಮಾತ್ ಆರೀತಿಯದ್ದೊಂದು ಕನಸು ಬಂದುಬಿಟ್ಟರೆ, ತನ್ನ ಮನಸ್ಸಿನ ವಿಕಾರಕ್ಕೆ ಆತ ಘೋರ ಪಾಪ ಮಾಡಿದಷ್ಟು ಪರಿತಪಿಸುತ್ತಾನೆ. ಹಾಗಿರುವಾಗ ಅಲ್ಲಿಂದ ಒಂದು ರೂಪಾಯಿಯನ್ನಾದರೂ ಕದಿಯಬಹುದು ಎಂಬ ಯೋಚನೆ ಬಂತಲ್ಲ, ಬಹುಶಃ ಇದು ನೈತಿಕ ಅಧಃಪತನದ ಪರಮಾವಧಿ. ಪಾಪ– ಪುಣ್ಯದ ಪರಿವೆಯಿಲ್ಲದ ಸ್ವಾರ್ಥವೇ ಮುಖ್ಯವೆಂಬ ವರ್ತನೆಯೇ ಮುಖ್ಯ ಕಾರಣ.

ಅಯೋಧ್ಯೆ ರಾಮಜನ್ಮಭೂಮಿ ಟ್ರಸ್ಟ್‌ನವರು ಕೂಡ ಬಹುಶಃ ಇಲ್ಲಿ ಕಳ್ಳತನ ಮಾಡುವ ಬಗ್ಗೆ ಯಾರಾದರೂ ಯೋಚಿಸಬಹುದು ಎಂದು ಊಹಿಸಿರಲೂ ಇಲ್ಲ ಅನಿಸುತ್ತದೆ. ಹಾಗಾಗಿಯೇ ಈ ಸಂಗತಿಯ ಬಗ್ಗೆ ಅವರು ಆಘಾತ ವ್ಯಕ್ತಪಡಿಸಿದ್ದಾರೆ. ವ್ಯವಸ್ಥೆಯನ್ನು ಇನ್ನಷ್ಟು ಸಮರ್ಥವಾಗಿಸಲು, ಕಠಿಣಗೊಳಿಸಲು ಈ ಘಟನೆಯಿಂದ ಕಲಿತ ಪಾಠಗಳು ಸಹಕಾರಿಯಾಗಬಹುದು, ಅದಕ್ಕೆ ತಕ್ಕುದಾದ ಕಾನೂನು ಕ್ರಮವೂ ನಡೆಯುತ್ತದೆ.

ಈ ಎಲ್ಲ ಘಟನೆಗಳು ಕೇವಲ ಸಣ್ಣ ಉದಾಹರಣೆಗಳಷ್ಟೆ. ಬೆಳಗಾವಿಯಲ್ಲಿ ಪ್ರೇಮಿಯ ಜತೆ ಸೇರಿ ಗಂಡನ ಹೆಸರಲ್ಲಿ ವಿಮೆ ಮಾಡಿ, ಆತನನ್ನೇ ಕೊಂದು ವಿಮೆ ಹಣದಲ್ಲಿ ಇಬ್ಬರೂ ಒಟ್ಟಿಗೆ ಜೀವಿಸಲು ಹವಣಿಸಿದ್ದು, ತಂದೆ ಎರಡು ಕೋಟಿ ವಿಮೆ ಮಾಡಿಸಿದ್ದಾರೆಂಬುದು ತಿಳಿದು, ತಾಯಿ– ಮಗ ಸೇರಿ ಅವರನ್ನು ಮೆಟ್ಟಿಲಿಂದ ಕೆಳಗೆ ನೂಕಿದ್ದು, ಹೀಗೆ ದಿನ ಬೆಳಗಾದರೆ ಈ ರೀತಿಯ ಮನುಷ್ಯ– ಮನುಷ್ಯರ ನಡುವೆ ನಂಬಿಕೆಯನ್ನೇ ಅಳಿಸಿಹಾಕುವ, ಸಂಬಂಧಗಳಿಗೆ ಕಿಮ್ಮತ್ತೇ ಇಲ್ಲ, ಯಾರನ್ನೂ ಯಾರೂ ನಂಬದಂತಹ ವಾತಾವರಣ ನಿರ್ಮಿಸುವ ಘಟನೆಗಳು ನಡೆಯುತ್ತಲೇ ಇವೆ.

ಮೊದಲು ಶಾಲೆಯ ಪಾಠಗಳಲ್ಲಿ ಮೌಲ್ಯಗಳ ಪಾಠ ಇರಲಿಲ್ಲ, ಜೀವನದಲ್ಲಿ, ಜನರಲ್ಲಿ ಮೌಲ್ಯಗಳಿದ್ದವು. ಈಗ ಪಾಠಗಳಲ್ಲಿ ಮೌಲ್ಯ ಶಿಕ್ಷಣವಿದೆ, ಜೀವನದಲ್ಲಿ ಇಲ್ಲವೇ ಇಲ್ಲ. ಬಹುಶಃ ಜನರಲ್ಲಿ ಮೌಲ್ಯಗಳು ಕುಸಿಯುತ್ತಿವೆ ಎಂದೇ ಪಠದಲ್ಲೂ ಮೌಲ್ಯಗಳು ಬಂದು ಕೂತವೂ ಏನೊ. ಒಟ್ಟಿನಲ್ಲಿ ಮಾನವ ಮೌಲ್ಯಗಳ ಕುಸಿತಕ್ಕೆ ನಾವೆಲ್ಲ ಸಾಕ್ಷಿಯಾಗುತ್ತಿದ್ದೇವೆ.

ಎಲ್ಲ ಕಲಿಯುಗದ ಮಹಿಮೆ.

ಚಾರ್ವಾಕರ ಮತದಲ್ಲಿ ಜಗತ್ತಿನ ಸೃಷ್ಟಿ

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com

ಭಾರತೀಯ ತತ್ತ್ವಶಾಸ್ತ್ರವು ದರ್ಶನಗಳೆಂಬ ಹೆಸರಿನಲ್ಲಿ ವಿಶಾಲ ವೃಕ್ಷವಾಗಿ ಹರಡಿಕೊಂಡಿದೆ. ದರ್ಶನವೆಂದರೆ ಅದು ಸಾಕ್ಷಾತ್ಕಾರವೇ ಆಗಿದೆ. ಆತ್ಮತತ್ತ್ವದ ಸಾಕ್ಷಾತ್ಕಾರಕ್ಕಾಗಿ ಹೊರಟ ಜ್ಞಾನಶಾಖೆಗಳವು. ಅಂಥ ಆತ್ಮತತ್ತ್ವದ ನಿರ್ಣಯಕ್ಕೆ ಮೊದಲು ದರ್ಶನಗಳಿಗೆ ಜಗತ್ತೇ ಮೊದಲ ವಿಚಾರಣೀಯವಾದ ಅಂಶವಾಗಿದೆ. ಈ ಜಗತ್ತು ಒಳಗೊಳ್ಳುವ ಅಂಶಗಳು ಯಾವುವು? ಈ ಜಗತ್ತಿಗೆ ಹುಟ್ಟಿದೆಯೇ? ಇದ್ದರೆ ಅದು ಯಾವುದರಿಂದ ಸಂಭವಿಸುತ್ತದೆ? ಹುಟ್ಟು ಎನ್ನುವುದು ವಾಸ್ತವ ಪ್ರಕ್ರಿಯೆಯೇ ಅಥವಾ ತೋರಿಕೆಯೇ? ಜಗತ್ತಿನ ಸ್ಥಿತಿ–ಲಯಗಳು ಹೇಗೆ ಸಂಭವಿಸುತ್ತವೆ? ಲಯದ ಅನಂತರ ಎಲ್ಲಿ ಮಿಳಿತಗೊಳ್ಳುತ್ತದೆ? ಯಾಕಾಗಿ ಮತ್ತು ಯಾವಾಗ ಈ ಜಗತ್ತು ಹುಟ್ಟುತ್ತದೆ? ಇತ್ಯಾದಿ ಪ್ರಶ್ನೆಗಳನ್ನಿಟ್ಟುಕೊಂಡು ಭಾರತೀಯ ದರ್ಶನಗಳು ಜಗತ್ತಿನ ಸ್ವರೂಪವನ್ನು ವಿವೇಚಿಸಲು ಹೊರಟಿವೆ.

ದರ್ಶನಗಳನ್ನು ಮುಖ್ಯವಾಗಿ ಎರಡು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ವೇದದ ಪ್ರಾಮಾಣ್ಯವನ್ನು ಅಂಗೀಕರಿಸಿ, ಉಳಿದ ಪ್ರಮಾಣಗಳನ್ನೂ ಉಪಯೋಗಿಸಿಕೊಂಡು ತತ್ತ್ವಚಿಂತನೆಯನ್ನು ನಡೆಸುವ ದರ್ಶನಗಳನ್ನು ಆಸ್ತಿಕದರ್ಶನಗಳೆಂದೂ, ವೇದದ ಪ್ರಾಮಾಣ್ಯವನ್ನು ಒಪ್ಪದೆಯೇ, ತಮ್ಮ ಆಚಾರ್ಯರ ಅಥವಾ ಸಂಪ್ರದಾಯ ಪ್ರವರ್ತಕರ ಉಪದೇಶಗಳನ್ನು ಆಧರಿಸಿ ತತ್ತ್ವದ ಚಿಂತನೆಯನ್ನು ನಡೆಸುವ ದರ್ಶನಗಳನ್ನು ನಾಸ್ತಿಕ ದರ್ಶನಗಳೆಂಬುದಾಗಿ ವಿಭಾಗಿಸಲಾಗಿದೆ. ಭಾರತೀಯ ಸಂದರ್ಭದಲ್ಲಿ ನಾಸ್ತಿಕರನ್ನೂ ಕೂಡ ದರ್ಶನಗಳಲ್ಲಿ ಒಳಗೊಳ್ಳಲಾಗಿದೆ. ಅವರ ಸಿದ್ಧಾಂತಗಳನ್ನು ಯುಕ್ತಿಯಿಂದಲೇ ನಿರಾಕರಿಸಲಾಗಿದೆಯೇ ಹೊರತೂ, ಜಗತ್ತಿನ ಇತರ ಸಂಸ್ಕೃತಿಗಳಂತೆ ತನ್ನನ್ನು ಒಪ್ಪುವುದಿಲ್ಲವೆಂಬ ಕಾರಣಕ್ಕೆ ಅವರನ್ನು ಬಹಿಷ್ಕರಿಸಲಾಗಿಲ್ಲ. ಇದುವೇ ಭಾರತೀಯ ಸಂಸ್ಕೃತಿಯ 'ಒಳಗೊಳ್ಳುವಿಕೆಯ' ಗುಣಕ್ಕೆ ಸರ್ವಶ್ರೇಷ್ಠ ಉದಾಹರಣೆಯಾಗಿದೆ.

ನಾಸ್ತಿಕ ದರ್ಶನಗಳು ಚಾರ್ವಾಕ, ಬೌದ್ಧ ಮತ್ತು ಜೈನ ಎಂಬುದಾಗಿ ಮೂರು ವಿಧವಾಗಿವೆ. ಇವುಗಳಲ್ಲಿ ಚಾರ್ವಾಕರೆಂದರೆ, ಕೇವಲ ಪ್ರತ್ಯಕ್ಷ ಪ್ರಮಾಣವೊಂದನ್ನೇ ತತ್ತ್ವನಿರ್ಣಯಕ್ಕೆ ಸಾಧನವನ್ನಾಗಿ ಬಳಸುವವರು. ಅತ್ಯಂತ ಪ್ರಾಥಮಿಕ ಸ್ತರದಲ್ಲಿ ಯೋಚಿಸಬಲ್ಲ ಮತ್ತು ಅದಕ್ಕೆ ಮೇಲಿನ ಸ್ತರದ್ದನ್ನು ಒಪ್ಪದವರನ್ನು ಚಾರ್ವಾಕರ ಸಾಲಿಗೆ ಸೇರಿಸಬಹುದಾಗಿದೆ. ಎರಡನೆಯದಾದ ಬೌದ್ಧದರ್ಶನವು ಬುದ್ಧನಿಂದ ಪ್ರಣೀತವಾದುದು. ಅದರಲ್ಲಿ ಮತ್ತೆ ನಾಲ್ಕು ಸಂಪ್ರದಾಯಗಳಿವೆ. ಮಾಧ್ಯಮಿಕ, ಯೋಗಾಚಾರ, ಸೌತ್ರಾಂತಿಕ ಮತ್ತು ವೈಭಾಷಿಕ ಎಂಬುದಾಗಿ. ಇವರು ಪ್ರತ್ಯಕ್ಷ, ಅನುಮಾನ ಮತ್ತು ತ್ರಿಪಿಟಕಗಳನ್ನು ಪ್ರಮಾಣವನ್ನಾಗಿ ಸ್ವೀಕರಿಸುತ್ತಾರೆ. ಅರ್ಹತನಿಂದ ಪ್ರಣೀತವಾದ ದರ್ಶನವನ್ನು ಜೈನದರ್ಶನವೆಂದು ಕರೆಯಲಾಗುತ್ತದೆ. ಇವರೂ ಕೂಡ ಪ್ರತ್ಯಕ್ಷ, ಅನುಮಾನ ಮತ್ತು ಜಿನನ ವಾಕ್ಯಗಳನ್ನು ಪ್ರಮಾಣವನ್ನಾಗಿ ಸ್ವೀಕರಿಸುತ್ತಾರೆ. ಹೀಗೆ ಬೌದ್ಧರ ನಾಲ್ಕು ಸಂಪ್ರದಾಯ ಗಳನ್ನೂ ಒಳಗೊಂಡು ನಾಸ್ತಿಕದರ್ಶನವನ್ನು ಆರು ವಿಭಾಗವಾಗಿ ಗುರುತಿಸಬಹುದಾಗಿದೆ.

ಚಾರ್ವಾಕ ದರ್ಶನ

ಚಾರ್ವಾಕದರ್ಶನವನ್ನು 'ಲೋಕಾಯತ' ದರ್ಶನವೆಂಬುದಾಗಿಯೂ ಕರೆಯಲಾಗುತ್ತದೆ. ಲೋಕಾಯತವೆಂದರೆ ಲೋಕದಲ್ಲಿ ವಿಸ್ತಾರವಾಗಿ ಹರಡಿದ್ದು ಎಂದರ್ಥ. ಇವರ ಸಿದ್ಧಾಂತವು ಸಾಮಾನ್ಯ ಜನರ ದೃಷ್ಟಿಗೆ ಅತ್ಯಂತ ಹತ್ತಿರವಿರುವುದರಿಂದ ಸಮಾಜದಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಚಾರ್ವಾಕದರ್ಶನದ ಪ್ರಣೇತಾ ಆಚಾರ್ಯ ಬೃಹಸ್ಪತಿ. ಹಾಗಾಗಿ 'ಬಾರ್ಹಸ್ಪತ್ಯದರ್ಶನ' ಎಂಬುದೂ ಇದರ ಇನ್ನೊಂದು ಹೆಸರು. ವಿಷ್ಣುಪುರಾಣದ ತೃತೀಯಾಂಶದ ಹದಿನೇಳನೆಯ ಅಧ್ಯಾಯದಲ್ಲಿ ಒಂದು ಕಥೆಯು ಬರುತ್ತದೆ. ಹಿಂದೆ ಒಮ್ಮೆ ನರ್ಮದಾತೀರದಲ್ಲಿ ಶ್ರುತ್ಯುಕ್ತಮಾರ್ಗವನ್ನು ಅನುಸರಿಸಿ ಕೆಲವು ದೈತ್ಯರು ಏಕಾಗ್ರವಾದ ಅಂತಃಕರಣವೃತ್ತಿಯಿಂದ ಕೂಡಿಕೊಂಡವರಾಗಿ ತಪಸ್ಸನ್ನಾಚರಿಸಿದರು.ಹಾಗೆ ತಪಸ್ಸನ್ನಾಚರಿಸುತ್ತಿರುವ ಆ ದೈತ್ಯರನ್ನು ನೋಡಿ ನಾರಾಯಣನು ಪ್ರತ್ಯಕ್ಷವಾಗಿ, ಅವರ ದುಃಖವನ್ನು ನಿವಾರಿಸುವ ಸಲುವಾಗಿ ತನ್ನ ಶರೀರದಿಂದ ಮಾಯಾಮೋಹನೆಂಬ ಹೆಸರಿನ ಒಬ್ಬ ಪುರುಷನನ್ನು ಸೃಷ್ಟಿಸಿ, ಈತನು ನಿಮ್ಮ ಅಗತ್ಯವನ್ನು ಪೂರೈಸುತ್ತಾನೆ ಎಂದು ಹೇಳಿ ಅಂತರ್ಧಾನನಾದನು.

ಮಾಯಾಮೋಹನು ತನ್ನ ಹೆಸರಿಗೆ ಅನ್ವರ್ಥವಾಗುವಂತೆ ದೈತ್ಯರನ್ನು ತನ್ನ ಮಾಯಾಶಕ್ತಿಯ ಮೂಲಕ ಸನ್ಮಾರ್ಗದಿಂದ ಚ್ಯುತರಾಗುವಂತೆ ಮಾಡುತ್ತಾನೆ. ಬೃಹಸ್ಪತಿಪ್ರಣೀತವಾದ ಸೂತ್ರಗಳನ್ನು ಅವಲಂಬಿಸಿ ಮಾಯಾಮೋಹನು ಅವರಿಗೆ ಕೆಲವು ಉಪದೇಶಗಳನ್ನು ಮಾಡುತ್ತಾನೆ. ಆದರಿಂದ ದೈತ್ಯರು ತಪಸ್ಸಿನ ಮಾರ್ಗದಿಂದ ಚ್ಯುತರಾಗಿ ಭೋಗಲಾಲಸೆಯಲ್ಲಿ ಮೈಮರೆಯಲು ತೊಡಗಿದರು ಎಂಬುದು ಕಥೆ. ಬೃಹಸ್ಪತಿಯು ಚಾರ್ವಾಕ ಮತಾನ್ಸಾರಿಯಾದ ಸೂತ್ರಗಳನ್ನು ರಚಿಸಿದನಾದರೂ ಅದು ದೇವಗುರುವಾದ ಬೃಹಸ್ಪತಿಗೆ ಸಮ್ಮತವಾದುವಲ್ಲ. ಬದಲಿಗೆ, ಅಸುರರಿಂದ ದೇವತೆಗಳಿಗೆ ಆಗುತ್ತಿದ್ದ ಸಂಕಷ್ಟಗಳನ್ನು ಹೇಗಾದರೂ ಕಡಿಮೆ ಮಾಡುವುದು ಬೃಹಸ್ಪತಿಯ ಉದ್ದೇಶವಾಗಿತ್ತು. ಅಸುರರು ಯಜ್ಞಾದಿಗಳನ್ನು ಆಚರಿಸಿ ಅದರಿಂದ ಪ್ರಾಪ್ತವಾದ ಸಾಮರ್ಥ್ಯದಿಂದ ದೇವತೆಗಳನ್ನು ಗೆಲ್ಲಲು ಹವಣಿಸುತ್ತಾರೆ. ಸ್ವಭಾವತಃ ತಮೋಗುಣಭೂಯಿಷ್ಠರಾದ ಅಸುರರ ಕೈಯಲ್ಲಿ ಸ್ವರ್ಗದ ಆಧಿಪತ್ಯ ದೊರಕಿದರೆ, ಲೋಕಕ್ಕೆ ಆಪತ್ತೇ ಒದಗುವುದೆಂದು ನಿಶ್ಚಯಿಸಿ ದೇವಗುರುವು ಅವರಲ್ಲಿ ಅಶ್ರದ್ಧೆಯನ್ನು ಉಂಟುಮಾಡಲೆಂದು ಸೂತ್ರಗಳನ್ನು ಬರೆದನೆಂದು ಪ್ರತೀತಿ.

ಈ ಮೊದಲೇ ಹೇಳಿದಂತೆ ಪ್ರತ್ಯಕ್ಷ ಪ್ರಮಾಣವನ್ನು ಇವರು ಅಂಗೀಕರಿಸುತ್ತಾರೆ. ಹಾಗಂತ ಅನುಮಾನ ಪ್ರಮಾಣವನ್ನು ಅವರು ಸ್ವೀಕರಿಸುವುದಿಲ್ಲ ಎಂದರ್ಥವಲ್ಲ (ಅವರಿಗೂ ಪರ್ವತದಲ್ಲಿ ಹೊಗೆಯನ್ನು ಕಂಡಾಗ ಬೆಂಕಿಯ ಅನುಮಿತಿಯು ಹುಟ್ಟಿಯೇ ಹುಟ್ಟುತ್ತದೆ). ಆದರೆ ಅನುಮಾನ ಪ್ರಮಾಣವು ಕೂಡ ಪ್ರತ್ಯಕ್ಷವನ್ನೇ ಆಧರಿಸಿದೆಯಾದ ಕಾರಣಕ್ಕೆ, ಪ್ರತ್ಯಕ್ಷದ ಪ್ರಾಬಲ್ಯವನ್ನು ಅಂಗೀಕರಿಸಿ, ಜಗತ್ತಿನ ತತ್ತ್ವನಿರ್ಣಯದ ಸಂದರ್ಭದಲ್ಲಿ ಪ್ರತ್ಯಕ್ಷಪ್ರಮಾಣವನ್ನೇ ನಿರ್ಣಾಯಕವನ್ನಾಗಿರಿಸಿಕೊಂಡಿದ್ದಾರೆ ಎಂದರ್ಥ. ಇಂಥ ಚಾರ್ವಾಕರ ಮತವನ್ನು ಕೂಡ ದರ್ಶನಗಳ ಸಾಲಿಗೆ ಸೇರಿಸಲಾಗಿದೆ. ಯಾಕೆಂದರೆ, ಹುಟ್ಟುತ್ತಲೇ ಎಲ್ಲರೂ ಸಹಜವಾಗಿ ಚಾರ್ವಾಕರಂತೆಯೇ ಕಣ್ಣಿಗೆ ಕಂಡಿದ್ದು ಮಾತ್ರವೇ ಸತ್ಯವೆಂಬ ಸ್ವಭಾವವನ್ನೇ ಪಡೆದಿರುತ್ತಾರೆ. ಜೀವನಾನುಭವದ ಪರಿಧಿ ವಿಸ್ತೃತವಾದಂತೆಲ್ಲ ಕಣ್ಣಿಗೆ ಕಾಣದ ಅಂಶದ ಬಗೆಗೂ ಶ್ರದ್ಧೆ ಮೂಡಲು ತೊಡಗುತ್ತದೆ. ಚಾರ್ವಾಕರು ಭೌತಿಕವಾದಿಗಳು. ಅನುಭವಕ್ಕೆ ಬರುವ ನಾಲ್ಕು ಭೂತಗಳನ್ನು ಮಾತ್ರ ಒಪ್ಪುವ ಇವರು, ಭೂತ–ಭೌತಿಕಗಳನ್ನು ಮಾತ್ರವೇ ತತ್ತ್ವವೆಂದು ಒಪ್ಪುತ್ತಾರೆ.

ಚಾರ್ವಾಕ ದರ್ಶನದ ಪ್ರಕಾರ ಜಗತ್ತಿನ ಸೃಷ್ಟಿ

ಪ್ರತಿಯೊಂದು ಕಾರ್ಯಕ್ಕೂ ನಿಯತವಾದ ಕಾರಣವೊಂದು ಇರಲೇಬೇಕು ಎಂಬುದನ್ನು ಒಪ್ಪದ ಇವರು, ಜಗತ್ತಿನ ಪ್ರತಿಯೊಂದು ವಸ್ತುವೂ ಅದರಷ್ಟಕ್ಕೆ ಅದು ವಿಭಿನ್ನ ಹಾಗೂ ವಿಶಿಷ್ಟವಾಗಿರುತ್ತದೆ. ಅದಕ್ಕೆ ಕಾರಣ ಆಯಾ ವಸ್ತುವಿನ 'ಸ್ವಭಾವ'ವೇ ಆಗಿದೆಯೇ ಹೊರತು ಅದಕ್ಕೆ ಹೊರತಾದ ಕಾರಣವೊಂದನ್ನು ಅಂಗೀಕರಿಸಬೇಕಿಲ್ಲ ಎಂಬುದಾಗಿ ವಾದಿಸುತ್ತಾರೆ. ಈ ಜಗತ್ತಿನ ನಿಯಾಮಕವು ಕೂಡ ಜಗತ್ತಿನ ಪದಾರ್ಥಗಳ ಸ್ವಭಾವವೇ ಆಗಿದೆ. ಈ ಜಗತ್ತು ವಾಯು, ತೇಜಸ್ಸು, ಜಲ ಮತ್ತು ಪೃಥಿವಿಯೆಂಬ ನಾಲ್ಕು ಭೂತಗಳ ಪರಮಾಣುಗಳಿಂದ ಆಗಿದೆ ಎಂಬುದು ಚಾರ್ವಾಕರ ಮತ. ಹಾಗಾಗಿಯೇ ಇದನ್ನು 'ಭೂತಚತುಷ್ಟಯವಾದ' ಎಂಬುದಾಗಿಯೂ ಕರೆಯಲಾಗುತ್ತದೆ. ಇಂಥ ಪರಮಾಣುಗಳ ಸಂಘಾತವೇ ಜಗತ್ತಾಗಿದೆ. ಪರಮಾಣುಗಳ ಇಂಥ ಸಂಯೋಜನೆಯ ಭೇದದಿಂದಾಗಿ ಇಲ್ಲಿ ವಿಶಿಷ್ಟವಾದ ವಸ್ತುಗಳು ರೂಪುಗೊಳ್ಳುತ್ತವೆ. ಪ್ರತಿಯೊಂದು ವಸ್ತುವಿನ ಕಾರಣವಾದ ಇಂಥ ಪರಮಾಣುಗಳ ಗುಣ–ಧರ್ಮಗಳು ಒಂದೊಂದು ರೀತಿಯಾಗಿರುವುದರಿಂದ ವಸ್ತುಗಳ ಗುಣ–ಧರ್ಮದಲ್ಲಿಯೂ ಭೇದವುಂಟಾಗುತ್ತದೆ.

ಎಲ್ಲ ಪ್ರಾಣಿಗಳೂ ಪುರುಷನ ವೀರ್ಯ ಮತ್ತು ಸ್ತ್ರೀಯ ಶೋಣಿತದ ಸಂಯೋಗದಿಂದ ಜನಿಸಿದಂಥವು ಎಂಬುದು ಇವರ ಸಿದ್ಧಾಂತ. ನಾಲ್ಕು ಭೂತಗಳ ನಿರ್ದಿಷ್ಟವಾದ ಸಂಯೋಗದಿಂದ ಭೌತಿಕವಾದ ಶರೀರದಲ್ಲಿ ಚೈತನ್ಯವುಂಟಾಗುತ್ತದೆ. ಇದನ್ನು ಭೂತಚೈತನ್ಯವಾದ ಎಂಬುದಾಗಿ ಕರೆಯಲಾಗುತ್ತದೆ. ಶರೀರದಲ್ಲಿ ಚೈತನ್ಯಾಂಶವು ಉಂಟಾಗುವುದಕ್ಕೆ ಭೂತಗಳ ನಿರ್ದಿಷ್ಟವಾದ ಸಂಯೋಗದ ಹೊರತಾಗಿ ಬೇರಾವುದೇ ಕಾರಣವಿಲ್ಲ. ಇದನ್ನೇ ಯದೃಚ್ಛಾ ಎಂಬುದಾಗಿಯೂ ಕರೆಯಲಾಗುತ್ತದೆ. ಹಾಗಾಗಿ ಚೈತನ್ಯವೆಂದರೆ ಅದು ದೇಹದ ಗುಣವಾಗಿದೆ. ಹಾಗಾಗಿ ದೇಹವೇ ಆತ್ಮವಾಗಿದೆ. ದೇಹದ ನಾಶವಾದಾಗ ಈ ಚೈತನ್ಯವೂ ನಶಿಸುತ್ತದೆ. ಮತ್ತೆ ಜನ್ಮವೆಂಬುದಿಲ್ಲ ಎಂಬುದು ಇವರ ಸಿದ್ಧಾಂತ. ಇವರು ಹುಟ್ಟಿಗೂ, ನಾಶಕ್ಕೂ ಯಾವ ನಿರ್ದಿಷ್ಟ ಕಾರಣವನ್ನೂ ಕೂಡ ಅಂಗೀಕರಿಸುವುದಿಲ್ಲ. ಸೃಷ್ಟಿಯೆಂಬುದು ಆಕಸ್ಮಿಕವಾದುದು ಮತ್ತು ವಸ್ತುಗಳ ಸ್ವಭಾವದಿಂದ ನಿಯಮಿಸಲ್ಪಟ್ಟಿದ್ದು ಎಂದು ಸ್ವೀಕರಿಸುವ ಚಾರ್ವಾಕರು, ಜಗತ್ತಿಗೆ ಮಹಾಪ್ರಲಯವೊಂದಿದೆ ಎಂಬುದನ್ನು ಸ್ವೀಕರಿಸುವುದಿಲ್ಲ.

ಜಗತ್ತಿಗೆ ಮೈಥುನವೇ ಕಾರಣವೆನ್ನುವ ಇವರು ಪುನರ್ಜನ್ಮವನ್ನಾಗಲೀ, ಪೂರ್ವಜನ್ಮವನ್ನಾಗಲೀ ಸ್ವೀಕರಿಸುವುದಿಲ್ಲ. ಆಕಸ್ಮಾತ್ತಾಗಿ ಹುಟ್ಟಿರುವ ನಾವೆಲ್ಲರೂ ಇರುವಷ್ಟು ದಿನ ಭೋಗಗಳನ್ನು ಅನುಭವಿಸುತ್ತಾ ಸುಖಿಸಬೇಕೆಂಬುದು ಇವರ ಮತ. ದೇಹವು ಭಸ್ಮಗೊಂಡ ಮೇಲೆ ಮತ್ತೆ ಹಿಂತಿರುಗಿ ಬರುವುದಿಲ್ಲವಾದ ಕಾರಣ ಮರಣದವರೆಗೆ ಎಲ್ಲರೂ ವಿಷಯಸುಖಗಳನ್ನು ಅನುಭವಿಸುವುದೇ ಸರಿಯಾದುದು ಎಂಬುದಾಗಿ ಒಪ್ಪುತ್ತಾರೆ. ಜಗತ್ತು ತನ್ನಲ್ಲಿರುವ ಭೂತ ಮತ್ತು ಭೌತಿಕಪದಾರ್ಥಗಳ ಸ್ವಭಾವದಿಂದಲೇ ಮುನ್ನಡೆಯುತ್ತಿರುವುದರಿಂದ ಇದನ್ನು ನಿಯಂತ್ರಿಸಲೋಸುಗ ಒಬ್ಬ ಈಶ್ವರನನ್ನು ಸ್ವೀಕರಿಸುವ ಅಗತ್ಯವಿಲ್ಲವೆಂದು ಭಾವಿಸುತ್ತಾರೆ. ಈಶ್ವರನ ಕಾರ್ಯವನ್ನು ರಾಜನೇ ಮಾಡುವುದರಿಂದ ರಾಜನೇ ಪ್ರತ್ಯಕ್ಷ ಈಶ್ವರ ಎಂಬುದು ಇವರ ವಾದ. ಜೊತೆಗೆ ಜಗತ್ತು ಸತ್ಯವೆಂಬುದಾಗಿ ಇವರು ಅಂಗೀಕರಿಸುವುದರಿಂದ ವಿಷಯಸುಖದ ಅನುಭವವೇ ಸ್ವರ್ಗ ಮತ್ತು ಅದಕ್ಕೆ ವಿರುದ್ಧವಾದುದು ನರಕ ಎಂಬುದಾಗಿ ಇವರ ಮತ.

ಚಾರ್ವಾಕಮತದಲ್ಲಿ ಪ್ರತ್ಯಕ್ಷಪ್ರಮಾಣಕ್ಕೆ ಪ್ರಾಧಾನ್ಯ ಕೊಟ್ಟಿರುವುದರಿಂದ ಇಂದ್ರಿಯಾತೀತವಾದ ಯಾವುದನ್ನೂ ಅವರು ಒಪ್ಪುವುದಿಲ್ಲ. ಹೀಗಾಗಿ ಸಾಮಾನ್ಯ ಜನರೆಲ್ಲರ ಮತಿಗೆ ನಿಲುಕುವುದನ್ನೇ ಇವರು ಇನ್ನಷ್ಟು ರಮಣೀಯವಾಗಿ ಪ್ರತಿಪಾದಿಸುತ್ತಾರೆ. ಇವರ ದರ್ಶನದಲ್ಲಿ ದಾರ್ಶನಿಕದೃಷ್ಟಿಯಿಂದ ಜಗತ್ತಿನ ಬಗೆಗೆ ಸೂಕ್ಷ್ಮವಾದ ಹೊಳಹುಗಳು ದೊರೆಯುವುದಿಲ್ಲ. ಜೊತೆಗೆ ಕಾರ್ಯಕಾರಣವಾದವನ್ನೇ ಇವರು ಅಂಗೀಕರಿಸದಿರುವುದು ಇವರ ಮತಕ್ಕೊಂದು ತೊಡಕಾಗಿದೆ. ಇವರ ಮತವನ್ನು ದಾರ್ಶನಿಕ ದೃಷ್ಟಿಕೋನದಿಂದ ಉಳಿದೆಲ್ಲ ದಾರ್ಶನಿಕರೂ ನಿರಾಕರಿಸಿದ್ದಾರೆ.

ಬೆಂಗಳೂರನ್ನು ಕಾಂಕ್ರೀಟ್ ಕಾಡು ಮಾಡುವುದು ತರವಲ್ಲ!

ಪತ್ರ ಮಿತ್ರ

ಬಿಡಿಬಿಡಿ ಕಾರಣಗಳಿಂದಾಗಿ ಬಿಡದಿಯು ಎಡೆಬಿಡದೆ ಸುದ್ದಿಯಲ್ಲಿರುತ್ತಿದೆ. ಬಿಡದಿಯ ತಟ್ಟೆ ಇಡ್ಲಿಯು ದಶಕಗಳಿಂದ ಸದ್ದು ಮಾಡುತ್ತಿದೆ. ರಾಜ್‌ಕುಮಾರ್ ಅಲ್ಲಿಗೆ ಹೋಗಿ ತಟ್ಟೆ ಇಡ್ಲಿ ಸವಿದು ಬಂದಮೇಲಂತೂ ಬಿಡದಿ ತಟ್ಟೆ ಇಡ್ಲಿಯ ಮಾಯೆ ಬಲು ಜೋರಾಯಿತು. ಬಿಡದಿಯ ಮುಖ್ಯರಸ್ತೆ ಈಗ ಒಂದು ರೀತಿಯಲ್ಲಿ ತಟ್ಟೆ ಇಡ್ಲಿಯ ಮಾಯಾ'ಬಜಾರ್'! ಬಿಡದಿ ಸಮೀಪ 'ವಂಡರ್ ಲಾ' ಆಯ್ತು. ಪಡ್ಡೆ ಹೈಕಳು ಅದನ್ನು ನೋಡಿಬಂದು ಸ್ನೇಹಿತರಿಗೆ, 'ಏನ್ಲಾ, ಬಲೇ ವಂಡರ್, ಲಾ!' ಅನ್ನತೊಡಗಿದರು. ಅವರಿಗೆ ವಂಡರ್ ಲಾ ಒಂದು ಮಾಯಾಬಜಾರ್! ಬಿಡದಿಯಲ್ಲಿ ಆನಂತರ ನಿತ್ಯಾನಂದ ಸದ್ದುಮಾಡಿದ. ಸುದ್ದಿಯನ್ನೂ ಮಾಡಿದ. ಕೊನೆಗೆ ಆ ಮಾಯಾವಿ ಎದ್ದು ನಡೆದ ಕೈಲಾಸಕ್ಕೆ! ಇಲ್ಲಿ ಭಕ್ತರಿಗೆ ಮಾಯೆ ಮಾಡಿದ್ದ ಆತ, 'ಎಲ್ಲಾ ಮಾಯವೋ, ಪ್ರಭುವೇ', ಎನ್ನುತ್ತಲೇ, ಕಾಣದಂತೆ ಮಾಯವಾದ! ಆತ ಈಗ ಕೈಲಾಸವಾಸಿ! ಆತ ಇಲ್ಲಿರುವುದಕ್ಕಿಂತ ಅಲ್ಲಿರುವುದೇ ನಮಗೂ ವಾಸಿ.

ಇದೀಗ ಬಿಡದಿಯ ಟೌನ್ ಶಿಪ್ ಪ್ರಕರಣ ಸುದ್ದಿಮಾಡುತ್ತಿದೆ. ಸದ್ದು ಮಾಡುತ್ತಿದೆ, ಗದ್ದಲವನ್ನೂ ಎಬ್ಬಿಸುತ್ತಿದೆ. ಒಟ್ಟಿನಲ್ಲಿ, 'ಬಿಟ್ಟೆನೆಂದರೆ ಬಿಡದೀ ಮಾಯೆ', ಎಂಬಂತಾಗಿದೆ ಬಿಡದಿಯ ಮಾಯೆ! ಈಗ 'ಬಿಡದಿ ಟೌನ್‌ಶಿಪ್' ವಿಷಯಕ್ಕೆ ಬರೋಣ. ಈ ಟೌನ್‌ಶಿಪ್ ನಿರ್ಮಾಣದ ಯೋಜನೆಯು ಅತ್ಯಂತ ಆತಂಕಕಾರಿ. ಇದರಿಂದಾಗಿ ಯೋಜನಾ ಪ್ರದೇಶದ 12000 ಕೃಷಿಕರ ಬದುಕು ಮೂರಾಬಟ್ಟೆಯಾಗುತ್ತದೆ. ಯಲಹಂಕದಿಂದ ದೇವನಹಳ್ಳಿಯವರೆಗಿನ ಪ್ರದೇಶವು ಇದಕ್ಕೆ ಉದಾಹರಣೆ. ವಿಮಾನ ನಿಲ್ದಾಣದಿಂದಾಗಿ ಈ ಪ್ರದೇಶದ ಕೃಷಿ ಭೂಮಿಗಳು ರಿಯಲ್ ಎಸ್ಟೇಟ್ ಕುಳಗಳ ಮತ್ತು ಉದ್ಯಮಿಗಳ ಪಾಲಾದವು. ಅವರಿಗೆ ಭೂಮಿ ನೀಡಿ ಪರಿಹಾರ ಪಡೆದುಕೊಂಡ ಹಲವರು, ಹಣವು ಖರ್ಚಾದ ಮೇಲೆ ಬೆಂಗಳೂರಿನಲ್ಲಿ ಆಟೋರಿಕ್ಷಾ, ಟ್ಯಾಕ್ಸಿಗಳನ್ನು ಓಡಿಸಿಕೊಂಡಿದ್ದಾರೆ ಅಥವಾ ವಿಮಾನ ನಿಲ್ದಾಣದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದಾರೆ. ಯಲಹಂಕದಿಂದ ದೇವನಹಳ್ಳಿಯವರೆಗಿನ ಆ ಪ್ರದೇಶದಲ್ಲಿ ವಸ್ತುಗಳ ಬೆಲೆಯೂ ಸೇರಿದಂತೆ ಜೀವನವೆಚ್ಚ ಏರಿದೆ. ತರಕಾರಿಯಿಂದ ಮೊದಲುಗೊಂಡು ಕೃಷಿ ಉತ್ಪನ್ನಗಳು, ಹೈನುಗಾರಿಕೆ ಇವು ಪೆಟ್ಟು ತಿಂದಿವೆ. ಹಸಿರಿನಿಂದ ಕಂಗೊಳಿಸುತ್ತಿದ್ದ ಪ್ರದೇಶಗಳು ಈಗ ಉಸಿರುಗಟ್ಟಿಸುವ ಮಾಲಿನ್ಯ ಮತ್ತು ವಾಹನದಟ್ಟಣೆಗಳಿಂದ ನಲುಗುತ್ತಿವೆ. ಶುದ್ಧ ಗಾಳಿಯ ಸ್ಥಳವನ್ನು ದೂಳು ಮತ್ತು ಹೊಗೆ ಆಕ್ರಮಿಸಿಕೊಂಡಿದೆ. ಅತಿಯಾದ ಬೋರ್‌ವೆಲ್‌ಗಳಿಂದಾಗಿ ಅಂತರ್ಜಲ ಬತ್ತತೊಡಗಿದೆ. ಕೆರೆಕುಂಟೆಗಳು ಮಲಿನಗೊಂಡಿವೆ, ಒಣಗಿವೆ, ಅತಿಕ್ರಮಣಕ್ಕೀಡಾಗಿವೆ. ಅಸಂಖ್ಯಾತ ಮರ–ಗಿಡಗಳು ನಾಶಮಾಡಲ್ಪಟ್ಟಿವೆ. ಪರಿಸರ ಸಮತೋಲನಕ್ಕೆ ಅವಶ್ಯವಾದ ಪಕ್ಷಿಗಳ ಸಂತತಿ ಕ್ಷೀಣಿಸಿದೆ. ಇವಿಷ್ಟರ ಜೊತೆಗೆ, ಹೊರಗಿನವರ ಅತಿಯಾದ ವಲಸೆಯಿಂದಾಗಿ ಇಲ್ಲಿಯ ಮಣ್ಣಿನ ಮಕ್ಕಳ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಪರೋಕ್ಷ ಪ್ರಹಾರ ನಡೆದಿದೆ.

ಬೆಂಗಳೂರಿನ ಈಶಾನ್ಯಕ್ಕಿರುವ ದೇವನಹಳ್ಳಿಯವರೆಗಿನ ಪರಿಸ್ಥಿತಿಯಂತೆಯೇ, ಬೆಂಗಳೂರಿನ ಆಗ್ನೇಯ ದಿಕ್ಕಿನಲ್ಲಿರುವ ಸರ್ಜಾಪುರದವರೆಗಿನ ಪ್ರದೇಶದ ಮತ್ತು ಬೆಂಗಳೂರಿನ ವಾಯವ್ಯ ಹಾಗೂ ಉತ್ತರದ ಮಧ್ಯೆ ಇರುವ ದೊಡ್ಡಬಳ್ಳಾಪುರದವರೆಗಿನ ಪ್ರದೇಶದ ಗತಿಯೂ ಆಗಿದೆ. ಇದೇ ದುರ್ಗತಿಯು ಬೆಂಗಳೂರಿನ ನೈರುತ್ಯಕ್ಕಿರುವ ಬಿಡದಿಯವರೆಗೂ ಈ ಟೌನ್‌ಶಿಪ್ ಯೋಜನೆಯಿಂದಾಗಿ ಉಂಟಾಗಲಿದೆ. ಬೆಂಗಳೂರು ಕೇಂದ್ರಬಿಂದು ಆಗಿದ್ದು, ನಾಲ್ಕೂ ದಿಕ್ಕಿನ ಈ 'ಬೆಳವಣಿಗೆ'ಗಳಿಂದಾಗಿ, ಒಟ್ಟಾರೆಯಲ್ಲಿ, ಬೆಂಗಳೂರು ನಗರವೂ ಸೇರಿದಂತೆ ಸುತ್ತಲಿನ 5000 ಚದರ ಕಿಲೋಮೀಟರ್ ಪ್ರದೇಶವು ಕ್ರಮೇಣ ಈ ನಗರೀಕರಣವೆಂಬ ಪೆಡಂಭೂತಕ್ಕೆ ಆಹುತಿಯಾಗಲಿದೆ.

ಈ ಯೋಜನೆಯಿಂದ ಲಾಭವಿರುವುದು ಉದ್ಯಮಿಗಳಿಗೆ, ಶ್ರೀಮಂತ ಕುಳಗಳಿಗೆ, ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಮಾತ್ರ. ಶ್ರೀಸಾಮಾನ್ಯನಿಗೆ ಇದರಿಂದ ಎಳ್ಳಷ್ಟೂ ಪ್ರಯೋಜನವಿಲ್ಲ. ಈ ಟೌನ್ ಶಿಪ್ಪಿಗೆ ಕಾವೇರಿ ನದಿ ನೀರೇ ಗತಿಯಾದ್ದರಿಂದ, ಮುಂದೆ ಬೆಂಗಳೂರಿನ ನೀರಿನ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳುವುದು ಖಾತ್ರಿ. ನಾವಿಂದು ನಗರರಾಷ್ಟ್ರವಾಗಿರುವ ಸಿಂಗಾಪುರವನ್ನೋ, ಸಂಸ್ಥಾನ ನಗರವಾಗಿರುವ ದುಬೈಯನ್ನೋ ನೋಡಿ ಮರುಳಾಗಿ, ವಿಶಾಲ ಕರ್ನಾಟಕದ ರಾಜಧಾನಿ ಬೆಂಗಳೂರಿನ ಸನಿಹದ ಪ್ರದೇಶವನ್ನೆಲ್ಲ ಕಾಂಕ್ರೀಟ್ ಕಾಡು ಮಾಡುವುದಲ್ಲ. ಈಗಿರುವ ನರಕಸದೃಶ ಬೆಂಗಳೂರು ನಗರವೇ ಇನ್ನಷ್ಟು ಬೆಳೆಯದಂತೆ, ಇನ್ನಷ್ಟು ನರಕವಾಗದಂತೆ ನೋಡಿಕೊಳ್ಳುವುದು ಇಂದಿನ ಆವಶ್ಯಕತೆ. ವಿಸ್ತರಣೆಗೆ ತಡೆ, ವಾಹನ ಹೆಚ್ಚಳಕ್ಕೆ ನಿರ್ಬಂಧ, ಉತ್ತಮ ರಸ್ತೆ, ಸಂಚಾರಯೋಗ್ಯ ಪಾದಚಾರಿ ಮಾರ್ಗ, ಸೂಕ್ತ ರೀತಿಯ ಕಸ ನಿರ್ವಹಣೆ, ನೀರು ಮತ್ತು ವಿದ್ಯುತ್ ಶಕ್ತಿಯ ಸಮರ್ಪಕ ವಿತರಣೆ ಮುಂತಾದ ಕಾರ್ಯಗಳನ್ನು ಬೆಂಗಳೂರು ನಗರದಲ್ಲಿ ಮತ್ತು ರಾಜ್ಯದ ಇತರ ನಗರಗಳಲ್ಲಿ ನಮ್ಮ ಆಡಳಿತ ವ್ಯವಸ್ಥೆಯು ಸಮರೋಪಾದಿಯಲ್ಲಿ ಕೈಕೊಳ್ಳಬೇಕಾಗಿದೆ. ಅದು ಬಿಟ್ಟು, ಎಲ್ಲೋ ನಗರ ಕಟ್ಟಿ, ಯಾರನ್ನೋ ತಂದು ತುಂಬುವುದಲ್ಲ.

– ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಪುಸ್ತಕ ಖರೀದಿಯಾಗಲಿ

ಮುಖ್ಯಮಂತ್ರಿಯವರ ಪುಸ್ತಕ ಪ್ರೇಮವು ಶ್ಲಾಘನೀಯವಾದುದು. ಕಳೆದ ಕೆಲವು ವರ್ಷಗಳಿಂದ ಸರ್ಕಾರವು ಕನ್ನಡ ಪುಸ್ತಕಗಳ ಸಗಟು ಖರೀದಿಯನ್ನು ನಿಲ್ಲಿಸಿದೆ. ಈಗಾಗಲೇ ಕನ್ನಡ ಪುಸ್ತಕಗಳನ್ನು ಕೊಂಡು ಓದುವವರು ಕಡಿಮೆಯಾಗಿದ್ದು ಇದರಿಂದ ಕನ್ನಡ ಭಾಷೆಯ ಉಳಿವಿಗೆ ಹಿನ್ನಡೆಯಾಗಿದೆ. ಕನ್ನಡ ಪುಸ್ತಕಗಳು ಕನ್ನಡ ಭಾಷೆಯನ್ನು ಉಳಿಸಿ ಸ್ಥಿರವಾಗಿರಿಸಬಲ್ಲ ಸಾಧನಗಳಾಗಿವೆ. ಕನ್ನಡ ಭಾಷೆಯ ಬೆಳವಣಿಗೆಯಲ್ಲಿ, ಪ್ರಸಾರದಲ್ಲಿ, ಪ್ರಚಾರದಲ್ಲಿ ಕನ್ನಡ ಪುಸ್ತಕಗಳ ಪಾತ್ರವು ಮಹತ್ವದ್ದಾಗಿದೆ.

ಕನ್ನಡ ನಾಡು ನುಡಿಯ ಹಿತರಕ್ಷಣೆ, ಅಭಿವೃದ್ಧಿಯು ಕರ್ನಾಟಕ ಸರಕಾರದ ಕರ್ತವ್ಯವಾಗಿದ್ದು, ಕನ್ನಡ ಪುಸ್ತಕಗಳ ಖರೀದಿಯನ್ನು ಮತ್ತೆ ಪ್ರಾರಂಭಿಸಬೇಕಾಗಿದೆ. ಮುಖ್ಯಮಂತ್ರಿಯವರು ಈ ನಿಟ್ಟಿನಲ್ಲಿ ಕೂಡಾ ಗಮನ ಹರಿಸಬೇಕಾಗಿದೆ. ಕನ್ನಡ ಪುಸ್ತಕ ಸಂಸ್ಕೃತಿ ಉಳಿಯಲಿ, ಬೆಳೆಯಲಿ.

-ಯಜ್ಞ ನಾರಾಯಣ ಉಳ್ಳೂರ

35 ವರ್ಷ ಬಳಿಕ ಸರಳಾ ಹತ್ಯೆ ಪ್ರಕರಣಕ್ಕೆ ತಿರುವು

ಕಾಶ್ಮೀರಿ ಹಿಂದುಗಳನ್ನು ಓಡಿಸುವ ಸಂಚಾಗಿತ್ತು

• **ಶ್ರೀನಗರ:** ಕಾಶ್ಮೀರದಲ್ಲಿ ಉಗ್ರವಾದ ಆರಂಭಿಕ ದಿನಗಳಲ್ಲಿ ನಡೆದ ಅತ್ಯಂತ ಭೀಕರ ಅಪರಾಧಗಳಲ್ಲಿ ಒಂದೆಂದು ಪರಿಗಣಿಸಲ್ಪಡುವ ಕಾಶ್ಮೀರಿ ಹಿಂದು ದಾದಿ ಸರಳಾ ಭಟ್ ಅವರ ಅಪಹರಣ ಮತ್ತು ಬರ್ಬರ ಹತ್ಯೆ ಪ್ರಕರಣದಲ್ಲಿ 35 ವರ್ಷಗಳ ಬಳಿಕ ಮಹತ್ವದ ಬೆಳವಣಿಗೆ ಕಂಡುಬಂದಿದೆ. ಜಮ್ಮು-ಕಾಶ್ಮೀರ ರಾಜ್ಯ ತನಿಖಾ ಸಂಸ್ಥೆ (ಎಸ್‌ಐಎ) 737 ಪುಟಗಳ ಆರೋಪಪಟ್ಟಿ ಸಲ್ಲಿಸಿದ್ದು, ಜೆಕೆಎಲ್‌ಎಫ್ ಮಾಜಿ ಮುಖ್ಯಸ್ಥ ಮೊಹಮ್ಮದ್ ಯಾಸಿನ್ ಮಲಿಕ್ ಸೇರಿದಂತೆ ಐವರು ಉಗ್ರರ ವಿರುದ್ಧ ಆರೋಪ ದಾಖಲಿಸಿದೆ. ಚಾರ್ಜ್‌ಶೀಟ್ ಪ್ರಕಾರ, ಈ ಕೊಲೆ ವೈಯಕ್ತಿಕ ಘಟನೆ ಅಲ್ಲ, ಕಾಶ್ಮೀರಿ ಹಿಂದೂ ಸಮುದಾಯದಲ್ಲಿ ಭಯ ಹುಟ್ಟಿಸಿ, ವಲಸೆಗೆ ಕಾರಣವಾಗುವ ಹಾಗೂ ಪ್ರತ್ಯೇಕತಾವಾದಿ ಉದ್ದೇಶಗಳನ್ನು ಮುಂದುವರಿಸುವ ವಿಶಾಲ ಸಂಚಿನ ಭಾಗವಾಗಿತ್ತು.

ಐವರ ವಿರುದ್ಧ ಗಂಭೀರ ಆರೋಪ: ಎಸ್‌ಐಎ ತನಿಖೆಯ ಪ್ರಕಾರ, ಯಾಸಿನ್ ಮಲಿಕ್, ಖುರ್ಷಿದ್ ಅಹ್ಮದ್ ಚಾಲಕ್, ಅಬ್ದುಲ್ ಹಮೀದ್ ಶೇಖ್, ಮೊಹಮ್ಮದ್ ಯುಸೂಫ್ ಸೋಫಿ ಅಲಿಯಾಸ್ ಇಡ್ರೀಸ್ ಹಾಗೂ ಗುಲಾಂ ಮೊಹಮ್ಮದ್ ಟಪ್ಲು ಈ ಪ್ರಕರಣದಲ್ಲಿ ಭಾಗಿಯಾಗಿದ್ದರು. ಇವರಲ್ಲಿ ಮೂವರು ಈಗಾಗಲೇ ಮೃತಪಟ್ಟಿದ್ದು, ಯಾಸಿನ್ ಮಲಿಕ್ ಉಗ್ರ ಚಟುವಟಿಕೆ ಮತ್ತು ಭಯೋತ್ಪಾದನೆಗೆ ಹಣಕಾಸು ನೆರವು ನೀಡಿದ ಪ್ರಕರಣಗಳಲ್ಲಿ ದಿಲ್ಲಿಯ ತಿಹಾರ್ ಜೈಲಿನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾನೆ. ಖುರ್ಷಿದ್ ಅಹ್ಮದ್ ಚಾಲಕ್ ಪಾಕಿಸ್ತಾನ ಆಕ್ರಮಿತ ಕಾಶ್ಮೀರಕ್ಕೆ (ಪಿಒಕೆ) ಪರಾರಿಯಾಗಿರುವ ಶಂಕೆ ಇದ್ದು, ಅವನ ವಿರುದ್ಧ ಕಾನೂನು ಕ್ರಮ ಆರಂಭಿಸಲಾಗಿದೆ.

ಎಸ್‌ಕೆಐಎಂಎಸ್ ಆಸ್ಪತ್ರೆಯಿಂದ ಅಪಹರಣ: 1990ರ ಏ.18ರಂದು ಶ್ರೀನಗರದ ಶೇರ್ ಇ ಕಾಶ್ಮೀರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಎಸ್‌ಕೆಐಎಂಎಸ್) ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿದ್ದ ಸರಳಾ ಭಟ್ ಅವರನ್ನು ಆಸ್ಪತ್ರೆ ಸಮೀಪದಿಂದ ಅಪಹರಿಸಲಾಗಿತ್ತು.

ತನಿಖೆಯ ಪ್ರಕಾರ, ಅಪಹರಣದ ಬಳಿಕ ಅವರನ್ನು ಅಮಾನವೀಯವಾಗಿ ಹಿಂಸಿಸಿ, ದೈಹಿಕ ಕಿರುಕುಳ ನೀಡಿ, ನಂತರ ಸ್ವಯಂಚಾಲಿತ ರೈಫಲ್‌ನಿಂದ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಶ್ರೀನಗರದ ಉಮರ್ ಕಾಲೋನಿ, ಮಲ್ಲಾಬಾಗ್ ಪ್ರದೇಶದಲ್ಲಿ ಅವರ ಮೃತದೇಹ ಪತ್ತೆಯಾಗಿದ್ದು, ದೇಹದ ಮೇಲೆ ಹಲವು ಗುಂಡಿನ ಗಾಯಗಳಿದ್ದವು.

» ಯಾಸಿನ್ ಮಲಿಕ್ ಸೇರಿ ಐವರ ವಿರುದ್ಧ 737 ಪುಟಗಳ ಚಾರ್ಜ್‌ಶೀಟ್

ನ್ಯಾಯಕ್ಕಾಗಿ ಮಹತ್ವದ ಹೆಜ್ಜೆ

ಆರೋಪಿಗಳ ವಿರುದ್ಧ ಆರ್‌ಪಿಸಿ ಸೆಕ್ಷನ್ 364, 341, 302, 201 ಮತ್ತು 120-ಬಿ ಜತೆಗೆ ಟಾಡಾ ಹಾಗೂ ಶಸ್ತ್ರಾಸ್ತ್ರ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. 35 ವರ್ಷಗಳ ಬಳಿಕ ಸಲ್ಲಿಕೆಯಾಗಿರುವ ಈ ಚಾರ್ಜ್‌ಶೀಟ್, ಉಗ್ರ ಕೃತ್ಯಗಳ ಆರೋಪಿಗಳು ಎಷ್ಟು ವರ್ಷ ಕಳೆದರೂ ಕಾನೂನಿನ ಕೈಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸ್ಪಷ್ಟ ಸಂದೇಶ ನೀಡಿದೆ ಎಂದು ಎಸ್‌ಐಎ ಹೇಳಿದೆ. ಕಾಶ್ಮೀರಿ ಹಿಂದುಗಳ ವಿರುದ್ಧ ನಡೆದ ಹತ್ಯೆಗಳು ಮತ್ತು ದೌರ್ಜನ್ಯಗಳಿಗೆ ಸಂಬಂಧಿಸಿದ ಹಳೆಯ ಪ್ರಕರಣಗಳ ತನಿಖೆಗೆ ಇದು ವೇಗ ನೀಡಲಿದ್ದು, ದೀರ್ಘಕಾಲದಿಂದ ನ್ಯಾಯಕ್ಕಾಗಿ ಕಾಯುತ್ತಿರುವ ಸಂತ್ರಸ್ತ ಕುಟುಂಬಗಳಿಗೆ ನ್ಯಾಯದ ಭರವಸೆ ಮೂಡಿಸಿದೆ.

34 ವರ್ಷಗಳ ಬಳಿಕ ಮರು ತನಿಖೆ: ಉಗ್ರ ಚಟುವಟಿಕೆಗಳು ತೀವ್ರವಾಗಿದ್ದ ಕಾಲದಲ್ಲಿ ಸಾಕ್ಷಿಗಳು ಮುಂದೆ ಬರಲು ಹೆದರಿದ್ದರಿಂದ ಪ್ರಕರಣ ದಶಕಗಳ ಕಾಲ ಬಗೆಹರಿಯದೇ ಉಳಿದಿತ್ತು. 2024ರ ಮಾ.18ರಂದು ಜಮ್ಮು-ಕಾಶ್ಮೀರ ಪೊಲೀಸ್ ಮಹಾನಿರ್ದೇಶಕರು ಪ್ರಕರಣವನ್ನು ಎಸ್‌ಐಎಗೆ ವರ್ಗಾಯಿಸಿ ಮರು ತನಿಖೆಗೆ ಆದೇಶಿಸಿದ್ದರು. ರಕ್ಷಿತ ಸಾಕ್ಷಿಗಳ ಹೇಳಿಕೆಗಳು, ಪ್ರತ್ಯಕ್ಷ ಸಾಕ್ಷ್ಯಗಳು, ವಿಧಿವಿಜ್ಞಾನ ಮತ್ತು ವೈದ್ಯಕೀಯ ವರದಿಗಳು, ದಾಖಲೆಗಳು ಹಾಗೂ ವಿದ್ಯುನ್ಮಾನ ಸಾಕ್ಷ್ಯಗಳ ಆಧಾರದ ಮೇಲೆ ಎಸ್‌ಐಎ ಘಟನೆಗಳ ಸಮಗ್ರ ತನಿಖೆ ನಡೆಸಿ ಚಾರ್ಜ್‌ಶೀಟ್ ಸಿದ್ಧಪಡಿಸಿದೆ.

'ಪೊಲೀಸ್ ಮಾಹಿತಿದಾರ' ಆರೋಪ ಸುಳ್ಳು: ಸರಳಾ ಭಟ್ ಪೊಲೀಸ್ ಮಾಹಿತಿದಾರರಾಗಿದ್ದರು ಎಂಬ ಆರೋಪ ಸಂಪೂರ್ಣವಾಗಿ ಸುಳ್ಳು ಹಾಗೂ ಕಟ್ಟುಕಥೆ ಎಂದು ಎಸ್‌ಐಎ ಸ್ಪಷ್ಟಪಡಿಸಿದೆ. ಪೂರ್ವನಿಯೋಜಿತ ಹತ್ಯೆಯನ್ನು ಸಮರ್ಥಿಸಿಕೊಳ್ಳಲು ಉಗ್ರರು ಈ ಆರೋಪವನ್ನು ಬಳಸಿಕೊಂಡಿದ್ದರು ಎಂದು ತನಿಖೆ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಪ್ರಮುಖ ನಿಯಂತ್ರಣ ಹಾಗೂ ಆರ್ಥಿಕ ಬದಲಾವಣೆಗಳು ಇಂದಿನಿಂದ ದೇಶಾದ್ಯಂತ ಅನುಷ್ಠಾನಕ್ಕೆ ಬರಲಿವೆ. ಈ ಪರಿಷ್ಕರಣೆಗಳು ಆದಾಯ ತೆರಿಗೆ ಸಲ್ಲಿಕೆದಾರರು, ಆಧಾರ್ ಕಾರ್ಡ್‌ದಾರರು, ಬ್ಯಾಂಕಿಂಗ್ ಗ್ರಾಹಕರು, ಪಾಸ್‌ಪೋರ್ಟ್ ಅರ್ಜಿದಾರರು ಮತ್ತು ಕ್ರೆಡಿಟ್ ಕಾರ್ಡ್ ಬಳಕೆದಾರರ ಮೇಲೆ ನೇರ ಪರಿಣಾಮ ಬೀರಲಿವೆ. ಲಕ್ಷಾಂತರ ಜನರು ತಮ್ಮ ಹಣಕಾಸು ಯೋಜನೆಗಳನ್ನು ಈ ಹೊಸ ಗಡುವುಗಳು, ಶುಲ್ಕ ಬದಲಾವಣೆಗಳು ಮತ್ತು ಸಾಂಸ್ಥಿಕ ಸೌಲಭ್ಯಗಳಿಗೆ ಅನುಗುಣವಾಗಿ ಮಾರ್ಪಡಿಸಿಕೊಳ್ಳಬೇಕಾಗಿದೆ.



ಸಹಜ ಸ್ಥಿತಿಗೆ ಇಂಧನ ಪೂರೈಕೆ; ಆತಂಕ ದೂರ



ಮಧ್ಯಪ್ರಾಚ್ಯದ ಸಂಘರ್ಷದಿಂದಾಗಿ ಉಂಟಾಗಿದ್ದ ಇಂಧನ ಕೊರತೆಯ ಆತಂಕ ದೂರವಾಗಿರುವ ಹಿನ್ನೆಲೆಯಲ್ಲಿ, ಜುಲೈ 1ರಿಂದ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದ ಮೇಲಿನ ತಾತ್ಕಾಲಿಕ ನಿರ್ಬಂಧಗಳನ್ನು ಹಿಂಪಡೆಯಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಜೂನ್ 12ರಂದು ಹೇರಲಾಗಿದ್ದ ಈ ನಿಯಮಾವಳಿಗಳು ಇನ್ನು ಮುಂದೆ ಅಗತ್ಯವಿಲ್ಲ ಎಂದು ಸರ್ಕಾರ ತಿಳಿಸಿದೆ. ಇದರಿಂದಾಗಿ ಕೈಗಾರಿಕಾ ಮತ್ತು ವಾಣಿಜ್ಯ ಗ್ರಾಹಕರು ಎಂದಿನಂತೆ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಇಂಧನ ಖರೀದಿಸಬಹುದಾಗಿದೆ.

ಆದಾಯ ತೆರಿಗೆ ಸಲ್ಲಿಕೆ ಗಡುವು

2025-26ರ ಹಣಕಾಸು ವರ್ಷಕ್ಕೆ(ಮೌಲ್ಯಮಾಪನ ವರ್ಷ 2026-27) ಸಂಬಂಧಿಸಿದಂತೆ ಐಟಿಆರ್-1 ಮತ್ತು ಐಟಿಆರ್-2 ಸಲ್ಲಿಸಲು ಅರ್ಹರಾಗಿರುವ ತೆರಿಗೆದಾರರು ತಮ್ಮ ರಿಟರ್ನ್ಸ್ ಅನ್ನು ಜುಲೈ 31ರೊಳಗೆ ಸಲ್ಲಿಸುವುದು ಕಡ್ಡಾಯ. ನಿಗದಿತ ಅವಧಿಯೊಳಗೆ ತೆರಿಗೆ ರಿಟರ್ನ್ಸ್ ಸಲ್ಲಿಸಲು ವಿಫಲವಾದರೆ ಕಾನೂನುಬದ್ಧ ದಂಡ ಪಾವತಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ, ಈ ವಿಳಂಬ, ತೆರಿಗೆದಾರರು ತಮಗೆ ಅನುಕೂಲಕರವಾದ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳುವುದನ್ನು ನಿರ್ಬಂಧಿಸುತ್ತದೆ ಮತ್ತು ಅರ್ಹ ಹಣಕಾಸು ನಷ್ಟಗಳನ್ನು ಮುಂದಿನ ಮೌಲ್ಯಮಾಪನ ವರ್ಷಗಳಿಗೆ ಕೊಂಡೊಯ್ಯಲು ಸಾಧ್ಯವಿಲ್ಲ.

ಕ್ರೆಡಿಟ್ ಕಾರ್ಡ್ ನಿಯಮ ಬದಲಾವಣೆ

ದೇಶದ ಪ್ರಮುಖ ಬ್ಯಾಂಕಿಂಗ್ ಸಂಸ್ಥೆಗಳು ತಮ್ಮ ಗ್ರಾಹಕರ ಕ್ರೆಡಿಟ್ ಕಾರ್ಡ್ ಸೌಲಭ್ಯಗಳಲ್ಲಿ ಪ್ರಮುಖ ಬದಲಾವಣೆಗಳನ್ನು ತರುತ್ತಿವೆ. ಎಸ್‌ಬಿಐ ಕಾರ್ಡ್ ಸಂಸ್ಥೆ, ತನ್ನ ವಿಶೇಷ ಫೋನ್‌ಪೇ ಎಸ್‌ಬಿಐ ಕ್ರೆಡಿಟ್ ಕಾರ್ಡ್ ಪರ್ವಲ್ ಮತ್ತು ಫೋನ್‌ಪೇ ಎಸ್‌ಬಿಐ ಕ್ರೆಡಿಟ್ ಕಾರ್ಡ್ ಸೆಲೆಕ್ಟ್ ಬ್ಲಾಕ್ ಆವೃತ್ತಿಗಳಿಗೆ ಪರಿಷ್ಕೃತ ರಿವಾರ್ಡ್ ಪಾಯಿಂಟ್ಸ್ ಅನ್ನು ಪರಿಚಯಿಸುತ್ತಿದೆ. ಹೊಸ ಮಾರ್ಗಸೂಚಿಗಳು ರಿವಾರ್ಡ್ ಪಾಯಿಂಟ್ಸ್ ಗಳಿಕೆಗೆ ಕಠಿಣ ಮಿತಿಗಳನ್ನು ವಿಧಿಸಿವೆ ಮತ್ತು ಕೆಲವು ವರ್ಗದ ವಹಿವಾಟುಗಳನ್ನು ರಿವಾರ್ಡ್ ಪಾಯಿಂಟ್ಸ್ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಇದೇ ವೇಳೆ, ಎಚ್‌ಡಿಎಫ್‌ಸಿ ಬ್ಯಾಂಕ್, ವಿಮಾನ ನಿಲ್ದಾಣದ ಲಾಂಜ್ ಪ್ರವೇಶಕ್ಕೆ ವೆಚ್ಚ ಆಧಾರಿತ ಮಾನದಂಡ ನಿಗದಿಪಡಿಸಿದೆ. ಕಾರ್ಡ್‌ದಾರರು ಪ್ರತಿ ತ್ರೈಮಾಸಿಕದಲ್ಲಿ ಮೂರು ಉಚಿತ ದೇಶೀಯ ಲಾಂಜ್ ಪ್ರವೇಶ ಪಡೆಯಲು, ಅದಕ್ಕೂ ಹಿಂದಿನ ತ್ರೈಮಾಸಿಕದಲ್ಲಿ ಕನಿಷ್ಠ 60,000 ರೂ.ಗಳನ್ನು ಖರ್ಚು ಮಾಡಿರಬೇಕಾಗುತ್ತದೆ.



ಹೆಚ್ಚುವರಿ ಬ್ಯಾಂಕಿಂಗ್ ನವೀಕರಣಗಳು

ಭಾರತೀಯ ರಿಸರ್ವ್ ಬ್ಯಾಂಕ್ ಇಂದಿನಿಂದ ಜಾರಿಗೆ ಬರುವಂತೆ ವಾಣಿಜ್ಯ ಬ್ಯಾಂಕುಗಳ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ವಿತರಣಾ ಪ್ರಕ್ರಿಯೆಯಲ್ಲಿ ಹೊಸ ಭದ್ರತಾ ಮಾನದಂಡಗಳನ್ನು ಕಡ್ಡಾಯಗೊಳಿಸಿದೆ. ಇದರ ಅನ್ವಯ ಗ್ರಾಹಕರ ಅನುಮತಿಯಿಲ್ಲದೆ ಕಾರ್ಡ್‌ಗಳ ಅಂತಾರಾಷ್ಟ್ರೀಯ ವಹಿವಾಟು ಸೌಲಭ್ಯವನ್ನು ಸಕ್ರಿಯಗೊಳಿಸುವುದನ್ನು ನಿಷೇಧಿಸಲಾಗಿದೆ. ಜತೆಗೆ, ನಿಷ್ಕ್ರಿಯ ಖಾತೆಗಳ ಮೇಲಿನ ಮಾಸಿಕ ಕನಿಷ್ಠ ಬ್ಯಾಲೆನ್ಸ್ ದಂಡದ ನಿಯಮಗಳನ್ನು ಸರಳಗೊಳಿಸಲಾಗಿದ್ದು, ಗ್ರಾಹಕರಿಗೆ ತಮ್ಮ ಖಾತೆಗಳನ್ನು ಸುಲಭವಾಗಿ ನಿರ್ವಹಿಸಲು ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.



ದಾಖಲೆಗಳ ಶುಲ್ಕ ಪರಿಷ್ಕರಣೆ

ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ(ಯುಐಡಿಎಐ) ನಿಗದಿತ ಅವಧಿಗೆ ದಾಖಲೆಗಳ ನವೀಕರಣ ವೆಚ್ಚವನ್ನು ಮಾರ್ಪಡಿಸಿದೆ. ಅಧಿಕೃತ ಆಧಾರ್ ಮೊಬೈಲ್ ಆ್ಯಪ್ ಮೂಲಕ ಇ-ಮೇಲ್ ವಿಳಾಸವನ್ನು ನವೀಕರಿಸಲು ವಿಧಿಸಲಾಗುತ್ತಿದ್ದ 75 ರೂ.ಗಳ ಶುಲ್ಕವನ್ನು ಪ್ರಾಧಿಕಾರ ಸಂಪೂರ್ಣವಾಗಿ ಮನ್ನಾ ಮಾಡಿದೆ. ಈ ವಿನಾಯಿತಿ ಆರು ತಿಂಗಳವರೆಗೆ ಅಂದರೆ ಡಿ.31ರವರೆಗೆ ಮಾತ್ರ ಜಾರಿಯಲ್ಲಿರಲಿದೆ. ಮತ್ತೊಂದೆಡೆ, ವಿದೇಶಿ ಪ್ರಯಾಣದ ದಾಖಲೆಗಳ ವೆಚ್ಚ ದುಬಾರಿಯಾಗಲಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ ಅಂತಾರಾಷ್ಟ್ರೀಯ ಮತ್ತು ದೇಶೀಯ ಕೇಂದ್ರಗಳಲ್ಲಿ ಸಾಮಾನ್ಯ ಹಾಗೂ ತತ್ಕಾಲ್ ಎರಡೂ ವಿಭಾಗಗಳ ಪಾಸ್‌ಪೋರ್ಟ್ ಸೇವಾ ಶುಲ್ಕವನ್ನು ಹೆಚ್ಚಿಸುತ್ತಿದೆ.

» **ಐಟಿಆರ್ ಗಡುವು:** ಐಟಿಆರ್-1 ಮತ್ತು ಐಟಿಆರ್-2 ಸಲ್ಲಿಕೆಗೆ ಜು.31 ಕೊನೆಯ ದಿನ.

» **ಆಧಾರ್ ಶುಲ್ಕ ವಿನಾಯಿತಿ:** ಇ-ಮೇಲ್ ಅಪ್‌ಡೇಟ್ ಮಾಡಲು ಇದ್ದ 75 ರೂ. ಶುಲ್ಕ ಆರು ತಿಂಗಳವರೆಗೆ ರದ್ದು.

» **ಎಚ್‌ಡಿಎಫ್‌ಸಿ ಲಾಂಜ್ ಮಿತಿ:** ಉಚಿತ ಲಾಂಜ್ ಸೌಲಭ್ಯಕ್ಕೆ ಕನಿಷ್ಠ 60,000 ರೂ. ವೆಚ್ಚ ಕಡ್ಡಾಯ.

ಹೂಡಿಕೆದಾರರಿಗೆ ಸೂಚನೆ

ಮ್ಯೂಚುವಲ್ ಫಂಡ್ ಮತ್ತು ಷೇರು ಮಾರುಕಟ್ಟೆ ಹೂಡಿಕೆದಾರರು ಜುಲೈ ಅಂತ್ಯದೊಳಗೆ ತಮ್ಮ ನಾಮಿನಿ ವಿವರಗಳನ್ನು ಕಡ್ಡಾಯವಾಗಿ ಅಪ್‌ಡೇಟ್ ಮಾಡಬೇಕಿದೆ. ತಪ್ಪಿದಲ್ಲಿ ಹೂಡಿಕೆ ಖಾತೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುವುದು ಎಂದು ಸೆಬಿ ತಿಳಿಸಿದೆ. ಡಿಮ್ಯಾಟ್ ಖಾತೆದಾರರಿಗೂ ಈ ನಿಯಮ ಅನ್ವಯಿಸುತ್ತದೆ.



ಇಪಿಎಫ್‌ಒ ಸುಧಾರಣೆ, ತುಟ್ಟಿಭತ್ಯೆ ಮೇಲೆ ವಿಶೇಷ ಗಮನ

ನೌಕರರ ಭವಿಷ್ಯ ನಿಧಿ ಸಂಸ್ಥೆಯ(ಇಪಿಎಫ್‌ಒ) ಡಿಜಿಟಲ್ ಮೂಲಸೌಕರ್ಯ ಮುಂಬರುವ ಇಪಿಎಫ್‌ಒ 3.0 ತಂತ್ರಜ್ಞಾನದ ಮೂಲಕ ಆಧುನೀಕರಣಗೊಳ್ಳಲಿದ್ದು, ಯುಪಿಐ ನೆಟ್‌ವರ್ಕ್ ಮೂಲಕ ತ್ವರಿತ ಹಣ ಹಿಂಪಡೆಯುವ ಸೌಲಭ್ಯವನ್ನು ಪರಿಚಯಿಸಲಾಗುತ್ತಿದೆ. ಇದರೊಂದಿಗೆ, ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರ ವೇತನದ ಪ್ರಮುಖ ಅಂಶವಾಗಿರುವ ತುಟ್ಟಿಭತ್ಯೆಯನ್ನು(ಡಿಎ) ಸರ್ಕಾರ ಪರಿಶೀಲಿಸುತ್ತಿದ್ದು, ದೇಶದ ಲಕ್ಷಾಂತರ ಫಲಾನುಭವಿಗಳು ಈ ಅರ್ಧವಾರ್ಷಿಕ ವೇತನ ಪರಿಷ್ಕರಣೆಯನ್ನು ಕುತೂಹಲದಿಂದ ಗಮನಿಸುತ್ತಿದ್ದಾರೆ.

ಜನ್ಮಸಿದ್ಧ ಪೌರತ್ವಕ್ಕೆ ಸುಪ್ರೀಂ ಮುದ್ರೆ

• **ವಾಷಿಂಗ್ಟನ್:** ಅಮೆರಿಕದಲ್ಲಿ ಜನಿಸಿದ ಬಹುತೇಕ ಪ್ರತಿಯೊಬ್ಬ ಮಗುವಿಗೂ ಸ್ವಯಂಚಾಲಿತವಾಗಿ ದೊರೆಯುವ ಜನ್ಮಸಿದ್ಧ ಪೌರತ್ವವನ್ನು ನಿರ್ಬಂಧಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಸಿದ್ದ ಯತ್ನಕ್ಕೆ ಭಾರೀ ಹಿನ್ನಡೆಯಾಗಿದೆ. ಟ್ರಂಪ್ ಅವರ ಕಾರ್ಯಕಾರಿ ಆದೇಶವನ್ನು ಅಮೆರಿಕದ ಸರ್ವೋಚ್ಚ ನ್ಯಾಯಾಲಯ ಮಂಗಳವಾರ 6-3 ಬಹುಮತದಿಂದ ತಿರಸ್ಕರಿಸಿ, ಜನ್ಮಸಿದ್ಧ ಪೌರತ್ವದ ಸಾಂವಿಧಾನಿಕ ಹಕ್ಕನ್ನು ಎತ್ತಿಹಿಡಿದಿದೆ. ಅಮೆರಿಕದ ಪ್ರಜೆ ಅಥವಾ ಕಾನೂನುಬದ್ಧ ಶಾಶ್ವತ ನಿವಾಸಿ ಅಲ್ಲದ ಪೋಷಕರಿಗೆ ಅಮೆರಿಕದಲ್ಲಿ ಜನಿಸುವ ಮಕ್ಕಳನ್ನು ಪೌರರೆಂದು ಪರಿಗಣಿಸಬಾರದು ಎಂದು ಟ್ರಂಪ್ ಆದೇಶಿಸಿದ್ದರು. ಅಕ್ರಮವಾಗಿ ನೆಲೆಸಿರುವವರು ಮಾತ್ರವಲ್ಲದೆ, ವಿದ್ಯಾರ್ಥಿ ಮತ್ತು ಉದ್ಯೋಗ ವೀಸಾದಂತಹ ತಾತ್ಕಾಲಿಕ ಅನುಮತಿಯಡಿ ಇರುವವರ ಮಕ್ಕಳಿಗೂ ಈ ನಿರ್ಬಂಧ ಅನ್ವಯಿಸುವಂತೆ ಆದೇಶ ರೂಪಿಸಲಾಗಿತ್ತು. ಈಗಿನ ಸುಪ್ರೀಂಕೋರ್ಟ್ ಆದೇಶದಿಂದ ಭಾರತವೂ ಸೇರಿದಂತೆ ಅಮೆರಿಕದಲ್ಲಿ ನೆಲೆಸಿರುವ ಲಕ್ಷಾಂತರ ವಲಸಿಗರ ಮಕ್ಕಳಿಗೆ ನಿರಾಳ ದೊರೆತಂತಾಗಿದೆ.

» ಟ್ರಂಪ್ ನಿರ್ಬಂಧಕ್ಕೆ ಅಮೆರಿಕದ ನ್ಯಾಯಾಲಯ ತಡೆ

ಕಿರುಸುದ್ದಿ

ವಾಟ್ಸ್‌ಆ್ಯಪ್‌ಗೂ ಬಂತು ಯೂಸರ್‌ನೇಮ್!

• **ಹೊಸದಿಲ್ಲಿ:** ಜನಪ್ರಿಯ ಮೆಸೇಜಿಂಗ್ ಆ್ಯಪ್ ವಾಟ್ಸ್‌ಆ್ಯಪ್ ತನ್ನ ಬಳಕೆದಾರರ ಸುರಕ್ಷತೆ ಮತ್ತು ಗೌಪ್ಯತೆ ಕಾಪಾಡಲು ಮತ್ತೊಂದು ಹೆಜ್ಜೆ ಮುಂದಿಟ್ಟಿದೆ. ಎಕ್ಸ್ ಅಥವಾ ಇನ್‌ಸ್ಟಾಗ್ರಾಂ ರೀತಿಯಲ್ಲೇ ವಾಟ್ಸ್‌ಆ್ಯಪ್‌ನಲ್ಲೂ ಪ್ರತ್ಯೇಕ ಯೂಸರ್‌ನೇಮ್ ಬಳಸುವ ವೈಶಿಷ್ಟ್ಯ ಪರಿಚಯಿಸಲಾಗುತ್ತಿದೆ. ಈ ಮೂಲಕ ಇನ್ನು ಮುಂದೆ ಯಾರೊಂದಿಗಾದರೂ ಚಾಟ್ ಮೂಲಕ ಸಂಪರ್ಕಿಸಲು ವೈಯಕ್ತಿಕ ಮೊಬೈಲ್ ಸಂಖ್ಯೆ ಹಂಚಿಕೊಳ್ಳುವ ಅಗತ್ಯವಿರುವುದಿಲ್ಲ.

ತ.ನಾಡಲ್ಲಿ ಇನ್ನು ಎಸಿ ಬಸ್ ಮಾತ್ರ ಖರೀದಿ

• **ಚೆನ್ನೈ:** ತಮಿಳುನಾಡು ಸರ್ಕಾರದಿಂದ ಇನ್ಮುಂದೆ ಎಸಿ ಬಸ್‌ಗಳನ್ನು ಮಾತ್ರ ಖರೀದಿಸಲು ಸಿಎಂ ವಿಜಯ್ ನಿರ್ಧರಿಸಿದ್ದಾರೆ ಎಂದು ಸಾರಿಗೆ ಸಚಿವ ವಿಜಯ್ ತಮಿಳನ್ ಪಾರ್ಥಿಬನ್ ತಿಳಿಸಿದ್ದಾರೆ. ತಮಿಳುನಾಡಿನ ಪ್ರತಿಯೊಂದು ದೂರದ ಪ್ರದೇಶವನ್ನು ಸಾರ್ವಜನಿಕರು ಹವಾನಿಯಂತ್ರಿತ ವಾಹನಗಳಲ್ಲಿ ಆರಾಮವಾಗಿ ಪ್ರಯಾಣಿಸಬೇಕೆಂದು ಸಿಎಂ ಬಯಸುತ್ತಾರೆ ಎಂದು ಅವರು ಹೇಳಿದರು.

ಭವಿಷ್ಯದ ಯುದ್ಧಗಳು ಸಮಗ್ರ: ಜ| ದ್ವಿವೇದಿ

• **ಹೊಸದಿಲ್ಲಿ:** ಭವಿಷ್ಯದಲ್ಲಿ ಯುದ್ಧಗಳು ಹೆಚ್ಚು ಜಂಟಿ ಮತ್ತು ಸಮಗ್ರವಾಗಿರುತ್ತವೆ. ಈ ನಿಟ್ಟಿನಲ್ಲಿ ಸಶಸ್ತ್ರ ಪಡೆಗಳ ನಿರ್ದೇಶನ ಸ್ಪಷ್ಟವಾಗಿದೆ ಎಂದು ನಿರ್ಗಮಿತ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿದ್ದಾರೆ. ಜನರಲ್ ದ್ವಿವೇದಿಯವರಿಗೆ ಸೌತ್ ಬ್ಲಾಕ್‌ನಲ್ಲಿ ವಿಧ್ಯುಕ್ತ ವಿದಾಯ ಸಮಾರಂಭದ ಭಾಗವಾಗಿ ಗೌರವ ವಂದನೆ ನೀಡಲಾಯಿತು. ಈ ವೇಳೆ ಮಾತನಾಡಿದ ದ್ವಿವೇದಿ, ಇಂದು ನಾನು ಸೇನಾ ಮುಖ್ಯಸ್ಥನಾಗಿ ನನ್ನ ಅಧಿಕಾರಾವಧಿಯನ್ನು ಪೂರ್ಣಗೊಳಿಸುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ಸೇವೆಗೆ ಆಭಾರಿಯಾಗಿದ್ದು, ಕೃತಜ್ಞತೆ, ಹೆಮ್ಮೆ ಮತ್ತು ತೃಪ್ತಿಯನ್ನು ಅನುಭವಿಸುತ್ತಿದ್ದೇನೆ ಎಂದಿದ್ದಾರೆ.



ಸೈನಿಕ್ ಶಾಲೆಯಿಂದ ಇಲ್ಲಿಯವರೆಗಿನ ಪ್ರಯಾಣವು ನಂಬಲಾಗದು. ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಭಾರತೀಯ ಸೇನೆಗೆ ಸೇವೆ ಸಲ್ಲಿಸುವುದು ನನ್ನ ಜೀವನದ ಅತ್ಯಂತ ದೊಡ್ಡ ಅದೃಷ್ಟವಾಗಿದೆ ಎಂದರು. ಭಾರತೀಯ ಸೇನೆಯು ತನ್ನ ಬಲವನ್ನು ಒಬ್ಬ ವ್ಯಕ್ತಿಯಿಂದ ಪಡೆಯುವುದಿಲ್ಲ, ಆದರೆ ಅದರ ಸೈನಿಕರು, ಕಮಾಂಡರ್‌ಗಳು, ಅನುಭವಿಗಳು, ಕುಟುಂಬಗಳು ಮತ್ತು ದೇಶದ ನಾಗರಿಕರ ಅಚಲವಾದ ನಂಬಿಕೆಯಿಂದ ಪಡೆಯುತ್ತದೆ. ನಮ್ಮ ಸೇನೆಯ ಹುತಾತ್ಮ ವೀರರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ವಿದಾಯ ಸಮಾರಂಭಕ್ಕೂ ಮುನ್ನ, ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿ ದೇಶದ ವೀರ ಯೋಧರನ್ನು ಗೌರವಿಸಲು ಪುಷ್ಪಗುಚ್ಛ ಅರ್ಪಿಸಿದರು.

ಎಸ್‌ಐಆರ್ ವಿರುದ್ಧ 23 ಪಕ್ಷಗಳಿಂದ ಸಿಜೆಐಗೆ ಪತ್ರ

• **ಹೊಸದಿಲ್ಲಿ:** ಚುನಾವಣಾ ಆಯೋಗದ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ಹಾಗೂ ಇತರ ಚುನಾವಣಾ ಸಂಬಂಧಿತ ವಿಷಯಗಳ ಬಗ್ಗೆ 23 ರಾಜಕೀಯ ಪಕ್ಷಗಳು ಮತ್ತು ಒಬ್ಬ ಸ್ವತಂತ್ರ ಸಂಸದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರಿಗೆ ಮಂಗಳವಾರ ಜಂಟಿ ಪತ್ರ ರವಾನಿಸಿದ್ದಾರೆ. ಈ ಪತ್ರಕ್ಕೆ ಇಂಡಿ ಮೈತ್ರಿಕೂಟದ ಪ್ರಮುಖ ಪಕ್ಷಗಳ ಜತೆಗೆ ಮೈತ್ರಿಯಿಂದ ದೂರ ಉಳಿದಿರುವ ಆಮ್ ಆದ್ಮಿ ಪಕ್ಷ(ಎಎಪಿ) ಹಾಗೂ ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಸಹ ಸಹಿ ಹಾಕಿವೆ. ಈ ಕುರಿತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಎಕ್ಸ್‌ನಲ್ಲಿ ಮಾಹಿತಿ ನೀಡಿದ್ದಾರೆ. ಪತ್ರಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್, ಜಾರ್ಖಂಡ್ ಸಿಎಂ ಹೇಮಂತ್ ಸೊರೇನ್, ಜಮ್ಮು-ಕಾಶ್ಮೀರ ಸಿಎಂ ಓಮರ್ ಅಬ್ದುಲ್ಲಾ, ಸ್ವತಂತ್ರ ಸಂಸದ ಕಪಿಲ್ ಸಿಬಲ್ ಸೇರಿದಂತೆ ಹಲವರು ಸಹಿ ಹಾಕಿದ್ದಾರೆ. ಪ್ರಜಾಪ್ರಭುತ್ವದ ಸಂಸ್ಥೆಗಳು ವಿಫಲವಾದಾಗ ದೇಶದ ಜನರು ನ್ಯಾಯಾಂಗದತ್ತ ನಿರೀಕ್ಷೆಯಿಂದ ನೋಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಹಿನ್ನೆಲೆಯಲ್ಲಿ ನ್ಯಾಯಾಂಗವು ದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪತ್ರದಲ್ಲಿ ಮನವಿ ಮಾಡಲಾಗಿದೆ.



ವಿಕಸಿತ ಭಾರತ, ನೀತಿ ಸುಧಾರಣೆ ಬಗ್ಗೆ ಚರ್ಚೆ

• **ಹೊಸದಿಲ್ಲಿ:** ನೀತಿ ಸುಧಾರಣೆಗಳು, ಆಡಳಿತಾತ್ಮಕ ದಕ್ಷತೆ, ಸುಲಲಿತ ವ್ಯಾಪಾರ ಮತ್ತು ವಿಕಸಿತ ಭಾರತ 2047ರ ದೀರ್ಘಾವಧಿಯ ದೃಷ್ಟಿಕೋನಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಸಚಿವಾಲಯಗಳ ಕಾರ್ಯದರ್ಶಿಗಳ ಉನ್ನತ ಮಟ್ಟದ ಸಭೆಯಲ್ಲಿ ಚರ್ಚಿಸಿದ್ದಾರೆ. ಆಡಳಿತಾತ್ಮಕ ಅಡೆತಡೆಗಳನ್ನು ಗುರುತಿಸುವ ಮೂಲಕ, ನಿಯಂತ್ರಕ ಅನುಸರಣೆಯನ್ನು ಸರಳಗೊಳಿಸುವ ಮೂಲಕ ಮತ್ತು ಭಾರತದ ಆರ್ಥಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಮೂಲಕ ಈಸ್ ಆಫ್ ಡೂಯಿಂಗ್ ಬಿಸಿನೆಸ್(ಇಒಡಿಬಿ) ಸುಧಾರಿಸುವುದು ಚರ್ಚೆಗಳ ಪ್ರಮುಖ ಕೇಂದ್ರವಾಗಿತ್ತು. ನಾಗರಿಕ ಕೇಂದ್ರಿತ ಸುಧಾರಣೆಗಳು ಮತ್ತು ಆಡಳಿತ ಮತ್ತು ಸಾರ್ವಜನಿಕ ಸೇವಾ ವಿತರಣೆಯನ್ನು ಬಲಪಡಿಸಲು ವಿನ್ಯಾಸಗೊಳಿಸಲಾದ ರಚನಾತ್ಮಕ ಬದಲಾವಣೆಗಳ ಮೂಲಕ ಜೀವನವನ್ನು ಸುಲಭಗೊಳಿಸುವ(ಇಒಎಲ್) ಕ್ರಮಗಳನ್ನು ಅಧಿಕಾರಿಗಳು ಪರಿಶೀಲಿಸಿದ್ದಾರೆ. ಸ್ವಾತಂತ್ರ್ಯದ ಶತಮಾನೋತ್ಸವದ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಪರಿವರ್ತಿಸಲು ಪ್ರಯತ್ನಿಸುವ ಸರ್ಕಾರದ ಮಹತ್ವಾಕಾಂಕ್ಷೆಯ ವಿಕಸಿತ ಭಾರತ 2047 ಮಾರ್ಗಸೂಚಿಯಲ್ಲಿ ಪ್ರಗತಿಯನ್ನು ಮೌಲ್ಯಮಾಪನ ಮಾಡಲಾಯಿತು. ಕಾರ್ಯದರ್ಶಿಗಳು ಸಚಿವಾಲಯಗಳಾದ್ಯಂತ ದೀರ್ಘಕಾಲೀನ ಅಭಿವೃದ್ಧಿ ಗುರಿಗಳು ಮತ್ತು ಅನುಷ್ಠಾನ ಕಾರ್ಯತಂತ್ರಗಳನ್ನು ಪರಿಶೀಲಿಸಿದರು. ಪ್ರಮುಖವಾಗಿ 52 ವಾರಗಳಲ್ಲಿ 52 ಸುಧಾರಣೆಗಳ ಅಭಿಯಾನ, ಇದರಲ್ಲಿ ಸಚಿವಾಲಯಗಳು ನಿಗದಿತ ಸಮಯದೊಳಗೆ ಆಡಳಿತ ಸುಧಾರಣೆಗಳ ಸರಣಿಯನ್ನು ಜಾರಿಗೆ ತರುವ ನಿರೀಕ್ಷೆಯಿದೆ. ಪ್ರಧಾನಿ ಮೋದಿಯವರು ಅನುಷ್ಠಾನದ ವೇಗವನ್ನು ಪರಿಶೀಲಿಸಿದರು ಮತ್ತು ಉಪಕ್ರಮದ ಅನುಷ್ಠಾನ ಮತ್ತು ಕಾರ್ಯಕ್ಷಮತೆಯ ಬಗ್ಗೆ ನವೀಕರಣಗಳನ್ನು ಕೋರಿದರು.

ಭಾರತೀಯ ಸೇನಾ ಮುಖ್ಯಸ್ಥರಾಗಿ ಜ.ಸೇಠ್ ಅಧಿಕಾರ

• **ಹೊಸದಿಲ್ಲಿ:** ಭಾರತೀಯ ಸೇನೆಯ 31ನೇ ಸೇನಾ ಮುಖ್ಯಸ್ಥರಾಗಿ(ಸಿಒಎಎಸ್) ಜನರಲ್ ಧೀರಜ್ ಸೇಠ್ ಅವರು ಮಂಗಳವಾರ ಅಧಿಕಾರ ವಹಿಸಿಕೊಂಡರು. ಜನರಲ್ ಉಪೇಂದ್ರ ದ್ವಿವೇದಿ ಅವರ ಅಧಿಕಾರ ಅವಧಿ ಮಂಗಳವಾರ ಮುಕ್ತಾಯಗೊಂಡ ಹಿನ್ನೆಲೆ ಜ.ಸೇಠ್ ಅಧಿಕಾರ ಸ್ವೀಕರಿಸಿದರು. ಸಶಸ್ತ್ರ ಪಡೆಗಳ ಹಿರಿಯ ಅಧಿಕಾರಿ ಮತ್ತು ಸೇನಾ ಸಿಬ್ಬಂದಿಯ ಮಾಜಿ ಉಪ ಮುಖ್ಯಸ್ಥ ಜನರಲ್ ಸೇಠ್, ಜನರಲ್ ಶಂಕರ್ ರಾಯ್ ಚೌಧರಿ 1997ರಲ್ಲಿ ನಿವೃತ್ತರಾದ ನಂತರ ಸಶಸ್ತ್ರ ಪಡೆಗಳಿಂದ ಸೇನೆಯ ಮುಖ್ಯಸ್ಥರಾದ ಮೊದಲ ಅಧಿಕಾರಿಯಾಗಿದ್ದಾರೆ. ಅವರು ಈ ಹಿಂದೆ ದಕ್ಷಿಣ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿ ಸೇವೆ ಸಲ್ಲಿಸುತ್ತಿದ್ದರು, ಅದಕ್ಕೂ ಮೊದಲು ಅವರು ನೈಋತ್ಯ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿದ್ದರು. ಅವರು ಈ ಹಿಂದೆ ದಿಲ್ಲಿ ಪ್ರದೇಶದ ಜನರಲ್ ಆಫೀಸರ್ ಕಮಾಂಡಿಂಗ್ ಮತ್ತು ಗಿಗಿಐ ಕಾರ್ಪ್ಸ್‌ನ ಜನರಲ್ ಆಫೀಸರ್ ಕಮಾಂಡಿಂಗ್ ಆಗಿ ನೇಮಕಗೊಂಡಿದ್ದರು.

ಸೀಶೆಲ್ಸ್‌ನ ನಾಯಕರು ಮತ್ತವರ ಕುಟುಂಬ ಸದಸ್ಯರಿಗೆ ಕೊಡುಗೆ ನೀಡಿದ ಮೋದಿ

ರೇಷ್ಮೆಯುಡುಗೆ, ಶಾಲು, ಹಿತ್ತಾಳೆ ಆಮೆ ಉಡುಗೊರೆ

• **ಹೊಸದಿಲ್ಲಿ:** ಕಾಂಚೀವರಂ ರೇಷ್ಮೆಯುಡುಗೆಗಳು, ಮಹೇಶ್ವರಿ ರೇಷ್ಮೆ ಶಾಲು, ಟೋಡಾ ಕಸೂತಿಯುಕ್ತ ಆಕರ್ಷಕ ಶಾಲು ಮತ್ತಿತರ ಉಡುಗೊರೆಗಳನ್ನು ಪ್ರಧಾನಿ ನರೇಂದ್ರ ಮೋದಿ ಸೀಶೆಲ್ಸ್‌ನ ಹಿರಿಯ ನಾಯಕರು ಮತ್ತವರ ಕುಟುಂಬ ಸದಸ್ಯರಿಗೆ ಪ್ರೀತಿಯಿಂದ ನೀಡಿದ್ದಾರೆ. ಜಾಗತಿಕವಾಗಿ ಭಾರತದ ಹಿತ್ತಾಳೆ ನಗರವೆಂದು ಖ್ಯಾತ, ಉತ್ತರಪ್ರದೇಶದ ಮೊರಾದಾಬಾದ್‌ನ ನುರಿತ ಕುಶಲಕರ್ಮಿಗಳು ಕೆತ್ತಿರುವಂತಹ ಹಿತ್ತಾಳೆಯ ಆಮೆಯನ್ನು ಪ್ರಧಾನಿ ಮೋದಿ, ಸೀಶೆಲ್ಸ್ ಅಧ್ಯಕ್ಷ ಡಾ. ಪ್ಯಾಟ್ರಿಕ್ ಹರ್ಮಿನ್ ಅವರಿಗೆ ಉಡುಗೊರೆಯಾಗಿ ನೀಡಿದ್ದಾರೆ. ಲೋಹದ ಎರಕ, ಕೆತ್ತನೆ, ಫಿನಿಶಿಂಗ್ ಕಾರ್ಯಗಳಲ್ಲಿ ಮೊರಾದಾಬಾದ್ ವಲಯದ ಕುಶಲಕರ್ಮಿಗಳ ತಜ್ಞತೆಯನ್ನು ಪ್ರಸ್ತುತ ಲೋಹದ ಆಮೆ ಪ್ರತಿಬಿಂಬಿಸಿದೆ. ಭಾರತೀಯ ತತ್ತ್ವಶಾಸ್ತ್ರ ಪ್ರಕಾರ ಆಮೆಯು ಬುದ್ಧಿವಂತಿಕೆ, ಸ್ಥಿರತೆ, ಸ್ಥಿತಿಸ್ಥಾಪಕತ್ವ, ದೀರ್ಘಕಾಲೀನ ಬಾಳ್ವಿಕೆ ಇತ್ಯಾದಿಗಳ ಕಾಲಾತೀತ ಲಾಂಛನವಾಗಿದೆ. ಸೀಶೆಲ್ಸ್ ಈ ಆದರ್ಶಗಳನ್ನು ಪ್ರತಿಬಿಂಬಿಸುತ್ತದೆ. ಸೀಶೆಲ್ಸ್‌ನ ಪ್ರಾಕೃತಿಕ ಪರಂಪರೆ ಜಗತ್ತಿನ ಬೃಹತ್ ಆಮೆ ಖ್ಯಾತಿಯ ದಂತಕಥೆ ಅಲ್ಡಬ್ರಾ ಜತೆ ಹೊಂದಿರುವ ನಂಟು ಅಖಂಡವಾದುದು.



ಸೀಶೆಲ್ಸ್‌ನ ರಾಷ್ಟ್ರೀಯ ಬೊಟ್ಯಾನಿಕಲ್ ಗಾರ್ಡನ್‌ಗೆ ಭೇಟಿ ಸಂದರ್ಭ ಬೃಹತ್ ಆಮೆಗಳ ಆವಾಸಜಾಗಕ್ಕೂ ಪ್ರಧಾನಿ ಮೋದಿ ಭೇಟಿ ನೀಡಿದ್ದರು ಮತ್ತು ಆಮೆಗಳಿಗೆ ಆಹಾರ ಉಣಿಸಿದ್ದರು.

ಪ್ರಥಮ ಮಹಿಳೆಗೆ ಬಿದರಿ ಕಲೆಯ ಬಾಕ್ಸ್ ಗಿಫ್ಟ್: ಇನ್ನು ಸೀಶೆಲ್ಸ್‌ನ ಪ್ರಥಮ ಮಹಿಳೆ ವೆರೋನಿಕ್ ಹರ್ಮಿನ್ ಅವರಿಗೆ ಮಹೇಶ್ವರಿ ರೇಷ್ಮೆ ಶಾಲು ಮತ್ತು ಬಿದರಿ ಕಲೆಆಥವಾ ಲೋಹದ ಕರಕುಶಲ ಪೆಟ್ಟಿಗೆಯನ್ನು ಪ್ರಧಾನಿ ಮೋದಿ ಉಡುಗೊರೆಯಾಗಿ ನೀಡಿದ್ದಾರೆ. ಮಹೇಶ್ವರಿ ರೇಷ್ಮೆ ಶಾಲು ಭಾರತದ ಕೈಮಗ್ಗ ಪರಂಪರೆಯ ಸಿರಿವಂತಿಕೆಯನ್ನು ಪ್ರತಿಫಲಿಸುತ್ತದೆ. ಇದರ ನೇಯ್ಗೆ ಮಾದರಿ ವಿಶಿಷ್ಟ ಮತ್ತು ಹಗುರ ಗುಣಕ್ಕೂ ಮಹೇಶ್ವರಿ ರೇಷ್ಮೆ ಖ್ಯಾತಿಪಡೆದಿದೆ. ಮಧ್ಯಪ್ರದೇಶದ ಮಹೇಶ್ವರ ಮೂಲದ ರೇಷ್ಮೆ ಶಾಲು ,ರೇಷ್ಮೆ ಮತ್ತು ಹತ್ತಿನೂಲು ಮಿಶ್ರಿತ ನೇಯ್ಗೆ , ಕರಕೌಶಲದಿಂದ ಜನಮನ ಗೆದ್ದಿದೆ. ತಲೆಮಾರುಗಳ ಕಾಲ ಸಂರಕ್ಷಿಸಿಡುವಂತಹ ಅಪೂರ್ವ ಸೌಂದರ್ಯ, ಗುಣಮಟ್ಟಕ್ಕೆ ಮಹೇಶ್ವರಿ ರೇಷ್ಮೆ ಹೆಸರುವಾಸಿಯಾಗಿದೆ.

ಬೀದರ್‌ನ ಬಿದರಿ ಪೆಟ್ಟಿಗೆ



ಭಾರತದ ಲೋಹಕೆತ್ತನೆ ಪರಂಪರೆಗೆ ವಿಶಿಷ್ಟ ನಿದರ್ಶನವಾಗಿದೆ ಕರ್ನಾಟಕದ ಬೀದರ್ ಮೂಲದ ಬಿದರಿ ಬಾಕ್ಸ್ . ಸತು ಮತ್ತು ತಾಮ್ರದ ಹೊರಕವಚ ಹೊಂದಿರುವ ಬಿದರಿ ಬಾಕ್ಸ್ ಒಳಗಡೆ ಬೆಳ್ಳಿಯ ಎರಕವಿದೆ. ಸಿಕ್ಕಿಮ್‌ನ ಆರ್ಕಿಡ್ ಪೈಂಟಿಂಗ್‌ನ್ನು ಸೀಶೆಲ್ಸ್ ಉಪಾಧ್ಯಕ್ಷ ಸೆಬಾಸ್ಟಿಯನ್ ಪಿಲ್ಲೆ ಅವರಿಗೆ ಪ್ರಧಾನಿ ಮೋದಿ ಉಡುಗೊರೆಯಾಗಿ ನೀಡಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರದ ಮಹತ್ವದ ಹೇಳಿಕೆ

ಪ್ರಯೋಗ ಹಂತದಲ್ಲಿ ಇ-20 ಇಂಧನ

• **ಹೊಸದಿಲ್ಲಿ:** ದೇಶಾದ್ಯಂತ ಜಾರಿಗೆ ತರಲಾಗಿರುವ ಪೆಟ್ರೋಲ್‌ಗೆ ಶೇ.20 ಎಥೆನಾಲ್ ಮಿಶ್ರಣ ಮಾಡುವ ಇ-20 ಯೋಜನೆ ಇನ್ನೂ ಪ್ರಯೋಗದ ಹಂತದಲ್ಲಿದ್ದು, ಅದರ ನೈಜ ಪರಿಣಾಮಗಳ ಬಗ್ಗೆ ಮುಂದಿನ ವರ್ಷ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಈ ಹೇಳಿಕೆ ನೀಡಿದರು. ಪೆಟ್ರೋಲ್‌ಗೆ ಶೇ.20 ಎಥೆನಾಲ್ ಮಿಶ್ರಣ ಮಾಡುವುದನ್ನು ಸರ್ಕಾರ ಪ್ರಯೋಗಿಸುತ್ತಿದೆ. ಇದರ ಫಲಿತಾಂಶ ಮುಂದಿನ ವರ್ಷದ ವೇಳೆಗೆ ಲಭ್ಯವಾಗಲಿದೆ ಎಂದು ಅವರು ನ್ಯಾಯಪೀಠಕ್ಕೆ ತಿಳಿಸಿದರು.

ಆದರೆ, ವಿಚಾರಣೆಯ ಬಳಿಕ ಸ್ಪಷ್ಟನೆ ನೀಡಿದ ವೆಂಕಟರಮಣಿ, ಪೆಟ್ರೋಲ್‌ನಲ್ಲಿ ಶೇ.20 ಎಥೆನಾಲ್ ಮಿಶ್ರಣ ಮಾಡುವುದೊಂದು ಸರ್ಕಾರದ ನೀತಿಪರ ನಿರ್ಧಾರವಾಗಿದ್ದು, ಅದರಲ್ಲಿ ಬದಲಾವಣೆ ಆಗುವ ಸಾಧ್ಯತೆ ಕಡಿಮೆ ಎಂದಿದ್ದಾರೆ. ಬೇಡಿಕೆ ಮತ್ತಿತರ ಅಂಶಗಳನ್ನು ಆಧರಿಸಿ ತೈಲ ಕಂಪನಿಗಳಿಗೆ ಹಂಚಿಕೆ ಮಾಡುವ ಎಥೆನಾಲ್ ಪ್ರಮಾಣ ಮಾತ್ರ ಪರಿಷ್ಕರಿತವಾಗಬಹುದು ಎಂದು ಅವರು ತಿಳಿಸಿದ್ದಾರೆ.

» ಮುಂದಿನ ವರ್ಷವಷ್ಟೇ ಪರಿಣಾಮದ ಸ್ಪಷ್ಟ ಚಿತ್ರಣ



ಕರ್ನಾಟಕ ಹೈಕೋರ್ಟ್ ಆದೇಶದ ವಿರುದ್ಧ ಅರ್ಜಿ

2025-26ನೇ ಸಾಲಿನ ಎಥೆನಾಲ್ ಹಂಚಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಭಾರತ್ ಪೆಟ್ರೋಲಿಯಂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಲಾಗಿದೆ. ಎಥೆನಾಲ್ ಹಂಚಿಕೆ ಹೆಚ್ಚಿಸುವಂತೆ ಕೋರಿ ಮದ್ಯಸಾರ ಉತ್ಪಾದನಾ ಘಟಕವೊಂದು ಸಲ್ಲಿಸಿದ್ದ ಮನವಿಯನ್ನು ಪರಿಗಣಿಸುವಂತೆ ಭಾರತ್ ಪೆಟ್ರೋಲಿಯಂ, ಹಿಂದೂಸ್ತಾನ್ ಪೆಟ್ರೋಲಿಯಂ ಮತ್ತು ಇಂಡಿಯನ್ ಆಯಿಲ್ ಕಂಪನಿಗಳಿಗೆ ಹೈಕೋರ್ಟ್ ಸೂಚಿಸಿತ್ತು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-526th) ಡ್ರಾ ಜೂನ್ 30ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SE 119013 (VAIKKOM)

Cons Prize-Rs: 5000/-
SA 119013 SB 119013 SC 119013 SD 119013
SF 119013 SG 119013 SH 119013 SJ 119013
SK 119013 SL 119013 SM 119013

2nd Prize Rs: 30,00,000/- [30 Lakhs]
SD 533090 (IRINJALAKKUDA)

3d Prize Rs: 5,00,000/- [5 Lakhs]
SD 130438 (PATTAMBI)

FOR THE TICKETS ENDING WITH THE FOLLOWING NUMBERS

4th Prize Rs.5,000/-
0045 0740 1248 1394 1742 1963 2450 2645 2656 4472 4996 5327 6129 7002 7419 7806 8341 9518 9583

5th Prize Rs.2,000/-
0416 4304 6651 7970 9220 9310

6th Prize Rs.1,000/-
0458 0529 0767 1831 1866 2632 3530 3560 4008 4592 5329 5565 5819 5836 5916 6867 6883 7037 7871 8070 8301 8419 8676 8822 8984

7th Prize Rs.500/-
0044 0368 0524 0759 0814 0891 0975 1145 1247 1545 1589 1869 1986 2324 2448 2463 2690 2831 3092 3100 3359 3612 3617 3675 3783 3952 3992 4407 4710 4994 5207 5210 5409 5419 5462 5862 5939 6039 6053 6097 6179 6231 6255 6271 6277 6350 6541 6563 6585 6746 6800 6874 6889 7017 7164 7183 7188 7500 7523 7562 7763 8018 8136 8152 8407 8504 8630 8727 8934 9317 9360 9425 9570 9582 9739 9819

8th Prize Rs.200/-
0243 0498 0572 0703 0829 1147 1384 1399 1408 1482 1674 1687 1749 1752 1887 1954 1973 1997 2024 2199 2337 2517 2586 2721 2797 2882 2912 3323 3349 3446 3880 3984 4051 4343 4485 4605 4608 4656 4723 4790 4975 4978 5174 5233 5418 5466 5482 5509 5519 5583 5611 5841 6156 6216 6311 6337 6438 6467 6485 6532 6557 6567 6627 6752 7119 7168 7287 7327 7477 7551 7622 7820 7858 7932 8019 8024 8243 8351 8478 8534 8549 8588 8750 8772 8842 8902 9538 9634 9837 9841

9th Prize Rs.100/-
0012 0160 0174 0382 0398 0459 0549 0583 0609 0618 0709 0735 0847 0994 1092 1137 1169 1213 1411 1567 1569 1623 1624 1676 1762 1772 1814 1885 1919 2022 2220 2221 2243 2296 2442 2465 2486 2529 2616 2888 2978 3116 3201 3233 3257 3315 3447 3448 3494 3592 3598 3601 3896 3919 3938 3977 4034 4101 4321 4430 4520 4582 4618 4620 4676 4742 4869 5110 5192 5242 5275 5326 5390 5584 5589 5605 5620 5622 5687 5711 5755 5842 6096 6184 6326 6352 6426 6547 6689 6728 6734 6749 6777 6783 6791 6795 6967 7217 7249 7263 7286 7342 7404 7412 7436 7502 7560 7594 7730 7809 7838 7906 7919 8030 8033 8116 8343 8364 8377 8456 8584 8672 8699 8706 8707 8792 8830 8938 8985 8991 9068 9074 9079 9088 9109 9151 9166 9198 9311 9398 9499 9536 9558 9728 9743 9753 9823 9843 9844 9968

ಕರ್ನಾಟಕ ಸರ್ಕಾರ
Govt of Karnataka
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ – 587103
OFFICE OF THE DEPUTY COMMISSIONER, BAGALKOTE- 587103
Ph: 08354-235091
E-mail: dudc_bgk@yahoo.co.in, ltstaff dudc_bagalkote@yahoo.co.in

ಸಂಖ್ಯೆ:ಜಿನಕೋಬಾ: ನಗರೋತ್ಥಾನ ಹಂತ–4:2026–27 ದಿನಾಂಕ: 29.06.2026.

ಅಲ್ಪಾವಧಿ ಟೆಂಡರ್ ಪ್ರಕಟಣೆ
E-Proceurement portal ಮುಖಾಂತರ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ಹಾಗೂ ಇತರೆ ಕಾಮಗಾರಿಗಳಿಗೆ e-protal:https://kppp.karnataka.gov.in ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್‌ನಲ್ಲಿ ದಿನಾಂಕ ಹಾಗೂ ಇತರೆ ತಿದ್ದುಪಡಿಗಳು ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ತಿಳಿಸಲಾಗುವುದು, ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಇಂಡೆಂಟ್ ನಂ:
(1) DMA/2025-26/IND6083/CALL-2,
(2) DMA/2025-26/IND6082/CALL-2,
(3) DMA/2025-26/IND6079/CALL-2,
(4) DMA /2025-26/IND6077/CALL-2,
(5) DMA/2026-27/IND6265/CALL-2

ಸೂಚನೆಗಳು :
(1) Pre-bid Meeting Date : 13.07.2026 at 1.30 pm
(2) Last Date & Time for receipt of tenders 15.07.2026 at 04.00 pm.
(3) Tender Bid Opening Dtd : 20.07.2026 at 11.00 am

ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ,
ಬಾಗಲಕೋಟೆ.
ವಾ.ಸಾ.ಸಂ.ಇ/ಬಾಗಲಕೋಟೆ/115/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268
E-Mail : eepwdgad@gmail.com

ನಂ: ಕಾನಿಇಂಗಃ ಲೋಇ: ಪಿಬಿ–1, 5: ವಿವಿಧ: 2026–27/ 1075
ದಿನಾಂಕ: 29–06–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 504.00 ಲಕ್ಷ ಮೊತ್ತದಲ್ಲಿ ಒಟ್ಟು 05 ಕಾಮಗಾರಿಗೆ (ಕನಿಷ್ಟ ಮೊತ್ತ ರೂ: 09.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ: 250.00 ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ–ಡಬ್ಲ್ಯೂ–1, 2 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No:- Part-1 35125/call-2
ಮೇಲಿನ ಕಾಮಗಾರಿಯ ಪ್ರಶ್ನೋತ್ತರ ದಿನಾಂಕಃ– 03–07–2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಃ– 08–07–2026 ಮಧ್ಯಾಹ್ನ 4.00 ಗಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕಃ– 09–07–2026. ಆರ್ಥಿಕ ಬಿಡ್ ತೆರೆಯುವ ದಿನಾಂಕಃ– 10–07–2026.

Work Indent No:- Part-2 36691
ಮೇಲಿನ ಕಾಮಗಾರಿಯ ಪ್ರಶ್ನೋತ್ತರ ದಿನಾಂಕಃ–07–07–2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಃ–13–07–2026 ಮಧ್ಯಾಹ್ನ 4.00 ಘಂಟೆಯ ವರೆಗೆ , ತಾಂತ್ರಿಕ ಬಿಡ್ ತೆರೆಯುವ ದಿನಾಂಕಃ–14–07–2026. ಆರ್ಥಿಕ ಬಿಡ್ ತೆರೆಯುವ ದಿನಾಂಕಃ–15–07–2026.

Work Indent No:- Part-3 36446, 36452-ST, 36408-SC
ಮೇಲಿನ ಕಾಮಗಾರಿಯ ಪ್ರಶ್ನೋತ್ತರ ದಿನಾಂಕಃ– 27–07–2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಃ– 31–07–2026 ಮಧ್ಯಾಹ್ನ 4.00 ಘಂಟೆಯ ವರೆಗೆ , ತಾಂತ್ರಿಕ ಬಿಡ್ /ಆರ್ಥಿಕ ಬಿಡ್ ತೆರೆಯುವ ದಿನಾಂಕಃ– 01–08–2026.

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ , 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ
ವಾ.ಸಾ.ಇ/ಗದಗ/144/ 2026–27/ದೇಶಪಾಂಡೆಪಬ್ಲಿಸಿಟಿ

ಜು.3 ರಂದು ಉಪಲೋಕಾಯುಕ್ತರ ಕೊಡಗು ಜಿಲ್ಲಾ ಪ್ರವಾಸ

ಮಡಿಕೇರಿ: ಗೌರವಾನ್ವಿತ ನ್ಯಾಯಮೂರ್ತಿ ಹಾಗೂ ಉಪ ಲೋಕಾಯುಕ್ತ ಕೆ.ಎನ್.ಪಣೀಂದ್ರ ಅವರು ಜು.3 ರಂದು ಕೊಡಗು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಜುಲೈ 3 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.30 ಗಂಟೆವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 5.30 ಗಂಟೆವರೆಗೆ ಕೊಡಗು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ, ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ (ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ) ತನಿಖೆ/ ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಿಗೆ ಸಂಬಂಧಿಸಿದ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸಲಿದ್ದಾರೆ. ಈಗಾಗಲೇ ದೂರು ದಾಖಲಿಸಿರುವ ದೂರುದಾರರು ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಿದ್ದಾರೆ. ಈ ಅವಧಿಯಲ್ಲಿ ಹೊಸದಾಗಿ ಯಾವುದೇ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕ ದಿನಕರ್ ಶೆಟ್ಟಿ ತಿಳಿಸಿದ್ದಾರೆ.

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ–583101"

ಸಂಖ್ಯೆ: ಜಿನಕೊಬ/ ಇ. ಕ್ಯಾಂ / ಟೆಂಡರ್ / 02 /2026–27 ದಿನಾಂಕ : As-E-Signed

ಟೆಂಡರ್ ಪ್ರಕಟಣೆ

ಬಳ್ಳಾರಿ ಜಿಲ್ಲೆ ವ್ಯಾಪ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ಕ್ಯಾಟರಿಂಗ್ ಸರ್ವಿಸ್ ಪೂರೈಸಲು / ಹೋಟೆಲ್ ಮತ್ತು ಕ್ಯಾಟರಿಂಗ್ ಸೇವೆಯನ್ನು ಒದಗಿಸಲು, ಪ್ಯಾಕೇಜ್– 01 (ಬಳ್ಳಾರಿ ಮಹಾನಗರ ಪಾಲಿಕೆ) ಮತ್ತು ಪ್ಯಾಕೇಜ್– 02 (ನಗರಸಭೆ ಸಿರುಗುಪ್ಪ ಮತ್ತು ಪುರಸಭೆ ಸಂಡೂರು, ಕಂಪ್ಲಿ, ಕುರೇಕುಪ್ಪ, ಕುರುಗೋಡು ಮತ್ತು ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ ಮತ್ತು ಕುಡತಿನಿ) ಗಳಂತೆ ಎರಡು ಪ್ಯಾಕೇಜ್‌ಗಳಲ್ಲಿ ಅರ್ಹ ಗುತ್ತಿಗೆದಾರರಿಂದ ಕೆಟಿಪಿಪಿ **(KTPP)** ಕಾಯ್ದೆಯನ್ವಯ, ಟೆಂಡರ್ ದಸ್ತಾವೇಜುಗಳಲ್ಲಿನ ಷರತ್ತುಗಳಿಗೆ ಒಳಪಟ್ಟು ಈ ಕೆಳಕಂಡಂತೆ **Karnataka Public Procurement Portal (KPPP)** ಮೂಲಕ ಟೆಂಡರ್ ಆಹ್ವಾನಿಸಲಾಗಿದೆ

ಪ್ಯಾಕೇಜ್ ಸೇವೆಯ ವಿವರ: 01.PACKAGE-1: Providing Catering Service For Indira Canteen in the limits of CC Ballari, in Ballari District.(Indent No: DMA/2026-27/SE7721Call-02). **ಟೆಂಡರ್ ಮೊತ್ತ** (ರೂ. ಲಕ್ಷಗಳಲ್ಲಿ): **2,60,24,500/–.** ಇ.ಎಂ.ಡಿ **(EMD – ರೂ ಗಳಲ್ಲಿ): 3,90,370/–**
02.PACKAGE-2: Providing Catering Service For Indira Canteen in the limits of CMC Siruguppa, TMC Sandur, TMC Kampli, Kurekuppa, Kurugodu & TP Tekalakote, Kuduthini in Ballari District.(Indent No: DMA/2026-27/SE7718Call-02). **ಟೆಂಡರ್ ಮೊತ್ತ** (ರೂ. ಲಕ್ಷಗಳಲ್ಲಿ): **3,03,24,200/–.** ಇ.ಎಂ.ಡಿ **(EMD – ರೂ ಗಳಲ್ಲಿ): 4,54,870/–**

ಟೆಂಡರ್ ವೇಳಾಪಟ್ಟಿ:
- ಟೆಂಡರ್ ಪ್ರಶ್ನೆಗಳು / ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: **15.07.2026, ಸಂಜೆ 04:30 ರವರೆಗೆ**
- ತಾಂತ್ರಿಕ ಬಿಡ್‌ಗಳನ್ನು (Technical Bids) ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **24.07.2026, ಸಂಜೆ 04:30 ರವರೆಗೆ**
- ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **27.07.2026, ಬೆಳಗ್ಗೆ 11:00 ಗಂಟೆಗೆ**
- ಹಣಕಾಸು ಬಿಡ್‌ಗಳನ್ನು (Financial Bids) ತೆರೆಯುವ ದಿನಾಂಕ ಮತ್ತು ಸಮಯ: **29.07.2026, ಬೆಳಗ್ಗೆ 11:00 ಗಂಟೆಗೆ**
- ಟೆಂಡರ್ ವೇಳಾಪಟ್ಟಿಯ ಸ್ವಯಂಚಾಲಿತ ವಿಸ್ತರಣೆ (Auto Extension): **02 ದಿನಗಳು**

ಪ್ರಮುಖ ಸೂಚನೆಗಳು: 1.ಸದರಿ ನಿಗದಿಪಡಿಸಿದ ದಿನಾಂಕಗಳಂದು ಆಕಸ್ಮಿಕ ಸರ್ಕಾರಿ ರಜೆಗಳು ಬಂದಲ್ಲಿ, ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು. 2.ಇ–ಪ್ರೊಕ್ಯೂಮೆಂಟ್‌ನಲ್ಲಿ ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಹೆಚ್ಚಿನ ಷರತ್ತುಗಳಿಗಾಗಿ ಅಧಿಕೃತ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡಬೇಕಾಗಿರುತ್ತದೆ. 3.ಕಚೇರಿಯಲ್ಲಿ ಯಾವುದೇ ರೀತಿಯ ಭೌತಿಕ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. 4.ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ (ದೂರವಾಣಿ ಸಂಖ್ಯೆ: 7760848568, 8105972226) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ,ಬಳ್ಳಾರಿ
ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆವಿಸ್‌ಎಂಸಿಎ/ಆರ್.ಓ.ಸಂಖ್ಯೆ/286

ಮಂಗಳೂರು ಮಹಾನಗರಪಾಲಿಕೆ

ಫಾರಂ– 1
[ಕೆಟಿಸಿಪಿ ಕಾಯ್ದೆಯ ಸೆಕ್ಷನ್ 14 ಬಿ ಪ್ರಕಾರ ಎಂಸಿಸಿ ಅಳವಡಿಸಿಕೊಂಡ ಕಾರ್ಯವಿಧಾನ]

ಮನಪಾ/ನಯೋವಿ/ಟಿ.ಡಿ.ಆರ್/ಸಿಆರ್ – 07/2026–27 ದಿನಾಂಕ: 25–05–2026.

ಅಧಿಸೂಚನೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–ಬಿ ಅವಕಾಶಗಳನ್ವಯ ಈ ಕೆಳಗಿನ ಅನುಸೂಚಿಯಲ್ಲಿರುವ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಮಂಗಳೂರು ಮಹಾನಗರಪಾಲಿಕೆಗೆ ಸ್ಥಳೀಯ ಸಂಸ್ಥೆಯ ಪ್ರಸ್ತಾವನೆಯನ್ವಯ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪಡೀಲ್ ನಿಂದ ಜೆಪ್ಪಿನಮೊಗರು ವರೆಗಿನ ರಸ್ತೆ ಅಭಿವೃದ್ಧಿ ಪಡಿಸಲು ಅವಶ್ಯವಿರುವ ಜಮೀನನ್ನು KTCP ಕಾಯ್ದೆಯಂತೆ ಸ್ವಾಧೀನಪಡಿಸಲು ಅವಶ್ಯಕವಾಗಿರುತ್ತದೆ. ಸದರಿ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿಯನ್ನು ಬಿಟ್ಟುಕೊಡುವ ಭೂಮಾಲಿಕರುಗಳು ಮತ್ತು ಹಿತಾಸಕ್ತಿದಾರರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಯೋಜನೆಯ ವ್ಯಾಪ್ತಿಯಲ್ಲಿನ ಜಮೀನಿಗೆ ಸಂಬಂಧಪಟ್ಟವರು ಸಂಬಂಧಿಸಿದ ದಾಖಲಾತಿಗಳಾದ (1) ಶೀರ್ಷಿಕೆಯ ಪತ್ರ/ ಋಣಭಾರ ಪತ್ರ (2) ಇತ್ತೀಚಿನ ಪಹಣಿ ಪತ್ರ/ಖಾತಾ ಪತ್ರ (3) ಮ್ಯುಟೇಶನ್ ಪ್ರತಿ (4) ತೆರಿಗೆ ಪಾವತಿಸಿದ ರಶೀದಿಗಳು (5) ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿದ ಆದೇಶ ಪ್ರತಿ (6) ರೆವೆನ್ಯೂ ನಕ್ಷೆ ಪ್ರತಿ (7) ಆಕಾರ್ ಬಂದ್ ಇತ್ಯಾಧಿಗಳೊಂದಿಗೆ ತಾವು ಖುದ್ದಾಗಿ ಹಾಜರಾಗಿ ಅಭಿವೃದ್ಧಿ ಹಕ್ಕುಗಳಿಗೆ ಭೂಮಿಯನ್ನು ಬಿಟ್ಟುಕೊಡುವ ಸಂಬಂಧ ತಮ್ಮ ಹಿತಾಸಕ್ತಿ/ಆಕ್ಷೇಪಣೆ/ಸಲಹೆಯನ್ನು ನಗರಯೋಜನೆಯ ಟಿ.ಡಿ.ಆರ್ ವಿಭಾಗ, ಮಂಗಳೂರು ಮಹಾನಗರ ಪಾಲಿಕೆಗೆ ಈ ಅಧಿಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬಹುದಾಗಿರುತ್ತದೆ.

ಭೂಮಾಲಿಕರು ಹಣಕಾಸು ಪರಿಹಾರ ರಹಿತವಾಗಿ ಬಿಟ್ಟುಕೊಟ್ಟ ಭೂಪ್ರದೇಶದ ವಿಸ್ತೀರ್ಣಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿಯನ್ನು) ಪಡೆಯುತ್ತಾರೆ ಮತ್ತು ಬಿಟ್ಟುಕೊಟ್ಟ ಕಟ್ಟಡ ಪ್ರದೇಶದ ಮೌಲ್ಯಕ್ಕೆ ಆ ಕಟ್ಟಡ ಇರುವ ಭೂಮಿಯ ಮಾರುಕಟ್ಟೆ ಮೌಲ್ಯದಿಂದ ಭಾಗಿಸಿ, ಬಿಟ್ಟುಕೊಟ್ಟ ಕಟ್ಟಡಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿ) ಪಡೆಯಲು ಅವರು ಅರ್ಹರು ಬಿಟ್ಟುಕೊಟ್ಟ ಜಮೀನಿನ ಮೌಲ್ಯಕ್ಕೆ ಬಳಸುವ ನಿವೇಶನದ ಮೌಲ್ಯದಿಂದ ಭಾಗಿಸಿಕೊಂಡು, ಅಪವರ್ತನಗೊಳಿಸಿ ಕಾಲ್ಪನಿಕ ಭೂಮಿಯನ್ನು ಉಪಯೋಗಿಸಬಹುದಾಗಿದೆ. ಕಾಲ್ಪನಿಕ ಭೂಮಿಯು ಎಫ್.ಎ.ಆರ್.ಗೆ ಅರ್ಹವಾಗಿರುತ್ತದೆ ಮತ್ತು ಅದನ್ನು ಪಡೆಯುವ ನಿವೇಶನದಲ್ಲಿ ನಿಯಮಗಳಡಿಯಲ್ಲಿ ಸೂಚಿಸಲಾದ ನಿಬಂಧನೆಗಳು ಹಾಗೂ ಶರತ್ತುಗಳ ಅಡಿಯಲ್ಲಿ ಹೆಚ್ಚುವರಿ ನಿರ್ಮಾಣಕ್ಕೆ ಬಳಸಬಹುದು.

–: ಅನುಸೂಚಿ :–

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪಡೀಲ್ ನಿಂದ ಜೆಪ್ಪಿನಮೊಗರು ವರೆಗಿನ ರಸ್ತೆ ಅಭಿವೃದ್ಧಿ ಪಡಿಸಲು ಅವಶ್ಯವಾಗಿರುವ ಜಮೀನನ್ನು ಭೂಸ್ವಾಧೀನ/ಟಿ.ಡಿ.ಆರ್ ಮೂಲಕ ಸ್ವಾಧೀನಪಡಿಸಿಕೊಳ್ಳಲು ಮಂಗಳೂರು ಮಹಾನಗರಪಾಲಿಕೆ ಪರಿಷತ್ ಠರಾವು ಸಂಖ್ಯೆ: 42/2017–2018 ದಿನಾಂಕ: 29.06.2017ರಂತೆ ನಿರ್ಣಯಿಸಲ್ಪಟ್ಟಿದೆ.

ಕ್ರ. ಸಂ	ಸ.ನಂ/ ಟಿ.ಎಸ್ ನಂಬ್ರ	ಜಮೀನಿನ ಮಾದರಿ	ಜಮೀನಿನ ಸ್ವಭಾವ	ಅಗತ್ಯವಿರುವ ಭೂಮಿಯ ವಿಸ್ತೀರ್ಣ ಚ.ಮೀಗಳಲ್ಲಿ	ಭೂಮಾಲಿಕರ/ಹಿತಾಸಕ್ತಿದಾರರ ಹೆಸರು ಮತ್ತು ವಿಳಾಸ
ಪಡೀಲ್ ನಿಂದ ಜೆಪ್ಪಿನಮೊಗರು ವರೆಗಿನ ರಸ್ತೆ					ಗ್ರಾಮ: ಜೆಪ್ಪಿನಮೊಗರು ಬಿ
1	ಸರ್ವೆನಂಬ್ರ 32–1(ಪಿ)	ಪರಿವರ್ತಿತ	ಖಾಸಗಿ	61.43 ಚ.ಮೀ	ಅಲ್ಬನ್ ಪಾಸ್ಕಲ್ ಗೋನ್ಸಾಲ್ವಿಸ್ ಬಿನ್. ದಿ| ಪಾಸ್ಕಲ್ ಗೋನ್ಸಾಲ್ವಿಸ್, ಬೀಡಿ ರಸ್ತೆ, ಜೆಪ್ಪಿನಮೊಗರು ಗ್ರಾಮ, ಮಂಗಳೂರು.

ಸಹಿ/–, ಆಯುಕ್ತರು, ಮಹಾನಗರಪಾಲಿಕೆ, ಮಂಗಳೂರು
DIPR/DK/KSMCA/426/26-27 dt.30.06.2026

THE PERLA SERVICE CO-OPERATIVE BANK LTD
No.C.3377, P.O.Perla, Manjeshwara Taluk, Kasaragod-671552,Phone:04998-225062

WANTED

Applications are invited from the eligible candidates for the following post.

SL.No	NAME OF POST	Qualification	NO. OF VACANCIES	SCALE OF PAY	AGE LIMIT
1.	2	3	4	5	6
1.	Night Watchman	VIIthStandardPassed	GEN-1 SC/ST -1 Total - 2	Rs.15950/-to Rs.41680/-	a) The applicant must have completed 18 years & must not have completed 40 years of age on the 1st day of January 2026. b) Upper age limit shall be raised by 5 years in the case of candidates belonging to SC/ST and 3 Years in case of OBC & other categories as per KCS Act & Rules
2.	Day Deposit Collection Agent	VIIthStandard Passed	GEN-1	3% Commission on the collected amount	

APPLICANT MUST SEND THEIR APPLICATIONS IN PLAIN PAPER ACCORDING TO THE FOLLOWING PROFORMA

APPLICATIONS FOR THE POST OF Night Watchman/ Day Deposit Collection Agent.

Name of the Applicant (In Block Letters) :
1. Address :
2. Age/Dateof Birth :
3. Nature of post applied :
4. Qualification :
5. Caste :
6. Previous Experience if any :
7. Other details if any :

Photo

Place :
Date: Signature of the applicant

Instructions:
1. Applicants must send their applications in plain paper according to the proforma in their own handwriting.
2. The applicants are requested to appear a written test at Perla at their own cost. The date & placeof test will be intimated later.
3. The applicant must send a demand draft of Rs.500/- (RupeesFiveHundred)only,drawn in favour of the Secretary,The Perla Service Co-operative Bank Ltd No.C.3377,along with the application.
4. Preference will be given to local candidates knowing Kannada & other local languages.
5. The candidates belonging to SC/ST or other reserved categories as per K.C.SAct & Rules, should submit the certificate obtained from competent authority to prove their caste to which they belong to.
6. The applications with xerox copies of all the certificates and other testimonial and the demand draft must reach The Secretary, The Perla Service Co-Operative Bank Ltd. No. C. 3377, P.O. Perla, Kasaragod – 671552 on or before 10.07.2026, at 4 pm.

Place:Perla
Date:29.06.2026

The Secretary
The Perla Service Co-Operative Bank Ltd.
No.C.3377, P.O.Perla, Kasaragod-671552

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಶ್ರೀ ಅನಂತ ಪದ್ಮನಾಭ ದೇವಸ್ಥಾನ, ಕುಡುಪು, ಮಂಗಳೂರು, ದ.ಕ.ಜಿಲ್ಲೆ.
ದೂರವಾಣಿ – 0824–2262587 / 8088322157

ಕೆಎಪಿಟಿ/ಕೊಟೇಷನ್/ಸಿಆರ್.12/2026–27 ದಿನಾಂಕ : 01.07.2026

ಪ್ರಕಟಣೆ

ಶ್ರೀ ದೇವಾಲಯಕ್ಕೆ ದಿನಾಂಕ 01.08.2026 ರಿಂದ 31.07.2028ರ ಎರಡು ವರ್ಷದ ಅವಧಿಗೆ ಈ ಕೆಳಗಿನ ಎರಡು ವಿಷಯಗಳಿಗೆ ದೇವಾಲಯದ ಷರತ್ತುಗಳಿಗೆ ಒಳಪಟ್ಟು ಆಸಕ್ತರಿಂದ ಕೊಟೇಷನ್ ಆಹ್ವಾನಿಸಲಾಗಿದೆ.

ಕ್ರಸಂ	ವಿಷಯ
1	ದಿನಾಂಕ 01.08.2026 ರಿಂದ 31.07.2028 ರ ಎರಡು ವರ್ಷದ ಅವಧಿಗೆ ಅಡುಗೆ ತಯಾರಿಸಿ ಕೊಡುವ ಬಗ್ಗೆ
2	ದಿನಾಂಕ 01.08.2026 ರಿಂದ 31.07.2028 ರ ಎರಡು ವರ್ಷದ ಅವಧಿಗೆ ವಾಹನ (ಕಾರ್) ಒದಗಿಸಿ ಕೊಡುವ ಬಗ್ಗೆ

ಆಸಕ್ತರು ಕೊಟೇಶನ್‌ಗಳನ್ನು ದಿನಾಂಕ 22.07.2026ರ ಸಂಜೆ 5.00 ಗಂಟೆಯ ಒಳಗಡೆ ಸಲ್ಲಿಸಬೇಕು. ಕೊಟೇಷನ್ ಗಳನ್ನು ಅದೇ ದಿನ ಸಂಜೆ 05.00ಕ್ಕೆ ಅಥವಾ ನಂತರ ನಿಗದಿಗೊಳಿಸಬಹುದಾದ ದಿನಾಂಕದಂದು ತೆರೆಯಲಾಗುವುದು. ನಿಗದಿತ ಅವಧಿಯ ನಂತರ ಬಂದ ಟೆಂಡರುಗಳನ್ನು ಪರಿಗಣಿಸುವುದಿಲ್ಲ. ಹೆಚ್ಚಿನ ವಿವರಗಳಿಗೆ ಹಾಗೂ ಷರತ್ತುಗಳಿಗೆ ಈ ಕೆಳಗೆ ಸಹಿ ಹಾಕಿದವರನು ದೇವಾಲಯದ ಕಛೇರಿ ಸಮಯದಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಹಣಾಧಿಕಾರಿ

ಪುತ್ತೂರು ಮಾರುಕಟ್ಟೆ ಧಾರಣೆ
30-06-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	420 - 470
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	330 - 380
ಹಳೆ ಪಟೋರ	350 - 380
ಹೊಸ ಉಳ್ಳಿ	140 - 280
ಹಳೆ ಉಳ್ಳಿ	130 - 280
ಹೊಸ ಕೋಕಾ	310 - 330
ಹಳೆ ಕೋಕಾ	310 - 330
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ
ಕಾಳುಮೆಣಸು : 450 - 685

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	268.50
ಆರ್‌ಎಸ್‌ಎಸ್ 2	224.00
ಸ್ಕ್ರಾಪ್ 1	154.00
ಸ್ಕ್ರಾಪ್ 2	145.00

ಮಂಗಳೂರು ಮಹಾನಗರಪಾಲಿಕೆ

ಫಾರಂ– 1
[ಕೆಟಿಸಿಪಿ ಕಾಯ್ದೆಯ ಸೆಕ್ಷನ್ 14 ಬಿ ಪ್ರಕಾರ ಎಂಸಿಸಿ ಅಳವಡಿಸಿಕೊಂಡ ಕಾರ್ಯವಿಧಾನ]

ಮನಪಾ/ನಯೋವಿ/ಟಿ.ಡಿ.ಆರ್/ಸಿಆರ್ –314/2024–25/ 62, 97, 100, 133, 135, 136, 138, 141/ 25–26,145/2022–2023. ದಿನಾಂಕ: 25–05–2026

ಅಧಿಸೂಚನೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–ಬಿ ಅವಕಾಶಗಳನ್ವಯ ಈ ಕೆಳಗಿನ ಅನುಸೂಚಿಯಲ್ಲಿರುವ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಮಂಗಳೂರು ಮಹಾನಗರಪಾಲಿಕೆಗೆ ಸ್ಥಳೀಯ ಸಂಸ್ಥೆಯ ಪ್ರಸ್ತಾವನೆಯನ್ವಯ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿಗೆ ಅವಶ್ಯವಿರುವ ಜಮೀನನ್ನು KTCP ಕಾಯ್ದೆಯಂತೆ ಸ್ವಾಧೀನಪಡಿಸಲು ಅವಶ್ಯಕವಾಗಿರುತ್ತದೆ. ಸದರಿ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿಯನ್ನು ಬಿಟ್ಟುಕೊಡುವ ಬಗ್ಗೆ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಏಕ ನಿವೇಶನ ನಕ್ಷೆ ಅನುಮೋದನೆಗೊಂಡ ಮೇರೆಗೆ ಜಮೀನಿನ ಮೂಲ ಹಕ್ಕುದಾರರು ಈ ಕೆಳಗೆ ತಿಳಿಸಿದ ಅನುಸೂಚಿಯಂತೆ ಜಮೀನನ್ನು ಮಹಾನಗರಪಾಲಿಕೆಗೆ ಪರಿತ್ಯಾಜನಾ ಪತ್ರದ ಮೂಲಕ ಬಿಟ್ಟುಕೊಟ್ಟಿರುತ್ತಾರೆ. ಭೂಮಾಲಿಕರುಗಳು ಮತ್ತು ಹಿತಾಸಕ್ತಿದಾರರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಯೋಜನೆಯ ವ್ಯಾಪ್ತಿಯಲ್ಲಿನ ಜಮೀನಿಗೆ ಸಂಬಂಧಪಟ್ಟವರು ಸಂಬಂಧಿಸಿದ ದಾಖಲಾತಿಗಳಾದ ಅಭಿವೃದ್ಧಿ ಹಕ್ಕುಗಳಿಗೆ ಭೂಮಿಯನ್ನು ಬಿಟ್ಟುಕೊಡುವ ಸಂಬಂಧ ಇನ್ನು ಇತರ ಹಿತಾಸಕ್ತಿ/ಆಕ್ಷೇಪಣೆ/ಸಲಹೆಯನ್ನು, ನಗರಯೋಜನೆ/ಟಿ.ಡಿ.ಆರ್ ವಿಭಾಗ, ಮಂಗಳೂರು ಮಹಾನಗರ ಪಾಲಿಕೆಗೆ ಈ ಅಧಿಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬಹುದಾಗಿರುತ್ತದೆ.

ಭೂಮಾಲಿಕರು ಹಣಕಾಸು ಪರಿಹಾರ ರಹಿತವಾಗಿ ಬಿಟ್ಟುಕೊಟ್ಟ ಭೂಪ್ರದೇಶದ ವಿಸ್ತೀರ್ಣಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿಯನ್ನು) ಪಡೆಯುತ್ತಾರೆ ಮತ್ತು ಬಿಟ್ಟುಕೊಟ್ಟ ಕಟ್ಟಡ ಪ್ರದೇಶದ ಮೌಲ್ಯಕ್ಕೆ ಆ ಕಟ್ಟಡ ಇರುವ ಭೂಮಿಯ ಮಾರುಕಟ್ಟೆ ಮೌಲ್ಯದಿಂದ ಭಾಗಿಸಿ, ಬಿಟ್ಟುಕೊಟ್ಟ ಕಟ್ಟಡಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿ) ಪಡೆಯಲು ಅವರು ಅರ್ಹರು. ಬಿಟ್ಟುಕೊಟ್ಟ ಜಮೀನಿನ ಮೌಲ್ಯಕ್ಕೆ, ಬಳಸುವ ನಿವೇಶನದ ಮೌಲ್ಯದಿಂದ ಭಾಗಿಸಿಕೊಂಡು, ಅಪವರ್ತನಗೊಳಿಸಿ ಕಾಲ್ಪನಿಕ ಭೂಮಿಯನ್ನು ಉಪಯೋಗಿಸಬಹುದಾಗಿದೆ. ಕಾಲ್ಪನಿಕ ಭೂಮಿಯು ಎಫ್.ಎ.ಆರ್. ಗೆ ಅರ್ಹವಾಗಿರುತ್ತದೆ ಮತ್ತು ಅದನ್ನು ಪಡೆಯುವ ನಿವೇಶನದಲ್ಲಿ ನಿಯಮಗಳಡಿಯಲ್ಲಿ ಸೂಚಿಸಲಾದ ನಿಬಂಧನೆಗಳು ಹಾಗೂ ಶರತ್ತುಗಳ ಅಡಿಯಲ್ಲಿ ಹೆಚ್ಚುವರಿ ನಿರ್ಮಾಣಕ್ಕೆ ಬಳಸಬಹುದು.

–: ಅನುಸೂಚಿ :–

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿಗೆ ಅವಶ್ಯವಾಗಿರುವ ಜಮೀನಿನ ವಿವರ ಈ ಕೆಳಗಿನಂತಿದೆ

ಕ್ರ. ಸಂ	ಗ್ರಾಮದ ಹೆಸರು	ಟಿ.ಎಸ್ ನಂಬ್ರ/ ಆರ್. ಎಸ್. ನಂಬ್ರ:	ಪರಿತ್ಯಾಜನ ವಿಸ್ತೀರ್ಣ	ಪರಿತ್ಯಾಜನ ದಸ್ತಾವೇಜು ಸಂಖ್ಯೆ ಮತ್ತು ದಿನಾಂಕ	ಪರ್ಯಾಯ ವಾಗಿ ಡಿ.ಆರ್.ಸಿ/ ಟಿ.ಡಿ.ಆರ್ ನೀಡಬೇಕಾದ ವಿಸ್ತೀರ್ಣ	ಪರಿತ್ಯಾಜನಾ ಪತ್ರದಂತೆ ಜಮೀನು ಬಿಟ್ಟುಕೊಟ್ಟಿರುವ ಭೂಮಾಲಿಕರ/ಹಿತಾಸಕ್ತಿದಾರರ ಹೆಸರು ಮತ್ತು ವಿಳಾಸ
1	ಅತ್ತಾವರ	ಆರ್. ಎಸ್.ನಂ. 254–1, 254–2 ಟಿ.ಎಸ್.ನಂಬ್ರ 97–1, 97–2	79.75 ಚ.ಮೀ	MGC-1-06032-2012-13 ದಿನಾಂಕ: 05–01–2013	159.50 ಚ.ಮೀ	ಸಂತೋಷ ಆಳ್ವ ಬಿನ್. ಎಂ.ಎಂ. ಆಳ್ವ, ಆಳ್ವ ಕಾಟೇಜ್, ಓಲ್ಡ್ ಕೆಂಟ್ ರಸ್ತೆ, ಅತ್ತಾವರ, ಮಂಗಳೂರು.
2	ಪದವು	ಆರ್.ಎಸ್.ನಂ 235–1ಎ	62.43 ಚ.ಮೀ	MGC-1-02291-2025-26 ದಿನಾಂಕ: 19–06–2025	124.86 ಚ.ಮೀ	ನಾರಾಯಣ ಟಿ ಪೂಜಾರಿ ಬಿನ್. ತಿಮ್ಮ ಪೂಜಾರಿ, ತುಂಗ ನಿಲಯ, ಗುಜ್ಜಾಡಿ ಪೋಸ್ಟ್, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.
3	ಮಂಗಳೂರು ತೋಟ	ಆರ್.ಎಸ್. ನಂ 341–ಎ, ಟಿ.ಎಸ್. ನಂಬ್ರ: 304, 304ಪಿ12ಪಿ1	119.41 ಚ.ಮೀ	MGC-1-08747-2022-23 ದಿನಾಂಕ: 06–02–2023	238.82 ಚ.ಮೀ	ರೇನಿಯರ್ ಆಸ್ಟಿನ್ ಫೆರ್ನಾಂಡಿಸ್, ಬಿನ್. ಲೂಯಿಸ್ ಫೆರ್ನಾಂಡಿಸ್, ಇವರ ಅಧಿಕಾರ ಪತ್ರ ಹೊಂದಿದವರು ಲೂಯಿಸ್ ಫೆರ್ನಾಂಡಿಸ್ ಬಿನ್. ಕ್ಷೇವಿಯರ್ ಫೆರ್ನಾಂಡಿಸ್, ವೆಲಂಕಣಿ ವಿಲ್ಲಾ, ಸುವರ್ಣ ರಸ್ತೆ, ಕಂಕನಾಡಿ, ಮಂಗಳೂರು.
4	ದೇರೆಬೈಲು	ಆರ್.ಎಸ್.ನಂ 182–2ಎ	101.96 ಚ.ಮೀ	MGC-1-01924-2025-26 ದಿನಾಂಕ: 05–06–2025	203.92 ಚ.ಮೀ	ರಾಮ ಭಟ್ ಬಿನ್. ದಿ| ಸುಬ್ರಾಯ ಭಟ್ ಇವರ ಅಧಿಕಾರ ಪತ್ರ ಹೊಂದಿದವರು ಗಣೇಶ್ ಎಂ.ಪಿ ಮೆ| ಗಾರ್ಡಿಯನ್ ಇನ್ಫ್ರಾಸ್ಟ್ರಕ್ಚರ್‌ಬಿಲ್ಡರ್ಸ್ ಮತ್ತು ಡೆವೆಲಪರ್ಸ್, ಶಾಂತಲಾ, ಬಿಜೈ ನ್ಯೂ ರೋಡ್, ಬಿಜೈ, ಮಂಗಳೂರು.
5	ಕದ್ರಿ ಬಿ	ಆರ್.ಎಸ್.ನಂ 16–13ಪಿ4	56.60 ಚ.ಮೀ	MGC-1-05409-2015-16 ದಿನಾಂಕ: 03–11–2015	113.20 ಚ.ಮೀ	ಶ್ರೀಮತಿ ರೀಟಾ ಡಿ ಸೋಜಾ ಕೋಂ. ಟ್ರೆವರ್ ಫ್ಲೋರೆನ್ಸ್ ಡಿ ಸೋಜಾ, 1–46/2, ಬಾರೆಬೈಲ್ ರಸ್ತೆ, ಬಾರೆಬೈಲ್, ಬಿಜೈ ಪೋಸ್ಟ್, ಮಂಗಳೂರು.
6	ಪದವು	ಆರ್.ಎಸ್.ನಂ 73–1ಎ(ಪಿ)	36.27 ಚ.ಮೀ	MGT-1-01027-2025-26 ದಿನಾಂಕ: 05–05–2025	72.54 ಚ.ಮೀ	ಸುಧಾಕರ್ ಕಿರೋಡಿಯನ್ ಬಿನ್. ದಿ| ಸುಬ್ರಾಯ ಅಮೀನ್, ಶ್ರೀ ಗಣೇಶ್ ನಿವಾಸ, ದತ್ತ ನಗರ, 2ನೇ ಅಡ್ಡ ರಸ್ತೆ, ಕಂದಕ, ಪದವು, ಶಕ್ತಿನಗರ, ಮಂಗಳೂರು.
7	ದೇರೆಬೈಲ್	ಸರ್ವೆನಂಬ್ರ: 78–3ಬಿ3	17.71 ಚ.ಮೀ	MGC-1-01013-2023-24 ದಿನಾಂಕ: 17–05–2023	35.42 ಚ.ಮೀ	ಕೆ. ವಿಶ್ವನಾಥ ಯಾನೆ ವಿಶ್ವನಾಥ ದೇವಾಡಿಗ, ಬಿನ್. ದಿ| ಹೊನ್ನಯ್ಯ ದೇವಾಡಿಗ ಮನೆ ನಂಬ್ರ:2–41, ಕರ್ಮಿ, ಕಾಂಡಮನೆ, ಕೊಂಚಾಡಿ, ಮಂಗಳೂರು.
8	ಕದ್ರಿ ಎ	ಆರ್.ಎಸ್.ನಂ 259–1ಬಿ2 ಟಿ.ಎಸ್.ನಂಬ್ರ 241–ಬಿ2ಬಿ	4.02 ಚ.ಮೀ	MGC-1-04783-2018-19 ದಿನಾಂಕ: 09–10–2018	8.04 ಚ.ಮೀ	ಶ್ರೀಮತಿ ಉರ್ಮಿಳಾ ರಮೇಶ್ ಕೋಂ. ರಮೇಶ್ ಕುಮಾರ್, ಸರಸ್ವತಿ, ಮಂಗಳಾ ಕ್ರೀಡಾಂಗಣದ ಎದುರುಗಡೆ, ಗಾಂಧಿ ನಗರ, ಮಂಗಳೂರು.
9	ಅತ್ತಾವರ	ಆರ್.ಎಸ್.ನಂ 572, 602/1, 571–1 ಟಿ.ಎಸ್.ನಂಬ್ರ 360, 329/1, 352–1	25.15 ಚ.ಮೀ	MGC-1-07717-2025-26 ದಿನಾಂಕ: 16–12–2025.	50.30 ಚ.ಮೀ	ಕರ್ನಿರೆ ಮೊಹಮ್ಮದ್ ಆಸೀಫ್, ಬಿನ್. ಕರ್ನಿರೆ ಶೇಕಬ್ಬಸಯ್ಯದ್, 1–46, ಬಿಗ್ ಹೌಸ್, ಕರ್ನಿರೆ ಪೋಸ್ಟ್, ಮಂಗಳೂರು.
10	ಬೋಳೂರು ಬಿ	ಆರ್.ಎಸ್.ನಂ 12–3	121.10 ಚ.ಮೀ	MGC-1-07084-2013-14 ದಿನಾಂಕ: 28–01–2014	242.20 ಚ.ಮೀ	ಇಸಿದೋರ್ ಕುಲಾಸೋ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಇದರ ಅಧಿಕಾರ ಪತ್ರ ಹೊಂದಿದವರು ಅಧ್ಯಕ್ಷರು ಜೋಸೆಫ್ ಬೆನಾರ್ಡ್ ಮಥಾಯಿಸ್ ಪ್ರಭು ಬಿನ್. ದಿ| ಜೆ. ಎ. ಮಥಾಯಿಸ್, 15–23–1421, ಲೋವರ್ ಬೆಂದೂರು, ಮಂಗಳೂರು.

ಸಹಿ/–, ಆಯುಕ್ತರು, ಮಹಾನಗರಪಾಲಿಕೆ, ಮಂಗಳೂರು
DIPR/DK/KSMCA/432/26-27 dt.30.06.2026

ಕಿರುಸುದ್ದಿ

ಬೋಟಿನಿಂದ ಬಿದ್ದು ಗಾಯಗೊಂಡಿದ್ದ ವ್ಯಕ್ತಿ ಸಾವು

ಕುಂದಾಪುರ : ಬೋಟಿನ ಮರದ ರಿಪೇರಿ ಕೆಲಸ ಮಾಡುವಾಗ ಆಕಸ್ಮಿಕವಾಗಿ ಕಾಲು ಜಾರಿ ಕೆಳಗೆ ಬಿದ್ದು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗುಜ್ಜಾಡಿ ಗ್ರಾಮದ ಗಣೇಶ ರಾಮಕೃಷ್ಣ ಆಚಾರಿ (43) ಎಂಬವರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಅವರು ಜೂ. 20 ರಂದು ಗಂಗೊಳ್ಳಿ ಗ್ರಾಮದ ಮ್ಯಾಂಗನೀಸ್ ರಸ್ತೆಯಲ್ಲಿರುವ ಮಂಜುನಾಥ ಖಾರ್ವಿ ಎಂಬವರ ಬೋಟಿನ ಮರದ ರಿಪೇರಿ ಕೆಲಸ ಮಾಡುವಾಗ ಆಕಸ್ಮಿಕವಾಗಿ ಕಾಲು ಜಾರಿ ಕೆಳಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದು, ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಜೂ.21ರಂದು ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಜೂ.29ರಂದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕನಿಗೆ ಹಲ್ಲೆ: ಪೋಕ್ಸೋ ಆರೋಪಿ ವಿರುದ್ಧ ಕೇಸು

ಕಾಸರಗೋಡು: ಹದಿನೈದಕ್ಕೂ ಹೆಚ್ಚು ಪೋಕ್ಸೋ ಪ್ರಕರಣಗಳಲ್ಲಿ ಆರೋಪಿಯಾದ ಮಲಪ್ಪುರಂ ವಳಾಂಚೇರಿ ಆದವನಾಡ್ ಉಸ್ತಾದ್ ವಿರುದ್ಧ ಬೇಕಲ ಪೊಲೀಸರು ಇನ್ನೊಂದು ಕೇಸು ದಾಖಲಿಸಿದ್ದಾರೆ. ಹದಿಮೂರರ ಹರೆಯದ ಬಾಲಕನನ್ನು ಹಲವು ದಿನಗಳ ಕಾಲ ಕೂಡಿಹಾಕಿ ದೊಣ್ಣೆಯಿಂದ ಹೊಡೆದು ಗಾಯಗೊಳಿಸಿದ್ದಾನೆಂಬ ದೂರಿನಂತೆ ಉಸ್ತಾದ್ ಎಂ.ಕೆ.ಮಹಮ್ಮದ್ (54) ಎಂಬಾತನ ವಿರುದ್ಧ ಕೇಸು ದಾಖಲಿಸಲಾಗಿದೆ. ಇದರೊಂದಿಗೆ ಬೇಕಲ ಪೊಲೀಸ್ ಠಾಣೆಯಲ್ಲಿ ಆತನ ವಿರುದ್ಧ ಒಟ್ಟು ಮೂರು ಕೇಸುಗಳು ದಾಖಲಾಗಿವೆ. ತಲೆಮರೆಸಿಕೊಂಡಿದ್ದ ಆತನನ್ನು ಬಿಹಾರದ ಅಡಗು ತಾಣದಿಂದ ಮಲಪ್ಪುರಂ ವಳಾಂಚೇರಿ ಪೊಲೀಸರು ಕರೆತಂದು ಬಂಧಿಸಿದ್ದರು. ಬೇಕಲ ಪೊಲೀಸರು ಆತನನ್ನು ತಮ್ಮ ವಶಕ್ಕೆ ಪಡೆಯುವ ಸಾಧ್ಯತೆಗಳಿವೆ.

ಮಾದಕ ದ್ರವ್ಯ ಸಹಿತ ಆರೋಪಿ ಬಂಧನ

ಬದಿಯಡ್ಕ: ಮಾದಕ ವಸ್ತುವಾದ ಎಂಡಿಎಂಎ ಸಹಿತ ವ್ಯಕ್ತಿಯೋರ್ವನನ್ನು ಬದಿಯಡ್ಕ ಪೊಲೀಸರು ಬಂಧಿಸಿದ್ದಾರೆ. ನೆಕ್ರಾಜೆ ಚರ್ಲಡ್ಕ ನಿವಾಸಿ ಅಬ್ದುಲ್ ಜವಾದ್ ಸಿ.ಎಂ. (33) ಬಂಧಿತ ವ್ಯಕ್ತಿ. ಆತನ ಬಳಿಯಿಂದ 0.49 ಗ್ರಾಂ ಮಾದಕ ಪದಾರ್ಥವನ್ನು ವಶಪಡಿಸಲಾಗಿದೆ. ಸೋಮವಾರ ರಾತ್ರಿ ನೆಲ್ಲಿಕಟ್ಟೆ ಸಮೀಪದ ಚೆನ್ನಡ್ಕದಲ್ಲಿ ಬದಿಯಡ್ಕ ಪೊಲೀಸರು ಗಸ್ತು ನಡೆಸುತ್ತಿದ್ದಾಗ ಆತನನ್ನು ತಪಾಸಣೆಗೊಳಪಡಿಸಲಾಯಿತು. ಈ ಸಂದರ್ಭ ಮಾದಕವಸ್ತುವನ್ನು ಪತ್ತೆಹಚ್ಚಲಾಯಿತು.

ಮರಳು ಸಾಗಾಟ: ಓರ್ವ ಸೆರೆ

ಕುಂಬಳೆ: ಟಿಪ್ಪರ್ ಲಾರಿಯಲ್ಲಿ ಅಕ್ರಮವಾಗಿ ಹೊಳೆಯ ಮರಳು ಸಾಗಾಟಕ್ಕೆ ಸಂಬಂಧಿಸಿ ಕುಂಬಳೆ ಪೊಲೀಸರು ಸೋಮವಾರ ನಡೆಸಿದ ಕಾರ್ಯಾಚರಣೆಯಲ್ಲಿ ಓರ್ವನನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೀಂಜ ಜೋಡುಕಲ್ಲು ನವೋದಯ ನಗರದ ಗಿರೀಶ್ ಎ. (40) ಬಂಧಿತ ಆರೋಪಿ.



ಬಂಟ್ವಾಳ ತಾಲೂಕಿನಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಶೀಲನೆ ಕಾರ್ಯಕ್ರಮಕ್ಕೆ ಮಾಜಿ ಕೇಂದ್ರ ಸಚಿವ ಬಿ.ಜನಾರ್ಧನ ಪೂಜಾರಿ ಅವರ ನಿವಾಸದಲ್ಲಿ ಮಂಗಳವಾರ ಚಾಲನೆ ನೀಡಲಾಯಿತು. ಬಂಟ್ವಾಳ ತಹಶೀಲ್ದಾರ ಮಂಜುನಾಥ್, ಉಪತಹಸೀಲ್ದಾರ್ ನವೀನ್ ಕುಮಾರ್ ಬೆಂಜನಪದವು, ಬಿಎಲ್ಎ ಸುನೀಲ್ ಕುಮಾರ್ ಭಂಡಾರಿಬೆಟ್ಟು, ಮೇಲ್ವಿಚಾರಕರಾದ ಗ್ರಾಮ ಆಡಳಿತ ಅಧಿಕಾರಿ ಯಶ್ವಿತಾ, ಮತಗಟ್ಟೆ ಅಧಿಕಾರಿ ದಾಮೋದರ ಪಡಿಯಾರ್, ಕಚೇರಿ ಸಿಬ್ಬಂದಿಯವರಾದ ಸದಾಶಿವ ಕೈಕಂಬ, ಅಕ್ಷತ್ ವಿಟ್ಲ ಉಪಸ್ಥಿತರಿದ್ದರು.

ಪತ್ರಿಕಾ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ

ಕನ್ನಡ ಗ್ರಾಮದಲ್ಲಿಂದು ಪತ್ರಿಕಾ ದಿನಾಚರಣೆ

ಕಾಸರಗೋಡು: ಕಾಸರಗೋಡಿನ ಕನ್ನಡ ಗ್ರಾಮದಲ್ಲಿ ಜುಲೈ 1ರಂದು ಸಂಜೆ 4 ಗಂಟೆಗೆ 183ನೇ ವರ್ಷದ ರಾಜ್ಯಮಟ್ಟದ ಕನ್ನಡ ಪತ್ರಿಕೋದ್ಯಮ (ಪತ್ರಿಕಾ) ದಿನಾಚರಣೆ, ಕನ್ನಡ ಪತ್ರಿಕಾ ಮಾಧ್ಯಮ ಪ್ರಶಸ್ತಿ ಪ್ರದಾನ ಮುಂತಾದ ಕಾರ್ಯಕ್ರಮ ಜರಗಲಿದೆ.

ಕಾಸರಗೋಡು ಜಿಲ್ಲಾ (ದಕ್ಷಿಣ ಕನ್ನಡ ಜಿಲ್ಲಾ) ಫ್ರೀಲಾನ್ಸ್ ಪತ್ರಕರ್ತರ ಸಂಘದ ನೇತೃತ್ವದಲ್ಲಿ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಕನ್ನಡ ಗ್ರಾಮ ಕಾಸರಗೋಡು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ಸರಕಾರ ಬೆಂಗಳೂರು ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಾಧಕರಿಗೆ ಅಭಿನಂದನೆ

ಕನ್ನಡ ಪತ್ರಿಕಾ ದಿನಾಚರಣೆ, ಕನ್ನಡ ಪತ್ರಿಕಾ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ, ಗಡಿನಾಡು ಕಾಸರಗೋಡು ಜಿಲ್ಲೆಯಲ್ಲಿ ಕನ್ನಡ ಪತ್ರಿಕೋದ್ಯಮ ನಡೆದು ಬಂದ ದಾರಿ – ವಿಶೇಷೋಪನ್ಯಾಸ, ಕಾಸರಗೋಡು ಜಿಲ್ಲೆಯ ಕನ್ನಡ ಪತ್ರಿಕಾ ವಿತರಕರಿಗೆ ಸನ್ಮಾನ, ನೂತನವಾಗಿ ಆಯ್ಕೆಯಾದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅವರಿಗೆ ಅಭಿನಂದನೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಿಶೇಷ ಪ್ರಶಸ್ತಿ ಪುರಸ್ಕೃತ ಛಾಯಾಗ್ರಾಹಕ ಶ್ರೀಕಾಂತ್ ಕಾಸರಗೋಡು ಅವರಿಗೆ ಅಭಿನಂದನೆ, ಕಾಸರಗೋಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕಟವಾಗುವ ಕನ್ನಡ ದಿನ ಪತ್ರಿಕೆಗಳ ಪ್ರದರ್ಶನವನ್ನು ಏರ್ಪಡಿಸಿ, ಕನ್ನಡ ಪತ್ರಿಕಾ ಪ್ರತಿಜ್ಞೆಯನ್ನು ಕೈಗೊಳ್ಳಲಾಗುವುದು.

ಕಾಸರಗೋಡು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ, ಜಿಲ್ಲಾ ಪತ್ರಿಕೆಗಳಿಗೆ ಕಾರ್ಯನಿರತ ಪತ್ರಕರ್ತರಾಗಿ, ಫ್ರೀಲಾನ್ಸ್ ಪತ್ರಕರ್ತರಾಗಿ, ಹವ್ಯಾಸಿ ಪತ್ರಕರ್ತರಾಗಿ, ಅರೆಕಾಲಿಕ ವರದಿಗಾರನಾಗಿ, ನಿರಂತರವಾಗಿ ಪತ್ರಿಕಾ ಬರಹದ ಮೂಲಕ ಗುರುತಿಸಿಕೊಳ್ಳುವವರು ಹಾಗೂ ವಿವಿಧ ಸುದ್ದಿವಾಹಿನಿಗಳು, ಪತ್ರಿಕಾ ದೃಶ್ಯ ಮಾಧ್ಯಮಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಫ್ರೀಲಾನ್ಸ್ ಪತ್ರಕರ್ತರು, ಮಾಧ್ಯಮ ಮಿತ್ರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶಾಸಕ ವಿಶ್ವನಾಥ್ ಹೇಳಿಕೆಗೆ ಪುತ್ತೂರು ಒಕ್ಕಲಿಗ ಗೌಡ ಸಂಘ ಆಕ್ರೋಶ

ಬಹಿರಂಗ ಕ್ಷಮೆಗೆ ಒತ್ತಾಯ

ಪುತ್ತೂರು: ಬೆಂಗಳೂರಿನ ಯಲಹಂಕದ ಶಾಸಕರ ಎಸ್.ಆರ್ ವಿಶ್ವನಾಥ ಅವರು ಮಂಗಳೂರು ಕಡೆಯ ಎಲ್ಲಾ ಗೌಡರು ಒಕ್ಕಲಿಗರೇ ಅಲ್ಲ ಎಂಬ ಹೇಳಿಕೆಗೆ ಪುತ್ತೂರು ಒಕ್ಕಲಿಗ ಗೌಡ ಸೇವಾ ಸಂಘದ ಭಾರಿ ಆಕ್ರೋಶ ವ್ಯಕ್ತಪಡಿಸಿದೆಯಲ್ಲದೆ ಈ ಕುರಿತು ಎಸ್.ಆರ್. ವಿಶ್ವನಾಥ್ ಅವರು ಬಹಿರಂಗ ಕ್ಷಮೆ ಯಾಚಿಸಬೇಕು. ಇಲ್ಲದಿದ್ದಲ್ಲಿ ಒಕ್ಕಲಿಗ ಗೌಡ ಸೇವಾ ಸಂಘ ಜಿಲ್ಲಾ ಮಟ್ಟದ ಸಂಘಟನೆಯಿಂದ ಒಟ್ಟಾಗಿ ಕಾನೂನು ಮೂಲಕ ಅಥವಾ ಬೇರೆ ರೀತಿಯಲ್ಲಿ ಹೋರಾಟ ಮಾಡಲಾಗುವುದು ಎಂದು ಪುತ್ತೂರು ಒಕ್ಕಲಿಗ ಗೌಡ ಸೇವಾ ಸಂಘದ ಅಧ್ಯಕ್ಷ ಸುಂದರ ಗೌಡ ನಡುಬೈಲು ಎಚ್ಚರಿಕೆ ನೀಡಿದ್ದಾರೆ.

ಎಸ್.ಆರ್. ವಿಶ್ವನಾಥ್ ಅವರು ಡಿ.ವಿ. ಸದಾನಂದ ಗೌಡರ ಕುರಿತು ಮಾತನಾಡುವ ವೇಳೆ ಸಾಮಾನ್ಯವಾಗಿ ಹಳೇ ಮೈಸೂರು ಭಾಗದವರನ್ನು ಮಾತ್ರ ಒಕ್ಕಲಿಗರು ಎನ್ನಲಾಗುತ್ತದೆ. ಮಂಗಳೂರು ಕಡೆಯ ಗೌಡರು ಒಕ್ಕಲಿಗರಲ್ಲ ಎಂದು ಲೇವಡಿ ಮಾಡಿರುವುವ ವಿಚಾರದಲ್ಲಿ ಇದೀಗ ಭಾರಿ ಚರ್ಚೆಗೆ ಗ್ರಾಸವಾಗಿದೆ. ಇಲ್ಲಿ ರಾಜಕೀಯ ವಿಚಾರ ಬದಿಗಿಟ್ಟು ಸಮುದಾಯ ಮಂಗಳೂರು ಭಾಗದ ಒಕ್ಕಲಿಗ ಸಮಾಜಕ್ಕೆ ಅಪಮಾನ ಮಾಡಿರುವ ವಿಚಾರವಾಗಿ ಸಮಾಜದ ಮುಖಂಡರು ಖಂಡನೆ ವ್ಯಕ್ತಪಡಿಸಿದ್ದಾರೆ.



ಪುತ್ತೂರು ತಾಲೂಕು ಒಕ್ಕಲಿಗ ಗೌಡ ಸೇವಾ ಸಂಘದ ಅಧ್ಯಕ್ಷ ಸುಂದರ ಗೌಡ ನಡುಬೈಲು ಮಾತನಾಡಿ, ಓರ್ವ ಜವಾಬ್ದಾರಿ ಶಾಸಕನಾಗಿರುವ ಎಸ್. ಆರ್. ವಿಶ್ವನಾಥ್ ಅವರು ಕರಾವಳಿ ಭಾಗದ ಗೌಡ ಸಮುದಾಯವನ್ನು ಒಕ್ಕಲಿಗರಲ್ಲ ಎಂಬ ಹೇಳಿಕೆ ನೀಡಿರುವುದು ಸರಿಯಲ್ಲ. ಇದೊಂದು ಬಾಲಿಶ ಹೇಳಿಕೆ. ಅವರು ಸಮಾಜವನ್ನು ಒಡೆಯುವ ಹೇಳಿಕೆ ನೀಡಿದ್ದಾರೆ ಈ ಹೇಳಿಕೆಯನ್ನು ತಕ್ಷಣ ಹಿಂಪಡೆದು ಸಾರ್ವಜನಿಕರಲ್ಲಿ ಕ್ಷಮೆಯಾಚಿಸಬೇಕೆಂದು ಆಗ್ರಹಿಸುತ್ತೇವೆ. ಒಕ್ಕಲಿಗ ಸಮಾಜವನ್ನು ದಕ್ಷಿಣ ಕನ್ನಡದಲ್ಲಿ ಆದಿಚುಂಚನಗಿರಿ ಶ್ರೀಗಳು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇತಿಹಾಸದ ಪುಟ ನೋಡಿದರೆ ಸಮಾಜದ ದಕ್ಷಿಣ ಕನ್ನಡದ ಒಕ್ಕಲಿಗರ ಕೊಡುಗೆ ತಿಳಿಯುತ್ತದೆ.ಈ ನಿಟ್ಟಿನಲ್ಲಿ ಅವರು ಹೇಳಿಕೆ ಹಿಂಪಡೆಯದಿದ್ದಲ್ಲಿ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕ್ಷಮೆ ಯಾಚಿಸಲು ಆಗ್ರಹ

ಒಕ್ಕಲಿಗ ಗೌಡ ಸೇವಾ ಸಂಘದ ಸಲಹಾ ಸಮಿತಿ ಅಧ್ಯಕ್ಷ ಚಿದಾನಂದ ಬೈಲಾಡಿ ಮಾತನಾಡಿ, ಶಾಸಕ ವಿಶ್ವನಾಥ್ ಅವರ ಹೇಳಿಕೆ ನಮಗೆ ಬೇಸರ ತಂದಿದೆ. ಇತಿಹಾಸನವನ್ನು ಒಮ್ಮೆ ಕೆದಕಿದಾಗ 1837ರಲ್ಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೆದಂಬಾಡಿ ರಾಮಯ್ಯ ಗೌಡರು ಮುಂಚೂಣಿಯಲ್ಲಿದ್ದರು, ಅದು ಕೂಡಾ ದಕ್ಷಿಣ ಕನ್ನಡದಲ್ಲಿ ಆರಂಭದ ಹೋರಾಟವಾಗಿತ್ತು. ಈ ಕುರಿತು ನಾವು ದಾಖಲೆ ಸಹಿತ ಸವಾಲು ಹಾಕುತ್ತೇವೆ. ಇಂತಹ ಹಲವು ಇತಿಹಾಸ ಇರುವ ಕರಾವಳಿ ಭಾಗದ ಒಕ್ಕಲಿಕರಿಗೆ ಶಾಸಕರ ಹೇಳಿಕೆ ನೋವು ತಂದಿದೆ. ಈ ಕುರಿತು ದಕ್ಷಿಣ ಕನ್ನಡ ಜಿಲ್ಲಾ ಗೌಡ ಸಂಘ ಒಟ್ಟಾಗಿ ಪ್ರತಿಭಟನೆ ನಡೆಸಲು ಚಿಂತಿಸುತ್ತಿದೆ. ಅವರು ಬಹಿರಂಗವಾಗಿ ಕ್ಷಮೆ ಯಾಚಿಸಬೇಕು. ಇಲ್ಲವಾದಲ್ಲಿ ಕಾನೂನು ಮೂಲಕ ಅಥವಾ ಪ್ರತಿಭಟನೆ ಮೂಲಕ ಹೋರಾಟ ಮಾಡಲಿದ್ದೇವೆ ಎಂದರು.

ಈ ಸಂದರ್ಭ ಪುತ್ತೂರು ಒಕ್ಕಲಿಗ ಗೌಡ ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಶ್ರೀಧರ್ ಗೌಡ ಪಾಣತ್ತಿಲ, ಮಾಜಿ ಅಧ್ಯಕ್ಷ ರವಿ ಮುಂಗ್ಲಿಮನೆ, ವಿಶ್ವನಾಥ ಗೌಡ ಕೆಯ್ಯೂರು, ಶ್ರೀಧರ್ ಗೌಡ ಕಣಜಾಲು ಉಪಸ್ಥಿತರಿದ್ದರು.

ಮೂಡುಬಿದಿರೆಯಲ್ಲಿ ಸಂಜೆಯ ಮಳೆಯ ಅಬ್ಬರ; ಶಾಲಾ ಮಕ್ಕಳು, ವಾಹನ ಸವಾರರ ಪರದಾಟ

ಮೂಡುಬಿದಿರೆ: ಬೆಳಗ್ಗಿನಿಂದಲೇ ಹಗುರವಾಗಿ ಆರಂಭಗೊಂಡಿದ್ದ ಮಳೆ ಮಧ್ಯಾಹ್ನದ ಬಳಿಕ ತನ್ನ ವೇಗ ಹೆಚ್ಚಿಸಿಕೊಂಡು, ಸಂಜೆಯ ವೇಳೆಗೆ ಗಾಳಿ ಸಹಿತ ಧಾರಾಕಾರವಾಗಿ ಸುರಿದ ಪರಿಣಾಮ ಮೂಡುಬಿದಿರೆ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜನಜೀವನ ಕೆಲಕಾಲ ಅಸ್ತವ್ಯಸ್ತಗೊಂಡಿತು. ದಿನವಿಡೀ ಕಪ್ಪಿಟ್ಟ ಮೋಡಗಳ ನಡುವೆ ಸೂರ್ಯನ ದರ್ಶನವೇ ಆಗದ ವಾತಾವರಣ ನಿರ್ಮಾಣವಾಗಿತ್ತು. ಶಾಲೆಗಳು ಬಿಡುವ ವೇಳೆಯಲ್ಲೇ ಮಳೆಯ ಅಬ್ಬರ ಮತ್ತಷ್ಟು ಹೆಚ್ಚಿದ ಕಾರಣ ನೂರಾರು ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದರು. ಛತ್ರಿ ಮತ್ತು ಮಳೆಕೋಟು ಇಲ್ಲದೆ ಬಂದಿದ್ದ ವಿದ್ಯಾರ್ಥಿಗಳು ಅಂಗಡಿಗಳ ಮುಂಭಾಗ, ಬಸ್ ನಿಲ್ದಾಣ ಹಾಗೂ ಕಟ್ಟಡಗಳ ಆಸರೆಯಲ್ಲಿ ಮಳೆ ಕಡಿಮೆಯಾಗುವುದನ್ನು ಕಾಯಬೇಕಾಯಿತು. ಹಲವರು ಸಂಪೂರ್ಣ ನೆನೆಯುತ್ತಲೇ ಮನೆಗಳತ್ತ ಹೆಜ್ಜೆ ಹಾಕಿದ ದೃಶ್ಯ ಕಂಡುಬಂತು.

ಮನೆ ಮೇಲೆ ಮರ: ಪಾಲಡ್ಕ ಗ್ರಾಂ ಪಂಚಾಯತ್ ವ್ಯಾಪ್ತಿಯ ಕಡಂದಲೆ ಪೂಪಾಡಿಕಲ್ಲು ಎಂಬಲ್ಲಿ ಪತ್ರಕರ್ತ ಜಗದೀಶ್ ಪೂಜಾರಿ ಅವರ ಮನೆಯ ಮೇಲೆ ಸೋಮವಾರ ರಾತ್ರಿ ಭಾರೀ ಗಾಳಿಗೆ ಮರವೊಂದು ಉರುಳಿಬಿದ್ದು ಮನೆ ಭಾಗಶಃ ಹಾನಿಗೊಳಗಾಗಿದೆ. ರಾತ್ರಿ ಭಾರೀ ಗಾಳಿಯೊಂದಿಗೆ ಮಳೆ ಸುರಿದಿತ್ತು. ಮರ ಉರುಳಿಬಿದ್ದ ಪರಿಣಾಮ ಮನೆಯ ಮೇಲ್ಚಾವಣಿ ಸಹಿತ ಮನೆಗೆ ಭಾಗಶಃ ಹಾನಿಯಾಗಿದೆ. ಗ್ರಾಮ ಆಡಳಿತಾಧಿಕಾರಿ ಶ್ರೀನಿವಾಸ್ ಸ್ಥಳಕ್ಕೆ ಭೇಟಿನೀಡಿದ್ದಾರೆ.

ಪೊಲೀಸರಿಂದ ಔಷಧಿ ಅಂಗಡಿಗಳಲ್ಲಿ ತಪಾಸಣೆ

ಬಂಟ್ವಾಳ: ಅಂತರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆಯ ಪ್ರಯುಕ್ತ ಬಂಟ್ವಾಳ ನಗರ ಠಾಣಾ ಪೊಲೀಸರು ಹಾಗೂ ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಬಂಟ್ವಾಳದ ವಿವಿಧ ಔಷಧಿ ಅಂಗಡಿಗಳಿಗಳಿಗೆ (ಮೆಡಿಕಲ್) ಭೇಟಿ ನೀಡಿ ಮಾರಾಟವಾಗುವ ಔಷಧಿಗಳ ದಾಖಲೆಗಳನ್ನು ಪರಿಶೀಲಿಸಿದರು. ವೈದ್ಯರ ಪ್ರಿಸ್ಕ್ರಿಪ್ಷನ್ ಆಧಾರಿತ ಔಷಧಗಳ ವಿತರಣೆ, ನಿಷೇಧಿತ ಹಾಗೂ ದುರುಪಯೋಗಕ್ಕೆ ಒಳಪಡುವ ಔಷಧಿಗಳ ಸಂಗ್ರಹ ಮತ್ತು ಮಾರಾಟದ ಕ್ರಮಗಳ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಅಡ್ಯಾರ್ ಗಾರ್ಡನ್ ಮಾಲಕರ ಕೊಡುಗೆ | ಪತಿಯ ಕಳಕೊಂಡ ಜಯಂತಿ ಮೊಗದಲ್ಲಿ ಹರ್ಷ

ಬಡ ಕುಟುಂಬಕ್ಕೆ ನೂತನ ಮನೆ ಹಸ್ತಾಂತರ

ಬಂಟ್ವಾಳ: ಮನೆ ಕುಸಿದ ಪರಿಣಾಮ ದಿಕ್ಕಿಲ್ಲದ ಬಡ ಕುಟುಂಬವೊಂದಕ್ಕೆ ಮಂಗಳೂರು ಹೊರವಲಯದಲ್ಲಿರುವ ಅಡ್ಯಾರ್ ಗಾರ್ಡನ್ ಮಾಲಕರು ಸುಮಾರು 10 ಲಕ್ಷ ರೂ. ವೆಚ್ಚದಲ್ಲಿ ಮನೆ ನಿರ್ಮಿಸಿಕೊಟ್ಟು ಮಾನವೀಯತೆ ಮೆರೆದಿದ್ದು, ಮನೆಯ ಗೃಹ ಪ್ರವೇಶ ನೆರವೇರಿಸಿ ಕೀಯನ್ನು ಕುಟುಂಬಕ್ಕೆ ಹಸ್ತಾಂತರಿಸಲಾಯಿತು.

ಅರ್ಕುಳ ಗ್ರಾಮದ ತುಪ್ಪೆ ಕಲ್ಲು ನಿವಾಸಿ ಜಯಂತಿ ಎಂಬವರ ಮನೆಯು ಕಳೆದ ವರ್ಷ ಗಾಳಿ ಮಳೆಗೆ ಸಂಪೂರ್ಣವಾಗಿ ಕುಸಿದು ಬಿದ್ದಿತ್ತು. ಇವರ ಪತಿ ಡೋಲುವಾದನ ಕಲಾವಿದರಾಗಿದ್ದು, ಅವರು ಕೆಲ ವರ್ಷದ ಹಿಂದೆ ದೈವಾಧೀನರಾಗಿದ್ದರು. ಜಯಂತಿ ಅವರು ಅನಾರೋಗ್ಯ ಪೀಡಿತರಾದ ತಂಗಿ ಮತ್ತು ತಮ್ಮನ ಜೊತೆ ವಾಸವಾಗಿರುವ ಶೀರಾ ಈ ಬಡಕುಟುಂಬಕ್ಕೆ ಮನೆ ಕುಸಿದ ಪರಿಣಾಮ ದಿಕ್ಕಿಲ್ಲದಂತಾಗಿತ್ತು. ಈ ಕುಟುಂಬದ ಅಸಹಾಯಕತೆಯನ್ನು ಗಮನಿಸಿದ ಅಡ್ಯಾರ್ ಪಂಚಾಯತ್‌ನ ನೌಕರ ಧನಂಜಯ ಹಾಗು ಸಾಮಾಜಿಕ ಕಾರ್ಯಕರ್ತ ಮನೋಜ್ ತುಪ್ಪೆಕಲ್ಲುರವರು ಅಡ್ಯಾರ್ ಗಾರ್ಡನ್‌ನ ಮ್ಯಾನೇಜರ್ ದಿವಾಕರ ಶೆಟ್ಟಿ ನಡಿಗುತ್ತು ಮತ್ತು ಸಂಜ್ಯೋತಿ ಶೇಕರವರಿಗೆ ಮನವರಿಕೆ ಮಾಡಿಕೊಟ್ಟು ಮನೆ ಮನೆ ನಿರ್ಮಾಣಕ್ಕೆ ಸಹಕಾರ ಕೋರಿದ್ದರು.

ಅಡ್ಯಾರ್ ಗಾರ್ಡನ್ ಮಾಲಕರಾದ ಕಿಶನ್ ಶೆಟ್ಟಿಯವರು ಜಯಂತಿಯವರ ಮನೆ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಕೂಡಲೇ ಪೂರ್ಣ ಮನೆ ನಿರ್ಮಾಣಕ್ಕೆ 10 ಲಕ್ಷ ರೂ.ವಿನ ಆರ್ಥಿಕ ನೆರವನ್ನು ಘೋಷಿಸಿದ್ದರು .

ಇದೀಗ ಮನೆ ನಿರ್ಮಾಣ ಕಾರ್ಯವು ಪೂರ್ಣಗೊಂಡು ಗೃಹ ಪ್ರವೇಶವು ವೈದಿಕರಾದ ಪೊಳಲಿ ಗಿರಿಪ್ರಕಾಶ್ ತಂತ್ರಿಯವರ ಮಾರ್ಗದರ್ಶನದಲ್ಲಿ ನೆರವೇರಿದ್ದು, ಜಯಂತಿಯವರಿಗೆ ಮನೆ ಹಸ್ತಾಂತರ ಕಾರ್ಯಕ್ರಮವು ನಡೆಯಿತು.



ಈ ಸಂದರ್ಭ ಕಿಶನ್ ಶೆಟ್ಟಿಯವರ ಪರವಾಗಿ ಅವರ ಭಾವ ಸಂಜ್ಯೋತಿ ಶೇಕ, ಅರ್ಕುಳಬೀಡು ವಜ್ರನಾಭ ಶೆಟ್ಟಿ, ಅಡ್ಯಾರ್ ಗಾರ್ಡನ್ ಮ್ಯಾನೇಜರ್ ದಿವಾಕರ ಶೆಟ್ಟಿ ನಡಿಗುತ್ತು , ಅಡ್ಯಾರ್ ಗಾರ್ಡನ್‌ನ ಪುರುಷೋತ್ತಮ ಶೆಟ್ಟಿ, ಆರ್ .ಕೆ .ಟ್ರಾವೆಲ್ಸ್ ಮಾಲಕ ಮಾಧವ ನಾಯ್ಕ್ ಅಡ್ಯಾರ್, ಮನೀಶ್ ಶೆಟ್ಟಿ ಮೂಡ ಅಡ್ಯಾರ್ ಗುತ್ತು ಉಪಸ್ಥಿತರಿದ್ದರು. ಸಂಜ್ಯೋತಿ ಶೇಕ ರ ಹಾಗೂ ಸಹಕರಿಸಿದ ದಿವಾಕರ ಶೆಟ್ಟಿ, ಮನೋಜ್ ತುಪ್ಪೆಕಲ್ಲು, ಧನಂಜಯ ತುಪ್ಪೆಕಲ್ಲು ಅವರನ್ನು ಗೌರವಿಸಲಾಯಿತು.


ಸಚಿವ ರಾಮಲಿಂಗಾರೆಡ್ಡಿಗೆ ಸಂಸದ ಬಿ. ವೈ. ರಾಘವೇಂದ್ರ ಮನವಿ

ಏತ ನೀರಾವರಿ ಯೋಜನೆ ಮತ್ತೆ ಆರಂಭಿಸಿ

ಬೈಂದೂರು: ವಾರಾಹಿ ನದಿ ನೀರನ್ನು ಬಳಸಿಕೊಂಡು ಬೈಂದೂರು ವ್ಯಾಪ್ತಿಯ ಎಂಟು ಗ್ರಾಮಗಳ 1,200 ಹೆಕ್ಟೇರ್ ಕೃಷಿಭೂಮಿಗೆ ನೀರುಣಿಸುವ ಮಹತ್ವಾಕಾಂಕ್ಷಿ ಸಿದ್ದಾಪುರ ಏತ ನೀರಾವರಿ ಯೋಜನೆಗೆ ಮರುಜೀವ ನೀಡಲು ಸಂಸದ ಬಿ. ವೈ. ರಾಘವೇಂದ್ರ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರನ್ನು ಒತ್ತಾಯಿಸಿದ್ದಾರೆ.

ಬೈಂದೂರು ವಿಧಾನಸಭಾ ಕ್ಷೇತ್ರದ ರೈತರ ಹಿತರಕ್ಷಣೆ ಹಾಗೂ ಕೃಷಿಭೂಮಿಗೆ ಸಮರ್ಪಕ ನೀರಾವರಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಸದ ಬಿ. ವೈ. ರಾಘವೇಂದ್ರ ಅವರು ಬೆಂಗಳೂರಿನಲ್ಲಿ ಜಲಸಂಪನ್ಮೂಲ ಸಚಿವರನ್ನು ಭೇಟಿಮಾಡಿ ಮನವಿ ಸಲ್ಲಿಸಿದ್ದಾರೆ.

ರಾಜಕೀಯ ದುರುದ್ದೇಶ ಹಾಗೂ ತಪ್ಪು ಮಾಹಿತಿಯಿಂದಾಗಿ ಅರ್ಧಕ್ಕೆ ಸ್ಥಗಿತಗೊಂಡಿರುವ ಬೈಂದೂರಿನ ಸಿದ್ದಾಪುರ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಈ ಹಿಂದೆ ಅನುಮೋದನೆಯಾದ ರೀತಿಯಲ್ಲಿಯೇ ತಕ್ಷಣವೇ ಮುಂದುವರಿಸಲು ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸಂಸದರು ಸಚಿವರಿಗೆ ಅಧಿಕೃತ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದ್ದಾರೆ.



ಈಗಾಗಲೇ ಶೇ. 56% ರಷ್ಟು ಕಾಮಗಾರಿ ಪೂರ್ಣಗೊಂಡಿರುವ ಸಿದ್ದಾಪುರ ಏತ ನೀರಾವರಿ ಯೋಜನೆಯು ತಜ್ಞರ ತಂಡದ ವರದಿಯ ಆಧಾರದ ಮೇಲೆಯೇ ಅನುಮೋದನೆಗೊಂಡು ಕಾರ್ಯಾರಂಭವಾಗಿತ್ತು ಎಂದು ಸಂಸದರು ಸಚಿವರಿಗೆ ವಿವರಿಸಿದರು. ವರಾಹಿ ನದಿಯಲ್ಲಿ ಸದ್ಯ 3,000 ಕ್ಯೂಸೆಕ್ಸ್ ನೀರಿನ ಹರಿವಿದ್ದು, ಈ ಯೋಜನೆಗೆ ಕೇವಲ 66 ಕ್ಯೂಸೆಕ್ಸ್ ನೀರು ಮಾತ್ರ ಆವಶ್ಯಕತೆಯಿದೆ. ಇದರಿಂದ ಇತರ ಯಾವುದೇ ಯೋಜನೆಗಳಿಗೆ ತೊಂದರೆಯಾಗದಿದ್ದರೂ, ಖಾಸಗಿ ಕಿರು ಜಲವಿದ್ಯುತ್ ಘಟಕದ ಮಾಲೀಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ತಪ್ಪು ಮಾಹಿತಿ ನೀಡಿ ಕಾಮಗಾರಿಗೆ ತಡೆ ತರಲಾಗಿದೆ ಎಂದು ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

» ಸಂಸದರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಚಿವ ರಾಮಲಿಂಗಾರೆಡ್ಡಿ ಅವರು, ಈ ಕುರಿತು ಪರಿಶೀಲಿಸಿ ಶೀಘ್ರದಲ್ಲೇ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಈ ವಿಷಯವಾಗಿ ಇತ್ತೀಚಿಗೆ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದಾಗ ಅವರು ಕಾಮಗಾರಿ ಪುನರಾರಂಭಿಸಲು ಆದೇಶಿಸಿರುವುದನ್ನು ಸಚಿವರ ಗಮನಕ್ಕೆ ತಂದ ಸಂಸದರು, ಕರಾವಳಿ ಭಾಗದ 7-8 ಗ್ರಾಮಗಳ ಸುಮಾರು 1,200 ಹೆಕ್ಟೇರ್ ಕೃಷಿ ಭೂಮಿಗೆ ನೀರು ಒದಗಿಸುವ ಈ ಯೋಜನೆಯನ್ನು ರೈತರ ಹಿತದೃಷ್ಟಿಯಿಂದ ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ಆಗ್ರಹಿಸಿದರು. ಸಂಸದರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಚಿವ ರಾಮಲಿಂಗಾರೆಡ್ಡಿ ಅವರು, ಈ ಕುರಿತು ಪರಿಶೀಲಿಸಿ ಶೀಘ್ರದಲ್ಲೇ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಕಿರುಸುದ್ದಿ

ಉಡುಪಿ ಕೋರ್ಟ್‌ಗೆ ನಾಲ್ಕನೇ ಬಾರಿ ಬಾಂಬ್ ಬೆದರಿಕೆ

ಉಡುಪಿ: ಉಡುಪಿ ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿ ಬಾಂಬ್ ಇಟ್ಟಿರುವುದಾಗಿ ನಿರಂತರವಾಗಿ ಬೆದರಿಕೆ ಇಮೇಲ್ ಸಂದೇಶಗಳು ಬರುತ್ತಿದ್ದು, ಜೂ.30ರ ಮಂಗಳವಾರದಂದು ನಾಲ್ಕನೇ ಬಾರಿಗೆ ಇಂತಹದ್ದೇ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದಿದೆ. ಈ ಹಿನ್ನೆಲೆಯಲ್ಲಿ ಉಡುಪಿ ಪೊಲೀಸರು ತಾಂತ್ರಿಕ ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಜೂನ್ 30ರಂದು ಬೆಳಗ್ಗೆ ಅನಾಮಧೇಯ ಇಮೇಲ್‌ನಿಂದ ಕೋರ್ಟ್‌ನ ಅಧಿಕೃತ ಇಮೇಲ್‌ಗೆ ಸಂದೇಶ ಬಂದಿದ್ದು, ತಕ್ಷಣವೇ ಈ ಬಗ್ಗೆ ಉಡುಪಿ ನಗರ ಪೊಲೀಸರಿಗೆ ಮಾಹಿತಿ ನೀಡಲಾಯಿತು. ಮಧ್ಯಾಹ್ನದ ವೇಳೆ ಸ್ಥಳಕ್ಕೆ ಆಗಮಿಸಿದ ಶ್ವಾನ ದಳ ಮತ್ತು ಬಾಂಬ್ ನಿಷ್ಕ್ರಿಯ ದಳ ನ್ಯಾಯಾಲಯದ ಆವರಣದ ಎಲ್ಲ ಕಡೆಗಳಲ್ಲೂ ತಪಾಸಣೆ ನಡೆಸಿತು. ಆದರೆ, ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗದ ಹಿನ್ನೆಲೆಯಲ್ಲಿ ಇದು ಕೂಡ ಹುಸಿ ಸಂದೇಶ ಎಂಬುದು ದೃಢಪಟ್ಟಿದೆ.

ಇದಕ್ಕೂ ಮುನ್ನ ಜೂನ್ 21, ಜೂನ್ 26 ಹಾಗೂ ಜೂನ್ 29ರಂದು ಕೋರ್ಟ್‌ಗೆ ಬಾಂಬ್ ಇಟ್ಟಿರುವುದಾಗಿ ಇಮೇಲ್ ಸಂದೇಶಗಳು ಬಂದಿದ್ದವು. ಈಗಾಗಲೇ ಮೊದಲ ಎರಡು ಬಾರಿಯ ಇಮೇಲ್ ಸಂದೇಶಗಳಿಗೆ ಸಂಬಂಧಿಸಿದಂತೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅದೇ ಎಫ್‌ಐಆರ್ ಅಡಿಯಲ್ಲೇ ಕಳೆದ ಜೂನ್ 29 ಮತ್ತು ಜೂನ್ 30ರ ಹುಸಿ ಬಾಂಬ್ ಸಂದೇಶಗಳ ಪ್ರಕರಣಗಳನ್ನೂ ಸೇರಿಸಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್, ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ತಾಂತ್ರಿಕ ತಂಡ ಈಗಾಗಲೇ ತನಿಖೆ ಕೈಗೆತ್ತಿಕೊಂಡಿದೆ. ದೇಶದ ಹಲವು ಕೋರ್ಟ್‌ಗಳಿಗೂ ಇದೇ ಮಾದರಿಯ ಬೆದರಿಕೆ ಇಮೇಲ್ ಸಂದೇಶಗಳು ಬರುತ್ತಿವೆ. ಆದುದರಿಂದ ಕೇಂದ್ರ ತನಿಖಾ ಸಂಸ್ಥೆಯೊಂದಿಗೆ ನಿರಂತರ ಸಂಪರ್ಕ ಕಾಯ್ದುಕೊಂಡು ಈ ಪ್ರಕರಣದ ಸತ್ಯಾಸತ್ಯತೆಯನ್ನು ತನಿಖೆ ನಡೆಸುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಜು.2: ಐಎಂಎ ಹಾಲ್‌ನಲ್ಲಿ ವೈದ್ಯರ ದಿನಾಚರಣೆ

ಕಾಸರಗೋಡು: ಐಎಂಎ ಕಾಸರಗೋಡು ಶಾಖೆಯ ನೇತೃತ್ವದಲ್ಲಿ ಜು.2ರಂದು ರಾತ್ರಿ 7ಗಂಟೆಗೆ ಕಾಸರಗೋಡಿನ ಐಎಂಎ ಹಾಲ್‌ನಲ್ಲಿ ವೈದ್ಯರ ದಿನಾಚರಣೆ ನಡೆಯಲಿದೆ. ಈ ಸಂದರ್ಭ ಕುಟುಂಬ ಸಭೆ, ಸಾಧಕರಿಗೆ ಪ್ರಶಸ್ತಿ ಪ್ರದಾನ, ಮಕ್ಕಳಿಗೆ ಪ್ರತಿಭಾ ಪುರಸ್ಕಾರಗಳ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಪ್ರಧಾನಮಂತ್ರಿ ಧನ್ ಧಾನ್ಯ ಕೃಷಿ ಯೋಜನೆ: ಪರಿಶೀಲನಾ ಸಭೆ


ಕಾಸರಗೋಡು: ಪ್ರಧಾನಮಂತ್ರಿ ಧನ್ ಧಾನ್ಯ ಕೃಷಿ ಯೋಜನೆಯ ತ್ರೈಮಾಸಿಕ ಪರಿಶೀಲನಾ ಸಭೆಯು ಸೋಮವಾರ ನಡೆಯಿತು. ಕಾಸರಗೋಡು ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಜರಗಿದ ಈ ಸಭೆಯನ್ನು ಪ್ರವಾಸೋದ್ಯಮ ಸಚಿವಾಲಯದ ಜಂಟಿ ಕಾರ್ಯದರ್ಶಿ, ಕೇಂದ್ರ ನೋಡಲ್ ಅಧಿಕಾರಿ ಎಸ್.ಹರಿಕಿಶೋರ್ ಉದ್ಘಾಟಿಸಿದರು. ಎಲ್ ನಿನೋ ವಿದ್ಯಮಾನಕ್ಕೆ ಸಂಬಂಧಿಸಿದ ಸಿದ್ಧತೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಪ್ರಸ್ತುತ ಜಿಲ್ಲೆಯ ರೈತರು ಚಿಂತಿಸುವ ಅಗತ್ಯವಿಲ್ಲ ಮತ್ತು ನೀರಿನ ಸಂರಕ್ಷಣಾ ಚಟುವಟಿಕೆಗಳಿಗೆ ಒತ್ತು ನೀಡುವ ಕೃಷಿ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಹಾಗೂ ಕೃಷಿ ಭವನಗಳ ಮೂಲಕ ಇತರ ಅಗತ್ಯದ ಸೂಚನೆಗಳನ್ನು ನೀಡಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

ಪ್ರಧಾನಮಂತ್ರಿ ಧನ್ ಧಾನ್ಯ ಕೃಷಿ ಯೋಜನೆಯನ್ನು ಅನುಷ್ಠಾನಗೊಳಿಸುವ ವಿವಿಧ ಇಲಾಖೆಗಳ ಜಿಲ್ಲಾ ಮುಖ್ಯಸ್ಥರು ಸಭೆಯಲ್ಲಿ ಮಾತನಾಡಿದರು. ಈ ಯೋಜನೆಯು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು, ಬೆಳೆ ವೈವಿಧ್ಯೀಕರಣವನ್ನು ಉತ್ತೇಜಿಸುವುದು, ಸುಸ್ಥಿರ ಕೃಷಿ ಪದ್ಧತಿಗಳನ್ನು ವಿಸ್ತರಿಸುವುದು, ನೀರಾವರಿ ಸೌಲಭ್ಯಗಳನ್ನು ಸುಧಾರಿಸುವುದು, ಕೊಯ್ಲಿನ ನಂತರದ ಶೇಖರಣಾ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು, ರೈತರಿಗೆ ಅಲ್ಪಾವಧಿ ಮತ್ತು ದೀರ್ಘಾವಧಿಯ ಸಾಲ ಲಭ್ಯತೆಯನ್ನು ಹೆಚ್ಚಿಸುವುದು ಮತ್ತು ಹೈನುಗಾರಿಕೆ, ಮೀನುಗಾರಿಕೆ ಹಾಗೂ ಕೋಳಿ ಸಾಕಣೆಯಂತಹ ಸಂಬಂಧಿತ ವಲಯಗಳನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

ನಿಧನ ಸುದ್ದಿ

ಮಧೂರು ವೆಂಕಟಕೃಷ್ಣ

ಕಾಸರಗೋಡು: ಮಧೂರು ನಿವಾಸಿ, ನಿವೃತ್ತ ಸೇಲ್ಸ್ ಟ್ಯಾಕ್ಸ್ ಆಫೀಸರ್, ಪ್ರಸಿದ್ಧ ಯಕ್ಷಗಾನ ಕಲಾವಿದ ಹಾಗೂ ಕನ್ನಡ ಲೇಖಕರಾಗಿದ್ದ ಮಧೂರು ವೆಂಕಟಕೃಷ್ಣ(86) ಸೋಮವಾರ ಸ್ವಗೃಹದಲ್ಲಿ ನಿಧನರಾದರು. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮನೆಯಲ್ಲಿ ವಿಶ್ರಾಂತಿಯಲ್ಲಿದ್ದರು.



ಮಧೂರು ವೆಂಕಟಕೃಷ್ಣ ಅವರು ಸರಕಾರಿ ಸೇವೆಯಿಂದ ನಿವೃತ್ತರಾದ ನಂತರವೂ ಯಕ್ಷಗಾನ ಹಾಗೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದರು. ಹಲವು ದಶಕಗಳ ಕಾಲ ಯಕ್ಷಗಾನ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಅವರು, ಅನೇಕ ಕೃತಿಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೂ ಗಣನೀಯ ಕೊಡುಗೆಗಳನ್ನು ನೀಡಿದ್ದಾರೆ. ಮೃತರು ಪತ್ನಿ ಸುಮಿತ್ರಾ, ಪುತ್ರಿ ಜ್ಯೋತಿಲಕ್ಷ್ಮಿ ಬೆಂಗಳೂರು, ಪುತ್ರರಾದ ಮುರಳಿಮಾಧವ ಮಧೂರು, ಡಾ.ವಿನೋದ್ ನಾರಾಯಣ್ ಮಂಗಳೂರು ಅವರನ್ನು ಅಗಲಿದ್ದಾರೆ. ವೆಂಕಟಕೃಷ್ಣ ಅವರ ನಿಧನಕ್ಕೆ ಯಕ್ಷಗಾನ ಕಲಾವಿದರು, ಸಾಹಿತಿಗಳು ಹಾಗೂ ಗಣ್ಯರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಅವರ ಅಗಲುವಿಕೆ ಯಕ್ಷಗಾನ ಹಾಗೂ ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ ಎಂದು ಶೋಕ ಸಂದೇಶದಲ್ಲಿ ತಿಳಿಸಲಾಗಿದೆ.

ಜಯಂತಿ ಶೆಟ್ಟಿ

ಉಪ್ಪಳ: ಮಂಗಲ್ಪಾಡಿ ತಿಂಬರ ನಿವಾಸಿ, ನವಿ ಮುಂಬಯಿ ಸಿಬಿಡಿ ಬೇಲಾಪುರ್‌ನಲ್ಲಿ ವಾಸವಾಗಿರುವ, ಹಿರಿಯ ಹೊಟೇಲ್ ಉದ್ಯಮಿ, ಕೊಡುಗೈದಾನಿ ಸಂಜೀವ ಶೆಟ್ಟಿ ತಿಂಬರ ಅವರ ಪತ್ನಿ ಜಯಂತಿ ಶೆಟ್ಟಿ (63) ಸೋಮವಾರ ಮುಂಜಾನೆ ಮುಂಬಯಿಯ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅವರಿಗೆ ಕೆಲವು ದಿನಗಳ ಹಿಂದೆ ಅಸೌಖ್ಯ ಬಾಧಿಸಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಮೃತರು ಮಕ್ಕಳಾದ ಅರುಣ್ ಶೆಟ್ಟಿ, ಅಜಿತ್ ಶೆಟ್ಟಿ, ಅಕ್ಷಿಥ್ ಶೆಟ್ಟಿ ಅವರನ್ನು ಅಗಲಿದ್ದಾರೆ.









ದ.ಕ., ಉಡುಪಿ ಜಿಲ್ಲೆಗಳಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಚಾಲನೆ

ಮನೆ ಮನೆ ಭೇಟಿ; ಜಿಲ್ಲಾಧಿಕಾರಿಗಳಿಂದ ಪರಿಶೀಲನೆ

ಮಂಗಳೂರು/ಉಡುಪಿ: ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಭಾಗವಾಗಿ ಜಿಲ್ಲೆಯ ಎಲ್ಲಾ ಮತಗಟ್ಟೆ ಅಧಿಕಾರಿಗಳು ಮತದಾರರ ಮನೆ ಮನೆಗಳಿಗೆ ಭೇಟಿ ನೀಡಿ, ಎನುಮರೇಷನ್ ಫಾರ್ಮ್ ಅನ್ನು ವಿತರಿಸಿ, ಮತದಾರರ ವಿವರವನ್ನು ಕಲೆ ಹಾಕುವ ಕಾರ್ಯಕ್ಕೆ ಮಂಗಳವಾರ ಚಾಲನೆ ನೀಡಲಾಗಿದೆ.

ದ.ಕ. ಜಿಲ್ಲೆಯ 1876 ಮತಗಟ್ಟೆಗಳಲ್ಲಿ ಬಿ.ಎಲ್.ಒ.ಗಳು ಮತದಾರರ ಮನೆ ಬಾಗಿಲಿಗೆ ತೆರಳಿ ಗಣತಿ ನಮೂನೆಗಳನ್ನು ಮತದಾರರಿಗೆ ನೀಡುವ ಪ್ರಕ್ರಿಯೆಯನ್ನು ಆರಂಭಿಸಿದರು.

ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ. ಅವರು ಮಂಗಳವಾರ ಮಂಗಳೂರು ನಗರದ ಕೆಲವು ಮತಗಟ್ಟೆಗಳಿಗೆ ಭೇಟಿ ನೀಡಿ ಮತದಾರರಿಗೆ ಗಣತಿ ನಮೂನೆಯನ್ನು ವಿತರಿಸಿದರು. ಅಲ್ಲದೆ ವಿವಿಧ ಮತಗಟ್ಟೆಗಳಲ್ಲಿ ಎಸ್.ಐ.ಆರ್ ಪ್ರಕ್ರಿಯೆ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ರಾಜು ಕೆ. ಉಪಸ್ಥಿತರಿದ್ದರು.

ರಾಜ್ಯಸಭಾ ಸದಸ್ಯ ಡಾ. ವೀರೇಂದ್ರ ಹೆಗ್ಗಡೆ, ಮಾಜಿ ಕೇಂದ್ರ ಸಚಿವ ಬಿ. ಜನಾರ್ಧನ ಪೂಜಾರಿ ಅವರ ಮನೆಗೂ ಅಧಿಕಾರಿಗಳು ಭೇಟಿ ನೀಡಿ ಗಣತಿ ನಮೂನೆಯನ್ನು ನೀಡಿದರು. ಹಿರಿಯ ನಾಗರಿಕರಿಗೆ ಖುದ್ದು ಭೇಟಿ ನೀಡಿ ನಮೂನೆ ನೀಡಲಾಯಿತು.

ಈಗಿನ ಮತದಾರರ ಪಟ್ಟಿಯಲ್ಲಿರುವಂತೆ ಹೆಸರು, ಮತಗಟ್ಟೆ ಸಂಖ್ಯೆ, ವಿಧಾನಸಭಾ ಕ್ಷೇತ್ರದ ಹೆಸರು ಗಣತಿ ನಮೂನೆಯಲ್ಲಿ ಅರ್ಜಿಯಲ್ಲಿ ಮುದ್ರಣವಾಗಿದೆ. ಮತದಾರರ ಫೋಟೋ ಹಳೆಯದಾಗಿದ್ದರೆ ಅರ್ಜಿಯೊಂದಿಗೆ ಹೊಸ ಫೋಟೋ ನೀಡಬಹುದು.

ಉಡುಪಿಯಲ್ಲಿ ಇಂದ್ರಾಳಿ, ಕುಂಜಿಬೆಟ್ಟು, ಕಾಡಬೆಟ್ಟು, ಪಣಿಯಾಡಿ ಸೇರಿದಂತೆ ಮತ್ತಿತರ ವಾರ್ಡ್‌ಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಭೇಟಿ ನೀಡಿ ಪರಿಶೀಲಿಸಿದರು.



ಮತದಾರರ ಸೌಲಭ್ಯ ಕೇಂದ್ರ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 18,05,189 ಮತದಾರರು ಇದ್ದಾರೆ. ಎಸ್.ಐ.ಆರ್ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಹಾಗೂ ಪಾರದರ್ಶಕತೆ ಖಚಿತಪಡಿಸಲು ಎಲ್ಲಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಪ್ರತಿಯೊಂದು ಮತಗಟ್ಟೆಗೆ ಬೂತ್ ಮಟ್ಟದ ಏಜೆಂಟ್‌ರನ್ನು ನೇಮಕ ಮಾಡಲು ಜಿಲ್ಲಾಡಳಿತ ಸೂಚಿಸಿದೆ. ಯಾವುದೇ ಒಬ್ಬ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯಬಾರದು, ಅದೇ ರೀತಿ ಯಾವುದೇ ಒಬ್ಬ ಅನರ್ಹ ಮತದಾರ ಮತದಾರರ ಪಟ್ಟಿಗೆ ಸೇರಬಾರದು ಎಂಬುದು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಮುಖ್ಯ ಉದ್ದೇಶ.

ಈಗಾಗಲೇ ಪೂರ್ವಸಿದ್ಧತಾ ಕಾರ್ಯಗಳ ಪ್ರಕ್ರಿಯೆಗಳು ನಡೆದಿವೆ. ಇಂದಿನಿಂದ (ಜೂ. 30) ಜು. 29 ರ ವರೆಗೆ ಬಿಎಲ್‌ಒಗಳು ಮನೆ ಮನೆ ಸಮೀಕ್ಷೆ ಭೇಟಿ ನೀಡಿ, ಎನುಮರೇಷನ್ ಫಾರಂಗಳನ್ನು ನೀಡಿ, ಸಾರ್ವಜನಿಕರಿಂದ ಭರ್ತಿ ಮಾಡಲಾದ ಗಣತಿ ನಮೂನೆಗಳನ್ನು ಭಾವಚಿತ್ರ ಸೇರಿದಂತೆ ಅಗತ್ಯ ದಾಖಲಾತಿಗಳನ್ನು ಪಡೆಯಲಿದ್ದಾರೆ. ಸಾರ್ವಜನಿಕರು ಈ ಪ್ರಕ್ರಿಯೆಗೆ ಸಹಕರಿಸಬೇಕು ಎಂದ ಅವರು, ಭರ್ತಿ ಮಾಡಿದ ಫಾರಂಗಳ ಮೇಲೆ ಮತದಾರರ ಸಹಿ ಅಥವಾ ಹೆಬ್ಬೆರಳ ಗುರುತು ಕಡ್ಡಾಯವಾಗಿ ಇರಬೇಕೆಂದರು.

ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಇದರ ಬಗ್ಗೆ ಹಕ್ಕು ಮತ್ತು ಆಕ್ಷೇಪಣೆಗಳು ಇದ್ದಲ್ಲಿ ಆಗಸ್ಟ್ 5 ರಿಂದ ಸೆಪ್ಟೆಂಬರ್ 4 ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಇವುಗಳ ವಿಲೇವಾರಿಯನ್ನು ಆಗಸ್ಟ್ 5 ರಿಂದ ಅಕ್ಟೋಬರ್ 3 ರ ವರೆಗೆ ನಡೆಸಿ, ಅಕ್ಟೋಬರ್ 7 ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದರು. ಜಿಲ್ಲಾಧಿಕಾರಿಗಳು ಉಡುಪಿ ಕೃಷ್ಣ ಮಠಕ್ಕೆ ಭೇಟಿ ನೀಡಿ ಪರ್ಯಾಯ ಶ್ರೀ ವೇದವರ್ಧನ ತೀರ್ಥ ಶ್ರೀಪಾದರಿಗೆ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಿ ಎನುಮರೇಷನ್ ಅರ್ಜಿಯನ್ನು ನೀಡಿದರು.

ನಾವುಗಳು ಮನೆಗಳಿಗೆ ಭೇಟಿ ನೀಡಿದಾಗ ಮನೆಯಲ್ಲಿ ಜನರು ಇದ್ದು, ಗಣತಿ ನಮೂನೆಗಳನ್ನು ಸ್ವೀಕರಿಸಿದರೆ ಅಂತಹ ಮನೆಗಳಿಗೆ ನೇರಳೆ ಬಣ್ಣದ ಚೌಕಾಕಾರದ ಸ್ಟಿಕ್ಕರ್ ಹಾಗೂ ಮನೆಗೆ ಬೀಗ ಹಾಕಿದ್ದರೆ ಕೆಂಪು ಬಣ್ಣದ ವೃತ್ತಾಕಾರದ ಸ್ಟಿಕ್ಕರ್ ಅಂಟಿಸಲಾಗುವುದು. ಮತದಾರರಿಂದ ಸಂಗ್ರಹಿಸಲಾದ ಅರ್ಜಿ ನಮೂನೆಯನ್ನು ಆನ್‌ಲೈನ್‌ನಲ್ಲಿ ಅಪ್ಲೋಡ್ ಮಾಡು ಮಾಡಲಾಗುವುದು ಎಂದು ಸಗ್ರಿ ವಾರ್ಡ್‌ನ ಬಿ.ಎಲ್.ಓ ಪ್ರಮೋದಾ ತಿಳಿಸಿದರು.

ಈ ಸಂದರ್ಭದಲ್ಲಿ ಉಡುಪಿ ತಾಲೂಕು ತಹಶೀಲ್ದಾರ್ ಗುರುರಾಜ್, ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕೊಡಗು ಜಿಲ್ಲೆಯಲ್ಲಿ ಆಂದೋಲನಕ್ಕೆ ಚಾಲನೆ

ಮಡಿಕೇರಿ: ಮಡಿಕೇರಿ ಉಪವಿಭಾಗಾಧಿಕಾರಿ ನಿತಿನ್ ಚಕ್ಕಿ ಹಾಗೂ ಮತಗಟ್ಟೆ ಅಧಿಕಾರಿಗಳು ಮಂಗಳವಾರ ಮಾಜಿ ಸಚಿವ ಎಂ.ಸಿ.ನಾಣಯ್ಯ ಅವರ ನಿವಾಸಕ್ಕೆ ಭೇಟಿ ನೀಡಿ ಗಣತಿ ನಮೂನೆ ನೀಡುವ ಮೂಲಕ ಮತದಾನ ಪಟ್ಟಿ ಪರಿಷ್ಕರಣೆ ಆಂದೋಲನಕ್ಕೆ ಚಾಲನೆ ನೀಡಿದರು.

ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಅವರು ಮಾತನಾಡಿ, ನೇಮಿಸಲ್ಪಟ್ಟ ಮತಗಟ್ಟೆ ಅಧಿಕಾರಿಗಳು ಕಡ್ಡಾಯವಾಗಿ ಪ್ರತಿಯೊಬ್ಬರ ಮನೆ ಬಾಗಿಲಿಗೆ ತೆರಳಿ ನಮೂನೆ ಅರ್ಜಿ ಸಲ್ಲಿಸಿ, ನಮೂನೆ ಭರ್ತಿ ಮಾಡಿ ಸಹಿ ಹಾಕಿ ಕೊಡುವುದು ಕಡ್ಡಾಯವಾಗಿದೆ. ಆ ನಿಟ್ಟಿನಲ್ಲಿ ಮತದಾರರು ಗಮನಿಸಬೇಕಿದೆ ಎಂದು ಕೋರಿದರು.

ಅರ್ಜಿ ನಮೂನೆ ಕೊಡದೇ ಹೋದರೆ ಅಂತಹ ಮತದಾರರ ಹೆಸರು ಮತದಾರರ ಪಟ್ಟಿಯಿಂದ ಹೊರಗುಳಿಯಲಿದೆ. ಆದ್ದರಿಂದ ಈ ಬಗ್ಗೆ ಪ್ರತಿಯೊಬ್ಬರೂ ಎಚ್ಚರವಹಿಸಬೇಕು ಎಂದು ಮನವಿ ಮಾಡಿದರು. ಗಣತಿ ನಮೂನೆ ನೀಡಿ, ಪರಿಷ್ಕರಣೆ ಕುರಿತು ವಿವರಿಸಿದರು.

ಒಂದು ವೇಳೆ ಮತದಾರರು ಹೊರಗೆ ಇದ್ದರೂ ಕುಟುಂಬದ ಯಾರಾದರೊಬ್ಬರೂ ತಮ್ಮ ಕುಟುಂಬದ ಎಲ್ಲ ಮತದಾರರ ಗಣತಿ ನಮೂನೆಗೆ ಸಹಿ ಹಾಕಿಕೊಡುವ ಅವಕಾಶ ಮಾಡಿಕೊಡಲಾಗಿದೆ. ಗಣತಿ ನಮೂನೆಯಲ್ಲಿ 2002ರ ಮತದಾರರ ಪಟ್ಟಿಯಲ್ಲಿ ಹೆಸರಿರುವ ಮಾಹಿತಿ ಒದಗಿಸಬೇಕು, ಬೇರೆ ಮತಕ್ಷೇತ್ರ ಅಥವಾ ಮತಗಟ್ಟೆಯಲ್ಲಿದ್ದರೆ ಅದರ ವಿವರ ಹಾಕಬೇಕು ಎಂದು ಹೇಳಿದರು.

ಒಂದು ಮನೆಗೆ ಮೂರು ಬಾರಿ ಕಡ್ಡಾಯವಾಗಿ ಮತಗಟ್ಟೆ ಅಧಿಕಾರಿಗಳು ಭೇಟಿ ನೀಡಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭ ಮಾತನಾಡಿದ ಮಾಜಿ ಸಚಿವ ಎಂ.ಸಿ.ನಾಣಯ್ಯ ಅವರು, ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಡಿಕೇರಿ ತಹಶೀಲ್ದಾರ್ ಶ್ರೀಧರ್ ಅವರು ಮಾತನಾಡಿ, ಚುನಾವಣೆ ಆಯೋಗದಿಂದ ಈಗಾಗಲೇ ಎಸ್.ಐ.ಆರ್ ಆರಂಭವಾಗಿದ್ದು, ಮತದಾರರು ಬಿಎಲ್‌ಒಗಳು ತಮ್ಮ ಮನೆಗೆ ಬಂದಾಗ ನಮೂನೆಯಲ್ಲಿ ಸೂಚಿಸಲಾದ ಮಾಹಿತಿಯನ್ನು ನೀಡುವುದರ ಜೊತೆಗೆ ಕಲರ್ ಫೋಟೋವನ್ನು ಅಳವಡಿಸುವ ಮೂಲಕ ಸಹಕರಿಸುವಂತೆ ಮನವಿ ಮಾಡಿದರು.

ಉಪ ತಹಶೀಲ್ದಾರ್ ಚಂದ್ರಶೇಖರ್, ಗ್ರಾಮಾಡಳಿತಾಧಿಕಾರಿ ಸಂದೀಪ್ ಶೆಣೈ, ಬೂತ್ ಮಟ್ಟದ ಅಧಿಕಾರಿ ಕೆ.ಎಸ್.ಮುತ್ತಮ್ಮ ಇತರರು ಇದ್ದರು.

ಜು.2: ಶೆಡ್ಡೆ ಶ್ರೀ ವಿಷ್ಣು ಮೂರ್ತಿ ನೂತನ ದೇವಸ್ಥಾನಕ್ಕೆ ಶಿಲಾನ್ಯಾಸ

ಮಂಗಳೂರು: ಹಿಂದು ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಇಲಾಖೆಗೆ ಒಳಪಟ್ಟ ಮೂಡುಶೆಡ್ಡೆಯ ಶೆಡ್ಡೆ ಶ್ರೀ ವಿಷ್ಣುಮೂರ್ತಿ ನೂತನ ದೇವಸ್ಥಾನದ ಗರ್ಭಗುಡಿ ಸಹಿತ ಪುನರ್ ನಿರ್ಮಾಣಕ್ಕೆ ಶಿಲಾನ್ಯಾಸ ಜುಲೈ 2ರಂದು ಬೆಳಗ್ಗೆ 8.30ಕ್ಕೆ ಶೆಡ್ಡೆಯಲ್ಲಿ ನಡೆಯಲಿದೆ.

ನೂತನ ದೇವಸ್ಥಾನದ ಶಿಲಾನ್ಯಾಸವನ್ನು ಕುಡುಪು ನರಸಿಂಹ ತಂತ್ರಿ, ಕುಡುಪು ಕೃಷ್ಣರಾಜ ತಂತ್ರಿ, ಶ್ರೀನಿವಾಸ ಉಡುಪ, ರಾಮಚಂದ್ರ ಉಡುಪ ನೆರವೇರಿಸಲಿದ್ದಾರೆ. ಬೆಳಗ್ಗೆ 9.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ. ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ, ಮಾಣಿಲದ ಶ್ರೀ ಮೋಹನದಾಸ ಸ್ವಾಮೀಜಿ, ಕಟೀಲು ಕ್ಷೇತ್ರದ ಆನುವಂಶಿಕ ಅರ್ಚಕ ಶ್ರೀಹರಿನಾರಾಯಣದಾಸ ಅಸ್ರಣ್ಣ ಆಶೀರ್ವಚನ ನೀಡಲಿದ್ದಾರೆ. ಎಂಆರ್‌ಜಿ ಗ್ರೂಪ್‌ನ ಸಿಎಂಡಿ ಡಾ. ಕೆ. ಪ್ರಕಾಶ್ ಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಚಂದ್ರಹಾಸ ಡಿ. ಶೆಟ್ಟಿ ರಂಗೋಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಾರಂಭದಲ್ಲಿ ಆರೋಗ್ಯ ಸಚಿವ ಯು.ಟಿ.ಖಾದರ್, ಮುಂಬೈನ ಸಂಸದ ಡಾ. ಶ್ರೀಕಾಂತ್ ಏಕನಾಥ್ ಶಿಂಧೆ, ಮುಂಬೈನ ಶಾಸಕರಾದ ರಾಜೇಶ್ ಜಿ. ಮೋರೆ, ಗೋಪಾಲ್ ಆರ್. ಲ್ಯಾಂಡ್‌ಗೆ, ಜಿಲ್ಲಾಧಿಕಾರಿ ದರ್ಶನ್ ಹೆಚ್. ವಿ. ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕರಾದ ಎ. ಉಮಾನಾಥ ಕೋಟ್ಯಾನ್, ಡಾ.ವೈ. ಭರತ್ ಶೆಟ್ಟಿ, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ, ಮಾಜಿ ಸಚಿವರಾದ ಕೆ. ಅಭಯಚಂದ್ರ ಜೈನ್, ನಾಗರಾಜ ಶೆಟ್ಟಿ, ಉದ್ಯಮಿ ಬರೋಡಾ ಶಶಿಧರ ಶೆಟ್ಟಿ, ಡಾ. ಎಂ. ಮೋಹನ ಆಳ್ವ, ಶೆಡ್ಡೆ ಮಂಜುನಾಥ ಭಂಡಾರಿ, ಸುಧಾಕರ ಶೆಟ್ಟಿ ಮುಗ್ರೋಡಿ, ರಾಜು ಕೆ., ಮಹಾಬಲ ಕೊಟ್ಟಾರಿ, ಭುವನೇಶ್ ಪಚ್ಚಿನಡ್ಕ, ಮಿಥುನ್ ಎ. ರೈ, ನಿಟ್ಟೆಗುತ್ತು ರವಿರಾಜ್ ಶೆಟ್ಟಿ, ಡಾ. ಅಭಿಲಾಶ್ ಪಿ.ವಿ., ಕ್ಯಾ. ಮನೋಜ್ ಶೆಟ್ಟಿ, ಮಲ್ಲಿಕಾ ಪಕ್ಕಳ, ಸಂತೋಷ್ ಶೆಟ್ಟಿ ಭೀವಂಡಿ, ಸುಧಾಕರ ಶೆಟ್ಟಿ, ಆರ್. ಪದ್ಮರಾಜ್ ಪೂಜಾರಿ, ಶಂಕರ ರಾವ್, ಸುಜಿತ್ ಆಳ್ವ ವಿಠಮೊಗರು ಗುತ್ತು, ಉರ್ಮಿಳಾ ರಮೇಶ್ ಕುಮಾರ್ ಪಾಲ್ಗೊಳ್ಳುವರು ಎಂದರು.

ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಎಸ್. ಶಿವರಾಮ ಮಲ್ಲಿ ಅರ್ಬಿ ಮಾತನಾಡಿ, ಉಡುಪ ಮನೆತನದವರು 1.7 ಎಕರೆ ಭೂಮಿಯನ್ನು ದೇವಸ್ಥಾನಕ್ಕೆ ದಾನಪತ್ರದ ಮೂಲಕ ನೀಡಿದ್ದಾರೆ. 75 ಲಕ್ಷ ರೂ. ವೆಚ್ಚದಲ್ಲಿ ಗೋಪುರವನ್ನೂ ನಿರ್ಮಿಸಲಿದ್ದಾರೆ. ಒಟ್ಟು 7 ಕೋಟಿ ರೂ. ವೆಚ್ಚದಲ್ಲಿ ದೇವಸ್ಥಾನದ ಜೀರ್ಣೋದ್ಧಾರ ನಡೆಯಲಿದೆ ಎಂದರು.

ಜೀರ್ಣೋದ್ಧಾರ ಸಮಿತಿಯ ಕಾರ್ಯಾಧ್ಯಕ್ಷ ಗಿರಿಧರ ಶೆಟ್ಟಿ ಮಾತನಾಡಿ, ಜುಲೈ 1ರಂದು ಬೆಳಗ್ಗೆ 11.30ಕ್ಕೆ ಬಾಲಾಲಯ ಪ್ರತಿಷ್ಠೆ ನಡೆಯಲಿದೆ. ಕಲ್ಲಿನ ಕೆತ್ತನೆ ಕಾರ್ಯ ಈಗಾಗಲೇ ಪೂರ್ಣಗೊಂಡಿದೆ. ಮರದ ಕೆತ್ತನೆ ನಡೆಯುತ್ತಿದೆ. ಮುಂದಿನ ಒಂದು ವರ್ಷದಲ್ಲಿ ಬ್ರಹ್ಮಕಲಶ ನಡೆಸುವ ಗುರಿಯಿದೆ ಎಂದರು.

ಗೌರವಾಧ್ಯಕ್ಷ ಶೆಡ್ಡೆ ಮಂಜುನಾಥ ಭಂಡಾರಿ, ಪ್ರಧಾನ ಅರ್ಚಕ ರಾಮಚಂದ್ರ ಉಡುಪ, ಮುಂಬೈ ಸಮಿತಿಯ ಅಧ್ಯಕ್ಷ ವಿಶ್ವನಾಥ ಶೆಟ್ಟಿ ಹೊಸಲಕ್ಕೆ, ಪ್ರಧಾನ ಕಾರ್ಯದರ್ಶಿ ಸಂತೋಷ್ ಶೆಟ್ಟಿ ಹೊಸಲಕ್ಕೆ ಉಪಸ್ಥಿತರಿದ್ದರು.



ವಿಶ್ವಕರ್ಮ ಜಗದ್ಗುರು ಪೀಠ ಅರೆಮಾದನಹಳ್ಳಿ ವಿಶ್ವ ಬ್ರಾಹ್ಮಣ ಮಹಾ ಸಂಸ್ಥಾನ ಮಠದ ಅನಂತ ಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಮಹಾಸ್ವಾಮಿಗಳವರು 44ನೇ ಚಾತುರ್ಮಾಸ್ಯದ ಪ್ರಯುಕ್ತ ಕ್ಷೇತ್ರ ಸಂದರ್ಶನ, ಚಾತುರ್ಮಾಸ್ಯ ಆಚರಣೆಯ ಆಮಂತ್ರಣ ಪತ್ರಿಕೆಯನ್ನು ಮಂಗಳೂರು ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಆಡಳಿತಾಧಿಕಾರಿ ಕೆ. ಉಮೇಶ್ ಆಚಾರ್ಯ ಅವರಿಗೆ ಹಾಗೂ ಇತರ ಸಂಘ ಸಂಸ್ಥೆಗಳಿಗೆ ಸೋಮವಾರ ನೀಡಿದರು. ಕ್ಷೇತ್ರದ ಮಾಜಿ ಮೊಕ್ತೇಸರರು, ಮಾಜಿ ಆಡಳಿತ ಮಂಡಳಿಯ ಸದಸ್ಯರು, ಶ್ರೀ ಕಾಳಿಕಾಂಬಾ ಸೇವಾ ಸಮಿತಿ, ವಿಶ್ವಬ್ರಾಹ್ಮಣ ಮಹಿಳಾ ಸಮಿತಿ ಮತ್ತು ಭಕ್ತಾಧಿಗಳು ಉಪಸ್ಥಿತರಿದ್ದರು.

ಟೋಲ್‌ಗೇಟ್ ಬಳಿ ಟೀ ಕುಡಿಯುತ್ತಿದ್ದ ವ್ಯಕ್ತಿಗೆ ರಿಕ್ಷಾ ಡಿಕ್ಕಿ

ಬಂಟ್ವಾಳ: ಮಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಬ್ರಹ್ಮರಕೊಟ್ಲು ಟೋಲ್ ಗೇಟ್ ಬಳಿ ಟೀ ಸ್ಟಾಲ್ ಮುಂಭಾಗ ಟೀ ಕುಡಿಯುತ್ತಾ ನಿಂತಿದ್ದ ವ್ಯಕ್ತಿಯೋರ್ವರಿಗೆ ಆಟೋರಿಕ್ಷಾವೊಂದು ಡಿಕ್ಕಿ ಹೊಡೆದ ಘಟನೆ ಭಾನುವಾರ ಮಧ್ಯರಾತ್ರಿ ಸಂಭವಿಸಿದೆ. ಘಟನೆಯಿಂದಾಗಿ ನೌಶದ್ ಎಂಬವರು ಗಾಯಗೊಂಡಿದ್ದು, ಮಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಿ ಹುಸ್ಸೈನಬ್ಬ ನೌಶದ್ ರವರು ಕಾರಿನಲ್ಲಿ ಬಂದು ಬ್ರಹ್ಮರಕೊಟ್ಲು ಟೀ ಸ್ಟಾಲ್ ಬಳಿ ಕಾರು ನಿಲ್ಲಿಸಿ ಟೀ ಕುಡಿಯು ತ್ತಿದ್ದ ವೇಳೆ ತುಂಬೆ ಕಡೆಯಿಂದ ಬಿ ಸಿ ರೋಡ್ ನತ್ತ ಅತಿವೇಗ ಹಾಗೂ ಅಜಾಗರುಕತೆಯಿಂದ ಸಂಚರಿಸುತ್ತಿದ್ದ ಆಟೋರಿಕ್ಷಾ ನಿರ್ಲಕ್ಷ್ಯತನದಿಂದ ತೀರಾ ಎಡಬದಿಗೆ ಟೀ ಕುಡಿಯುತ್ತಿದ್ದ ನೌಶದ್ ರವರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ನೌಶದ್ ರವರ ಎಡಕಾಲಿಗೆ ಗಾಯ ವಾಗಿದ್ದು ಕೂಡಲೇ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಬಗ್ಗೆ ಬಂಟ್ವಾಳ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮಮಂದಿರ ಹುಂಡಿ, ಆರೆಸ್ಸೆಸ್ ನೋಂದಣಿ ಕುರಿತ ಟೀಕೆಗೆ ಸಂಸದರ ಆಕ್ರೋಶ

ಕಾಂಗ್ರೆಸ್‌ನಿಂದ ಅನಗತ್ಯ ರಾಜಕೀಯ: ಕೋಟ

ಉಡುಪಿ: ರಾಮಮಂದಿರ ಹುಂಡಿ ಹಗರಣ ಹಾಗೂ ಆರೆಸ್ಸೆಸ್ ನೋಂದಣಿ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಅನಗತ್ಯ ರಾಜಕೀಯ ಮಾಡುತ್ತಿದ್ದಾರೆ ಎಂದು ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಘಟನೆಗಳು ದೇಶಕ್ಕೆ, ಬಿಜೆಪಿಗೆ ಹಾಗೂ ಸಂಘ ಪರಿವಾರಕ್ಕೂ ತೀವ್ರ ನೋವುಂಟು ಮಾಡಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಮಮಂದಿರವು ಹಿಂದೂಗಳ ಶ್ರೇಷ್ಠ ಶ್ರದ್ಧಾಕೇಂದ್ರವಾಗಿದ್ದು, ಆರ್ಥಿಕ ಶಕ್ತಿ ಹರಿದು ಬರುವ ಪ್ರಮುಖ ಸ್ಥಳವಾಗಿದೆ. ಈ ಹಗರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ತಕ್ಷಣವೇ ಬಂಧಿಸಲಾಗಿದೆ. ಯಾರೇ ತಪ್ಪು ಮಾಡಿದ್ದರೂ ಶಿಕ್ಷೆ ಖಚಿತ ಎಂಬುದಾಗಿ ಮುಖ್ಯಮಂತ್ರಿಗಳೂ ತಿಳಿಸಿದ್ದಾರೆ ಎಂದರು.

ಆರೆಸ್ಸೆಸ್ ನೋಂದಣಿ ವಿಚಾರದ ಕುರಿತ ಪ್ರಶ್ನೆಗೆ ಉತ್ತರಿಸಿದ ಕೋಟ, ನಾವು ನೀವು ಹುಟ್ಟುವ ಮುನ್ನವೇ, ಅಂದರೆ ಶತಮಾನದ ಹಿಂದೆಯೇ ಆರೆಸ್ಸೆಸ್ ಅಸ್ತಿತ್ವಕ್ಕೆ ಬಂದಿದೆ. ಸಂಘವು ಕೇವಲ ಜನಪರ ಹಾಗೂ ರಾಷ್ಟ್ರಪ್ರೇಮದ ಪ್ರತೀಕವಾಗಿ ಕೆಲಸ ಮಾಡುತ್ತಿದೆ. ಸಚಿವ ಪ್ರಿಯಾಂಕ್ ಖರ್ಗೆ ಅವರ ಕಾಲದಲ್ಲೇ ಇದು ನೋಂದಣಿ ಆಗಬೇಕೆಂದು ಶಾಸನವಿದೆಯೇ ಎಂದು ಪ್ರಶ್ನಿಸಿದರು.

> **ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಜಾರಿಗೆ ತರಲಾಗಿರುವ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು ಪ್ರತಿಯೊಬ್ಬ ನಾಗರಿಕನೂ ಮುಕ್ತವಾಗಿ ಸ್ವಾಗತಿಸಬೇಕು. ಕೆಲವರು ಮತದಾರರ ಪಟ್ಟಿ ಪರಿಷ್ಕರಣೆಯನ್ನು ಟೀಕಿಸುತ್ತಿರುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವಕ್ಕೆ ಕಂಟಕವಲ್ಲ, ಬದಲಾಗಿ ಅದನ್ನು ಬಲಪಡಿಸುವ ಒಂದು ದಿಕ್ಸೂಚಿಯಾಗಿದೆ**
> ■ ಕೋಟ ಶ್ರೀನಿವಾಸ ಪೂಜಾರಿ

ಜಾತಿ-ಧರ್ಮಕ್ಕಿಂತ ದೇಶವೇ ಮೊದಲು ಎನ್ನುವ ರಾಷ್ಟ್ರಭಕ್ತರ ಸಂಘಟನೆ ಆರೆಸ್ಸೆಸ್. ಅಂದು ನೆಹರು ಅವರಿಂದಲೇ ಮೆಚ್ಚುಗೆ ಪಡೆದು, ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಸಮವಸ್ತ್ರ ಸಹಿತ ಭಾಗವಹಿಸಿದ ಇತಿಹಾಸ ಇದಕ್ಕಿದೆ. ಇದನ್ನೆಲ್ಲ ಪ್ರಿಯಾಂಕ್ ಖರ್ಗೆ ಮರೆತಂತಿದೆ. ಆರೆಸ್ಸೆಸ್ ನೋಂದಣಿ ಬಗ್ಗೆ ಅವರಿಗೆ ತಲೆಬಿಸಿ ಬೇಡ, ಸಂಬಂಧಪಟ್ಟವರು ಅದನ್ನು ಮಾಡಿಕೊಳ್ಳುತ್ತಾರೆ ಎಂದು ಅವರು ತಿಳಿಸಿದರು.

ಕಂದಾಯ ಇಲಾಖೆಯ ಮೂಲಕ ಅಧಿಕೃತ ವಾಸ್ತವ್ಯ ದೃಢೀಕರಣ ಪತ್ರಗಳನ್ನು ನೀಡುವ ಸರ್ಕಾರದ ನಿರ್ಧಾರದ ಕುರಿತು ಮಾತನಾಡಿದ ಅವರು, ಇದು ದುರುಪಯೋಗವಾಗುವ ಸಾಧ್ಯತೆ ದಟ್ಟವಾಗಿದೆ. ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಬಾಂಗ್ಲಾ ನಿವಾಸಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ, ಈ ಪತ್ರಗಳನ್ನು ಬಳಸಿ ಮತದಾರರ ಪಟ್ಟಿಯಲ್ಲಿ ಹೆಸರು ಉಳಿಸಿಕೊಳ್ಳುವ ಪ್ರಯತ್ನಗಳು ನಡೆದರೆ ಅದನ್ನು ಸಹಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

ಒಂದು ವೇಳೆ ಈ ವಾಸ್ತವ್ಯ ದೃಢೀಕರಣ ಪತ್ರ ನಕಲಿ ಎಂದು ಸಾಬೀತಾದರೆ, ಅದಕ್ಕೆ ಕಾರಣರಾದವರು ಹಾಗೂ ಸಹಿ ಹಾಕಿದ ಅಧಿಕಾರಿಯನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಲು ತೀರ್ಮಾನಿಸಿದ್ದೇವೆ ಎಂದು ಅವರು ತಿಳಿಸಿದರು.

ಕೇಂದ್ರ ಸಚಿವರಿಗೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ಪತ್ರ

ಬೆಳೆ ವಿಮೆ ನೋಂದಣಿ ಅವಧಿ ವಿಸ್ತರಿಸಿ

ಉಡುಪಿ: 2026–27ನೇ ಸಾಲಿನ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ನೋಂದಣಿ ಅವಧಿಯನ್ನು ಮುಂದಿನ ಒಂದು ತಿಂಗಳ ಕಾಲ ವಿಸ್ತರಿಸುವಂತೆ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಿದ್ದಾರೆ.



ಈ ಕುರಿತು ಕೇಂದ್ರ ಕೃಷಿ ಮತ್ತು ತೋಟಗಾರಿಕಾ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ಕೇಂದ್ರ ಕೃಷಿ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುವ ಅವರು, ಜೂನ್ 30ಕ್ಕೆ ಕೊನೆಗೊಳ್ಳಲಿರುವ ಬೆಳೆ ವಿಮೆ ನೋಂದಣಿ ಗಡುವನ್ನು ಮತ್ತೊಂದು ತಿಂಗಳು ವಿಸ್ತರಿಸಲು ಕೋರಿದ್ದಾರೆ.

ಕರಾವಳಿ ಮತ್ತು ಮಲೆನಾಡು ಭಾಗದ ರೈತರು ವಿಶೇಷವಾಗಿ ಅಡಿಕೆ, ಕಾಳುಮೆಣಸು ಸೇರಿದಂತೆ ಇನ್ನಿತರ ತೋಟಗಾರಿಕಾ ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಲು ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಆದರೆ, ಜಿಲ್ಲೆಯಲ್ಲಿ ಈ ಬಾರಿ ತಡವಾಗಿ ಆರಂಭವಾದ ನಿರಂತರ ಮಳೆ ಹಾಗೂ ಪ್ರತಿಕೂಲ ಹವಾಮಾನದಿಂದಾಗಿ ಕೃಷಿ ಚಟುವಟಿಕೆಗಳು ವಿಳಂಬವಾಗಿವೆ. ಇದರ ನಡುವೆ ಕೃಷಿ ಕೆಲಸಗಳ ಒತ್ತಡ ಮತ್ತು ಸಾಲು ಸಾಲಾಗಿ ಬಂದ ಸರ್ಕಾರಿ ರಜೆಗಳಿಂದಾಗಿ ಬ್ಯಾಂಕ್ ವ್ಯವಹಾರಗಳು ಅಲ್ಲಲ್ಲಿ ಸ್ಥಗಿತಗೊಂಡು, ರೈತರು ಸಕಾಲದಲ್ಲಿ ವಿಮಾ ಸೌಲಭ್ಯ ಪಡೆಯಲು ತೊಂದರೆ ಅನುಭವಿಸುವಂತಾಗಿದೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಅಲ್ಲದೆ, ಬೆಳೆ ವಿಮೆ ಯೋಜನೆಯ ಪೋರ್ಟಲ್‌ನಲ್ಲಿ ಕಾಣಿಸಿಕೊಂಡ ತಾಂತ್ರಿಕ ದೋಷಗಳನ್ನು ಸರಿಪಡಿಸುವುದು ವಿಳಂಬವಾದ ಹಿನ್ನೆಲೆಯಲ್ಲಿ ಅನೇಕ ರೈತರು ನೋಂದಣಿಯಿಂದ ವಂಚಿತರಾಗಿದ್ದಾರೆ. ಆದ್ದರಿಂದ, ಅನ್ನದಾತರ ಹಿತದೃಷ್ಟಿಯಿಂದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ಪ್ರಯೋಜನ ಎಲ್ಲ ರೈತಾಪಿ ವರ್ಗಕ್ಕೆ ಸಿಗುವಂತಾಗಲು ನೋಂದಣಿ ಅವಧಿಯನ್ನು ಕಡ್ಡಾಯವಾಗಿ ವಿಸ್ತರಿಸಬೇಕು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಬುಧವಾರದ ಪಂದ್ಯ (ನಾಕೌಟ್)
ಮೆಕ್ಸಿಕೊ-ಈಕ್ವೆಡಾರ್ (ಬೆಳಗ್ಗೆ 6:30)
ಇಂಗ್ಲೆಂಡ್-ಡಿಆರ್ ಕಾಂಗೊ (ರಾತ್ರಿ 9:30)

ಕಿರುಸುದ್ದಿ

ಬೆಂಗಳೂರಿಗೆ ಹಾರ್ದಿಕ್?

• **ಬೆಂಗಳೂರು:** ಕ್ರಿಕೆಟಿಗ ಹಾರ್ದಿಕ್ ಪಾಂಡ್ಯ ಅವರು ಬೆಂಗಳೂರಿಗೆ ಸ್ಥಳಾಂತರಗೊಳ್ಳಲು ಯೋಜನೆ ಹಾಕಿಕೊಂಡಿದ್ದಾರೆ. ಸದ್ಯ ಮುಂಬೈನಲ್ಲಿರುವ ಗುಜರಾತ್ ಮೂಲದ ಹಾರ್ದಿಕ್ ಪಾಂಡ್ಯ ಅವರು, ನಗರದ ಶ್ರೇಷ್ಠತಾ ಕೇಂದ್ರದ ಬಳಿಯೇ ತಮ್ಮ ಹೊಸ ತರಬೇತಿ ನೆಲೆಯನ್ನು ಮಾಡಿಕೊಳ್ಳಲು ಚಿಂತನೆ ನಡೆಸುತ್ತಿದ್ದಾರೆ ಎನ್ನಲಾಗಿದೆ. ಗುತ್ತಿಗೆ ಪಡೆದ ಕ್ರಿಕೆಟಿಗರು ಸಾಂಪ್ರದಾಯಿಕವಾಗಿ ಗಾಯದ ರಿಹ್ಯಾಬ್, ಫಿಟ್ನೆಸ್ ಪರೀಕ್ಷೆ ಮತ್ತು ರಾಷ್ಟ್ರೀಯ ಶಿಬಿರಗಳಿಗೆ ಬಹು-ಕ್ರೀಡಾ ಸೌಲಭ್ಯವನ್ನು ಬಳಸುತ್ತಿದ್ದಾರೆ. ಬಿಸಿಸಿಐ ಇದನ್ನು ಯುವ ಶಿಬಿರಗಳಿಗೂ ಬಳಸುತ್ತದೆ. ಪಾಂಡ್ಯ ತಮ್ಮ ವೃತ್ತಿಜೀವನದ ಉಳಿದ ಭಾಗಕ್ಕೆ ಇದನ್ನು ತಮ್ಮ ಶಾಶ್ವತ ನೆಲೆಯಾಗಿ ಬಳಸಲು ಯೋಚಿಸುತ್ತಿದ್ದಾರೆ.ಬೆಂಗಳೂರನ್ನು ತಮ್ಮ ಹೊಸ ತರಬೇತಿ ನೆಲೆಯನ್ನಾಗಿ ಮಾಡಿಕೊಳ್ಳುವ ಮೂಲಕ ಸ್ಪೋರ್ಟ್ಸ್ ವೃತ್ತಿಜೀವನವನ್ನು ಶಿಫಾರಸು ಮಾಡಿದ್ದಾರೆ. ಅವರು ಬಿಸಿಸಿಐನ ಸೆಂಟರ್ ಆಫ್ ಎಕ್ಸಲೆನ್ಸ್ ಬಳಿ ಒಂದು ಸ್ಥಳವನ್ನು ಬಾಡಿಗೆಗೆ ಪಡೆದಿದ್ದಾರೆ ಎಂದು ವರದಿಯಾಗಿದೆ.

ಗಾಲ್ಫ್: ಭಾರತಕ್ಕೆ 2 ಪದಕ

• **ಜೆಕ್ ಗಣರಾಜ್ಯ:** ಪ್ರೇಗ್‌ನಲ್ಲಿ ನಡೆದ ಪ್ರತಿಷ್ಠಿತ ಜೆಕ್ ಡಿಸೇಬಲ್ಡ್ ಗಾಲ್ಫ್ ಮಾಸ್ಟರ್ಸ್ 2026 ಟೂರ್ನಿಯಲ್ಲಿ ಭಾರತದ ಇಬ್ಬರು ವಿಶೇಷಚೇತನ ಗಾಲ್ಫ್ ಆಟಗಾರರು ಐತಿಹಾಸಿಕ ಸಾಧನೆ ಮಾಡಿದ್ದಾರೆ. ನೋಯ್ಡಾದ ವಿಷ್ಣುವರ್ಧನ್ ಭಾಟಿ ಒಟ್ಟಾರೆ 2 ಅಂಡರ್ ಪಾರ್ ಸ್ಕೋರ್‌ನೊಂದಿಗೆ ದ್ವಿತೀಯ ಸ್ಥಾನ ಪಡೆದು ರನ್ನರ್-ಅಪ್ ಸ್ಥಾನ ಪಡೆದರು. ಮೊದಲ ಸುತ್ತಿನಲ್ಲಿ 6 ಅಂಡರ್ ಪಾರ್ ಸಾಧಿಸಿ ಅಗ್ರಸ್ಥಾನದಲ್ಲಿದ್ದ ಭಾಟಿ, ಅಂತಿಮ ಸುತ್ತಿನಲ್ಲಿ ದ್ವಿತೀಯ ಸ್ಥಾನ ಕಾಯ್ದುಕೊಂಡರು. ಇನ್ನು ಬೆಂಗಳೂರಿನ ಅಂಕುಶ್ ಸಹಾ ಅವರು ಲೆವೆಲ್ ಪಾರ್ ಟೋಟಲ್‌ನೊಂದಿಗೆ ತೃತೀಯ ಸ್ಥಾನ ಪಡೆದರು.

ಭಾರತಕ್ಕೆ ಭರ್ಜರಿ ಗೆಲುವು

• **ಪುದುಚೇರಿ:** ಇರಾ ಜಾಧವ್ ಹಾಗೂ ನಿಧಿ ಮಾಹ್ತೊ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ತಂಡದ ಸಾಂಘಿಕ ಬೌಲಿಂಗ್ ದಾಳಿಯೊಂದಿಗೆ ಭಾರತ ಅಂಡರ್-19 ಮಹಿಳೆಯರ ತಂಡವು ಶ್ರೀಲಂಕಾ ಅಂಡರ್-19 ತಂಡದೊಂದಿಗೆ ಭರ್ಜರಿ ಗೆಲುವು ದಾಖಲಿಸಿದೆ. ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಬ್ಯಾಟಿಂಗ್‌ಗಿಳಿಯಿತು. ಆರಂಭಿಕ ಆಟಗಾರ್ತಿ ಇರಾ 104 ಬಾಲ್‌ಗಳಲ್ಲಿ 83 ರನ್ ಗಳಿಸಿದರು. ನಿಧಿ ಮಾಹ್ತೊ 54 ರನ್ ಗಳಿಸಿದರು. ಭಾವಿಕಾ 42 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಶ್ರೀಲಂಕಾ ಪರ ಚಾಮೋಧಿ ಹೇರತ್ 3 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಶ್ರೀಲಂಕಾ 159 ರನ್‌ಗಳಿಗೆ ಆಲೌಟ್ ಆಯಿತು. ಭಾರತ ಪರ ಪಾರ್ಮರ್, ಮೆಹೆಕ್, ಜಾನ್ಹವಿ ತಲಾ ಎರಡು ವಿಕೆಟ್ ಕಿತ್ತರು.

ಕುದುರೆ ಸವಾರಿ ಒಕ್ಕೂಟದ ಆಯ್ಕೆ ಅಂತಿಮ: ಹೈ ಕೋರ್ಟ್

• **ಹೊಸದಿಲ್ಲಿ:** ಏಷ್ಯನ್ ಗೇಮ್ಸ್ ಡ್ರೆಸ್ಸೇಜ್ ತಂಡಕ್ಕೆ ಭಾರತೀಯ ಕುದುರೆ ಸವಾರಿ ಒಕ್ಕೂಟದ ಆಯ್ಕೆ ಪ್ರಕ್ರಿಯೆಯನ್ನು ದೆಹಲಿ ಹೈಕೋರ್ಟ್ ಸೋಮವಾರ ಎತ್ತಿಹಿಡಿದಿದ್ದು, ರೈಡರ್‌ಗಳಾದ ಅನುಷ್ ಅಗರ್‌ವಾಲಾ ಮತ್ತು ಸುದೀಪ್ತಿ ಹಜೇಲಾ ಸಲ್ಲಿಸಿದ್ದ ಅರ್ಜಿಗಳನ್ನು ವಜಾಗೊಳಿಸಿದೆ. ನ್ಯಾಯಾಧೀಶ ಮಿನಿ ಪುಷ್ಕರ್ಣ ಅವರು ಆಯ್ಕೆ ಮಾನದಂಡಗಳನ್ನು ನ್ಯಾಯಯುತವಾಗಿ ಅನ್ವಯಿಸಲಾಗಿದೆ ಮತ್ತು ನ್ಯಾಯಾಂಗ ಹಸ್ತಕ್ಷೇಪಕ್ಕೆ ಕಾರಣವಾಗುವ ಯಾವುದೇ ಅನಿಯಂತ್ರಿತತೆ, ವಿಕೃತತೆ ಅಥವಾ ಕಾರ್ಯವಿಧಾನದ ಅನುಚಿತತೆ ಇಲ್ಲ ಎಂದು ಅಭಿಪ್ರಾಯಪಟ್ಟರು.

ಬೆಲ್ಜಿಯಂ ಪ್ರವಾಸಕ್ಕೆ ಹಾಕಿ ತಂಡ

• **ಹೊಸದಿಲ್ಲಿ:** ಜುಲೈ 5 ರಿಂದ 18 ರವರೆಗೆ ನಡೆಯಲಿರುವ ಬೆಲ್ಜಿಯಂ ಪ್ರವಾಸಕ್ಕಾಗಿ 22 ಸದಸ್ಯರ ಭಾರತೀಯ ಜೂನಿಯರ್ (ಯು-21) ಪುರುಷರ ಹಾಕಿ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದೆ. ಹೊಸದಾಗಿ ನೇಮಕಗೊಂಡ ಕೋಚ್ ಫ್ರೆಡೆರಿಕ್ ಸೋಯೆಜ್ ಅವರ ನೇತೃತ್ವದಲ್ಲಿ ಈ ಪ್ರವಾಸವು ತಂಡದ ಮೊದಲ ಕಾರ್ಯಯೋಜನೆಯಾಗಲಿದೆ ಮತ್ತು ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಹಾಕಿ ಪುರುಷರ ಜೂನಿಯರ್ ಏಷ್ಯಾ ಕಪ್‌ಗೆ ಮುಂಚಿತವಾಗಿ ಪ್ರಮುಖ ಪೂರ್ವಸಿದ್ಧತಾ ಹಂತವಾಗಿ ಕಾರ್ಯನಿರ್ವಹಿಸುತ್ತದೆ.

• **ತಂಡ:** ಗೋಲ್‌ಕೀಪರ್‌ಗಳು: ವಿವೇಕ್ ಲಾಕ್ರಾ, ಕುನಾಲ್ ತೆವಾಟಿಯಾ, **ಡಿಫೆಂಡರ್ಸ್:** ಅನ್ಮೋಲ್ ಎಕ್ಕಾ, ರೋಹಿತ್, ಚಿರಾಗ್, ರವೀಂದರ್, ಪ್ರಶಾಂತ್, ಸಂಜಿತ್ ಟಿರ್ಕಿ, ವಿ.ಮಣಿಮಾರನ್. **ಮಿಡ್‌ಫೀಲ್ಡರ್‌ಗಳು:** ಅದ್ರೋಹಿತ್ ಎಕ್ಕಾ, ಹರ್ಪಾಲ್, ಜೀತ್‌ಪಾಲ್, ಮುಖೇಶ್, ಮನ್ನು ಮಲಿಕ್, ರಿತಿಕ್ ಲಾಕ್ರಾ .**ಫಾರ್ವರ್ಡ್:** ಅಜೀತ್ ಯಾದವ್, ಪ್ರಭದೀಪ್, ಅರ್ಜುನ್ ಹರ್ಗುಡೆ, ಆರ್ಯನ್, ಲವ್ಲೀರ್ ಸಿಂಗ್, ಕೊನೈನ್ ಅಪ್ಪ, ಗುರುಸೇವಕ್ ಸಿಂಗ್

ಕೊನೆ ಕ್ಷಣದ ಥ್ರಿಲ್ ಗೆದ್ದ ಚಾಂಪಿಯನ್ಸ್ | ಜರ್ಮನ್ನರಿಗೆ ಪರಾಗ್ವೆ ಶಾಕ್


ಬ್ರೆಜಿಲ್ ಭಯಂಕರ!



• **ಹ್ಯೂಸ್ಟನ್:** ಕೊನೆ ಕ್ಷಣದ ಥ್ರಿಲ್ ಗೆದ್ದ ಬ್ರೆಜಿಲ್ ತಂಡವು ಜಪಾನ್ ತಂಡವನ್ನು ಹೊರನೂಕಿ ಪ್ರತಿಷ್ಠಿತ ಫಿಫಾ ಫುಟ್‌ಬಾಲ್ ವಿಶ್ವಕಪ್ ಪಂದ್ಯಾವಳಿಯ ಪ್ರಿಕ್ವಾರ್ಟರ್‌ಫೈನಲ್‌ಗೇರಿದೆ. ಪಂದ್ಯದ ಒಂದು ಹಂತ ನೋಡಿದವರಿಗೆ ಜಪಾನ್ ತಂಡದ ಆರ್ಭಟ ನೋಡಲು ಸಿಕ್ಕಿತು. ಅತಿ ಹೆಚ್ಚು ಬಾರಿ ಗೆದ್ದ ಬ್ರೆಜಿಲ್ ತಂಡಕ್ಕೆ ಒತ್ತಡ, ಸಮಸ್ತ ಅಭಿಮಾನಿಗಳಲ್ಲಿ ಸೋಲಿನಾತಂಕ ಎದುರಾಗಿತ್ತು. ನೇಮರ್ ಇಲ್ಲದೆ ಆಡಿದ ಬ್ರೆಜಿಲ್ ಆಟದ ಆರಂಭಿಕ ಹಂತದಲ್ಲಿ ದೊಡ್ಡ ಹಿನ್ನಡೆಯನ್ನೇ ಅನುಭವಿಸಿತು. ಆದರೆ ಕಂಬ್ಯಾಕ್ ಮಾಡಿ ಪಂದ್ಯವನ್ನು 2-1ರಿಂದ ಗೆದ್ದಿತು. ನಿಗದಿತ ಸಮಯಕ್ಕೆ ಫಲಿತಾಂಶ ಬರಲೇ ಇಲ್ಲ. ಹೆಚ್ಚುವರಿ ಸಮಯದಲ್ಲಿ ಮಿಂಚಿದ ಬ್ರೆಜಿಲ್ ಗೆಲುವು ಸಾಧಿಸಿ ಪ್ರಿಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಹಾಕಿದೆ.

ಹೆಚ್ಚುವರಿ ಸಮಯದಲ್ಲಿ ಹೆಚ್ಚು ಲಾಭ: ಪಂದ್ಯದ 29ನೇ ನಿಮಿಷದಲ್ಲಿ ಕೆ. ಸಾನೋ ಜಪಾನ್‌ಗೆ ಮೊದಲ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ನೀಡಿದರು. ನಂತರ ದ್ವಿತೀಯಾರ್ಧದಲ್ಲಿ ಬ್ರೆಜಿಲ್ ತನ್ನ ಆಟದ ವೇಗ ಹೆಚ್ಚಿಸಿ 56ನೇ ನಿಮಿಷದಲ್ಲಿ ಕ್ಯಾಸೆಮಿರೊ ಸಮಬಲದ ಗೋಲು ಬಾರಿಸಿದರು. ಪಂದ್ಯ ಹೆಚ್ಚುವರಿ ವೇಳೆಯತ್ತ ಸಾಗುತ್ತಿದ್ದಾಗ, 90+6ನೇ ನಿಮಿಷದಲ್ಲಿ ಗ್ಯಾಬ್ರಿಯೆಲ್ ಮಾರ್ಟಿನೆಲ್ಲಿ ನಿರ್ಣಾಯಕ ಗೋಲು ದಾಖಲಿಸಿ ಬ್ರೆಜಿಲ್‌ಗೆ ಅಮೂಲ್ಯ ಗೆಲುವು ತಂದುಕೊಟ್ಟರು. ಈ ಜಯದೊಂದಿಗೆ ಬ್ರೆಜಿಲ್ ತಂಡ ವಿಶ್ವಕಪ್‌ನ ಮುಂದಿನ ಹಂತಕ್ಕೆ ಅರ್ಹತೆ ಪಡೆದಿದ್ದು, ಪ್ರಶಸ್ತಿಯತ್ತ ತನ್ನ ಅಭಿಯಾನವನ್ನು ಮುಂದುವರಿಸಿದೆ ★ ಬ್ರೆಜಿಲ್ 2-1 ಗೋಲುಗಳಿಂದ ಜಪಾನ್ ವಿರುದ್ಧ ಗೆಲುವು

ಗೋಲಿನ ವಿವರ
- ಜಪಾನ್ ಪರ ಕೆ. ಸಾನೋ (29ನೇ ನಿಮಿಷ)
- ಬ್ರೆಜಿಲ್ ಪರ ಕ್ಯಾಸೆಮಿರೊ (56ನೇ ನಿಮಿಷ)
- ಗ್ಯಾಬ್ರಿಯೆಲ್ ಮಾರ್ಟಿನೆಲ್ಲಿ (90+6ನೇ ನಿಮಿಷ) ನಿರ್ಣಾಯಕ ಗೋಲು



ಶೂಟೌಟ್ ಮ್ಯಾಜಿಕ್ ಮೊರಾಕ್ಕೊ 16ರ ಸುತ್ತಿಗೆ

• **ಗ್ವಾಡಲುಪೆ (ಮೆಕ್ಸಿಕೊ):** 32ರ ಸುತ್ತಿನ ಪಂದ್ಯದಲ್ಲಿ ಮೊರೊಕ್ಕೊ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 3-2 ಅಂತರದಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿ ಪ್ರಿಕ್ವಾರ್ಟರ್‌ಫೈನಲ್‌ಗೇರಿತು.

ನಿಗದಿತ ಸಮಯದಲ್ಲಿ ಎರಡೂ ತಂಡಗಳು 1-1 ಗೋಲುಗಳಿಂದ ಸಮಬಲ ಸಾಧಿಸಿದ್ದವು. 72ನೇ ನಿಮಿಷದಲ್ಲಿ ಕೋಡಿ ಗಾಕ್‌ಪೊ ನೆದರ್ಲೆಂಡ್ಸ್‌ಗೆ ಮುನ್ನಡೆ ತಂದುಕೊಟ್ಟರು. ಆದರೆ ಪಂದ್ಯದ ಹೆಚ್ಚುವರಿ ಸಮಯದ ಮೊದಲ ನಿಮಿಷದಲ್ಲಿ ಇಸ್ಸಾ ಡಿಯೊಪ್ ಹೆಡರ್ ಮೂಲಕ ಗೋಲು ದಾಖಲಿಸಿ ಮೊರೊಕ್ಕೊಗೆ ಸಮಬಲ ಒದಗಿಸಿದರು.

ಪೆನಾಲ್ಟಿ ಶೂಟೌಟ್: ಹೆಚ್ಚುವರಿ 30 ನಿಮಿಷಗಳ ಆಟದಲ್ಲೂ ಯಾವುದೇ ತಂಡ ಗೋಲು ಗಳಿಸಲು ವಿಫಲವಾದ ಕಾರಣ ಪಂದ್ಯ ಪೆನಾಲ್ಟಿ ಶೂಟೌಟ್‌ಗೆ ಸಾಗಿತು. ಮೊದಲ ನಾಲ್ಕು ಸುತ್ತುಗಳ ಬಳಿಕ 2-2 ಸಮಬಲವಿದ್ದಾಗ, ಮೊರಾಕ್ಕೊ ಗೋಲ್‌ಕೀಪರ್ ಯಾಸಿನ್ ಬೊನೋ ಅವರು ಕ್ರೈಸೆನ್ಸಿಯೊ ಸಮರ್‌ವಿಲ್ ಅವರ ಪೆನಾಲ್ಟಿಯನ್ನು ಅದ್ಭುತವಾಗಿ ತಡೆದರು. ಬಳಿಕ ಇಸ್ಮಾಯಿಲ್ ಸೈಬಾರಿ ನಿರ್ಣಾಯಕ ಪೆನಾಲ್ಟಿಯನ್ನು ಗೋಲಾಗಿ ಪರಿವರ್ತಿಸಿ ಮೊರಾಕ್ಕೊಗೆ 3-2ರ ಐತಿಹಾಸಿಕ ಜಯ ತಂದುಕೊಟ್ಟರು.



ಪೆನಾಲಿ ಗೋಲುಗಳು
- ನೆದರ್ಲೆಂಡ್ಸ್ ಪರ ಮೊರಾಕ್ಕೊ ಪರ
- ಟಿಯುನ್ ರಹಿಮಿ
- ವೋಟ್ ವೆಗ್ರಾಸ್ಟ್ ಚೇಮ್ಸಡೈನ್ ತಲ್ಬಿ
- ಇಸ್ಮಾಯಿಲ್ ಸೈಬಾರಿ

ಈ ಸೋಲಿನೊಂದಿಗೆ ವಿಶ್ವಕಪ್ ಇತಿಹಾಸದಲ್ಲಿ 11 ಬಾರಿ ಕನಿಷ್ಠ ಪ್ರಿ-ಕ್ವಾರ್ಟರ್‌ಫೈನಲ್ ತಲುಪಿದ್ದ ನೆದರ್ಲೆಂಡ್ಸ್ ತಂಡ ಈ ಬಾರಿ ತನ್ನ ಅತ್ಯಂತ ಆರಂಭಿಕ ನಿರ್ಗಮನವನ್ನು ಕಂಡಿತು.

ಪರಾಗ್ವೆ ಪರಾಕ್ರಮ, ಮನೆಗೆ ಜರ್ಮನ್!

• **ಫಾಕ್ಸ್‌ಬರೋ:** ಅಚ್ಚರಿಯ ಫಲಿತಾಂಶವೂ ಮೂಡಿಬಂದಿದ್ದು, ಜರ್ಮನಿ ಮತ್ತು ಪರಾಗ್ವೆ ತಂಡಗಳು ನಿಗದಿತ 90 ನಿಮಿಷಗಳ ಆಟದ ಬಳಿಕ 1-1 ಗೋಲುಗಳಿಂದ ಸಮಬಲ ಸಾಧಿಸಿದ್ದು, ಪಂದ್ಯ ಹೆಚ್ಚುವರಿ ಸಮಯಕ್ಕೆ ಸಾಗಿದ್ದು, ಪರಾಗ್ವೆ ಶೂಟೌಟ್ ಜಯಗಳಿಸಿ ಮಿಂಚಿದೆ.

ಮೊದಲಾರ್ಧದ ಅಂತಿಮ ಕ್ಷಣಗಳಲ್ಲಿ ಜುಲಿಯೊ ಎನ್ಸಿಸೊ ಅವರ ಹೆಡರ್ ಗೋಲಿನ ನೆರವಿನಿಂದ ಪರಾಗ್ವೆ ಮುನ್ನಡೆ ಸಾಧಿಸಿತು. ಆದರೆ ದ್ವಿತೀಯಾರ್ಧದ 52ನೇ ನಿಮಿಷದಲ್ಲಿ ಕೈ ಹಾವರ್ಟ್ಜ್ ಗೋಲು ದಾಖಲಿಸಿ ಜರ್ಮನಿಗೆ ಸಮಬಲ ತಂದುಕೊಟ್ಟರು. ನಿಗದಿತ ಸಮಯದಲ್ಲಿ ಯಾವುದೇ ತಂಡ ಗೆಲುವಿನ ಗೋಲು ಗಳಿಸಲು ವಿಫಲವಾದ ಕಾರಣ ಪಂದ್ಯ 30 ನಿಮಿಷಗಳ ಹೆಚ್ಚುವರಿ ಸಮಯಕ್ಕೆ ಸಾಗಿತು. ಅಲ್ಲೂ ಉಭಯ ತಂಡದ ರಕ್ಷಣಾ ಆಟಗಾರರು ಮಿಂಚಿದರು. ಶೂಟೌಟ್‌ನಲ್ಲಿ ಪರಾಗ್ವೆ ಕರಾರುವಾಕ್ ಪ್ರದರ್ಶನದೊಂದಿಗೆ ಮಿಂಚಿದ್ದು, ಗೆಲುವು ಸಾಧಿಸಿದೆ. ಅಲ್ಲಿ 4-3ರಿಂದ ಪರಾಗ್ವೆ ಗೆಲುವು ಸಾಧಿಸಿದೆ.

ಶೂಟೌಟ್‌ನಲ್ಲಿ ಆಗಿದ್ದೇನು?: ಮೊದಲಿಗೆ ಪರಾಗ್ವೆ ಹ್ಯಾಟ್ರಿಕ್ ಗೋಲು ಗಳಿಸಿ ಮುನ್ನಡೆ ಸಾಧಿಸಿತು. ಜರ್ಮನಿ ಮೊದಲನೇ ಶೂಟ್‌ನಲ್ಲೇ ತಪ್ಪಿಸಿಕೊಂಡಿತ್ತು. ನಾಲ್ಕನೇ ಶೂಟ್‌ನಲ್ಲಿ ಎರಡೂ ತಂಡ ಗೋಲು ಗಳಿಸದ ನಿಟ್ಟಿನಲ್ಲಿ 3-2ರಿಂದ ಪರಾಗ್ವೆ ಮುನ್ನಡೆ ಸಾಧಿಸಿತು. ಐದನೇ ಶೂಟ್‌ನಲ್ಲಿ ಅಮಿರಿ ಗೋಲು ಗಳಿಸಿ ಸಮಬಲಕ್ಕೆ ತಂದರು. ಕೊನೆಯ ಶೂಟ್ ಪಂದ್ಯದ ನಿರ್ಣಾಯಕ ಘಟ್ಟವಾಗಲಿತ್ತು. ಅಲ್ಲಿ ಮಿಂಚಿದ ಪರಾಗ್ವೆಯ ಜೋಸ್ ಕನಲೆ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಜೋನಾಥನ್ ಗೋಲು ಪರಾಗ್ವೆ ಕೀಪರ್ ತಡೆದ ನಂತರ ಪರಾಗ್ವೆ ಜಯ ಸಾಧಿಸಿತು.



ಇತಿಹಾಸ ನಿರ್ಮಿಸಿದ ಪರಾಗ್ವೆ: ವಿಶ್ವಕಪ್ ಇತಿಹಾಸದಲ್ಲಿ ಈ ಎರಡು ತಂಡಗಳು ಇದಕ್ಕೂ ಮೊದಲು ಒಮ್ಮೆ ಮಾತ್ರ ಮುಖಾಮುಖಿಯಾಗಿದ್ದು, ಆಗ ಜರ್ಮನಿ 1-0 ಅಂತರದಲ್ಲಿ ಪರಾಗ್ವೆಯನ್ನು ಸೋಲಿಸಿತ್ತು. 2014ರ ವಿಶ್ವಕಪ್ ಫೈನಲ್ ಬಳಿಕ ಜರ್ಮನಿ ಆಡುತ್ತಿರುವ ಮೊದಲ ನಾಕೌಟ್ ಪಂದ್ಯ ಇದಾಗಿತ್ತು.

ಏಷ್ಯನ್ ಗೇಮ್ಸ್‌ಗೆ ಭಾರತ

• **ಮುಂಬೈ:** ಭಾರತ ತಂಡಕ್ಕೆ ಸ್ಪಿನ್ನರ್ ಶ್ರೇಯಾಂಕಾ ಪಾಟೀಲ್ ಮರಳಿದ್ದು, ವಿಕೆಟ್ ಕೀಪರ್ ಯಸ್ತಿಕಾ ಭಾಟಿಯಾಗೆ ಗೇಟ್‌ಪಾಸ್ ನೀಡಲಾಗಿದೆ. ಭಾರತ ಮಹಿಳೆಯರ ತಂಡ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ನೇರ ಆಯ್ಕೆಯಾಗಿರುವ ಒಂದೇ ದಿನದ ನಂತರ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ತಂಡ ಪ್ರಕಟವಾಗಿದೆ.

- ವಿಶ್ವಕಪ್ ಸೋಲಿನ ಬೆನ್ನಲ್ಲೇ ಮಹಿಳಾ ತಂಡ ಪ್ರಕಟ
- ಯಸ್ತಿಕಾಗೆ ಗೇಟ್‌ಪಾಸ್
- 17 ವರ್ಷದ ಕಮಲಿನಿಗೆ ಅವಕಾಶ

ಪ್ರಮುಖ ಬದಲಾವಣೆಯಲ್ಲಿ ಹೆಚ್ಚುವರಿ ವಿಕೆಟ್ ಕೀಪರ್ ಬ್ಯಾಟರ್ ಯಸ್ತಿಕಾ ಭಾಟಿಯಾಗೆ ಗೇಟ್‌ಪಾಸ್ ನೀಡಲಾಗಿದ್ದು, ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಮಿಂಚಿರುವ ಜಿ. ಕಮಲಿನಿ ಅವರನ್ನು ತಂಡದಲ್ಲಿ ಸೇರಿಸಲಾಗಿದೆ. ಗಾಯಗೊಂಡು ಟಿ20 ವಿಶ್ವಕಪ್ ಪಂದ್ಯಾವಳಿಯಿಂದ ಹೊರಬಿದ್ದಿದ್ದ ಶ್ರೇಯಾಂಕಾ ಪಾಟೀಲ್ ಚೇತರಿಕಾ ಲೆಕ್ಕಾಚಾರಗಳ ಪರಿಶೀಲನೆಯ ನಂತರ ತಂಡಕ್ಕೆ ಆಯ್ಕೆಯಾಗಿದ್ದಾರೆ. ಯಥಾಪ್ರಕಾರ ಹರ್ಮನ್‌ಪ್ರೀತ್ ಕೌರ್ ಭಾರತ ತಂಡದ ನಾಯಕಿಯಾಗಿ ಮುಂದುವರಿಯಲಿದ್ದಾರೆ. ಸ್ಮೃತಿ ಮಂಧಾನ ಉಪನಾಯಕಿಯಾಗಲಿದ್ದು, ದೀಪ್ತಿ ಶರ್ಮ, ರಿಚಾ ಘೋಷ್, ಶೆಫಾಲಿ ವರ್ಮಾ, ಜೆಮಿಮಾ ರಾಡ್ರಿಗ್ಸ್ ತಂಡದ ಹಿರಿಯ ಆಟಗಾರ್ತಿಯರಾಗಿ ಕಾಣಿಸಿಕೊಳ್ಳಲಿದ್ದಾರೆ.



ಭಾರತ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗ್ಸ್, ದೀಪ್ತಿ ಶರ್ಮ, ರಿಚಾ ಘೋಷ್ (ವಿ. ಕೀ.), ಜಿ. ಕಮಲಿನಿ (ವಿ. ಕೀ.), ಭಾರತಿ ಫುಲ್ಮಾಲಿ, ಶ್ರೀ ಚರಣಿ, ರೇಣುಕಾ ಸಿಂಗ್, ಕ್ರಾಂತಿ ಗೌಡ್, ಅರುಂಧತಿ ರೆಡ್ಡಿ, ಶ್ರೇಯಾಂಕ ಪಾಟೀಲ್, ನಂದಿನಿ ಶರ್ಮ, ರಾಧಾ ಯಾದವ್.

ಒಲಿಂಪಿಕ್ಸ್‌ಗೆ ಭಾರತ ತಂಡ ಆಯ್ಕೆ

ಭೂಖಂಡಗಳಲ್ಲಿ ಅಗ್ರಸ್ಥಾನಗಳನ್ನು ಹೊಂದಿರುವ ಭಾರತ, ಆಸ್ಟ್ರೇಲಿಯಾ, ಗ್ರೇಟ್ ಬ್ರಿಟನ್(ಇಂಗ್ಲೆಂಡ್) ಹಾಗೂ ದಕ್ಷಿಣ ಆಫ್ರಿಕಾ ಮಹಿಳಾ ತಂಡಗಳು 2028ರ ಒಲಿಂಪಿಕ್ಸ್ ಕೂಟಕ್ಕೆ ಅರ್ಹತೆ ಪಡೆದುಕೊಂಡಿವೆ. ಏಷ್ಯಾದ ಅಗ್ರ ತಂಡ ಅನಿಸಿಕೊಂಡಿರುವ ಭಾರತವು ನೇರವಾಗಿ ಅರ್ಹತೆ ಪಡೆದುಕೊಂಡಿದೆ. ಆಸ್ಟ್ರೇಲಿಯಾ, ದ.ಆಫ್ರಿಕಾ ಮತ್ತು ಇಂಗ್ಲೆಂಡ್ ಕೂಡ ಇದೇ ಮಾನದಂಡಗಳ ಪ್ರಕಾರ ಆಯ್ಕೆಯಾಗಿವೆ. ಒಲಿಂಪಿಕ್ಸ್‌ನಲ್ಲಿ 6 ತಂಡಗಳು ಮಾತ್ರ ಭಾಗವಹಿಸಲಿವೆ. 5ನೇ ತಂಡ ಆತಿಥ್ಯ ಅಮೆರಿಕವಾಗುವ ಸಾಧ್ಯತೆಗಳಿವೆ, ಆದರೆ ಅದು ಅರ್ಹತಾ ಸುತ್ತುಗಳ ಗುಂಪಿನಲ್ಲಿ ಕನಿಷ್ಠ 15ರೊಳಗಿರಬೇಕು. ಆರನೇ ಸ್ಥಾನಕ್ಕಾಗಿ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ.

ಪೆಟ್ಟು ತಿಂದ ಶ್ರೇಯಸ್ ಪಡೆ ಪುಟಿದೆದ್ದೀತೆ?

• **ಚೆಸ್ಟರ್-ಲೆ-ಸ್ಟ್ರೀಟ್:** ಐರ್ಲೆಂಡ್ ತಂಡದ ವಿರುದ್ಧ ಹೀನಾಯ ಸೋಲನುಭವಿಸಿ ಕಂಗೆಟ್ಟಿರುವ ಭಾರತ ತಂಡಕ್ಕೆ ಮಾಡಿದ ತಪ್ಪುಗಳ ಲೆಕ್ಕಾಚಾರ ಹಾಕುವುದಕ್ಕೆ ಕಿಂಚಿತ್ತೂ ಸಮಯವಿಲ್ಲ. ದೊಡ್ಡ ಆಘಾತವೊಂದನ್ನು ಎದುರಿಸಿ ಬಂದಿರುವ ಶ್ರೇಯಸ್ ಅಯ್ಯರ್ ಪಡೆ ಬುಧವಾರದಿಂದ ಇಂಗ್ಲೆಂಡ್ ಸವಾಲು ಎದುರಿಸಬೇಕಿದೆ. ಹೊಸ ತಂಡ ಮತ್ತು ಹೊಸ ನಾಯಕತ್ವದೊಂದಿಗೆ ಬಂದಿಳಿದಿದ್ದ ಭಾರತ ಐರ್ಲೆಂಡ್ ವಿರುದ್ಧದ ಸೋಲಿನಿಂದ ಹೊರಬರಬೇಕಿದೆ.

ಇಂದಿನಿಂದ ಇಂಗ್ಲೆಂಡ್ ಸರಣಿ
ಪಂದ್ಯದ ವಿವರ
ಯಾವಾಗ: ಬುಧವಾರ
ಎಲ್ಲಿ: ಚೆಸ್ಟರ್-ಲೆ-ಸ್ಟ್ರೀಟ್
ಸಮಯ: ರಾತ್ರಿ 10:00

ಫೈನಲ್‌ಗೇರಿದ ಆಸೀಸ್

• **ಲಾರ್ಡ್ಸ್:** ಮಹಿಳೆಯರ ಕ್ರಿಕೆಟ್‌ನಲ್ಲಿ ತನ್ನ ಪಾರುಪತ್ಯ ಮುಂದುವರಿಸಿರುವ ಆಸ್ಟ್ರೇಲಿಯಾ ತಂಡವು ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿ ಪ್ರತಿಷ್ಠಿತ ವಿಶ್ವಕಪ್ ಪಂದ್ಯಾವಳಿಯ ಫೈನಲ್‌ಗೇರಿತು. ಲಾರ್ಡ್ಸ್ ಅಂಗಳದಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯನ್ನರು ಭರ್ಜರಿ ಗೆಲುವು ಸಾಧಿಸಿದರು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 125 ರನ್ ಗಳಿಸಿತು. ತಂಡದ ಪರ ಹೀಲಿ ಮ್ಯಾಥೀವ್ಸ್ 30 ರನ್ ಗಳಿಸಿ ಹೋರಾಡಿದರು. ಡಾಟ್ಟಿನ್ 16 ಬಾಲ್‌ಗಳಲ್ಲಿ 26 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಆಸ್ಟ್ರೇಲಿಯಾ ಪರ ಜಾರ್ಜಿಯಾ, ಗಾರ್ಡನರ್, ಸೋಫಿಯಾ ತಲಾ 2 ವಿಕೆಟ್ ಕಿತ್ತರು.

ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 13 ಓವರ್‌ಗಳಲ್ಲಿ 2ವಿಕೆಟ್‌ಗೆ 127ರನ್ ಗಳಿಸಿತು. ಬೆತ್ ಮೂನಿ 61★ರನ್ ಗಳಿಸಿದರು. ಪೆರ್ರಿ ಗಾಯದಿಂದ ನಿವೃತ್ತರಾದರೆ, ಗಾರ್ಡನರ್ 35★ರನ್ ಗಳಿಸಿದರು. ಎರಡನೇ ಇನ್ನಿಂಗ್ಸ್‌ನಲ್ಲಿ ವಿಂಡೀಸ್ ಪಂದ್ಯಕ್ಕೆ ಮರಳಲೇ ಇಲ್ಲ. ಆಸ್ಟ್ರೇಲಿಯಾ ತಂಡವು ಇಂಗ್ಲೆಂಡ್ ಹಾಗೂ ದ.ಆಫ್ರಿಕಾ ಪಂದ್ಯದ ವಿಜೇತರನ್ನು ಎದುರಿಸಬೇಕಿದೆ.

ಜೊಕೊವಿಚ್, ಸೆಬಲೆಂಕಾ ಶುಭಾರಂಭ

• **ವಿಂಬಲ್ಡನ್:** ಟೆನಿಸ್ ಲೋಕದ ತಾರೆ, ದಿಗ್ಗಜ ನೋವಾಕ್ ಜೊಕೊವಿಚ್ ಅವರು ವಿಂಬಲ್ಡನ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದ್ದಾರೆ. ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಅವರು ವೈ.ಬಿ. ವು ಅವರೊಂದಿಗೆ 6-4, 5-7, 6-4, 6-4ರಿಂದ ಗೆದ್ದರು.

ವಿಂಬಲ್ಡನ್ ಗ್ರ್ಯಾಂಡ್ ಸ್ಲಾಮ್

ವಿಂಬಲ್ಡನ್ ಹಬ್ಬ ಶುರುವಾಗಿದೆ. ಮೊದಲನೇ ಸುತ್ತಿನ ಪಂದ್ಯದಲ್ಲೇ ರೋಚಕ ಘಟ್ಟಗಳು ಕಾಣಿಸಿಕೊಂಡಿವೆ. ಪುರುಷರ ವಿಭಾಗದಲ್ಲಿ ಪ್ರಮುಖ ಆಟಗಾರರಾದ ಯಾನಿಕ್ ಸಿನ್ನರ, ನೋವಾಕ್ ಜೊಕೊವಿಚ್, ಫ್ರಿಟ್ಜ್ ಗೆಲುವಿನ ಆರಂಭ ಮಾಡಿದರು. ಮಂಗಳವಾರದ ಪಂದ್ಯದಲ್ಲಿ ದುಸನ್ ಲಾ-ಜೋವಿಕ್ ಅವರನ್ನು ಎದುರಿಸಿದ್ದ ಫ್ರಿಟ್ಜ್ 6-3, 6-4, 6-3ರಿಂದ ಭರ್ಜರಿ ಗೆಲುವು ದಾಖಲಿಸಿದರು. ಬೋಂಜಿ ದಿಯಾಲೊ ಅವರೊಂದಿಗೆ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು.

ಮಿಂಚಿನಾಟ ಸೆಬಲೆಂಕಾ: ಮತ್ತೊಂದೆಡೆ ಮಹಿಳೆಯರ ವಿಭಾಗದಲ್ಲಿ ವಿಶ್ವದ ನಂಬರ್ 1 ಅರಿನಾ ಸೆಬಲೆಂಕಾ ಶುಭಾರಂಭ ಮಾಡಿದರು. ಕೊಸ್ಟೊವಿಕ್ ಎದುರು ಆಡಿದ ಅವರು, 6-3, 6-3ರಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ಅಗ್ರ ಶ್ರೇಯಾಂಕಿತೆ ಜೆ. ಪೇಗುಲಾ ಕೂಡ ಶುಭಾರಂಭ ಮಾಡಿದ್ದಾರೆ. ವಿದ್ನಾಮೋವಾ ಅವರನ್ನು ಎದುರಿಸಿದ್ದ ಅವರು, 7-5, 6-3ರಿಂದ ಗೆಲುವು ದಾಖಲಿಸಿದ್ದಾರೆ. ಕ್ರಿಸ್ಟೈನ್ ಅವರನ್ನು ಎದುರಿಸಿದ್ದ ಜೋವಿಕ್ ಕೂಡ 7-6, 6-0ರಿಂದ ಗೆಲುವು ಸಾಧಿಸಿದ್ದಾರೆ. ಅಮೆರಿಕದ ಟೈಲರ್ ಟೌನ್ಸೆಂಡ್ ಅವರೊಂದಿಗೆ ಆಡಿದ ಈಗಾ ಸ್ವಿಯಾಟೆಕ್ 6-1, 2-6, 6-3ರಿಂದ ಗೆಲುವು ದಾಖಲಿಸಿದರು.

ಪಿಕಲ್‌ಬಾಲ್ ಲೀಗ್ ಘೋಷಣೆ

• **ಬೆಂಗಳೂರು:** ದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವ ಪಿಕಲ್‌ಬಾಲ್ ಕ್ರೀಡೆಗೆ ಕರ್ನಾಟಕದಲ್ಲಿ ಹೊಸ ವೇದಿಕೆ ಸಿಕ್ಕಿದ್ದು, ಕರ್ನಾಟಕ ರಾಜ್ಯ ಪಿಕಲ್‌ಬಾಲ್ ಸಂಸ್ಥೆ (ಕೆಎಸ್‌ಪಿಎ) ನೇತೃತ್ವದಲ್ಲಿ ಹಾಗೂ ಎಂಟ್ರೋಪಿ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಸಹಯೋಗದೊಂದಿಗೆ 'ಕರ್ನಾಟಕ ಪಿಕಲ್‌ಬಾಲ್ ಪ್ರೀಮಿಯರ್ ಲೀಗ್' ಎಂಬ ಹೊಸ ರಾಜ್ಯ ಮಟ್ಟದ ಕೂಟ ಸೆಪ್ಟೆಂಬರ್‌ನಲ್ಲಿ ನಡೆಯಲಿದೆ.

ಅಖಿಲ ಭಾರತ ಪಿಕಲ್‌ಬಾಲ್ ಸಂಸ್ಥೆಯ ಮಾನ್ಯತೆ ಪಡೆದಿರುವ ಫ್ರಾಂಚೈಸಿ ಆಧಾರಿತ ಲೀಗ್‌ನ ಮೊದಲ ಸೀಸನ್‌ನಲ್ಲಿ ಕರ್ನಾಟಕದ ವಿವಿಧ ಪ್ರಮುಖ ನಗರಗಳನ್ನು ಪ್ರತಿನಿಧಿಸುವ 6 ತಂಡಗಳು ಕಣಕ್ಕಿಳಿಯಲಿವೆ. ಮುಂಬರುವ ಸೀಸನ್ 2 ರಲ್ಲಿ 8 ತಂಡಗಳಿಗೆ ಹಾಗೂ ಸೀಸನ್ 3 ರಲ್ಲಿ 10 ತಂಡಗಳಿಗೆ ಲೀಗ್ ಅನ್ನು ವಿಸ್ತರಿಸುವ ಸ್ಪಷ್ಟ ಮಾರ್ಗದರ್ಶನವನ್ನು ಆಯೋಜಕರು ಹೊಂದಿದ್ದಾರೆ. ಈ ಕುರಿತು ಮಾತನಾಡಿದ ಕೆಎಸ್‌ಪಿಎ ಅಧ್ಯಕ್ಷ ಎ.ಜಿ. ಶಿವಕುಮಾರ್, ಕೆಪಿಪಿಎಲ್ ಕೇವಲ ಒಂದು ಟೂರ್ನಮೆಂಟ್ ಅಲ್ಲ, ರಾಜ್ಯದಲ್ಲಿ ಪಿಕಲ್‌ಬಾಲ್ ಕ್ರೀಡೆಯ ಸಮಗ್ರ ಬೆಳವಣಿಗೆಗೆ ಮತ್ತು ಉದಯೋನ್ಮುಖ ಪ್ರತಿಭೆಗಳಿಗೆ ವೃತ್ತಿಪರ ಅವಕಾಶಗಳನ್ನು ಸೃಷ್ಟಿಸುವ ಭದ್ರ ಬುನಾದಿಯಾಗಿದೆ ಎಂದು ತಿಳಿಸಿದ್ದಾರೆ.



ಶಿವಮೊಗ್ಗಕ್ಕೆ 1 ರನ್ ರೋಚಕ ಜಯ

▸ ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** ಕೊನೆಯ ಎಸೆತದವರೆಗೂ ಸಾಗಿದ ಪಂದ್ಯದಲ್ಲಿ ಶಿಸ್ತಿನ ಬೌಲಿಂಗ್ ದಾಳಿ ಹಾಗೂ ಉತ್ತಮ ಕ್ಷೇತ್ರ ರಕ್ಷಣೆಯಿಂದ ಶಿವಮೊಗ್ಗ ಯೋಧಾಸ್ ತಂಡವೂ ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ಎದುರು 2 ರನ್‌ಗಳ ರೋಚಕ ಜಯಗಳಿಸಿತು.

ಸತತ ಮೂರನೇ ಸೋಲಿನಿಂದ ತಪ್ಪಿಸಿಕೊಂಡಿರುವ ಶಿವಮೊಗ್ಗ ಮೊದಲು ಬ್ಯಾಟಿಂಗ್ ಮಾಡಿ 20 ಓವರ್‌ಗೆ 7 ನಷ್ಟಕ್ಕೆ 180 ರನ್ ಗಳಿಸಿತು. ಗುರಿ ಬೆನ್ನತ್ತಿದ ಗುಲ್ಬರ್ಗಾ ಮಳೆ ಕಾಟ ಎದುರಾಯಿತು. ಪರಿಣಾಮ ಪಂದ್ಯವನ್ನು 12 ಓವರ್‌ಗೆ ಇಳಿಸಿ 128 ರನ್ ಗುರಿ ನೀಡಲಾಯಿತು.

ಗುಲ್ಬರ್ಗಾ ತಂಡವೂ 6 ಓವರ್‌ಗೆ ತನ್ನ ಪ್ರಮುಖ 4 ವಿಕೆಟ್ ಕಳೆದುಕೊಂಡು 52 ರನ್ ಗಳಿಸಿತು. ಕಡೆಯ 6 ಓವರ್‌ಗಳಲ್ಲಿ 76 ಅವಶ್ಯವಿತ್ತು.ಅನುಭವಿ ಮ್ಯಾಕ್ನಿಲ್ ನೊರಾನ್ಹಾ ಹಾಗೂ ಮನೀಶ್ ಪಾಂಡೆ ಕ್ರಿಸ್‌ನಲ್ಲಿ ಇದ್ದರು. ಆದರೆ, ಶಿವಮೊಗ್ಗದ ಸ್ಪಿನ್ನರ್ ಅಂಬರೀಶ್ ಪ್ರಖರ ದಾಳಿಯೊಂದಿಗೆ ನೊರಾನ್ಹ ಅವರಿಗೆ ಪೆವಿಲಿಯನ್ ದಾರಿ ತೋರಿಸಿದ್ದಲ್ಲದೆ, ಕ್ರಾಂತಿ ಕುಮಾರ ವಿಕೆಟ್ ಕೂಡ ಕಿತ್ತರು. ಕೊನೆಯ ಓವರ್‌ನಲ್ಲಿ 26 ಬೇಕಿತ್ತು. ಮನೀಶ್ ಸ್ಫೋಟಕ ಸಿಕ್ಸರ್ ಹಾಗೂ ಬೌಂಡರಿಗಳೊಂದಿಗೆ ಪಂದ್ಯ ರೋಚಕದತ್ತ ಕೊಂಡೊಯ್ದರು. ಕೊನೆಯ 2 ಬಾಲ್‌ನಲ್ಲಿ 14 ರನ್ ಬೇಕಿತ್ತು. ಎರಡೂ ಸಿಕ್ಸರ್ ಬಾರಿಸಿದ ಮನೀಶ್ ಹೋಪ್ ಕೊಟ್ಟರೂ ಗುಲ್ಬರ್ಗಾ 1 ರನ್ ಸೋಲನುಭವಿಸಿತು.


ಚಿತ್ರ: ಮಂಜುನಾಥ ಜರತಾರಘರ

ಮನೀಶ್ ಪಾಂಡೆ ಹೋರಾಟ ವ್ಯರ್ಥ


ಸಂಕ್ಷಿಪ್ತ ಸ್ಕೋರ್

ಶಿವಮೊಗ್ಗ 20 ಓವರ್‌ಗಳಲ್ಲಿ 180/7: ಸುಜಯ್ 47★, ತುಷಾರ್ 35, ಧ್ರುವ್ 16/2
ಗುಲ್ಬರ್ಗಾ 12 ಓವರ್‌ಗಳಲ್ಲಿ 126/3(ಗುರಿ 12 ಓವರ್‌ಗಳಿಗೆ 126): ಮನೀಶ್ 36★, ನೊರಾನ್ಹಾ

ಟಾಸ್ ಸೋತು ಮೊದಲ ಬ್ಯಾಟಿಂಗ್ ಮಾಡುವಾಗ ಶಿವಮೊಗ್ಗದ ಪ್ರಮುಖ ಬ್ಯಾಟರ್‌ಗಳು ಬೇಗನೆ ವಿಕೆಟ್ ಕಳೆದುಕೊಂಡರು. ಲವನಿತ್ ಸಿಸೋಡಿಯಾ(31) ಹಾಗೂ ತುಷಾರ್ ಸಿಂಗ್ (35) ಇಬ್ಬರು ಉಪಯುಕ್ತ ಕಾಣಿಕೆ ನೀಡಿದರು. ಆರನೇ ಕ್ರಮಾಂಕದ ಬ್ಯಾಟರ್ ಸುಜಯ್ ಸಾತೇರಿ(47) ಭರ್ಜರಿ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



6031

ಎಡದಿಂದ ಬಲಕ್ಕೆ
3.ವಾಹನಗಳಿಗೆ ಬೇಕಾಗುವ ಇಂಧನ ಮೂಲ (4)
4.ಕುತೂಹಲ ಕೆರಳಿಸುವಂಥಾದ್ದು (3)
5.ಬಗೆಬಗೆಯ ರೀತಿಯವು ಇಲ್ಲಿ ಕಾಣುತ್ತಿವೆ (4)
6.ಡಾ.ರಾಜ್ ದ್ವಿಪಾತ್ರದಲ್ಲಿ ನಟಿಸಿದ ಚಿತ್ರ (4)
8.ಒಡ್ಡಿದ ಅಂಗೈಯ ತಗ್ಗು (4)
10.ಅಂಗಾರದ ಬಗ್ಗೆ ಹೇಳಿದ ಚೆಲುವ (4)
12.ಬದುಕಿಗೆ ಆಧಾರವಾದ ನೀರನ್ನು ಹೀಗೆನ್ನಬಹುದು (4)
14.ಪ್ರಾಮುಖ್ಯತೆಯನ್ನು ನೀಡು ಎಂಬರ್ಥದ ನುಡಿಗಟ್ಟು (4)
16.ಚಾವಣಿಯಿರುವ ಬಯಲು ಮಂಟಪ (3)
17.ಎಣಿಸಲು-ಅಳೆಯಲು ಸಾಧ್ಯವಾದ ಗುಣ (4)

ಮೇಲಿನಿಂದ ಕೆಳಕ್ಕೆ
1.ಗಂಗೆಯ ಅತಿದೊಡ್ಡ ಉಪನದಿ (3)
2.ತಡೆ-ವಿರುದ್ಧವಾದುದು (3)
3.ಕೈ ಕಡೆಯಲ್ಲಿಟ್ಟುಕೊಂಡ ದಡ್ಡ (3)
5.ಮೂಗು ಎಂಬರ್ಥದ ಮಹಾರಾಷ್ಟ್ರದ ನಗರ (3)
7.ಸಂತೋಷವನ್ನುಂಟು ಮಾಡುವ ಚಟುವಟಿಕೆ (3)
9.ದ್ರವರೂಪದ ಬಿಳಿಯ ಲೋಹಧಾತು (3)
11.ಅತ್ಯಧಿಕ-ಯಥೇಚ್ಛ ಎಂಬರ್ಥದ ಶಬ್ದ (3)
13.ಕ್ಷಾರೀಯ ಗುಣವುಳ್ಳ ಸಂಯುಕ್ತ (3)
14.ಸೊಬಗು-ವೈಯ್ಯಾರದಿಂದ ಕೂಡಿದ್ದು (3)
15.ಕರ್ನಾಟಕದ ಪ್ರಸಿದ್ಧ ಗಿರಿಧಾಮ (3)

6030 ಉತ್ತರ

ಎಡದಿಂದ ಬಲಕ್ಕೆ:
3.ಚತುರಂಗ 5.ಹಾಗಲ
6.ದಂತಕ್ಷಯ
7.ನಕ್ಷೆ 8.ಗಣಪತಿ
10.ತ್ರಯೋದಶಿ
13.ಗಡ 14.ಮನೋಗತ
16.ಧ್ವನಿಸು 17.ವನಜ

ಮೇಲಿನಿಂದ ಕೆಳಕ್ಕೆ :
1.ದಿಗಂತ 2.ಸಹಾಯ
3.ಚಲನಚಿತ್ರ
4.ಗಬ್ಬಾಮಿ 6.ದಂಪತಿ
9.ಗರುಡಧ್ವಜ 11.ಶಿಕ್ಷಿತ
12.ಪೇಲವ 14.ಮಸುಕು
15.ಗಡದ್ದು

ಕಿರುಸುದ್ದಿ

ಪೊಲೀಸ್ ಠಾಣೆಗೆ ಬಂದಿದ್ದ ಮಹಿಳೆ ಕುಸಿದು ಬಿದ್ದು ಸಾವು

ಹೆಬ್ರಿ: ಹೆಬ್ರಿ ಪೊಲೀಸ್ ಠಾಣೆಗೆ ಅರ್ಜಿ ವಿಚಾರಣೆಗಾಗಿ ಬಂದ ಮಹಿಳೆಯೊಬ್ಬರು ತೀವ್ರವಾಗಿ ಅಸ್ವಸ್ಥಗೊಂಡು ಮೃತಪಟ್ಟ ಘಟನೆ ಜೂ.28ರಂದು ಬೆಳಗ್ಗೆ ನಡೆದಿದೆ. ಮೃತರನ್ನು ಶಿವಪುರ ಗ್ರಾಮದ ಸುಶೀಲಾ (74) ಎಂದು ಗುರುತಿಸಲಾಗಿದೆ. ಇವರು ತನ್ನ ಇಬ್ಬರು ಮಕ್ಕಳು ಹಾಗೂ ಸೊಸೆಯೊಂದಿಗೆ ಅರ್ಜಿ ವಿಚಾರಣೆಗೆ ಸಂಬಂಧಿಸಿ ಹೆಬ್ರಿ ಪೊಲೀಸ್ ಠಾಣೆಗೆ ಬಂದಿದ್ದರು. ಆ ವೇಳೆ ತೀವ್ರವಾಗಿ ಅಸ್ವಸ್ಥಗೊಂಡ ಸುಶೀಲಾ ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗುವ ದಾರಿ ಮಧ್ಯೆ ಮೃತಪಟ್ಟಿರುವುದು ತಿಳಿದುಬಂದಿದೆ. ಇವರ ಮರಣಕ್ಕೆ ಲಕ್ಷ್ಮೀ ಹಾಗೂ ಪ್ರತಿಮಾ ಅವರ ಕಿರುಕುಳ ಕಾರಣ ಆಗಿರುವ ಬಗ್ಗೆ ಸಂಶಯವಿರುವುದಾಗಿ ಮೃತರ ಪುತ್ರ ರಮೇಶ್ ನಾಯ್ಕ ನೀಡಿದ ದೂರಿನಂತೆ ಹೆಬ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಶಾಕ್: ಓರ್ವ ಸಾವು

ಬಂಟ್ವಾಳ: ಆಕಸ್ಮಿಕವಾಗಿ ವಿದ್ಯುತ್ ಶಾಕ್ ಹೊಡೆದು ಗಂಭೀರಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟ ಘಟನೆ ನಡೆದಿದೆ. ಬಂಟ್ವಾಳ ತಾಲೂಕಿನ ಮೇರಮಜಲು ಗ್ರಾಮದ ಎ ಇಸ್ಮಾಯಿಲ್ (58) ಮೃತಪಟ್ಟವರೆಂದು ಗುರುತಿಸಲಾಗಿದೆ. ಇವರು ತನ್ನ ಗೂಡಂಗಡಿಯ ಮುಂದೆ ಶೆಡ್ ನಿರ್ಮಿಸಲು 2 ಕಬ್ಬಿಣದ ಪೈಪನ್ನು ತುಂಡರಿಸಿ ಒಂದನ್ನು ನೆಟ್ಟು ಇನ್ನೊಂದು 20 ಅಡಿ ಉದ್ದದ ಪೈಪನ್ನು ಮೇಲಕ್ಕೆತ್ತಿ ಅದರಲ್ಲಿದ್ದ ಮರಳನ್ನು ತೆಗೆಯುವ ಸಮಯ ಅಂಗಡಿಯ ಮುಂದೆ ಹಾದು ಹೋಗಿರುವ ವಿದ್ಯುತ್ ತಂತಿಗೆ ಅದು ಮೇಲಕ್ಕೆತ್ತಿದ ಕಬ್ಬಿಣದ ಪೈಪ್ ತಗುಲಿ ಆಕಸ್ಮಿಕವಾಗಿ ವಿದ್ಯುತ್ ಶಾಕ್ ಹೊಡೆದು ನೆಲಕ್ಕೆ ಬಿದ್ದಿದ್ದರು. ತಕ್ಷಣ ಅವರನ್ನು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಸೋಮವಾರ ರಾತ್ರಿ ವೇಳೆ ಕೊನೆಯುಸಿರೆಳೆದಿದ್ದಾರೆ ಎಂದು ವೈದ್ಯಾಧಿಕಾರಿಯವರು ದೃಢಪಡಿಸಿದ್ದಾರೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಟ್ಲ: ಬ್ಯಾಗಿನಲ್ಲಿದ್ದ 138 ಗ್ರಾಂ ಚಿನ್ನಾಭರಣ ಕಳವು

ವಿಟ್ಲ: ಮಹಿಳೆಯೊಬ್ಬರು ತಾಯಿಮನೆಗೆ ತೆರಳುತ್ತಿದ್ದಾಗ ಬ್ಯಾಗಿನಲ್ಲಿದ್ದ 138 ಗ್ರಾಂ ಚಿನ್ನಾಭರಣ ಕಳವುಗೈದ ಘಟನೆ ಸಂಭವಿಸಿದೆ. ಪುತ್ತೂರು ತಾಲೂಕಿನ ಆರಿಯಡ್ಕ ಗ್ರಾಮದ ಕೌಡಿಚ್ಚಾರು ಮಡ್ಯಂಗಲ ಚಂದ್ರಹಾಸ ಅವರ ಪತ್ನಿ ಮಾಲತಿ ಅವರು ಚಿನ್ನಾಭರಣ ಕಳೆದುಕೊಂಡವರು. ಅವರು ಕುಡ್ತಮುಗೇರುನಲ್ಲಿರುವ ತನ್ನ ತಾಯಿ ಮನೆಯಲ್ಲಿ ಚಿನ್ನಾಭರಣಗಳನ್ನು ಇಡಲು ಆಗಮಿಸುತ್ತಿದ್ದಾಗ ಘಟನೆ ಸಂಭವಿಸಿದೆ. ಲಕ್ಷ್ಮೀ ಪದಕ ಇರುವ 56 ಗ್ರಾಂ ತೂಕದ ಚಿನ್ನದ ಕರಿಮಣಿ ಸರ, ಲಕ್ಷ್ಮಿ ಪದಕ ಇರುವ ಸುಮಾರು 56 ಗ್ರಾಂ ಮತ್ತು 26 ಗ್ರಾಂ ತೂಕದ ಚಿನ್ನದ ಎರಡು ಸರಗಳನ್ನು ಬ್ಯಾಗ್ ನಲ್ಲಿ ಇಟ್ಟುಕೊಂಡು ಜೂ.27ರಂದು ಬೆಳಗ್ಗೆ 11–30ಕ್ಕೆ ಮನೆಯಿಂದ ಹೊರಟು ಆರಿಯಡ್ಕ ಗ್ರಾಮದ ಶೇಖಮಲೆ ಬಸ್‌ಸ್ಟಾಂಡಿನವರೆಗೆ ಆಟೋರಿಕ್ಷಾದಲ್ಲಿ ಬಂದು, ಅಲ್ಲಿಂದ ಇನ್ನೊಂದು ಆಟೋರಿಕ್ಷಾದಲ್ಲಿ ಪುತ್ತೂರುವರೆಗೆ ಬಂದು, ಅಲ್ಲಿಂದ ಆಟೋರಿಕ್ಷಾದಲ್ಲಿ ಪುತ್ತೂರಿನ ಕ್ಲಿನಿಕ್ ತೆರಳಿ, ಪುತ್ತೂರು ಬಸ್ ನಿಲ್ದಾಣಕ್ಕೆ ಬಂದು ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿಗೆ ಮಧ್ಯಾಹ್ನ 1–29 ಗಂಟೆಗೆ ಹತ್ತಿ, ಮಧ್ಯಾಹ್ನ 2–05 ಗಂಟೆಗೆ ವಿಟ್ಲ ಖಾಸಗಿ ಬಸ್ ನಿಲ್ದಾಣಕ್ಕೆ ತಲುಪಿ, ಬಸ್ಸಿನಿಂದ ಇಳಿದಾಗ ಮಾಲತಿ ಅವರ ಬ್ಯಾಗ್ ತೆರೆದಿತ್ತು. ಪರಿಶೀಲಿಸಿದಾಗ ಅದರಲ್ಲಿ ಒಟ್ಟು 138 ಗ್ರಾಂ ತೂಕದ ರೂ.16.56 ಲಕ್ಷ ಮೌಲ್ಯದ ಚಿನ್ನಾಭರಣಗಳು ಕಳ್ಳತನವಾಗಿದ್ದುದು ಬೆಳಕಿಗೆ ಬಂದಿದೆ. ಪರಸ್ಪರ ಚರ್ಚಿಸಿ, ವಿಟ್ಲ ಠಾಣೆಗೆ ಆಕೆ ದೂರು ನೀಡುವಾಗ ತಡವಾಗಿದ್ದು ಇದೀಗ ಪ್ರಕರಣ ದಾಖಲಾಗಿದೆ.

ಸಾವಿನ ಬಗ್ಗೆ ಅನುಮಾನ: ದೂರು

ವಿಟ್ಲ: ಮಾಣಿ ಗ್ರಾಮದ ಬದಿಗುಡ್ಡೆಯ ವ್ಯಕ್ತಿಯೋರ್ವರು ತನ್ನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದೂ ಅದು ಆತ್ಮಹತ್ಯೆ ಅಲ್ಲ, ತನಿಖೆ ನಡೆಸಬೇಕೆಂದೂ ವಿಟ್ಲ ಠಾಣೆಗೆ ದೂರು ನೀಡಿದ್ದಾರೆ. ಬದಿಗುಡ್ಡೆ ಸಂಜೀವ ಶೆಟ್ಟಿ (64) ಅವರು ಸಾವನ್ನಪ್ಪಿದವರು. ಅನಾರೋಗ್ಯದಿಂದ ಬೇಸತ್ತು ಆತ್ಮಹತ್ಯೆ ಮಾಡಿದ್ದಾರೆಂದು ದೂರಿನಲ್ಲಿ ತಿಳಿಸಲಾಗಿದೆ. ಆದರೆ, ಅವರ ಪುತ್ರ ಚೇತನ್ ಶೆಟ್ಟಿ ಅವರು ತಂದೆ ಸಂಜೀವ ಶೆಟ್ಟಿಯವರ ಸಾವಿನ ಬಗ್ಗೆ ಶಂಕೆ ವ್ಯಕ್ತಪಡಿಸಿ, ದೂರು ದಾಖಲಿಸಿದ್ದಾರೆ. ಈ ಬಗ್ಗೆ ವಿಟ್ಲ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ನಡೆಸುತ್ತಿದ್ದಾರೆ.

ಶಂಕರಪುರ: ಫುಲ್ ಟ್ಯಾಂಕ್ ಡೀಸೆಲ್ ತುಂಬಿಸಿ ಪರಾರಿಯಾದ ಕಾರು ಚಾಲಕ



ಶಿರ್ವ: ಶಂಕರಪುರ ಸಮೀಪದ ಸುಭಾಸ್‌ನಗರ ಕುಂಜಾರುಗಿರಿ ಕ್ರಾಸ್ ಅನತಿ ದೂರದಲ್ಲಿರುವ ಇಂಡಿಯನ್ ಆಯಿಲ್ ಫಿಲ್ಲಿಂಗ್ ಸ್ಟೇಶನ್‌ನಲ್ಲಿ ಡೀಸೆಲ್ ತುಂಬಿಸಿಕೊಂಡು ಹಣ ಪಾವತಿಸದೆ ಪರಾರಿಯಾದ ಘಟನೆ ಶನಿವಾರ ರಾತ್ರಿ ನಡೆದಿದೆ. ಬಿಳಿ ಬಣ್ಣದ ಫೋರ್ಡ್ ಇಕೋ ಸ್ಪೋರ್ಟ್ಸ್ ಕಾರಿನಲ್ಲಿ ಬಂದ ಮೂವರು ಯುವಕರು ಫುಲ್ ಟ್ಯಾಂಕ್ ಡೀಸೆಲ್ ತುಂಬಿಸಿಕೊಳ್ಳುವಂತೆ ಸಿಬ್ಬಂಧಿಗೆ ತಿಳಿಸಿದ್ದರು. ಬಳಿಕ ಬಿಲ್ ನೀಡುವಂತೆ ಹೇಳಿ ಯಾವುದೇ ಹಣ ಪಾವತಿಸದೆ ಕಾರನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಪರಾರಿಯಾಗಿದ್ದಾರೆ. ಒಟ್ಟು 4,711 ರೂ ಮೌಲ್ಯದ ಡೀಸೆಲ್ ತುಂಬಿಸಿಕೊಳ್ಳಲಾಗಿದೆ. ಕಾರಿನ ಒಳಗೆ ಮೂವರು ಯುವಕರಿದ್ದು, ಅವರು ತುಳು ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು ಎನ್ನಲಾಗಿದೆ. ತಾವು ಕುಮಟಾದವರು ಎಂದು ಹೇಳಿದ್ದರೂ ಅದು ಸುಳ್ಳಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಯುವಕರು ಮದ್ಯಪಾನ ಮಾಡಿರಬಹುದು ಎಂಬ ಅನುಮಾನವೂ ವ್ಯಕ್ತವಾಗಿದ್ದು, ಕಾರಿನ ಒಳಗೆ ಬಿಯರ್ ಬಾಟಲ್ ಹಾಗೂ ಚಿಪ್ಸ್ ಇದ್ದುದಾಗಿ ಸಿಬ್ಬಂದಿ ತಿಳಿಸಿದ್ದಾರೆ. ವಾಹನಕ್ಕೆ ಟಿಂಟ್ ಗ್ಲಾಸ್ ಅಳವಡಿಸಲಾಗಿತ್ತು. ಈ ಕುರಿತು ಪೆಟ್ರೋಲ್ ಬಂಕ್ ಸಿಬ್ಬಂದಿ ಮಂಗಳವಾರ ಶಿರ್ವ ಪೊಲೀಸ್ ಠಾಣೆಗೆ ದೂರು ನೀಡಿದ್ದು ಸಿಸಿ ಟಿವಿ ದೃಶ್ಯಗಳಲ್ಲಿ ಕಾರಿನ ನೋಂದಣಿ ಸಂಖ್ಯೆ ಸ್ಪಷ್ಟವಾಗಿ ಕಾಣಿಸದ ಕಾರಣ ವಾಹನದ ಗುರುತು ಪತ್ತೆ ಹಚ್ಚಲು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಅಶ್ವಿನಿ ಕಣ್ಣೀರೊರೆಸಿದ ನಳಿನ್‌ಕುಮಾರ್ | ಕೃತಕ ಕಾಲುಗಳಿಗೆ ಲೋಧಾ ಟ್ರಸ್ಟ್ 23 ಲ. ರೂ. ನೆರವು

ಕಳೆದುಹೋದ ಹೆಜ್ಜೆಗೆ ಈಗ ಹೊಸಜೀವ

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್ ಭಾಗ್



ಹರೀಶ ಕುಲ್ಕುಂದ

ಮಂಗಳೂರು: ಕತ್ತರಿಸಲ್ಪಟ್ಟ ಎರಡೂ ಕಾಲುಗಳು... ಮನದೊಳಗೆ ಇಬ್ಬರು ಕಂದಮ್ಮಗಳು, ಅತ್ತೆಯನ್ನು ಕಳೆದುಕೊಂಡ ದುಃಖ... ತನ್ನ ಒಂದು ಕಾಲು ಕಳೆದುಕೊಂಡು ನಿರಂತರ ಬೇನೆ ಅನುಭವಿಸುತ್ತಿರುವ ಮಾವ... ಇಷ್ಟಾದರೂ ರಾಜ್ಯ ಸರಕಾರದಿಂದ ದೊರೆಯದ ನ್ಯಾಯ...

ಕಳೆದ ಒಂದು ವರ್ಷದಿಂದ ಹೀಗೆ ನೋವು ಉಣ್ಣುತ್ತಿರುವ ಇಲ್ಲಿನ ಮಹಿಳೆಯೊಬ್ಬರ ಮೊಗದಲ್ಲಿ ಮಂಗಳವಾರ ಮಂದಹಾಸ ಮೂಡಿದೆ.

ಮಾನವನಿರ್ಮಿತ ದುರಂತದಿಂದ ಬದುಕಿನಲ್ಲಿ ಪಡಬಾರದ ಕಷ್ಟಕ್ಕೆ ತುತ್ತಾದ ಮಂಜನಾಡಿ ಗ್ರಾಮದ ಅಶ್ವಿನಿ ಅವರಿಗೆ ಮಾಜಿ ಸಂಸದ, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಈಗ ಆಪದ್ಬಾಂಧವನಾಗಿ ಒದಗಿಬಂದಿದ್ದಾರೆ.



ನಡೆದಿತ್ತು ದುರಂತ

2025ರ ಮೇ 30ರಂದು ಉಳ್ಳಾಲ ಮಂಜನಾಡಿ ಗ್ರಾಮದ ಮೊಂಟೆಪದವು ಕೊಪ್ಪಳ ಮಲ್ಲಿ ಪ್ರದೇಶದಲ್ಲಿ ಗುಡ್ಡ ಕುಸಿತ ಸಂಭವಿಸಿತ್ತು. ಈ ದುರಂತದಲ್ಲಿ ಎರಡೂ ಕಾಲು ಕಳೆದುಕೊಂಡ ಸಂತ್ರಸ್ತೆ ಅಶ್ವಿನಿ ಅವರಿಗೆ ನಳಿನ್‌ಕುಮಾರ್ ಕಟೀಲ್ ಅವರು ಟ್ರಸ್ಟ್‌ವೊಂದರ ಮೂಲಕ 23 ಲಕ್ಷ ರೂ. ವೆಚ್ಚದ ಕೃತಕ ಕಾಲು ಒದಗಿಸಿ ಈಗ ತಾನು ಮಾಜಿಯಾದರೂ ಜನಸೇವೆ ಕೈಬಿಟ್ಟಿಲ್ಲ ಎಂಬುದನ್ನು ಶ್ರುತಪಡಿಸಿದ್ದಾರೆ. ಸಂತ್ರಸ್ತೆ ಅಶ್ವಿನಿ ಅವರ ನೋವಿನ ಬದುಕಿಗೆ ಮಾನವೀಯ ನೆಲೆಯ ಸ್ಪಂದನೆ ನೀಡಿದ್ದಾರೆ.

ದುರಂತದ ಬಳಿಕ ಏನಾಗಿತ್ತು ಅಂದು?

ಗುಡ್ಡ ಕುಸಿತ ದುರಂತದಲ್ಲಿ ಅಶ್ವಿನಿ ಅವರ ಇಬ್ಬರು ಮಕ್ಕಳು ಹಾಗೂ ಅತ್ತೆ ಮೃತಪಟ್ಟು, ಅಶ್ವಿನಿ ಹಾಗೂ ಅವರ ಮಾವ ಗಂಭೀರವಾಗಿ ಗಾಯಗೊಂಡರು. ಭಾರೀ ಮಳೆಯಿಂದಾಗಿ ಅವರ ಮನೆಯ ಮೇಲೆ ಸುಮಾರು 30 ಅಡಿ ಮಣ್ಣು ಹಾಗೂ ಮರವೊಂದು ಕುಸಿದು ಬಿದ್ದಿತ್ತು. ತೀವ್ರವಾಗಿ ಗಾಯಗೊಂಡ ಅಶ್ವಿನಿ ತನ್ನ ಎರಡು ಕಾಲುಗಳನ್ನು ಕಳೆದುಕೊಂಡರೆ, ಮಾವ ಒಂದು ಕಾಲು ಕಳೆದುಕೊಂಡು ಶಾಶ್ವತವಾಗಿ ವಿಕಲಚೇತನರಾಗಿದ್ದಾರೆ. ಈ ದುರಂತ ಪ್ರಾಕೃತಿಕ ವಿಕೋಪ ಎಂದು ತೀರ್ಮಾನಕ್ಕೆ ಬಂದ ಆಡಳಿತ ಅದೇ ನೆಪದಲ್ಲಿ ಅಲ್ಪಪ್ರಮಾಣದ ಪರಿಹಾರದ ಮೊತ್ತ ನೀಡಿ ಬಳಿಕ ಸುಮ್ಮನಾಯಿತು. ಆದರೆ, ಅಶ್ವಿನಿ ಕುಟುಂಬ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿದೆ. ಇದು ಪ್ರಾಕೃತಿಕ ವಿಕೋಪವಲ್ಲ, ಬದಲಿಗೆ ರಸ್ತೆ ನಿರ್ಮಾಣಕ್ಕಾಗಿ ಮನೆ ಮೇಲಿನ ಗುಡ್ಡವನ್ನು ಅವೈಜ್ಞಾನಿಕವಾಗಿ ಅಗೆದಿದ್ದರಿಂದ ಸಂಭವಿಸಿದ ಮಾನವ ನಿರ್ಮಿತ ದುರಂತ ಎಂದು ಆರಂಭದಲ್ಲಿಯೇ ಕುಟುಂಬಸ್ಥರು ಆರೋಪಿಸಿದ್ದರು. ಎನ್‌ಐಟಿಕೆ ತಜ್ಞರ ತಾಂತ್ರಿಕ ತನಿಖಾ ವರದಿಯೂ ಇದೇ ಅಂಶ ದೃಢೀಕರಿಸಿದೆ. ಘಟನೆಯಲ್ಲಿ ಮೂವರು ಮೃತಪಟ್ಟು, ಇಬ್ಬರು ಶಾಶ್ವತ ಅಂಗ ವೈಕಲ್ಯತೆಗೆ ಒಳಗಾದ ಹಿನ್ನೆಲೆಯಲ್ಲಿ ನ್ಯಾಯ ಒದಗಿಸಬೇಕು ಎಂದು ಸಂಬಂಧಿತ ಅಧಿಕಾರಿಗಳ ಮುಂದೆ ಕಣ್ಣೀರಿಟ್ಟರು. ಕಲ್ಲು ಹೃದಯವನ್ನೂ ಕರಗಿಸುವ ಅಶ್ವಿನಿ ಅವರ ಈ ಕರುಣಾಜನಕ ಸ್ಥಿತಿ ಅಧಿಕಾರಿಗಳ ಮನ ಕರಗಿಸಲಿಲ್ಲ. ಕಾಲು ಕಳೆದುಕೊಂಡ ಅಶ್ವಿನಿ, ಗಾಲಿ ಕುರ್ಚಿಯಲ್ಲಿ ಕುಳಿತು ಅಧಿಕಾರಿಗಳ ಮುಂದೆ ತನ್ನ ಸ್ಥಿತಿ, ಆದ ಅನ್ಯಾಯ ವಿವರಿಸಿದರೂ ನ್ಯಾಯ ಮಾತ್ರ ಇನ್ನೂ ಮರೀಚಿಕೆಯಾಗಿದೆ. ಸ್ಥಳೀಯರ ವಿರೋಧದ ನಡುವೆಯೂ ಗ್ರಾಮ ಪಂಚಾಯತ್ ಹಾಗೂ ಸರ್ಕಾರಿ ಇಂಜಿನಿಯರ್‌ಗಳು ರಸ್ತೆ ನಿರ್ಮಿಸಿದ್ದರೂ, ಅಧಿಕಾರಿಗಳ ಲೋಪದೋಷಗಳ ವಿರುದ್ಧ ಇದುವರೆಗೆ ಕ್ರಮ ಕೈಗೊಂಡಿಲ್ಲ. ಘಟನೆ ನಡೆದು ವರ್ಷ ಕಳೆದರೂ ಸಂತ್ರಸ್ತರಿಗೆ ಸೂಕ್ತ ಪರಿಹಾರ, ನ್ಯಾಯ ಸಿಗದ ಹಿನ್ನೆಲೆಯಲ್ಲಿ ಹೈಕೋರ್ಟ್‌ನಲ್ಲಿ ದೂರು ದಾಖಲಿಸಲಾಗಿದೆ. ಎನ್‌ಐಟಿಕೆ ವರದಿ ಆಧಾರದ ಮೇಲೆ ದುರಂತಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಗಿದೆ. ಇವೆಲ್ಲದರ ನಡುವೆ ಈಗ ಅಶ್ವಿನಿಗೆ ಕೃತಕ ಕಾಲು ಲಭಿಸುತ್ತಿದೆ.

ಮುಂದಿನ ಒಂದು ತಿಂಗಳ ಕಾಲ ಅಶ್ವಿನಿ ಅವರಿಗೆ ನಡಿಗೆಯ ತರಬೇತಿ ನೀಡಿದ ಬಳಿಕ ಹೊಸ ಕಾಲು ಅಳವಡಿಕೆ ಆಗಲಿದೆ. ಕೃತಕ ಕಾಲು ಒದಗಿಸಿದ ಲೋಧಾ ಟ್ರಸ್ಟ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯರು, ಸಂತೋಷ್ ಜಿ, ನಳಿನ್ ಕುಮಾರ್ ಕಟೀಲ್ ಹಾಗೂ ಸಹಕರಿಸಿದ ಎಲ್ಲರಿಗೂ ಅಶ್ವಿನಿ ಅವರು ಈ ವೇಳೆ ಕೃತಜ್ಞತೆ ಸಲ್ಲಿಸಿದ್ದಾರೆ.

ಜಾಗ ದೊರೆತರೆ ಮನೆ ನಿರ್ಮಾಣ: ನಳಿನ್

ಮಂಗಳವಾರ ಕೋಣಾಜೆ ಹರೇಕಳ ಬಳಿಯ ಅಶ್ವಿನಿ ಅವರ ನಿವಾಸಕ್ಕೆ ಆಗಮಿಸಿದ ನಳಿನ್‌ಕುಮಾರ್ ಕಟೀಲು, ಲೋಧಾ ಚಾರಿಟೇಬಲ್ ಟ್ರಸ್ಟ್ ಕೃತಕ ಕಾಲಿನ ಮೊತ್ತವನ್ನು ಪಾವತಿಸಿರುವ ಬಗ್ಗೆ ಅಶ್ವಿನಿ ಅವರಿಗೆ ವಿವರಿಸಿದರು. ಮುಂದಕ್ಕೆ ಸರಕಾರದ ವತಿಯಿಂದ ಅಶ್ವಿನಿ ಅವರಿಗೆ ಜಾಗ ದೊರೆತರೆ ಬಿಜೆಪಿ ವತಿಯಿಂದ ಮನೆ ನಿರ್ಮಿಸಿಕೊಡುವ ಭರವಸೆ ನೀಡಿದರು. ಅಶ್ವಿನಿ ಅವರಿಗೆ ಭಗವದ್ಗೀತೆ, ಕಟೀಲು ದೇವಿಯ ಸ್ಮರಣಿಕೆ ನೀಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ ಆಳ್ವ ಕುವೆತ್ತಬೈಲ್, ಮಂಡಲ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್ ಕೆ. ಆರ್., ದಯಾನಂದ ತೊಕ್ಕೊಟ್ಟು ಮಂಡಲ ಕೋಶಾಧಿಕಾರಿ ಸುಮಲತಾ ಕೊಣಾಜೆ, ಸೇವಾ ಭಾರತಿ ಸ್ವಯಂ ಸೇವಕ ಚಂದ್ರಶೇಖರ ಶೆಟ್ಟಿ ಮರಿಕ್ಕಳ, ಕೃಷಿ ಪತ್ತಿನ ಸಹಕಾರಿ ಸಂಘ ನಿರ್ದೇಶಕ, ಉದಯಶಂಕರ್ ಶೆಟ್ಟಿ ಬಲೆ ತೋಡು, ಯುವ ಮೋರ್ಚಾ ಅಧ್ಯಕ್ಷ ಮುರಳಿ ಕೊಣಾಜೆ, ಶಕ್ತಿ ಕೇಂದ್ರ ಅಧ್ಯಕ್ಷ ಸುಧಾಕರ ಗಟ್ಟಿ, ಮಂಡಲ ಕಾರ್ಯದರ್ಶಿ ಸುಧಾಕರ ಗಟ್ಟಿ ಶಕ್ತಿಕೇಂದ್ರದ ಅಧ್ಯಕ್ಷರು ಮುನ್ನೂರು, ರಮೇಶ್ ಬಿದ್ರೊಳಿಕೆ, ಸ್ಥಳೀಯ ಪ್ರಮುಖರು ಉಪಸ್ಥಿತರಿದ್ದರು.

> ಘಟನೆ ನಡೆದ ವೇಳೆ ಸ್ಥಳೀಯ ಶಾಸಕ, ಈಗಿನ ಸಚಿವ ಯು.ಟಿ. ಖಾದರ್ ಸಹಿತ ಸರಕಾರದ ಪ್ರಮುಖರು, ಅಧಿಕಾರಿಗಳು ಅಶ್ವಿನಿ ಅವರಿಗೆ ಮನೆ ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದ್ದರು. ಆದರೆ, ಅಶ್ವಿನಿ ಅವರು ಇಂದಿಗೂ ನೋವಿನೊಂದಿಗೆ ಬದುಕುತ್ತಿದ್ದಾರೆ. ಈ ವಿಚಾರ ಸಂಘದ ಪ್ರಮುಖರ ಗಮನಕ್ಕೆ ಬಂದು, ಅಶ್ವಿನಿ ಅವರಿಗೆ ಕೃತಕ ಕಾಲು ಕಲ್ಪಿಸುವಂತೆ ನಳಿನ್ ಕುಮಾರ್ ಅವರಿಗೆ ಸೂಚಿಸಿದ್ದರು. ಇದೀಗ ನಳಿನ್, ಅಶ್ವಿನಿ ಅವರಿಗೆ ಆಸರೆಯಾಗಿದ್ದಾರೆ. ಎರಡು ದಿನದೊಳಗೆ ಟ್ರಸ್ಟ್ ಮೂಲಕ 23 ಲಕ್ಷ ರೂ. ಒದಗಿಸಿದ್ದಾರೆ.
>
> ■ **ಸತೀಶ್ ಕುಂಪಲ,** ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ

ಕೇವಲ 2 ದಿನದಲ್ಲಿ ಪಾವತಿಯಾದ ಹಣ!

ಅಶ್ವಿನಿ ಅವರ ಸಂಕಷ್ಟದ ಸ್ಥಿತಿ, ಕೃತಕ ಕಾಲಿನ ಅಗತ್ಯತೆ ಬಗ್ಗೆ ಅವರ ಕುಟುಂಬಿಕರು ಹಾಗೂ ಸ್ಥಳೀಯ ಪ್ರಮುಖರು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ ಆಳ್ವ ಅವರ ಗಮನಕ್ಕೆ ತಂದಿದ್ದರು. ಅವರು ಈ ಬಗ್ಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯರ ಗಮನ ಸೆಳೆದಿದ್ದರು. ಸಂಘದ ಹಿರಿಯರು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರಿಗೆ ಈ ವಿಷಯ ತಿಳಿಸಿದ್ದಾರೆ. ಸಂತೋಷ್ ಅವರು ಅಶ್ವಿನಿ ಅವರಿಗೆ ಕೃತಕ ಕಾಲಿನ ವ್ಯವಸ್ಥೆ ಮಾಡುವಂತೆ ನನಗೆ ಸೂಚಿಸಿದ್ದರು. ಅದರಂತೆ ನಾನು ಲೋಧಾ ಚಾರಿಟೇಬಲ್ ಟ್ರಸ್ಟ್‌ನ್ನು ಸಂಪರ್ಕಿಸಿದೆ. ಕೇವಲ ಎರಡು ದಿನದಲ್ಲಿ 23 ಲಕ್ಷ ರೂ. ಮೊತ್ತವನ್ನು ಕೃತಕ ಕಾಲು ಒದಗಿಸಲಿರುವ ಕಂಪೆನಿಗೆ ಪಾವತಿಸುವಂತಾಗಿದೆ. ಅಶ್ವಿನಿ ಅವರ ಮನೆ, ಕಾಲಿಲ್ಲದ ಸ್ಥಿತಿ, ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ ಟ್ರಸ್ಟ್ ಈ ನೆರವು ನೀಡಿದೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಬಿಜೆಪಿಯಿಂದ ಈ ನೆರವು ಸಾಧ್ಯವಾಗಿದೆ ಎಂದು ನಳಿನ್‌ಕುಮಾರ್ ಕಟೀಲು ಇದೇ ಸಂದರ್ಭ ತಿಳಿಸಿದರು.

ಲೋಧಾಗೆ ಕೃತಜ್ಞತೆ ಸಲ್ಲಿಸಿದ ಸಂತ್ರಸ್ತೆ ಅಶ್ವಿನಿ

ಅಶ್ವಿನಿ ಅವರಿಗೆ ಮಾಜಿ ಸಂಸದ ನಳಿನ್ ಕುಮಾರ್ ಅವರ ಮೂಲಕ ಮಹಾರಾಷ್ಟ್ರದ ಲೋಧಾ ಚಾರಿಟೇಬಲ್ ಟ್ರಸ್ಟ್ ಕೃತಕ ಕಾಲು ನೀಡುತ್ತಿದೆ. ಮಹಾರಾಷ್ಟ್ರದ ಸಚಿವ ಮಂಗಲ್ ಪ್ರಭಾತ್ ಲೋಧಾ ಅವರ ನೇತೃತ್ವದ ಟ್ರಸ್ಟ್ ಕೃತಕ ಕಾಲಿಗಾಗಿ 23 ಲಕ್ಷ ರೂ. ಮೊತ್ತವನ್ನು ಎಂಡೋಲೈಟ್ ಕಂಪೆನಿಗೆ ನೀಡಿದೆ. ಈ ವೇಳೆ ಅಶ್ವಿನಿ ಅವರು ಮಂಗಲ್ ಪ್ರಭಾತ್ ಲೋಧಾ ಅವರೊಂದಿಗೆ ನಳಿನ್ ಅವರ ಮೊಬೈಲ್ ಮೂಲಕ ಮಾತನಾಡಿ ಕೃತಜ್ಞತೆ ಸಲ್ಲಿಸಿದರು.

ಬೈಕಂಪಾಡಿಯಲ್ಲಿ ಚಿನ್ನ ವ್ಯಾಪಾರಿಯ ದರೋಡೆ ಪ್ರಕರಣ

ಬೆಂಜನಪದವಿನಲ್ಲಿ ಕಾರು ಪತ್ತೆ!

ಸುರತ್ಕಲ್: ಸೋಮವಾರ ನಸುಕಿನ ವೇಳೆ ಬೈಕಂಪಾಡಿ ಬಳಿ ನಡೆದ ಚಿನ್ನಾಭರಣ ವ್ಯಾಪಾರಿಯ ದರೋಡೆ ಪ್ರಕರಣದ ತನಿಖೆ ಹೊಸ ತಿರುವು ಪಡೆದಿದೆ. ದುಷ್ಕರ್ಮಿಗಳು ಅಪಹರಿಸಿದ್ದ ಕಾರು ಬಂಟ್ವಾಳ ಠಾಣಾ ವ್ಯಾಪ್ತಿಯ ಬೆಂಜನಪದವಿನಲ್ಲಿ ಪತ್ತೆಯಾಗಿದೆ ಎಂದು ಮಂಗಳೂರು ನಗರ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಆರೋಪಿಗಳು ಕಾರನ್ನು ತ್ಯಜಿಸಿ ಪರಾರಿಯಾಗಿದ್ದಾರೆ. ಚಿನ್ನ ಹುಡುಕಾಟಕ್ಕೆ ಕಾರಿನ ಸೀಟ್ ಕವರ್‌ಗಳನ್ನು ಹರಿದು ಹಾಕಿ ದರೋಡೆಕೋರರು ಸಂಪೂರ್ಣವಾಗಿ ಶೋಧಿಸಿರುವುದು



ಕಂಡುಬಂದಿದೆ. ಕಾರಿನಲ್ಲಿ ಬೆಲೆಬಾಳುವ ವಸ್ತು ಅಡಗಿಸಿಟ್ಟಿರಬಹುದು ಎಂಬ ಶಂಕೆಯಿಂದ ಸೀಟುಗಳನ್ನು ಹರಿದು ಹಾಕಿದ್ದಾರೆ ಎಂದು ಪೊಲೀಸರು ಅಂದಾಜಿಸಿದ್ದಾರೆ.


ಮುಂಜಾನೆ 2.30ರ ಸುಮಾರಿಗೆ 3 ಕಾರುಗಳಲ್ಲಿ ಬಂದ ದರೋಡೆಕೋರರು, ಮುಂಬೈಯಿಂದ ಮರಳುತ್ತಿದ್ದ ಕೇರಳದ ಚಿನ್ನ ವ್ಯಾಪಾರಿ ವಿಕಾಸ್ ಎಂಬವರ ಕಾರನ್ನು ಅಡ್ಡಗಟ್ಟಿ ಕಾರು ಸಹಿತ 180 ಗ್ರಾಂ ಚಿನ್ನ ಸಹಿತ ನಗದು, ಮೊಬೈಲ್ ದೋಚಿಕೊಂಡು ಪರಾರಿಯಾಗಿದ್ದರು. ಮಾಹಿತಿ ಪಡೆದ ಪೊಲೀಸ್ ಅಧಿಕಾರಿಗಳು ವಿಶೇಷ ಪೊಲೀಸ್ ತಂಡ ರಚಿಸಿ ಶೋಧ ಕಾರ್ಯ ತೀವ್ರಗೊಳಿಸಿದ್ದಾರೆ. ಸಿಸಿಟಿವಿ ದೃಶ್ಯ, ಮೊಬೈಲ್ ಟವರ್ ಲೊಕೇಶನ್ ಹಾಗೂ ಇತರ ಸುಳಿವು ಆಧರಿಸಿ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದು, ತಂಡಗಳು ಆರೋಪಿಗಳ ಬೇಟೆಯಲ್ಲಿ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿವೆ ಎಂದು ಆಯುಕ್ತರು ಹೇಳಿದ್ದಾರೆ.

ಬೈಕಂಪಾಡಿ, ಪಣಂಬೂರು ಭಾಗದಲ್ಲಿ ರಾತ್ರಿ ಗಸ್ತು ಹೆಚ್ಚಿಸಲಾಗಿದೆ.

ಕರಾವಳಿ ರಕ್ಷಣಾ ಪಡೆಯಿಂದ ಆರು ಮಂದಿ ಮೀನುಗಾರರ ರಕ್ಷಣಾಕಾರ್ಯ

ಸುರತ್ಕಲ್: ಮಂಗಳೂರು ಕರಾವಳಿಯಲ್ಲಿ ಭಾನುವಾರ ಸಂಜೆ ಸಂಕಷ್ಟಕ್ಕೆ ಸಿಲುಕಿದ್ದ ಆರು ಮೀನುಗಾರರನ್ನು ಭಾರತೀಯ ಕರಾವಳಿ ರಕ್ಷಣಾ ಪಡೆ ರಾತ್ರಿಯ ಸವಾಲಿನ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿ ರಕ್ಷಿಸಿದೆ. ಜೂ. 29ರ ಸಂಜೆ ಸುಮಾರು ನಾಲ್ಕು ಗಂಟೆಗೆ ಭಾರತೀಯ ಕರಾವಳಿ ರಕ್ಷಣಾ ಹಡಗು ಸಚೇತ್‌ಗೆ ಸುರತ್ಕಲ್ ಕರಾವಳಿಯಿಂದ 33 ನಾಟಿಕಲ್ ಮೈಲಿ ದೂರದಲ್ಲಿದ್ದ ಐಎಫ್‌ಬಿ ಮಂಜು ಮಾತಾ ಮೀನುಗಾರಿಕಾ ದೋಣಿಯಿಂದ ವಿಎಚ್‌ಎಫ್ ಆರ್‌ಟಿ ಸಂಕಷ್ಟ ಕರೆ ಬಂದಿತು.

ಒರಟಾದ ಸಮುದ್ರದ ಪರಿಸ್ಥಿತಿಯಿಂದಾಗಿ ದೋಣಿಗೆ



ಹಾನಿಯಾಗಿದ್ದು, ದೋಣಿಯಲ್ಲಿದ್ದ ಆರು ಸಿಬ್ಬಂದಿಗಳ ಜೀವಕ್ಕೆ ತೀವ್ರ ಅಪಾಯ ಉಂಟಾಗಿತ್ತು. ಕರೆಯನ್ನು ಸ್ವೀಕರಿಸಿದ ತಕ್ಷಣ ಕರಾವಳಿ ರಕ್ಷಣಾ ಪಡೆ ಹಡಗನ್ನು ನೆರವಿಗೆ ತಿರುಗಿಸಿತು ಮತ್ತು ತೊಂಬತ್ತು ನಿಮಿಷಗಳಲ್ಲಿ ಸಂಕಷ್ಟದ ದೋಣಿಯನ್ನು ತಲುಪಿತು. ಒರಟು ಸಮುದ್ರ, ಬಲವಾದ ಗಾಳಿ, ಕಳಪೆ ಗೋಚರತೆ ಮತ್ತು ಕವಿಯುತ್ತಿದ್ದ ಕತ್ತಲೆ ಕಾರ್ಯಾಚರಣೆಯನ್ನು ಸವಾಲುಗಳ ನಡುವೆಯೂ ಐಸಿಜಿಎಸ್ ಸಚೇತ್ ಸಿಬ್ಬಂದಿ ಅಸಾಧಾರಣ ದಕ್ಷತೆಯಿಂದ ಕಾರ್ಯಾಚರಣೆ ನಡೆಸಿತು. ಪ್ರತಿಕೂಲ ಹವಾಮಾನಕ್ಕಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ರಿಮೋಟ್ ಆಪರೇಟೆಡ್ ಲೈಫ್‌ಬಾಯ್‌ಗಳನ್ನು ಬಳಸಿ ಸಿಲುಕಿದ್ದ ಮೀನುಗಾರರನ್ನು ಸುರಕ್ಷಿತವಾಗಿ ತಲುಪಲಾಯಿತು.

ಸಂಜೆ ಆರು ಗಂಟೆಯ ವೇಳೆಗೆ ಆರು ಸಿಬ್ಬಂದಿಗಳನ್ನೂ ಗಾಯವಿಲ್ಲದೆ ರಕ್ಷಿಸಲಾಯಿತು. ರಕ್ಷಣೆಯ ನಂತರ ಐಸಿಜಿಎಸ್ ಸಚೇತ್ ರಕ್ಷಿಸಿದ ಸಿಬ್ಬಂದಿಯನ್ನು ಸುರಕ್ಷಿತವಾಗಿ ಇಳಿಸಲು ನವ ಮಂಗಳೂರು ಬಂದರಿಗೆ ಆಗಮಿಸಿತು.

ಮಳೆಯ ಕೊರತೆಯ ನಡುವೆಯೂ ಕೊಡಗು ಜಿಲ್ಲೆಗೆ ಪ್ರವಾಸಿಗರ ಹರಿವು

ಮಡಿಕೇರಿ: ಮುಂಗಾರು ಮಳೆಯ ಕೊರತೆಯ ನಡುವೆಯೂ ಕೊಡಗು ಜಿಲ್ಲೆಗೆ ಪ್ರವಾಸಿಗರ ಹರಿವು ಹೆಚ್ಚಿದೆ.

ಪ್ರವಾಸಿ ಜಿಲ್ಲೆಯಾಗಿರುವ ಕೊಡಗು ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಸಹಜವಾಗಿಯೇ ಹೆಚ್ಚಿದೆ. ಅದರಲ್ಲೂ ಮಳೆಗಾಲದಲ್ಲಿ ತುಂಬಿ ಹರಿಯುವ ಜಲಪಾತಗಳ ವೀಕ್ಷಣೆಗೆಂದೇ ಕೊಡಗಿಗೆ ಆಗಮಿಸುವ ಪ್ರವಾಸಿಗರೂ ಇದ್ದಾರೆ. ಆದರೆ ಈ ಬಾರಿ ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ಇನ್ನೂ ಸರಿಯಾಗಿ ನೆಲೆ ಕಂಡುಕೊಳ್ಳದಿರುವುದರಿಂದ ಜಲಪಾತಗಳಲ್ಲಿ ನೀರಿಲ್ಲದೆ ತಮ್ಮ ಸೌಂದರ್ಯವನ್ನು ಕಳೆದುಕೊಂಡಿವೆ. ಆದರೆ ಇದರ ಬಗ್ಗೆ ಅರಿವು ಇಲ್ಲದ ಪ್ರವಾಸಿಗರು ಮಾತ್ರ ಜಿಲ್ಲೆಗೆ ಆಗಮಿಸುತ್ತಲೇ ಇದ್ದಾರೆ.

ಇದರಿಂದಾಗಿ ಕೊಡಗಿನ ಬಹುತೇಕ ಪ್ರವಾಸಿ ತಾಣಗಳು ಪ್ರವಾಸಿಗರಿಂದ ತುಂಬಿ ತುಳುಕುತ್ತಿದ್ದು, ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಟ್ರಾಫಿಕ್ ಜಾಮ್ ಸಮಸ್ಯೆ ತಲೆದೋರುತ್ತಿದೆ. ಪರಿಣಾಮವಾಗಿ ಪ್ರವಾಸಿಗರಿಗೂ ಅನಾನುಕೂಲವಾಗುತ್ತಿದ್ದು, ಸ್ಥಳೀಯರೂ ಕಿರಿಕಿರಿ ಅನುಭವಿಸುವಂತಾಗಿದೆ.

ವಾರಾಂತ್ಯದ ದಿನಗಳಲ್ಲಂತೂ ಮಡಿಕೇರಿ ನಗರದ ರಸ್ತೆಯಲ್ಲಿ ಸಾಲಾಗಿ ಸಾಗುತ್ತಿರುವ ವಾಹನಗಳ ಸದ್ದು ಪಾದಚಾರಿಗಳಿಗೆ ಕಿರಿಕಿರಿಯೊಂದಿಗೆ ಮೈಗೆ ಬೆಚ್ಚನೆಯ ಅನುಭವವನ್ನೂ ನೀಡುತ್ತಿವೆ.

ಮೈಸೂರು–ಮಡಿಕೇರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಪ್ರಮುಖ ಪಟ್ಟಣಗಳಲ್ಲಿ ಟ್ರಾಫಿಕ್ ಸಮಸ್ಯೆ ತಲೆದೋರಿದ್ದರೆ, ಮಡಿಕೇರಿ ಸೇರಿದಂತೆ ಪ್ರವಾಸಿ ತಾಣಗಳಲ್ಲಿ ವಾಹನಗಳ ನಿಲುಗಡೆಗೆ ಸಮರ್ಪಕ ವ್ಯವಸ್ಥೆಯಿಲ್ಲದೆ ಪಾರ್ಕಿಂಗ್‌ಗಾಗಿ



ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಜಿಲ್ಲೆಗೆ ವಾರಾಂತ್ಯದಲ್ಲಿ ಪ್ರವಾಸಿಗರು ಲಗ್ಗೆ ಇಡುವುದು ಸಾಮಾನ್ಯ. ಆದರೆ ಇದೀಗ ವಾರದ ಇತರ ದಿನಗಳಲ್ಲೂ ಪ್ರವಾಸಿಗರು ಆಗಮಿಸುತ್ತಿದ್ದು, ನಗರದ ರಾಜಾಸೀಟ್ ವೀಕ್ಷಣೆಗಂತೂ ನೂಕುನುಗ್ಗಲು ನಡೆಯುತ್ತಿದೆ.

ಪ್ರವಾಸೋದ್ಯಮ ಕ್ಷೇತ್ರದ ಪ್ರಕಾರ ದೇಶದ ವಿವಿಧ ರಾಜ್ಯಗಳ ಅನೇಕ ಪ್ರವಾಸಿಗರು ಈ ಬಾರಿ ಕೊಡಗಿನತ್ತ ಮುಖ ಮಾಡಿರುವುದಾಗಿ ಹೇಳಲಾಗಿದ್ದು, ಕೊಡಗಿನ ಬಹುತೇಕ ಹೋಂಸ್ಟೇ ಹಾಗೂ ರೆಸಾರ್ಟ್‌ಗಳು ವಾರದ ದಿನಗಳಲ್ಲೂ ಭರ್ತಿಯಾಗುತ್ತಿವೆ.

ಕಾಸರಗೋಡು ಜಿಲ್ಲೆಯಲ್ಲಿ ಭಾರೀ ಮಳೆ ಸಾಧ್ಯತೆ

ಇಂದು ಶಿಕ್ಷಣ ಸಂಸ್ಥೆಗಳಿಗೆ ರಜೆ

ಕಾಸರಗೋಡು: ಜಿಲ್ಲೆಯಲ್ಲಿ ಜು.1ರಂದು ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮದ ಅಂಗವಾಗಿ ಜು.1ರಂದು ಜಿಲ್ಲೆಯ ವೃತ್ತಿಪರ ಕಾಲೇಜುಗಳು ಸೇರಿದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ರಜೆ ಘೋಷಿಸಿದ್ದಾರೆ.

ಕಾಲೇಜುಗಳು, ವೃತ್ತಿಪರ ಕಾಲೇಜುಗಳು, ಶಾಲೆಗಳು, ಅಂಗನವಾಡಿಗಳು, ಬೋಧನಾ ಕೇಂದ್ರಗಳು, ಐಸಿಎಸ್‌ಇ ಮತ್ತು ಸಿಬಿಎಸ್‌ಇ ಶಾಲೆಗಳು, ಕೇಂದ್ರೀಯ ವಿದ್ಯಾಲಯಗಳು ಮತ್ತು ಮದರಸಾಗಳು ಸೇರಿದಂತೆ ಧಾರ್ಮಿಕ ಶಿಕ್ಷಣ ಸಂಸ್ಥೆಗಳು ಸಹಿತ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ರಜೆ ಅನ್ವಯಿಸುತ್ತದೆ. ವಸತಿ ಶಾಲೆಗಳಿಗೆ ರಜೆ ಅನ್ವಯಿಸುವುದಿಲ್ಲ. ಇದೇ ವೇಳೆ ಪೂರ್ವ ನಿಗದಿಯಾಗಿದ್ದ ವಿಶ್ವವಿದ್ಯಾಲಯ/ ಸಾರ್ವಜನಿಕ ಪರೀಕ್ಷೆಗಳು ಮತ್ತು ಸಂದರ್ಶನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜಿಲ್ಲೆಯಲ್ಲಿ ಧಾರಾಕಾರ ಮಳೆ

ಕಾಸರಗೋಡು ಜಿಲ್ಲೆಯಲ್ಲಿ ಮಂಗಳವಾರ ಧಾರಾಕಾರ ಮಳೆ ಸುರಿದಿದ್ದು, ಕೆಲವೆಡೆಗಳಲ್ಲಿ ಸಣ್ಣಪುಟ್ಟ ಹಾನಿ ಸಂಭವಿಸಿದ ಬಗ್ಗೆ ವರದಿಯಾಗಿದೆ. ವೆಳ್ಳರಿಕುಂಡು ಮತ್ತು ಹೊಸದುರ್ಗ ತಾಲೂಕುಗಳಲ್ಲಿ ಮಳೆಯ ಪ್ರಮಾಣ ಅಧಿಕವಾಗಿತ್ತು. ಕಾಸರಗೋಡು ಹಾಗೂ ಮಂಜೇಶ್ವರ ತಾಲೂಕುಗಳಲ್ಲಿ ಬೆಳಗ್ಗೆಯಿಂದಲೇ ವಿಪರೀತ ಮಳೆಯಾಗಿದ್ದು, ರಾತ್ರಿ ತನಕವೂ ಸುರಿದಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಹೆದ್ದಾರಿ, ಗ್ರಾಮೀಣ ರಸ್ತೆಗಳು ಸೇರಿದಂತೆ ವಿವಿಧ ರಸ್ತೆಗಳಲ್ಲಿ ಮಳೆನೀರು ಹರಿದು ಸಾರಿಗೆ ಸಂಚಾರಕ್ಕೆ ಸಮಸ್ಯೆ ಸೃಷ್ಟಿಯಾಯಿತು.

ನೇತ್ರಾವತಿ ಸಭಾಂಗಣದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬ್ಯಾಂಕುಗಳ ಪ್ರಗತಿ ಪರಿಶೀಲನಾ ಸಭೆ | ಅಧಿಕಾರಿಗಳಿಗೆ ಕರ್ಬಾರಿ ಸೂಚನೆ

ಗ್ರಾಹಕರಿಗೆ ಮಾಹಿತಿ ನೀಡಿ, ಅರ್ಜಿ ಬಾಕಿ ಉಳಿಸಿ ಕಾಯಿಸಬೇಡಿ

ಮಂಗಳೂರು: ಸರಕಾರದ ವಿವಿಧ ಯೋಜನೆಗಳಿಗೆ ಸಂಬಂಧಿಸಿ ಹಲವು ಬ್ಯಾಂಕ್‌ಗಳಲ್ಲಿ ಅರ್ಜಿಗಳು ಬಾಕಿ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ ಕರ್ಬಾರಿ, ಯಾವುದೇ ಅರ್ಜಿಗಳನ್ನು ಬಾಕಿ ಇರಿಸಬಾರದು, ಸಲ್ಲಿಕೆಯಾದ ಅರ್ಜಿಗಳನ್ನು ಸ್ವೀಕರಿಸುವುದು ಅಥವಾ ತಿರಸ್ಕಾರ ಮಾಡಬೇಕು. ಬಾಕಿ ಇಟ್ಟು ಗ್ರಾಹಕರನ್ನು ಕಾಯಿಸಬೇಡಿ, ಗ್ರಾಹಕರಿಗೆ ಸಮರ್ಪಕ ಮಾಹಿತಿ ನೀಡಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ನಗರದ ಜಿಲ್ಲಾ ಪಂಚಾಯತ್ ನೇತ್ರಾವತಿ ಸಭಾಂಗಣದಲ್ಲಿ ಮಂಗಳವಾರ ನಡೆದ ದ.ಕ. ಜಿಲ್ಲಾ ಬ್ಯಾಂಕುಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಬ್ಯಾಂಕುಗಳು ತಮಗೆ ನೀಡಿದ ಪ್ರಗತಿಯ



ಗುರಿಗಳನ್ನು ಸಾಧಿಸುವ ಜೊತೆಗೆ ಗ್ರಾಮೀಣ ಭಾಗದ ಶಾಖೆಗಳಲ್ಲಿ ಗ್ರಾಹಕರಿಗೆ ಉತ್ತಮ ರೀತಿಯಲ್ಲಿ ಸೇವೆ ನೀಡಬೇಕು ಎಂದು ಅವರು ಸೂಚಿಸಿದರು.

ಬೆಂಗಳೂರು ಆರ್‌ಬಿಐ ಎಜಿಎಂ ಅರುಣ್ ಕುಮಾರ್ ಮಾತನಾಡಿ, ಕೆಲವು ತಿಂಗಳ ಹಿಂದೆ ಜಿಲ್ಲೆಯ ಗ್ರಾಮೀಣ ಭಾಗದ ಖಾಸಗಿ ಬ್ಯಾಂಕ್ ಶಾಖೆಗೆ ಭೇಟಿ ನೀಡಿದ ವೇಳೆ ಅಲ್ಲಿ ಬ್ಯಾಂಕ್‌ನಲ್ಲಿ ಕಾರ್ಯಚಟುವಟಿಕೆಯ ಬಗ್ಗೆ ತೃಪ್ತಿಕರವಾಗಿರಲಿಲ್ಲ. ಸಾಲ ವಿತರಣೆ ಬಗ್ಗೆ ಪರಿಶೀಲನೆ ವೇಳೆ ಆ ಶಾಖೆಯಲ್ಲಿ ಯಾವುದೇ ಸಾಲ ವಿತರಣೆ ಆಗದೇ ಇರುವುದು ಕಂಡುಬಂದಿದೆ ಎಂದು ಪ್ರಸ್ತಾಪಿಸಿದರು. ಈ ಬಗ್ಗೆ ಕ್ರಮ ವಹಿಸುವಂತೆ ಸಿಇಒ ಸೂಚಿಸಿದರು.

ಅಂಬೇಡ್ಕರ್ ನಿಗಮದ ಸಾಲ ಯೋಜನೆ ಅರ್ಜಿ ಬ್ಯಾಂಕ್‌ಗಳಲ್ಲಿ ಬಾಕಿಯಾಗಿವೆ. ಉದ್ಯೋಗಿನಿ ಯೋಜನೆಯ ಒಟ್ಟು 72 ಗುರಿ ಪೈಕಿ, 22 ಅರ್ಜಿಗಳಿಗೆ ಸಾಲ ನೀಡಿದ್ದು, 10 ತಿರಸ್ಕರಿಸಿ, 19 ಅರ್ಜಿ ಬ್ಯಾಂಕಿನಲ್ಲಿ ಬಾಕಿಯಾಗಿವೆ. ಪಿಎಂ ವಿಶ್ವಕರ್ಮ ಯೋಜನೆಗೆ ಒಟ್ಟು 5292 ಅರ್ಜಿ ಸಲ್ಲಿಕೆಯಾಗಿದ್ದು, 3692 ಸ್ವೀಕೃತವಾಗಿವೆ. 1450 ತಿರಸ್ಕೃತಗೊಂಡಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

2026ರ ಮಾ.31ರಂದು ಜಿಲ್ಲೆಯ 673 ಬ್ಯಾಂಕ್ ಶಾಖೆಗಳು ಒಟ್ಟು 1,45,470.30 ಕೋಟಿ ರೂ. ವ್ಯವಹಾರ ಮಾಡುವ ಮೂಲಕ ಶೇ.9.29 ಪ್ರಗತಿ ಸಾಧಿಸಿವೆ. 85873.50 ಕೋಟಿ ರೂ. ಠೇವಣಿ ಸಂಗ್ರಹಿಸಿ, ಶೇ.12.48ರಷ್ಟು ಪ್ರಗತಿ ಸಾಧಿಸಿವೆ. 59,596.80 ಕೋಟಿ ರೂ. ಸಾಲ ನೀಡಿ, ಶೇ.7.19 ಬೆಳವಣಿಗೆ ಕಂಡಿವೆ ಎಂದು ಅಧಿಕಾರಿಗಳು ತಿಳಿಸಿದರು.

ಮುದ್ರಾ ಯೋಜನೆಯಡಿ 820.91 ಕೋಟಿ ರೂ. ವಿತರಿಸಲಾಗಿದೆ. ಪಿಎಂಜೆಡಿವೈ ಯೋಜನೆಯಡಿ 37428 ಉಳಿತಾಯ ಬ್ಯಾಂಕ್ ಖಾತೆ ತೆರೆಯಲಾಗಿದೆ. ಪಿಎಂಜೆಜೆಬಿವೈ ಯೋಜನೆಯಡಿ 57074 ಖಾತೆ ಮತ್ತು ಪಿಎಂಎಸ್‌ಬಿವೈ ಯೋಜನೆಯಡಿ 1,27,830 ಖಾತೆ ನೋಂದಾಯಿಸಲಾಗಿದೆ. ಎಪಿವೈ ಯೋಜನೆಯಡಿ 34509 ಖಾತೆ ತೆರೆಯಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಕೆನರಾ ಬ್ಯಾಂಕ್ ಡಿಜಿಎಂ ವೆಂಕಟ ವರಪ್ರಸಾದ್, ಭಾರತೀಯ ರಿಸರ್ವ್ ಬ್ಯಾಂಕಿನ ಎಜಿಎಂ ಅರುಣ್ ಕುಮಾರ್ ಪಿ., ನಬಾರ್ಡ್ ಅಧಿಕಾರಿ ಸಂಗೀತಾ ಕರ್ತಾ ಪೂರಕ ಮಾಹಿತಿ ನೀಡಿದರು. ಲೀಡ್ ಬ್ಯಾಂಕ್ ಮ್ಯಾನೇಜರ್ ಗೀತಾ ಯಶೋಧರ್ ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ವಿಶೇಷ ಪುರವಣಿ

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು



ಜುಲೈ 1ರಂದು ಭಾರತದಲ್ಲಿ ವೈದ್ಯರ ದಿನ ಆಚರಿಸಲಾಗುತ್ತದೆ. ನಮ್ಮೆಲ್ಲರ ಆರೋಗ್ಯಕ್ಕಾಗಿ ತಮ್ಮ ಬದುಕನ್ನು ಶ್ರೀಗಂಧದ ಕೊರಡಿನಂತೆ ಸವೆಸಿಕೊಂಡು ಮನುಕುಲದ ಏಳ್ಗೆಗೆ ಬದುಕನ್ನು ಸಮರ್ಪಿಸಿಕೊಂಡಿರುವ ವೈದ್ಯರನ್ನು ಅಭಿನಂದಿಸುವ ಕೃತಜ್ಞತೆ ಸೂಚಿಸುವ ದಿನ. ನಮ್ಮ ದೇಹದ ಆರೋಗ್ಯದಲ್ಲಿ ವೈಪರೀತ್ಯ ಬಂದಾಗ ಜೀವನ್ಮರಣದ ನಡುವೆ ಬದುಕಲು ಹೆಣಗಾಡುತ್ತಿರುವಾಗ ನೋವು ಶಮನಗೊಳಿಸಿ, ಧೈರ್ಯ ತುಂಬಿ, ಆತ್ಮವಿಶ್ವಾಸ ತುಂಬಿ ಬಾಳಿಗೆ ಬೆಳಕು ನೀಡಿ ಹೊಸ ಜೀವನಕ್ಕೆ ರಹದಾರಿ ಮಾಡಿ ಕೊಟ್ಟ ನಮ್ಮ ನೆಚ್ಚಿನ ವೈದ್ಯರನ್ನು ಸ್ಮರಿಸುವ ನೆನಪಿಸಿಕೊಳ್ಳುವ ಮತ್ತು ಆಧರಿಸುವ ಸ್ಮರಣೀಯವಾದ ದಿನವಿದು.



ವೈದ್ಯೋ ನಾರಾಯಣೋ ಹರಿಃ

ವೈದ್ಯರು -ರೋಗಿಗಳ ಸಂಬಂಧ ಹಳಸದಿರಲಿ

ಶರೀರೇ ಜರ್ಝರಿ ಭೂತೆ, ವ್ಯಾಧಿಗ್ರಸ್ಥ ಕಳೇವರೇ, ಔಷಧಂ ಜಾಹ್ನವೀ ತೋಯಂ, ವೈದ್ಯೋ ನಾರಾಯಣೋ ಹರಿಃ

ಶರೀರಕ್ಕೆ ಮುಪ್ಪು ಆವರಿಸಿಕೊಂಡು, ಜರ್ಝರಿತವಾಗಿ, ಜೀವಚ್ಛವವಾಗಿರುವಾಗ ಯಾವುದೇ ಔಷಧವಾಗಲಿ, ಯಾವುದೇ ವೈದ್ಯರಾಗಲಿ ಸಹಾಯಕ್ಕೆ ಬರುವುದಿಲ್ಲ, ಆಗ ಗಂಗಾಜಲವೇ ಔಷಧ, ಹರಿನಾರಾಯಣನೇ ವೈದ್ಯ ಎಂಬ ಪೂರ್ಣಅರ್ಥದ ಶ್ಲೋಕದ ಕೊನೆಯ ಭಾಗವಾದ 'ವೈದ್ಯೋನಾರಾಯಣೋ ಹರಿ' ಎಂಬುದನ್ನು ತೆಗೆದುಕೊಂಡು, ವೈದ್ಯರೆಂದರೆ ದೇವರು ಎಂಬುದನ್ನು ಮಾತ್ರ ಅರ್ಥಮಾಡಿಕೊಂಡು, ವೈದ್ಯರೆಂದರೆ ದೇವರ ಹಾಗೇ ಇರಬೇಕು, ಹಾಗೇ ವರ್ತಿಸಬೇಕು ಎಂಬ ಸಾಮಾಜಿಕ ಭಾವನೆ ವೈದ್ಯ ಸಮುದಾಯದತ್ತ ಬೆಳೆದು ಬಂದಿದೆ. ಇದು ವೈದ್ಯಕೀಯ ವೃತ್ತಿಯ ಬಗೆಗಿರುವ ಉತ್ತಮ ಅಭಿಪ್ರಾಯ, ನೈಜ ಪ್ರೀತಿ ಹಾಗೂ ಕಳಕಳಿ ಎಂಬುದರಲ್ಲಿ ಎರಡು ಮಾತಿಲ್ಲ.



ಡಾ. ಎಂ ಅಣ್ಣಯ್ಯ ಕುಲಾಲ್


ರೋಗಿಗಳ ಆರೈಕೆ, ನೋವು- ನಲಿವಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವ, ಅವರು ಚೇತರಿಸಿಕೊಂಡಾಗ ಅವರ ಕಣ್ಣಲ್ಲಿ ಮೂಡುವ ಧನ್ಯತಾ ಭಾವನೆಯಿಂದಲೇ ಜೀವನ ಸಾರ್ಥಕವಾಯ್ತು ಎಂದು ತಿಳಿಯುತ್ತಾ ಅವರು ಕೊಟ್ಟದ್ದನ್ನು ಪ್ರೀತಿಯಿಂದ ಸ್ವೀಕರಿಸುವ ವೈದ್ಯರುಗಳು ಹಿಂದೆಯೂ ಇದ್ದರು, ಈಗಲೂ ಇದ್ದಾರೆ. ಹಾಗಂತ ಎಲ್ಲಾ ವೈದ್ಯರು ಹರಿನಾರಾಯಣನಾಗಲು ಸಾಧ್ಯವಿಲ್ಲ, ಕಾಲ, ಪರಿಸರ, ಬೆಳವಣಿಗೆ, ತರಬೇತಿ ಹಾಗೂ ವೆಚ್ಚಗಳು ಏರುಪೇರಾದಂತೆ, ವೈದ್ಯರುಗಳು ಮಾನವ ಸಹಜವಾದ ಕೋಪ, ತಾಪ, ಆಸೆ, ಆಮಿಷ, ಒತ್ತಡಗಳಿಗೆ ಒಳಗಾಗುವುದನ್ನು ತಪ್ಪು ಎಂದು ವಿಶ್ಲೇಷಿಸಲು ಸಾಧ್ಯವಿಲ್ಲ, ಏಕೆಂದರೆ ವೈದ್ಯರೂ ಸಹಾ



ನಮ್ಮ ನಿಮ್ಮಂತೆ ಮೊದಲು ಮನುಷ್ಯ .

ಹಿಂದೆ ವೈದ್ಯರುಗಳಿಗೆ ರಾಜಾಶ್ರಯವಿತ್ತು, ಅಂದಿನ ವೈದ್ಯರ ಬೇಕು ಬೇಡಗಳನ್ನು ರಾಜರೇ ಭರಿಸುತ್ತಿದ್ದರು, ಹಾಗಾಗಿ ಶುಶೂಷೆ ನೀಡುವುದೇ ಅವರ ಕರ್ತವ್ಯ. ಪ್ರಜೆಗಳ ಕಾಯಿಲೆಯನ್ನು ಹಣ ತೆಗೆದುಕೊಳ್ಳದೇ, ನಿವಾರಿಸುವುದು ವೈದ್ಯರ ಕರ್ತವ್ಯವಾಗಿತ್ತು. ಅವರಿಗೆ ಎಲ್ಲಾ ಸೌಕರ್ಯ ರಾಜರ ಆಸ್ಥಾನದಿಂದಲೇ ಸಿಗುತ್ತಿತ್ತು. ಆಗ ವೈದ್ಯರು ವಸ್ತುಶಃ ದೇವರಂತಿದ್ದರು. ಕ್ರಮೇಣ ರಾಜರ ಕಾಲ ಹೋಗಿ ಸರಕಾರಿ ವೈದ್ಯರ ಕಾಲ ಬಂತು. ಅವರು ಸರಕಾರದಿಂದ ಎಲ್ಲಾ ಸವಲತ್ತನ್ನು ಪಡೆಯುತ್ತಾರೆ, ಹಾಗಾಗಿ ಸೇವೆಯನ್ನು ಜನರಿಗೆ ಉಚಿತವಾಗಿ ನೀಡುತ್ತಾರೆ. ಈ ಮೇಲಿನ ಎರಡೂ ಕಾಲಘಟ್ಟದಲ್ಲಿ ವೈದ್ಯರು ಹಾಗೂ ರೋಗಿಗಳ ಸಂಬಂಧ ಹಳಸಿರಲಿಲ್ಲ, ಏಕೆಂದರೆ ರೋಗಿಗಳು ಹಣ ಖರ್ಚು ಮಾಡದೆ ಗುಣಮುಖರಾಗುತ್ತಿದ್ದರು. ರಾಜರು ಹಾಗೂ ಸರಕಾರಗಳು ಮರ್ಯಾದೆಯಿಂದ ವೈದ್ಯರುಗಳ ಬೇಕುಬೇಡಗಳನ್ನು ಪೂರೈಸುತ್ತಿದ್ದರು. ಹಾಗಾಗಿ ಎಲ್ಲಿಯೂ ಯಾರೂ ವೈದ್ಯರುಗಳನ್ನು ದೂರುವ, ದಾಳಿ ಮಾಡುವ, ತಪ್ಪ ಗ್ರಹಿಕೆಯಿಂದ ನೋಡುವ, ಹಲ್ಲೆ ನಡೆಸುವಂತಹ ಕೆಳಮಟ್ಟಕ್ಕೆ ಹೋಗಿರಲಿಲ್ಲ.

ಆದರೆ ಜನಸಂಖ್ಯೆ ಹೆಚ್ಚಿದಂತೆ, ರೋಗಿಗಳ ಸಂಖ್ಯೆ ಹೆಚ್ಚಾದಂತೆ ಬೆರಳೆಣಿಕೆಯಷ್ಟು ಸರಕಾರಿ ವೈದ್ಯರುಗಳಿಂದ ನಿಭಾಯಿಸಲು ಕಷ್ಟವಾಯ್ತು. ಖಾಸಗಿ ಆಸ್ಪತ್ರೆಗಳು, ಖಾಸಗಿ ವೈದ್ಯರುಗಳು, ಖಾಸಗಿ ವೈದ್ಯಕೀಯ ಕಾಲೇಜುಗಳು ಬಂದವು. ಹಣ ಕೊಟ್ಟಾಗ ಉತ್ತಮ ರೀತಿಯ ವೈದ್ಯಕೀಯ ಸೇವೆ ದೊರಕಿದಾಗ ಜನರು ಖಾಸಗಿ ವೈದ್ಯರತ್ತ ಮುಗಿಬಿದ್ದರು.



ಮೊದಲು ಮೊದಲು ಸೀಮಿತ ಸಂಖ್ಯೆಯ ರೋಗಿಗಳನ್ನು ವೈದ್ಯಕೀಯ ರೀತಿನೀತಿಯ ಇತಿಮಿತಿಯಲ್ಲೇ, ಒಂದಿಷ್ಟೂ ಲೋಪವಾಗದಂತೆ ಉಪಚರಿಸುತ್ತಿದ್ದ ವೈದ್ಯರು ಬಳಿಕ ಒತ್ತಡ ಎದುರಿಸಲಾರಂಭಿಸಿದರು. ಒತ್ತಡವನ್ನು ನಿಭಾಯಿಸಲು, ಸ್ವಲ್ಪವಾದರೂ ಬಿಡುವು ಮಾಡಿಕೊಂಡು ಕುಟುಂಬದತ್ತ ಗಮನ ಹರಿಸಲು ವೈದ್ಯರು ಫೀಸು ಜಾಸ್ತಿ ಮಾಡಿ, ರೋಗಿಗಳ ಸಂಖ್ಯೆ ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸಿದರೂ ಫಲ ಕಾಣಲಿಲ್ಲ, ಹೀಗೆ ಒತ್ತಡಕ್ಕೆ, ವಿಪರೀತ ಆಯಾಸಕ್ಕೆ ಕೌಟುಂಬಿಕ ಜೀವನವನ್ನು ನಿಭಾಯಿಸುವಷ್ಟು ಸಮಯವಿಲ್ಲದೆ, ಕೆಲಸ ಮಾಡುವ ವೈದ್ಯರುಗಳಿಂದ ಮಾನವ ಸಹಜವಾಗಿ ತಪ್ಪುಗಳು, ಕಠಿಣ ಮಾತುಗಳು ಒಮ್ಮೊಮ್ಮೆ ||

ಆರೋಗ್ಯಕರ ಜೀವನಕ್ಕೆ ಯೋಗವಿದ್ಯಾ ಚಿಕಿತ್ಸೆ

ಯೋಗಾಭ್ಯಾಸವು ಒಂದು ನಿರಂತರ ಪ್ರಕ್ರಿಯೆ. ಪ್ರತಿಯೊಬ್ಬರ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಉನ್ನತಿಗೆ ಯೋಗವು ಒಂದು ಮಹತ್ವದ ಸೋಪಾನವಾಗಿದೆ. ದೈಹಿಕ ಮತ್ತು ಮಾನಸಿಕ ರೋಗಗಳು ಬರದಂತೆ ತಡೆಯಲು ಹಾಗೂ ಬಂದಿರುವ ರೋಗಗಳನ್ನು ನಿಯಂತ್ರಿಸಿ ಗುಣಪಡಿಸಲು ನಿತ್ಯ ಯೋಗಾಭ್ಯಾಸವು ಉತ್ತಮ ಮಾರ್ಗವಾಗಿದೆ.


"ಯೋಗದಿಂದ ರೋಗದೂರ" ಎಂಬ ನುಡಿಯಂತೆ, ನಿಯಮಿತವಾಗಿ ಯೋಗಾಭ್ಯಾಸ ಮಾಡುವವರಲ್ಲಿ ಆರೋಗ್ಯ ಉತ್ತಮವಾಗಿರುತ್ತದೆ. ಹಾಗಾದರೆ ರೋಗ ಎಂದರೇನು?

■ ಯೋಗ ಎಂದರೇನು ? ಎಂಬುದನ್ನು ತಿಳಿಯೋಣ.

ಒಬ್ಬ ವ್ಯಕ್ತಿ ಸಂಪೂರ್ಣ ಆರೋಗ್ಯ ವಂತನಾಗಿರಬೇಕಾದರೆ ದೇಹ, ಮನಸ್ಸು ಮತ್ತು ಆತ್ಮ ಇವುಗಳ ನಡುವೆ ಸಮತೋಲನ ಹಾಗೂ ಸಾಮರಸ್ಯ ಇರಬೇಕು. ಈ ಮೂರೂ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸಿದಾಗ ಅದುವೇ ನಿಜವಾದ ಆರೋಗ್ಯ ಮತ್ತು ಸುಖದ ಸ್ಥಿತಿ. ದೇಹದೊಳಗಿನ ಚಯಾಪಚಯ ಕ್ರಿಯೆಗಳು ಹಾಗೂ ಇತರೆ ದೈಹಿಕ ಕಾರ್ಯಗಳು ಸುಸೂತ್ರವಾಗಿ ನಡೆಯುವಾಗ ದುಃಖರಹಿತ ಸ್ಥಿತಿ ಉಂಟಾಗುತ್ತದೆ. ಇದುವೇ ನಿಜವಾದ ಆರೋಗ್ಯ.

■ ಹಾಗಾದರೆ ಯೋಗ ಎಂದರೇನು?

ಯೋಗವೆಂದರೆ ದೇಹ, ಮನಸ್ಸು ಹಾಗೂ ಆತ್ಮದೊಳಗೆ ಯಾವುದೇ ರೀತಿಯ ಅಶಾಂತಿ



ಅಥವಾ ಸಂಘರ್ಷಗಳಿಲ್ಲದ, ಶಾಂತ, ಸಮತೋಲನಯುತ ಮತ್ತು ತೃಪ್ತಿದಾಯಕ ಸ್ಥಿತಿ. ಮಹರ್ಷಿ ಪತಂಜಲಿಯವರು ಇದನ್ನು "ಯೋಗಃ ಚಿತ್ತವೃತ್ತಿ ನಿರೋಧಃ" ಎಂದು ವ್ಯಾಖ್ಯಾನಿಸಿದ್ದಾರೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು "ಸುಖದುಃಖೇ ಸಮೇ ಭೂತ್ವಾ ಸಮತ್ವಂ ಯೋಗ ಉಚ್ಯತೇ" ಎಂದು ಹೇಳಿದ್ದಾರೆ.

ಇಂದಿನ ಜೀವನಶೈಲಿಯಿಂದ ಮಾನಸಿಕ ಒತ್ತಡ, ಮಧುಮೇಹ, ರಕ್ತದೊತ್ತಡ, ಬೆನ್ನು ಮತ್ತು ಕುತ್ತಿಗೆ ನೋವು, ಥೈರಾಯ್ಡ್ ಸಮಸ್ಯೆಗಳು, ನಿದ್ರಾಹೀನತೆ, ಮುಟ್ಟಿನ ತೊಂದರೆಗಳು, ಪಿ.ಸಿ.ಒ.ಡಿ., ಬಂಜೆತನ, ಸಂಧಿವಾತ, ಗಂಟುನೋವು, ಅಜೀರ್ಣ, ಎಸಿಡಿಟಿ,ಅಸ್ತಮಾ , ಚಿರಕಾಲೀನ ಶೀತ , ದೃಷ್ಟಿದೋಷ, ಐ.ಬಿ.ಎಸ್. ಮುಂತಾದ ಅನೇಕ ಸಮಸ್ಯೆಗಳು ಹೆಚ್ಚಾಗುತ್ತಿವೆ. ಇಂತಹ ರೋಗಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಯೋಗವು ಪರಿಣಾಮಕಾರಿ ಸಾಧನವಾಗಿದೆ.

ಯೋಗದಲ್ಲಿ ವಿವರಿಸಲಾದ ಯೋಗಾಸನ, ಪ್ರಾಣಾಯಾಮ, ಧ್ಯಾನ, ಯೋಗಕ್ರಿಯೆಗಳು, ಬಂಧಗಳು ಹಾಗೂ ಮುದ್ರೆಗಳು ಇವುಗಳನ್ನು ಪರಿಣತ ಗುರುಗಳ ಮಾರ್ಗದರ್ಶನದಲ್ಲಿ ಕಲಿತು ನಿಯಮಿತವಾಗಿ ಅಭ್ಯಾಸ ಮಾಡಿದರೆ ದೈಹಿಕ ಮತ್ತು ಮಾನಸಿಕ ಆರೋಗ್ಯ ಉತ್ತಮಗೊಳ್ಳುತ್ತದೆ. ಅನೇಕ ರೋಗಗಳ ತೀವ್ರತೆಯನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ.



ಡಾ. ಕೆ. ಗಣೇಶ ಭಟ್
ಯೋಗ ಮತ್ತು ಆಯುರ್ವೇದ ಚಿಕಿತ್ಸಾ ತಜ್ಞರು
ಮಂಗಳೂರು

ಈ ರೀತಿಯ ಆರೋಗ್ಯ ಸುಧಾರಣೆಯ ವಿಧಾನವನ್ನೇ ಯೋಗಚಿಕಿತ್ಸೆ ಎಂದು ಕರೆಯಲಾಗುತ್ತದೆ. ಇದು ಔಷಧರಹಿತ, ನೈಸರ್ಗಿಕ ಹಾಗೂ ಸಮಗ್ರ ಚಿಕಿತ್ಸಾ ವಿಧಾನವಾಗಿದೆ. ಆರೋಗ್ಯಕರ ಜೀವನಶೈಲಿಯೊಂದಿಗೆ ಅಂದರೆ ಕ್ರಮವರಿತ ಯೋಗ್ಯ ಸಾತ್ವಿಕ ಆಹಾರ ಕ್ರಮ ,ಸಮಯಕ್ಕೆ ಸರಿಯಾಗಿ ನಿದ್ರೆಗೆ ಹೋಗಿ ಬೆಳಗ್ಗೆ ಬೇಗನೆ ಸೂರ್ಯೋದಯಕ್ಕೆ ಮೊದಲೇ ಏಳುತ್ತಾ ಆಯುರ್ವೇದದಲ್ಲಿ ಹೇಳಿದ ಸ್ವಸ್ಥ ವೃತ್ತವನ್ನು ಪಾಲನೆ ಮಾಡುತ್ತಾ ಯೋಗವನ್ನು ಅಳವಡಿಸಿಕೊಂಡರೆ ಉತ್ತಮವಾದ ಆರೋಗ್ಯ, ಮಾನಸಿಕ ಶಾಂತಿ ಹಾಗೂ ಜೀವನದ ಗುಣಮಟ್ಟವನ್ನು ಪಡೆಯಬಹುದು. ಶಾಂತಿ ಸಾಮರಸ್ಯದಿಂದ ಬದುಕಿ ಬಾಳಬಹುದು.

ವೈದ್ಯ ದಿನಾಚರಣೆಯು ಇದಕ್ಕೆ ಮುನ್ನುಡಿಯಾಗಲಿ.

ಸರ್ವೇಜನಾಃ ಸುಖಿನೋ ಭವಂತು.

ವೈದ್ಯೋ ನಾರಾಯಣೋ ಹರಿಃ

ಆರೋಗ್ಯವೇ ಮಹಾಭಾಗ್ಯ



ಸಂತೋಷಕ್ಕಿಂತ ಮಿಗಿಲಾದ ಮದ್ದು ಬೇರೊಂದಿಲ್ಲ, ಆರೋಗ್ಯಕ್ಕಿಂತ ಮಹಾಭಾಗ್ಯ ಇನ್ನೊಂದಿಲ್ಲ. ನಮ್ಮ ಮುಖದಲ್ಲಿ ಸದಾ ಮೂಡಿಬರುವ ಒಂದು ಸುಂದರ ನಗು ಆರೋಗ್ಯಭಾಗ್ಯದ ಲಕ್ಷಣವಾಗಿರುತ್ತದೆ. ಈ ಸಂತೋಷ ನಮ್ಮ ಮೈಮನಸ್ಸುಗಳನ್ನು ಪುಳಕಿತಗೊಳಿಸುತ್ತದೆ. ಇದುವೇ ನಮ್ಮ ಸುಂದರ ಭವಿಷ್ಯಕ್ಕೆ ನಾಂದಿ ಹಾಡುತ್ತದೆ.

ಇಂತಹ ಸಂತೋಷದ ,ಆತ್ಮವಿಶ್ವಾಸದ ನಗು, ಮಾತುಗಾರಿಕೆ, ಮತ್ತು ಅಹಾರ ಸೇವನೆಗೆ ಬಾಯಿ ಮತ್ತು ಹಲ್ಲಿನ ಆರೋಗ್ಯ ಬಹಳ ಪ್ರಾಮುಖ್ಯವೆನಿಸುತ್ತದೆ. ಬಾಯಿ ಎಂದರೆ ನಮ್ಮ ದೇಹದ ಮಹಾದ್ವಾರ ಇದ್ದ ಹಾಗೆ. ಬಾಯಿ ಸರಿ ಇದ್ದರೆ ಎಲ್ಲಾ ಸರಿಯುತ್ತದೆ ಎನ್ನುವ ನಾಣ್ಣುಡಿಯುಂಟು. ಹೀಗಾಗಿ ಬಾಯಿ ಸರಿ ಇದ್ದರೆ ನಮ್ಮ ದೈಹಿಕ ಸ್ವಾಸ್ಥ್ಯ ಮತ್ತು ಸಾಮಾಜಿಕ ಸ್ವಾಸ್ಥ್ಯ ಉತ್ತಮವಾಗಿರುತ್ತದೆ ಎಂದು ಬಲ್ಲವರು ಹೇಳುತ್ತಾರೆ.



ಡಾ| ರಾಜಾರಾಮ್ ಕೆ. ಬಿ.
ಗಿರಿಜಾ ದಂತ ಚಿಕಿತ್ಸಾಲಯ
ಲಕ್ಷ್ಮೀ ಕಾಂಪ್ಲೆಕ್ಸ್ ಉಪ್ಪಿನಂಗಡಿ

ಬಾಯಿಯಲ್ಲಿರುವ ಹಲ್ಲುಗಳು ಮುಖಕ್ಕೆ ಭೂಷಣವಾಗಿರುತ್ತವೆ. ಮುತ್ತಿನಂಥ ಶುಭ್ರವಾದ ಹಲ್ಲುಗಳು ಸೌಂದರ್ಯ ವೃದ್ಧಿಸುತ್ತವೆ. ಮತ್ತು ಆಹಾರವನ್ನು ಸರಿಯಾಗಿ ಜಗಿಯಲು, ಸ್ಪಷ್ಟ ಮಾತುಗಾರಿಕೆಗೆ ಆರೋಗ್ಯಪೂರ್ಣ ಹಲ್ಲುಗಳು ಬಹಳ ಸಹಕಾರಿಯಾಗುತ್ತವೆ. ಹಲ್ಲಿಲ್ಲದವರ ಮಾತು ಅಸ್ಪಷ್ಟ ಮತ್ತು ವ್ಯಕ್ತಿತ್ವ ಕುಂಠಿತ ವಾಗಿ ,ರೂಪ ವಿರೂಪವಾಗಿ ಒಂದು ರೀತಿಯಲ್ಲಿ ಕೀಳರಿಮೆಗೆ ಒಳಗಾಗುತ್ತಾರೆ. ಆದ್ದರಿಂದ ಬಾಯಿ ಆರೋಗ್ಯವನ್ನು ನಾವು ಸರಿಯಾಗಿ ಕಾಪಾಡಿಕೊಳ್ಳಬೇಕು. ದಿನಕ್ಕೆರಡು ಬಾರಿ ಶುಚಿಯಾಗಿ ಹಲ್ಲುಜ್ಜಿದರೆ ಯಾವುದೇ ರೀತಿಯ ಬಾಯಿ ಖಾಯಿಲೆ ಬರುವ ಪ್ರಮೇಯವೇ ಇಲ್ಲ, Prevention is better than cure ಎಂಬ ಮಾತಿನಂತೆ ರೋಗ ಬಂದ ನಂತರ ಚಡಪಡಿಸುವುದಕ್ಕಿಂತ ಬಾರದ ಹಾಗೆ ಜಾಗೃತೆ ವಹಿಸುವುದು ಅತೀ ಉತ್ತಮ. ತೀರಾ ಮಾರಣಾಂತಿಕ ಖಾಯಿಲೆಯಿಂದ ಬಳಲಿ ಬೆಂಡಾಗಿ ಆಸ್ಪತ್ರೆಯಲ್ಲಿ ಮಲಗಿ ಕೈಕಾಲಿಗೆ ಸೂಜಿ ಚುಚ್ಚಿಸಿಕೊಂಡು ಇಂದೋ ನಾಳೆಯೋ ಈ ಲೋಕ ಬಿಟ್ಟು ಹೋಗುತ್ತೇನೆ ಎನ್ನುವ ಹಂತಕ್ಕೆ ಬಂದಾಗ ಜ್ಞಾನೋದಯ ವಾದರೆ ಸಾಲದು. ಮೊದಲೇ ನಾವು ಜಾಗೃತರಾಗಬೇಕು.

Dentistry is an Art and science ದಂತ ವೈದ್ಯಕೀಯ ಕ್ಷೇತ್ರ ಕಲೆ ಮತ್ತು ವಿಜ್ಞಾನ ಕ್ಷೇತ್ರ ವಾಗಿದೆ. ಹಲ್ಲಿನ ಯಾವುದೇ ರೀತಿಯ ಸಮಸ್ಯೆಗೆ ಈಗಿನ ಆಧುನಿಕ ಚಿಕಿತ್ಸಾವಿಧಾನದಲ್ಲಿ ಪರಿಹಾರವಿದೆ. ಹುಳುಕು ಹಲ್ಲಿನ ಆರಂಭಿಕ ಹಂತದಲ್ಲಿ ಸಿಮೆಂಟ್ ತುಂಬಿಸುವುದು, ಬೆಳ್ಳಿ ತುಂಬಿಸುವುದು ಮಾಡಲಾಗುತ್ತದೆ. ಹುಳುಕು ಜಾಸ್ತಿಯಾಗಿ ಬೇರು ನಾಳಕ್ಕೆ ಹೋದರೆ, Root canal treatment ಹಾಕಲಾಗುತ್ತದೆ. ಹಲ್ಲು ಬಿದ್ದು ಹೋಗಿದ್ದರೆ, ನಮ್ಮ ಸ್ವಾಭಾವಿಕ ಹಲ್ಲುಗಳನ್ನೇ ಹೋಲುವ ಕೃತಕ ಹಲ್ಲುಗಳನ್ನು ಬಾಯಿಗೆ ಪೋಣಿಸಿ ಇಡುವ ವಿಧಾನವಿದೆ. ದವಡೆಯ ಎಲುಬಿಗೆ ಲೋಹದ ಪ್ಲೇಟ್ ಫಿಕ್ಸ್ ಮಾಡಿ ಅದರ ಮೇಲೆ ಹಲ್ಲುಗಳನ್ನು ಇಡುವ ಅತ್ಯಾಧುನಿಕ ಚಿಕಿತ್ಸಾ ವಿಧಾನ (Implantology) ಕೂಡ ಈಗ ಜನಪ್ರಿಯತೆ ಕಂಡಿದೆ. ಹೀಗೇ ರೋಗಿಯ ಆಯ್ಕೆಗೆ ಅನುಗುಣವಾಗಿ ಯಾವುದೇ ಚಿಕಿತ್ಸೆಯನ್ನು ದಂತ ವೈದ್ಯರು ಮಾಡುವಲ್ಲಿ ಪರಿಣತರಾಗಿದ್ದಾರೆ. ಹಿಂದೆ ಒಂದು ಕಾಲವಿತ್ತು, ದಂತವೈದ್ಯರೆಂದರೆ ಹಲ್ಲು ಕೀಳುವ ವೈದ್ಯರು ಎಂದು. ಆದರೆ ಈಗ ಹಾಗಲ್ಲ ದಂತ ವೈದ್ಯರೆಂದರೆ ನಿಮಗೆ ನಿಮ್ಮ ಆರ್ಥಿಕ ಶಕ್ತ್ಯಾನುಸಾರ ನಿಮ್ಮ ಆಯ್ಕೆಯ ಚಿಕಿತ್ಸೆಯನ್ನು ಕೊಟ್ಟು ನಿಮ್ಮ ಮುಖದಲ್ಲಿ ಮಂದಹಾಸ ಮೂಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವ ವೈದ್ಯರು ಎಂದು ಹೇಳಲು ಓರ್ವ ದಂತವೈದ್ಯನಾಗಿ ಹೆಮ್ಮೆಪಡುತ್ತೇನೆ.

ಅಂತಿಮವಾಗಿ ಹೇಳುವುದಾರೆ ಆರೋಗ್ಯವೇ ಭಾಗ್ಯ, ಈ ನಮ್ಮ ಸುಂದರ ದೇಹವೇ ನಮ್ಮ ಸಂಪತ್ತು. ಇದನ್ನು ಕಾಪಾಡಿಕೊಳ್ಳೋಣ. ಆರೋಗ್ಯವನ್ನು ಕಳಕೊಂಡು ಮಿಕ್ಕೆಲ್ಲಾ ಐಶ್ವರ್ಯ, ಆಸ್ತಿ ಪಾಸ್ತಿ ಇದ್ದರೂ ಅದು ಶೂನ್ಯ. ನಾವು ನಮ್ಮ ಆರೋಗ್ಯವನ್ನೂ ಕಾಪಾಡಿಕೊಳ್ಳೋಣ , ನಮ್ಮಲ್ಲಿ ಬರುವ ಎಲ್ಲಾ ರೋಗಿಗಳಿಗೂ ಆರೋಗ್ಯದ ಬಗ್ಗೆ ಒಳ್ಳೆಯ ಮಾಹಿತಿ ಕೊಟ್ಟು ಉತ್ತಮ ಚಿಕಿತ್ಸೆ ನೀಡೋಣ. ಈ ಸಂದರ್ಭದಲ್ಲಿ ನನ್ನ ವೈದ್ಯ ಮಿತ್ರರಿಗೆ ವೈದ್ಯರ ದಿನಾಚರಣೆಯ ಶುಭಾಶಯಗಳು.

ರಾಷ್ಟ್ರೀಯ ವೈದ್ಯರ ದಿನಾಚರಣೆಯ ಶುಭಾಶಯಗಳು

ವೈದ್ಯರು -ರೋಗಿಗಳ ಸಂಬಂಧ ಹಳಸದಿರಲಿ

ಬರುವುದು ಸಹಜ. ರೋಗಿಗಳು ವೈದ್ಯರನ್ನು ವ್ಯಾಪಾರಿ ಕಣ್ಣಿನಿಂದ ಕಾಣತೊಡಗಿದಂತೆ, ವೈದ್ಯಕೀಯ ಅಧ್ಯಯನಕ್ಕೆ ಕೋಟಿಗಟ್ಟಲು ಖರ್ಚು ಮಾಡಿದ ಕೆಲವು ವೈದ್ಯರುಗಳು, ಬ್ಯಾಂಕ್ ಸಾಲ, ಬಡ್ಡಿಯ ನಿಭಾವಣೆಗಾಗಿ ವೃತ್ತಿಯನ್ನು ಅನಿವಾರ್ಯ ವಾಗಿ ವ್ಯಾಪಾರೀಕರಣ ಮಾಡಲೇಬೇಕಾಯ್ತು. ಆದರೆ ಇಂದಿಗೂ ವೈದ್ಯರು ಹಾಗೂ ರೋಗಿಗಳ ಎರಡೂ ವರ್ಗದಲ್ಲಿ ಮೊದಲಿನಂತೆ ಬಾಂಧವ್ಯ ಇಟ್ಟುಕೊಂಡು ಬಂದಿರುವ, ಬರುತ್ತಿರುವವರು ಶೇಕಡಾ 80ಕ್ಕಿಂತ ಅಧಿಕವಿದ್ದಾರೆ.

ಒಂದಿಷ್ಟು ವೈದ್ಯರು ಹಾಗೂ ರೋಗಿಗಳು ಈ ಬಾಂಧವ್ಯವನ್ನು ಮುರಿದುಕೊಂಡು, ಗ್ರಾಹಕರ ಕಾನೂನಿನ ವ್ಯಾಪ್ತಿಯಲ್ಲಿ ಚಿಂತಿಸುತ್ತಾ, ಕೋರ್ಟು ಕಟ್ಟಲೆ, ವ್ಯಾಜ್ಯಗಳ ಮೊರೆ ಹೋದರು. ಇನ್ನು ಕೆಲವೆಡೆ ಆಸ್ಪತ್ರೆಗಳಲ್ಲಿ ಸಾವು ನೋವು ಆದಾಗ ವೈದ್ಯರ ಮೇಲೆ ಹಲ್ಲೆ ನಡೆಸುವ, ಆಸ್ಪತ್ರೆಯ ಉಪಕರಣಗಳನ್ನು ಹಾಳು ಮಾಡುವ, ಬಿಲ್ ಕೊಡದೆ ರೋಗಿಗಳನ್ನು ಹಾಗೂ ಹಣವನ್ನು ಬೆದರಿಕೆಯಿಂದ ತೆಗೆದುಕೊಂಡು ಹೋಗುವ ಘಟನೆಗಳು ಸರ್ವೇ ಸಾಮಾನ್ಯವಾದವು. ಈ ಮಧ್ಯೆ ಈ ರೀತಿಯ ಮಾನಸಿಕ ಒತ್ತಡ, ಬೆದರಿಕೆ, ಹಲ್ಲೆಗಳಿಂದ ವೈದ್ಯರನ್ನು ಪಾರು ಮಾಡಲು ಕೇಂದ್ರ ಸರಕಾರವು ವೈದ್ಯರ ಮೇಲೆ, ಆಸ್ಪತ್ರೆಯ ಮೇಲೆ ದಾಳಿ ಮಾಡುವವರಿಗೆ ಜಾಮೀನು ಇಲ್ಲದ ಮೂರು ವರ್ಷ ಕಾರಾಗೃಹ, 50,000 ದಂಡ ಹಾಗೂ ಆಸ್ಪತ್ರೆಗೆ ಆದ ನಷ್ಟದ ಎರಡರಷ್ಟು ವಸೂಲಿ ಮಾಡುವ ಕಟ್ಟುನಿಟ್ಟಿನ ಕಾನೂನನ್ನು ತಂದಿತು. ಇದು ಹೆಚ್ಚಿನವರಿಗೆ ಅರಿವಿಲ್ಲ, ಕಾನೂನು ಸುವ್ಯವಸ್ಥೆ ಮಾಡುವ ಅಧಿಕಾರಿಗಳಿಗೂ ಹೆಚ್ಚಿನವರಿಗೆ ಇದು ತಿಳಿದಿಲ್ಲ.ಹಾಗಾಗಿ ವೈದ್ಯರು ಹಾಗೂ ರೋಗಿಗಳ ಮಧ್ಯೆ ಸಂಬಂಧವಿಲ್ಲದ 'ಆರೋಗ್ಯ ಭಾಗ್ಯ ಕೊಡುತ್ತೇವೆ' ಎಂದು ಕರೆಸಿಕೊಳ್ಳುವ ಏಜೆಂಟರುಗಳ ಅನವಶ್ಯ ಪ್ರವೇಶವಾಗಿದೆ. ವೈದ್ಯ ರೋಗಿಗಳ ಶ್ರೇಷ್ಠ ಸಂಬಂಧವನ್ನು ಸಂಶಯದ ದೃಷ್ಟಿಯಿಂದ ನೋಡುವಂತಾಗಿದೆ. ಆ ಬಗ್ಗೆ ಜಿಲ್ಲಾಡಳಿತ ವೈದ್ಯಕೀಯ ಸಂಸ್ಥೆಗಳು, ಸಂಘಟನಗಳು, ಕಾನೂನು ಪಾಲಕರು ಜನಜಾಗೃತಿ ಮೂಡಿಸಬೇಕಾಗಿದೆ. ಈ ನೆಲದ ಕಾನೂನನ್ನು ಜನರಿಗೆ ತಿಳಿಹೇಳುವ ಮಹತ್ತರವಾದ ಕೆಲಸ ಮಾಡಬೇಕಾಗಿದೆ. ಈ ನೆಲೆಯಲ್ಲಿ ಭಾರತೀಯ ವೈದ್ಯಕೀಯ ಸಂಘದವರು ನಗರದ ಎಲ್ಲಾ ವೈದ್ಯಕೀಯ ಕಾಲೇಜುಗಳೂ, ಆಸ್ಪತ್ರೆಗಳು, ಖಾಸಗಿ ವೈದ್ಯರುಗಳ ಸಹಯೋಗದೊಂದಿಗೆ ಕಳೆದ 9 ದಶಕಗಳಿಂದ ಜನಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಹೆಜ್ಜೆ. ಅತೀ ಪುರಾತನವಾದ ಶ್ರೇಷ್ಠ ಸಂಬಂಧವಾದ ವೈದ್ಯ ರೋಗಿಗಳ ಸಂಬಂಧ ಹಳಸದಿರಲಿ, ಒಬ್ಬರನ್ನು ಒಬ್ಬರು ಸಂಶಯದಿಂದ ನೋಡುವುದು ನಿಲ್ಲಲಿ, ಎರಡೂ ಕಡೆಯಿಂದ ಗೌರವಿಸುವ, ಪ್ರೀತಿಸುವ, ಸಂರಕ್ಷಿಸುವ ಹಾಗೂ ಈ ನೆಲದ ಕಾನೂನನ್ನು ಗೌರವಿಸುವ ಕಾರ್ಯ ನಡೆಯಲಿ. ಶ್ರೇಷ್ಠ ವೃತ್ತಿಗಳಲ್ಲಿ ಒಂದಾದ ವೈದ್ಯಕೀಯ ವೃತ್ತಿಯನ್ನು ಮೊದಲಿನಷ್ಟೇ ಪ್ರೀತಿಯಿಂದ ನೋಡುವ ಭಾಗ್ಯ ನಮ್ಮ ನಿಮ್ಮದಾಗಲಿ ಎಂಬುದೇ ಭಾರತೀಯ ವೈದ್ಯಕೀಯ ಸಂಘದ ಮೂಲ ಧ್ಯೇಯ. ಒಟ್ಟಾರೆ ಆಧುನಿಕ ವೈದ್ಯ ಪದ್ಧತಿ ಅಂದಿನಿಂದ ಇಂದಿನವರೆಗೆ ಬೆಳೆದು ಬಂದ ಬಗೆ ನೋಡುವಾಗ ವೈದ್ಯಕೀಯ ಶಿಕ್ಷಣ, ವೈದ್ಯಕೀಯ ಸೇವೆ ಹಾಗೂ ವೈದ್ಯರು ಅನಿವಾರ್ಯವಾಗಿ ಸ್ಥಿತ್ಯಂತರ ಕಾಲಘಟ್ಟದಲ್ಲಿ ಬಂದು ನಿಂತಿದ್ದಾರೆ ಅಂತ ಹೇಳಬಹುದು.

ಬಹುಹಿಂದೆ ಅಂದರೆ, ಆಧುನಿಕ ವೈದ್ಯ ಪದ್ಧತಿ ಆರಂಭವಾಗುವ ಮೊದಲು ಹೆಣಗಳನ್ನು ಕೊಯ್ಯುವುದು ನಿಷಿದ್ಧವಾಗಿತ್ತು. ಮಾನವನ ಅಂಗರಚನಾ ಶಾಸ್ತ್ರವನ್ನು



ಕಲಿಯಲು ಮಾನವನ ಹೆಣಗಳನ್ನು ಅಭ್ಯಾಸ ಮಾಡಲು ಹೋಗಿ ಅನೇಕ ವೈದ್ಯರು ಸಿಕ್ಕಿಬಿದ್ದು ಗಲ್ಲಿಗೇರಿಸಲಟ್ಟಿದ್ದಾರೆ. ಈಗಲೂ ಸಹ ಹೊಸ ಹೊಸ ರೋಗಗಳು ಬಂದರೆ ಅದಕ್ಕೆ ಸೂಕ್ತ ಚಿಕಿತ್ಸೆ ಕಂಡು ಹಿಡಿಯುವವರೆಗೂ ರೋಗಿ ಮತ್ತು ವೈದ್ಯ ಇಬ್ಬರೂ ಬಲಿದಾನ ಆಗುತ್ತಲೇ ಇದ್ದಾರೆ.

ಇತ್ತೀಚಿನ ಕರೋನ ಮಹಾಮಾರಿ ಚಿಕಿತ್ಸೆ ಯಲ್ಲೂ ರೋಗಿಗಳನ್ನ ಉಳಿಸುವ ತರಾತುರಿಯಲ್ಲಿ ಪ್ರಾಣ ಕಳೆದು ಕೊಂಡ ನೂರಾರು ವೈದ್ಯರು, ನರ್ಸಿಂಗ್ ಸಿಬ್ಬಂದಿಗಳೂ ಇದ್ದಾರೆ. ಆರೋಗ್ಯ ಅಂದ್ರೆ ಬರೀ ಕಾಯಿಲೆ ಇಲ್ಲದೇ ಇರುವವರು ಅಂತ ಅಲ್ಲವೇ ಅಲ್ಲಾ, ಜೊತೆಗೆ ಮಾನಸಿಕ,ದೈಹಿಕ, ಸಾಮಾಜಿಕ, ಆರ್ಥಿಕ,ನಂಬುಗೆಯ ಆಚರಣೆಗಳಗಳಲ್ಲೂ ಸಬಲರಾಗಿದ್ದರೆ ಮಾತ್ರ ಅದು ಸಂಪೂರ್ಣ ಆರೋಗ್ಯ ಅಂತ ವಿಶ್ವ ಆರೋಗ್ಯ ಸಂಸ್ಥೆಹೇಳಿದೆ.

ಜುಲೈ 1 ರಂದೇ ಹುಟ್ಟಿ ಅಂದೇ ಮರಣವನ್ನಪ್ಪಿದ ಡಾ .ಬಿ.ಸಿ. ರೊಯ್ ಬರೀ ವೈದ್ಯರು ಮಾತ್ರವಲ್ಲ, ಬಂಗಾಳದ ಮುಖ್ಯಮಂತ್ರಿ ಆಗಿದ್ದರು. ಜಗತ್ತಿಗೆ ಉತ್ತಮ ನಾಯಕತ್ವದ ಸಂದೇಶ ಕೊಟ್ಟವರು. ಅವರ ನೆನಪಲ್ಲಿ ನಡೆಯುವ ವೈದ್ಯರ ದಿನಾಚರಣೆ ಜುಲೈ ಒಂದಕ್ಕೆ ಮಾತ್ರ ಅಲ್ಲ, ಕಾಯಿಲೆ ಇರುವವರೆಗೆ, ರೋಗಿ ಗುಣಮುಖ ಆಗುವ ವರೆಗೆ ಪ್ರತೀ ಕ್ಷಣ ಹಾಗೂ ಪ್ರತೀ ದಿನಗಳು ವೈದ್ಯರ ದಿನಗಳೇ ಎಂಬುದನ್ನ ಮರೆಯುವಂತಿಲ್ಲ

ವೈದ್ಯರ ದಿನದ ಘೋಷವಾಕ್ಯ

ಭಾರತದಲ್ಲಿ ರಾಷ್ಟ್ರೀಯ ವೈದ್ಯರ ದಿನವನ್ನು ಪ್ರತಿ ವರ್ಷ ಜುಲೈ1 ರಂದು ಆಚರಿಸಲಾಗುತ್ತದೆ. ಈ ದಿನವನ್ನು ಭಾರತದ ಖ್ಯಾತ ವೈದ್ಯರು ಮತ್ತು ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಡಾ. ಬಿಧನ್ ಚಂದ್ರ ರಾಯ್ ಅವರ ಜನ್ಮ ಹಾಗೂ ಪುಣ್ಯತಿಥಿಯ ನೆನಪಿಗಾಗಿ ಆಚರಿಸಲಾಗುತ್ತದೆ. ಈ ವರ್ಷದ ವೈದ್ಯರ ದಿನದ ಘೋಷವಾಕ್ಯ 'Behind the Mask: Who Heals the Healers? (ಮುಖವಾಡದ ಹಿಂದೆ: ಗುಣಪಡಿಸುವವರನ್ನು ಗುಣಪಡಿಸುವವರು ಯಾರು?) ಎಂಬುದಾಗಿದೆ. ಈ ಘೋಷವಾಕ್ಯವು ರೋಗಿಗಳ ರೋಗವನ್ನು ಗುಣಪಡಿಸಲು ಶ್ರಮಿಸುತ್ತಿರುವ, ವೈದ್ಯರ ಮೇಲಿರುವ ಒತ್ತಡ ಮತ್ತು ಅವರ ಒತ್ತಡ ಶಮನ ಮಾಡುವವರು ಯಾರು ?ಎಂಬ ಪ್ರಶ್ನೆಯನ್ನು ಎತ್ತಿ ತೋರಿದೆ.ಈ ಮೂಲಕ ವೈದ್ಯರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡುವ ಮಹತ್ವವನ್ನು ಒತ್ತಿಹೇಳುತ್ತದೆ. ವೈದ್ಯಕೀಯ ವ್ಯವಸ್ಥೆ ಇಂದು ಕವಲು ಹಾದಿಯಲ್ಲಿ ಸಾಗುತ್ತಿದೆ. ಒಂದೆಡೆ ಮೆಡಿಕಲ್ ಮಾಫಿಯಾ ಕುರಿತಾದ ಆರೋಪಗಳು ವೈದ್ಯಕೀಯ ವ್ಯವಸ್ಥೆಗೆ ಗಂಭೀರ ಧಕ್ಕೆ ಉಂಟು ಮಾಡುತ್ತಿದೆ.ಸರಕಾರ ಎಷ್ಟೇ ನಿಯಮಗಳನ್ನು ಮಾಡಿದರೂ ಅದನ್ನು ಉಲ್ಲಂಘಿಸಿ ಜನರಿಗೆ ನೀಡಬೇಕಾದ ನ್ಯಾಯಯುತ ವೈದ್ಯಕೀಯ ಸೇವೆಗೆ ಅಪಚಾರವೆಸಗುವಂತಹ ವಿದ್ಯಮಾನಗಳು ಜನರ ವಿಶ್ವಾಸದ ಮೇಲೆ ಪರಿಣಾಮ ಬೀರುವಂತಾಗಿದೆ. ಇನ್ನೊಂದೆಡೆ ಪ್ರಾಮಾಣಿಕ ವೈದ್ಯರು ಜನಸೇವೆಯಲ್ಲಿ ಸಮರ್ಪಣಾ ಭಾವದಿಂದ ತೊಡಗಿಕೊಂಡಿದ್ದು, ಇಂತಹವರ ಸೇವೆಗೆ ಸಮಾಜ ಕೃತಜ್ಞವಾಗಿರಬೇಕಾಗಿರುವುದು ಕೂಡ ಅಷ್ಟೇ ಮುಖ್ಯವಾಗಿದೆ.ಈ ನಿಟ್ಟಿನಲ್ಲಿ ನಮ್ಮ ಜೀವ ಉಳಿಸುವ , ಆರೋಗ್ಯ ರಕ್ಷಿಸುವ ವೈದ್ಯರ ಸೇವೆಯನ್ನು ಕೃತಜ್ಞತೆಯಿಂದ ಸಮರ್ಪಿಸುವ ಈ ದಿನವನ್ನು ನಾವು ಅರ್ಥಪೂರ್ಣವಾಗಿ ಆಚರಿಸುವಂತಾಗಬೇಕು.

■ ವೈದ್ಯರ ಯೋಗಕ್ಷೇಮ ಸಮಾಜದ ಕರ್ತವ್ಯ

ಅಸಂಖ್ಯಾತ ವೈದ್ಯಕೀಯ ವೃತ್ತಿಪರರು ಇಂದು ತಮ್ಮ ವೈಯಕ್ತಿಕ ಬದುಕನ್ನು ಲೆಕ್ಕಿಸದೆ ರೋಗಿಗಳ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು,ಅವರು ಅತೀವ ಒತ್ತಡದಲ್ಲಿ ಕೆಲಸ ಮಾಡುವಂತಾಗಿರುವುದು ವಾಸ್ತವ. ವೈದ್ಯರ ದಿನಾಚರಣೆಯು ವೈದ್ಯರ ಸೇವೆ, ತ್ಯಾಗ, ಸಹಾನುಭೂತಿ, ಬದ್ಧತೆಗಳನ್ನು ಗುರುತಿಸಿ ಅರಿತುಕೊಳ್ಳುವ ಜೊತೆಗೆ ಗುಣಮಟ್ಟದ ಆರೋಗ್ಯ ಸೇವೆಯ ಮಹತ್ವವನ್ನು ಗುರುತಿಸುವ ಅವಕಾಶವೂ ಆಗಿದೆ. ನಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ವೈದ್ಯರ ದೈಹಿಕ, ಮಾನಸಿಕ ಯೋಗಕ್ಷೇಮದ ಬಗ್ಗೆ ಕಾಳಜಿ ವಹಿಸಬೇಕಾಗಿರುವುದು ಸಮಾಜದ ಕರ್ತವ್ಯವೂ ಆಗಿದೆ.

ಹೊಸ ದಿಗಂತ 3
ರಾಷ್ಟ್ರ ಜಾಗೃತಿಯ ದೈನಿಕ
ಮಂಗಳೂರು
ಬುಧವಾರ, 01 ಜುಲೈ 2026

ರಾಷ್ಟ್ರೀಯ ವೈದ್ಯರ ದಿನಾಚರಣೆಯ ಶುಭಾಶಯಗಳು

ಆಧುನಿಕ ಕಾಲದಲ್ಲಿ ಮರ್ಮಚಿಕಿತ್ಸೆ: ಆಯುರ್ವೇದದ ಅಮೂಲ್ಯ ಚಿಕಿತ್ಸಾ ಪರಂಪರೆ





ಡಾ. ಜಯಗೋವಿಂದ ಉಕ್ಕಿನಡ್ಕ

ಆಯುರ್ವೇದದಲ್ಲಿ ಮರ್ಮ ಚಿಕಿತ್ಸೆಗೆ ಅತ್ಯಂತ ಉನ್ನತವಾದ ಸ್ಥಾನವಿದೆ. ಸುಶ್ರುತ ಸಂಹಿತೆಯಲ್ಲಿ ಸುಮಾರು ಎರಡುವರೆ ಸಾವಿರ ವರ್ಷಗಳಷ್ಟು ಹಿಂದೆ 107 ಮರ್ಮ ಪಾಯಿಂಟುಗಳನ್ನು ವಿವರಿಸಿದ್ದಾರೆ . ಆದರೆ ಯಾವುದೇ ಆಯುರ್ವೇದ ಗ್ರಂಥಗಳಲ್ಲಿ ಮರ್ಮ ಚಿಕಿತ್ಸೆ ವಿಧಾನದ ಬಗ್ಗೆ ಸವಿವರವಾಗಿ ಏನನ್ನೂ ದಾಖಲೀಕರಣ ಮಾಡಿರುವುದು ಕಾಣುವುದಿಲ್ಲ, ಆದರೆ ಕೇರಳ ಹಾಗೂ ತಮಿಳುನಾಡಿನ ಕೆಲವು ಭಾಗದಲ್ಲಿ ಅಂದಿನ ವೈದ್ಯರು ಈ ಮರ್ಮ ಚಿಕಿತ್ಸೆಯನ್ನು ಪರಂಪರಾಗತವಾಗಿ ಮುಂದುವರಿಸಿಕೊಂಡು ಬಂದು ಅದನ್ನು ಈಗಿನ ವೈದ್ಯರಿಗೂ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಅನೇಕ ರೀತಿಯ ಮರ್ಮ ಚಿಕಿತ್ಸಾ ವಿಧಾನಗಳು ಚಾಲ್ತಿಯಲ್ಲಿದ್ದು, ಪ್ರದೇಶವನ್ನು ಹಾಗೂ ಚಿಕಿತ್ಸೆ ವಿಧಾನವನ್ನು ಅನುಸರಿಸಿಕೊಂಡು ಮರ್ಮ ಚಿಕಿತ್ಸೆ ಒಂದೇ ರೋಗಕ್ಕೆ ವಿವಿಧ ರೀತಿಯಲ್ಲಿ ನೀಡಲ್ಪಡುತ್ತದೆ. ಮರ್ಮ ಅಂತ ಹೇಳಿದ್ರೆ, ''ಮಾರಯತೀತಿ ಮರ್ಮಃ'' ಅಂದ್ರೆ ಯಾವುದೇ ಅಂಗಾಂಗ, ಬಹಳ ಪ್ರಮುಖವಾದ ಅಂಗಾಂಗಗಳು, ಟೆಂಡಾನ್‌ಗಳು, ಲಿಗಮೆಂಟ್‌ಗಳು ಇತ್ಯಾದಿಗಳಿಗೆ ಹೊರಗಿನಿಂದ ಅಥವಾ ಬೇರೆಕಾರಣದಿಂದ ಹಾನಿಯಾದಾಗ ದೀರ್ಘಕಾಲಿಕ ನೋವಿನಿಂದ ಹಿಡಿದು ಮರಣಕ್ಕೆ ಕಾರಣ ಮಾಡುವಂತಹ ಶರೀರದ ಭಾಗಗಳನ್ನು ಮರ್ಮ ಸ್ಥಾನ ಎನ್ನಲಾಗುತ್ತದೆ. ಇಂತಹ ಬೇರೆ ಬೇರೆ ಅಂಗಕ್ಕೆ ಹಾನಿಯಾದಾಗ ಉಂಟಾಗುವಂತಹ ಸಮಸ್ಯೆಗಳಿಗೆ ಮರ್ಮಾಘಾತ ಎನ್ನಲಾಗುತ್ತದೆ.

ಆ ಮರ್ಮಾಘಾತಕ್ಕೆ ಕೊಡುವಂತಹ ಚಿಕಿತ್ಸೆಯೇ ಮರ್ಮ ಚಿಕಿತ್ಸೆ.

ಸುಶ್ರುತಾಚಾರ್ಯರು ವಿವರಿಸಿದ ಒಟ್ಟು 107 ಮರ್ಮ Point ಗಳಲ್ಲಿ 19 ಸದ್ಯಪ್ರಾಣಹರ ಮರ್ಮ ಅಂದರೆ ಆ ಮರ್ಮಕ್ಕೆ ಹಾನಿಯಾದರೆ, ಯಾವುದೇ injury ಆದರೆ ಆ ವ್ಯಕ್ತಿ ಕೂಡಲೇ ಪ್ರಾಣವನ್ನು ಕಳೆದುಕೊಳ್ಳುತ್ತಾನೆ ಎಂದು ಅದರ ಅರ್ಥ.

33 ವಿಧದ ಕಾಲಾಂತರ ಪ್ರಾಣಹರ ಮರ್ಮ, ಅಂದರೆ ಕೆಲವೊಂದು ಶರೀರದ ಭಾಗಗಳಿಗೆ injury ಆದಾಗ ಕೂಡಲೇ ಸಾಯದೆ ಸ್ವಲ್ಪ ಸಮಯದ ನಂತರ ಪ್ರಾಣ ಕಳೆದುಕೊಳ್ಳುವುದು ನಿಶ್ಚಿತವೆಂದು ಅದರ ಅರ್ಥ. ಅದೇರೀತಿ ವಿಶಲ್ಯಘ್ನ ಮರ್ಮ, ಅಂದರೆ ಯಾವುದೇ ಹೊರಗಿಂದ injury ಮೂಲಕ ಒಳಹೋದಂತಹ ಅಸ್ತ್ರಶಸ್ತ್ರಗಳನ್ನು ಪುನಃ ತೆಗೆದರೆ ಆ ವ್ಯಕ್ತಿಗೆ ಗಂಭೀರ ಹಾನಿಯಾಗುತ್ತದೆ. ಅದನ್ನು ತೆಗೆಯುವ ಬದಲು ಅದನ್ನು ಒಳಗೆ ಉಳಿಸಿದರೆ ಮಾತ್ರ ಆ ರೋಗಿಗೆ ಅದು ಅಪಾಯಕಾರಿ ಅಲ್ಲ ಎಂದು ಅರ್ಥ.

ಇಂದಿನ ವೈದ್ಯಕೀಯದಲ್ಲಿಯೂ ಈ ರೀತಿಯಾಗಿ ನಡೆಯುವುದಿದೆ. ಉದಾಹರಣೆಗೆ ತಲೆಗೆ ಗುಂಡೇಟು ತಗುಲಿದಾಗ ಮೆದುಳಿನ ಯಾವುದೇ ಒಳಭಾಗದಲ್ಲಿ ಗಂಭೀರ ಹಾನಿ ಮಾಡದೆ ಹತ್ತಿರ ಹೋಗಿ ನಿಂತಾಗ, ಎಷ್ಟೋಬಾರಿ ತಲೆಯಿಂದ ಗುಂಡನ್ನು ಶಸ್ತ್ರ ಚಿಕಿತ್ಸೆ ಮೂಲಕ ತೆಗೆಯುವ ಬದಲು ಅದನ್ನು ಅಲ್ಲಿಯೇ ಉಳಿಸಿಬಿಡುತ್ತಾರೆ. ತೆಗೆಯುವಾಗ ಹಾನಿಯಾಗಿ ಮತ್ತೇನು ಗಂಭೀರ ತೊಂದರೆ ಆಗದ ರೀತಿಯಲ್ಲಿ ಅದನ್ನು ಒಳಗೆ ಬಿಟ್ಟು ಬಾಕಿ ಚಿಕಿತ್ಸೆಯನ್ನು ಕೊಟ್ಟು ರೋಗಿಗೆ ತೊಂದರೆ ಆಗದಂತೆ ನೋಡಿಕೊಳ್ಳುತ್ತಾರೆ. ಇಂದಿನ ಆಧುನಿಕ ವೈದ್ಯಕೀಯ ೩ಡಿಚಿಛಿಣಿಛಿಜನಲ್ಲಿಯೂ ಕೂಡ ಇದು ನಿರಂತರವಾಗಿ ನಡೆಯುವಂತಹ ಒಂದು ಪ್ರಕ್ರಿಯೆ.

ಹಾಗೆ ವೈಕಲ್ಯಕರ ಮರ್ಮ, 44 Point ಗಳನ್ನು ಹೇಳಿದ್ದಾರೆ. ಈ ಮರ್ಮಕ್ಕೆ ಹಾನಿಯಾದಲ್ಲಿ ಜೀವಕ್ಕೇನೂ ಹಾನಿ ಆಗುವುದಿಲ್ಲ ಆದರೆ ಅಂಗಹೀನತೆ ಅಂದರೆ ನಡೆಯುವಾಗ ಕುಂಟುವುದೋ ಅಥವಾ ನಿರಂತರ ನೋವುಗಳಿಂದಾಗಿ ಕೆಲಸದಲ್ಲಿ ಸ್ವಲ್ಪ ವೈಕಲ್ಯತೆ ಕಾಣಬಹುದು.


ಹಾಗೆ ರುಜಾಕರ ಮರ್ಮ ಅಂತ ಹೇಳಿ ಎಂಟು Point ಗಳು. ರುಜಾಕರ ಮರ್ಮಕ್ಕೆ ಹಾನಿಯಾದಾಗ ಆ ವ್ಯಕ್ತಿಗೆ ನೋವುಗಳು ದೀರ್ಘ ಸಮಯಕ್ಕೆ ಕಾಡುವುದು. ಹಾಗೆ ಆ ರುಜಾಕರ ಮರ್ಮದಿಂದಲೂ ಶರೀರಕ್ಕೆ ಗಂಭೀರ ಹಾನಿಯಾಗುವುದಾಗಲಿ, ಪ್ರಾಣಹಾನಿಯಾಗುವುದಾಗಲಿ ಸಂಭವಿಸುವ ಸಾಧ್ಯತೆ ಇಲ್ಲ.


ಸದ್ಯೋಪ್ರಾಣಹರ ಮರ್ಮ, ಕಾಲಾಂತರ ಪ್ರಾಣಹರ ಮರ್ಮ ಹಾಗೂ ವಿಶಲ್ಯಘ್ನ ಮರ್ಮಗಳು ಇಂದಿನ ಆಧುನಿಕ ಯುಗದಲ್ಲಿ ಆಧುನಿಕ ವೈದ್ಯಕೀಯ ಚಿಕಿತ್ಸೆಯಲ್ಲಿ ತುರ್ತು ವಿಭಾಗದಲ್ಲಿ ಚೆನ್ನಾಗಿ ಚಿಕಿತ್ಸೆ ನೀಡಲ್ಪಡುವಂತಹ ಕ್ಷೇತ್ರವಾಗಿದೆ.

ಆಧುನಿಕ ಆಯುರ್ವೇದ ಚಿಕಿತ್ಸೆಯಲ್ಲಿ ರುಜಾಕರ ಮರ್ಮ ಮತ್ತು ವೈಕಲ್ಯಕರ ಮರ್ಮ ಬಿಂದುಗಳಿಗೆ ಹಾನಿಯಾದಾಗ ಅದರ ಚಿಕಿತ್ಸೆ ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಅಂದರೆ ligament injury ಗಳು, tendonitis ಗಳು. ಉದಾಹರಣೆಗೆ knee meniscal injury, ligament injuries, tennis elbow, golfer's

9





ಪ್ರತಿವರುಷ ಜುಲೈ ಒಂದರಂದು ಭಾರತದಾದ್ಯಂತ ರಾಷ್ಟ್ರೀಯ ವೈದ್ಯರ ದಿನ ಎಂದು ಆಚರಿಸಿ ನಮ್ಮ ದೇಶ ಕಂಡಂತ ಧೀಮಂತ ನಾಯಕ ವೈದ್ಯ ಮತ್ತು ಶಿಕ್ಷಣ ತಜ್ಞ ಶ್ರೀ ಡಾ ಬಿ ಸಿ ರಾಯ್ ಅವರನ್ನು ಅವರ ಜನುಮ ದಿನದಂದು ಸ್ಮರಿಸಿ ಎಲ್ಲಾ ವೈದ್ಯರುಗಳು ತಮ್ಮ ವೃತ್ತಿ ಜೀವನದ ಸಿಂಹಾವಲೋಕನ ಮತ್ತು ಆತ್ಮಾವಲೋಕನ ಮಾಡುವ ಸುದಿನ.

ನೇಪಥ್ಯಕ್ಕೆ ಸರಿಯುತ್ತಿದೆ ಕುಟುಂಬ ವೈದ್ಯ ಪದ್ಧತಿ

ಡಾ। ಮುರಲೀ ಮೋಹನ್ ಚೂಂತಾರು
BDS,MDS,DNB,MBA
MOSRCSEd (UK)
ಬಾಯಿ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರು
ಸುರಕ್ಷ ದಂತ ಚಿಕಿತ್ಸಾಲಯ
9845135787



ನಮ್ಮ ಭಾರತೀಯ ವೈದ್ಯ ಪದ್ಧತಿಯಲ್ಲಿ ಕುಟುಂಬ ವೈದ್ಯರಿಗೆ ಬಹಳ ಉನ್ನತ ಸ್ಥಾನವಿತ್ತು. ಒಂದು ಕಾಲದಲ್ಲಿ ಸಮಾಜದ ಆರೋಗ್ಯದ ಕೇಂದ್ರ ಬಿಂದುವಾಗಿದ್ದ ಕುಟುಂಬ ವೈದ್ಯರು ಈಗ ಕಾಲದ ಹೊಡೆತಕ್ಕೆ ಸಿಕ್ಕಿ ಇಳಿಮುಖವಾಗಿ ಅಳಿವಿನ ದಾರಿಯತ್ತ ಸಾಗುತ್ತಿರುವುದು ನಮ್ಮ ಸಮಾಜ ಯಾವ ಕಡೆಗೆ ತಿರುಗುತ್ತಿದೆ ಎಂಬುದರ ಸೂಚನೆಯನ್ನು ನೀಡುತ್ತಿದೆ. ಕುಟುಂಬ ವೈದ್ಯರು ಅಥವಾ ಫ್ಯಾಮಿಲಿ ಫಿಸಿಷಿಯನ್ ಎಂದರೆ ಅವರು ಕೇವಲ ವೈದ್ಯ ಮಾತ್ರವಲ್ಲ, ಎಲ್ಲರಿಗೂ ಸ್ನೇಹಿತ, ಹಿತೈಷಿ, ಮಾರ್ಗದರ್ಶಕ, ಮತ್ತು ಹಿತಚಿಂತಕ. ಯಾವುದೇ ರೋಗ ಬಂದರೂ ಮೊದಲು ಕಾಣುತ್ತಿದ್ದದ್ದು ನಮ್ಮ ಕುಟುಂಬ ವೈದ್ಯರನ್ನು. ಅದು ಶೀತ, ಜ್ವರ, ಕೆಮ್ಮು, ದಮ್ಮು, ಪಿತ್ತ, ವಾತ, ವಾಂತಿ ಬೇಧಿ, ಏನೇ ಇದ್ದರೂ ಅವರ ಸಲಹೆ ಇಲ್ಲದೆ ಯಾರೊಬ್ಬರೂ ಉನ್ನತ ಚಿಕಿತ್ಸೆಗೆ ತಜ್ಞ ವೈದ್ಯರ ಬಳಿ ಅಥವಾ ದೊಡ್ಡ ದೊಡ್ಡ ತೃತೀಯ ಸ್ತರದ ಆರೋಗ್ಯ ಕೇಂದ್ರಗಳ ಕದ ತಟ್ಟುತ್ತಿರಲಿಲ್ಲ, ಪ್ರತಿ ಬಾರಿಯೂ ಅದೇ ವೈದ್ಯರ ಬಳಿ ಹೋಗುತ್ತಿದ್ದ ಕಾರಣ, ವೈದ್ಯನಿಗೆ ಎಲ್ಲ ರೋಗಿಗಳ ಕೌಟುಂಬಿಕ ಹಿನ್ನೆಲೆ, ರೋಗದ ಚರಿತ್ರೆ, ಅಲರ್ಜಿ ಚರಿತ್ರೆ, ಆರ್ಥಿಕ ಸ್ಥಿತಿಗತಿ, ಸಾಮಾಜಿಕ ಹಿನ್ನೆಲೆ ಎಲ್ಲವೂ ತಿಳಿದಿರುತ್ತಿತ್ತು. ದಿನದ 24ಗಂಟೆಯೂ ಚಿಕಿತ್ಸೆಗೆ ಲಭ್ಯವಿದ್ದು, ಸಲಹೆ, ಮಾರ್ಗದರ್ಶನ ಮತ್ತು ಚಿಕಿತ್ಸೆ ನೀಡುತ್ತಿದ್ದರೂ, ಅಗತ್ಯವಿದ್ದರೆ ಮನೆಗೂ ಬಂದು ಚುಚ್ಚು ಮದ್ದು ನೀಡಿ, ಸಾಂತ್ವನ ಹೇಳಿ ರೋಗ ವಾಸಿ ಮಾಡುತ್ತಿದ್ದರು, ರೋಗಿ ಬಂದ ಬಳಿಕ ಒಂದಷ್ಟು ಲೋಕಾಭಿರಾಮದ ಹರಟೆ, ಕುಟುಂಬದವರ ಆರೋಗ್ಯದ ವಿಚಾರಣೆ, ಸುಖದು:ಖಗಳ ವಿನಿಮಯ, ನಂತರವೇ ಚಿಕಿತ್ಸೆ ಬಗ್ಗೆ ನಿರ್ಣಯ ಮಾಡುತ್ತಿದ್ದರು. ವೈದ್ಯ ಒಂದು ರೀತಿಯಲ್ಲಿ ರೋಗಿಯ ಕುಟುಂಬದ ಒಂದು ಭಾಗವಾಗಿಯೇ ಇರುತ್ತಿದ್ದರು. ಮನೆಯಲ್ಲಿ ಏನಾದರೂ ವಿಶೇಷ ಕಾರ್ಯಕ್ರಮವಿದ್ದಲ್ಲಿ, ವೈದ್ಯರು ಎಷ್ಟು ಹೊತ್ತಿಗಾದರೂ ಒಂದು ಹಾಜರಿ ಹಾಕಿ ಎಲ್ಲರೊಂದಿಗೆ ಬೆರೆತು ಖುಷಿ ಪಡಿಸಿ ಹೋಗುತ್ತಿದ್ದರು. ವೈದ್ಯರೊಂದಿಗಿನ ಸಂಬಂಧ ಮಧುರವಾಗಿತ್ತು ಮತ್ತು ರೋಗಿಗಳ ಚಿಕಿತ್ಸೆ ಕೂಡಾ ತೃಪ್ತಿಕರವಾಗಿತ್ತು. ರೋಗದ ಚಿಕಿತ್ಸೆ ದುಬಾರಿ ಆಗುತ್ತಿರಲಿಲ್ಲ, ಅನಗತ್ಯ ಪರೀಕ್ಷೆಗಳ ಅಗತ್ಯವೂ ಇರಲಿಲ್ಲ, ವೈದ್ಯನ ಮೇಲಿನ ಅಪರಿಮಿತ ವಿಶ್ವಾಸ, ನಂಬಿಕೆ ಮತ್ತು ಗೌರವ ರೋಗ ಬೇಗ ಗುಣಮುಖವಾಗುವಲ್ಲಿ ಸಹಕಾರಿಯಾಗುತ್ತಿತ್ತು.

ಕುಟುಂಬ ವೈದ್ಯರು ಯಾಕೆ ಬೇಕು?

ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಕುಟುಂಬ ವೈದ್ಯರು ಬಹು ಮುಖ್ಯ ಭೂಮಿಕೆ ವಹಿಸುತ್ತಾರೆ. ಪ್ರತಿ ಒಂದು ಸಾವಿರ ಜನರಿಗೆ ಕನಿಷ್ಠ 10ರಿಂದ 15 ಮಂದಿ ಕುಟುಂಬ ವೈದ್ಯರು ಇರಲೇಬೇಕು. ಕೆನಡಾ ದೇಶದಲ್ಲಿ ಈ ಅನುಪಾತ ಸರಾಸರಿ 10:1 ರಂತೆ ಇದೆ. ನಮ್ಮ ಭಾರತ ದೇಶದಲ್ಲಿ ಈಗ ಕುಟುಂಬ ವೈದ್ಯರ ಸಂಖ್ಯೆ ಬಹಳ ಕಡಿಮೆ ಇದೆ. ಪ್ರತಿ ಒಂದು ಸಾವಿರ ಮಂದಿಗೆ ಕೇವಲ ಒಂದು ಅಥವಾ ಎರಡು ಮಂದಿ ಮಾತ್ರ ಕುಟುಂಬ ವೈದ್ಯರು ಲಭ್ಯರಿದ್ದಾರೆ. ಕುಟುಂಬ ವೈದ್ಯರ ಬದಲಾಗಿ ನಕಲಿ ವೈದ್ಯರೂ ಇದ್ದಾರೆ. ಆದರೆ ಬೇರೆ ದೇಶಗಳ ಜೊತೆಗೆ ತುಲನೆ ಮಾಡಿದ್ದಲ್ಲಿ, ನಮ್ಮಲ್ಲಿ ತಜ್ಞ ವೈದ್ಯರ ಸಂಖ್ಯೆ ತುಲನಾತ್ಮಕವಾಗಿ ಒಟ್ಟು ವೈದ್ಯರ ಸಂಖ್ಯೆ ಜೊತೆಗೆ ಮಾಡಿದ್ದಲ್ಲಿ, ಸ್ವಲ್ಪ ಜಾಸ್ತಿಯೇ ಇದೆ. ಈ ವಿಷಮ ಅನುಪಾತ ಅವೈಜ್ಞಾನಿಕವೂ ಅತಾರ್ಕಿಕವೂ ಆಗಿರುತ್ತದೆ. ನಮ್ಮಲ್ಲಿ ಯುವ ವೈದ್ಯರು ಕುಟುಂಬ ವೈದ್ಯರಾಗಲು ಮನಸ್ಸು ಮಾಡುತ್ತಿಲ್ಲ, ಇದು ವೈದ್ಯರ ತಪ್ಪಲ್ಲ, ಸಮಾಜ ಕುಟುಂಬವೈದ್ಯರನ್ನು ನೋಡುವ ದೃಷ್ಟಿಕೋನ ಬದಲಾಯಿಸದಿದ್ದಲ್ಲಿ, ಈ ಕುಟುಂಬ ವೈದ್ಯರ ಸಂಖ್ಯೆ ಮತ್ತಷ್ಟು ಇಳಿಮುಖವಾಗುವ ಸಾಧ್ಯತೆ ಹೆಚ್ಚಾಗಿದೆ. ಕುಟುಂಬ ವೈದ್ಯರು ಒಂದು ಸಮಾಜದ ಅವಿಭಾಜ್ಯ ಅಂಗ. ಯಾವ ದೇಶಗಳಲ್ಲಿ ಪರಿಣಾಮಕಾರಿ ಕುಟುಂಬ ವೈದ್ಯ ಪದ್ಧತಿ ಜಾರಿಯಲ್ಲಿದೆಯೋ, ಆ ದೇಶಗಳ ಆರೋಗ್ಯ ಸೂಚ್ಯಂಕಗಳು ಉನ್ನತ ಶ್ರೇಣಿ ಯಲ್ಲಿದೆ. ಉದಾಹರಣೆಗೆ ಇಂಗ್ಲೆಂಡ್‌ನ ರಾಷ್ಟ್ರೀಯ ಆರೋಗ್ಯ ಸೇವೆ ನಿಯಮಾವಳಿ ಪ್ರಕಾರ, ಅನಿವಾರ್ಯ ತುರ್ತು ಪರಿಸ್ಥಿತಿಗಳನ್ನು ಹೊರತುಪಡಿಸಿ, ರೋಗಿ ಕುಟುಂಬವು ಕುಟುಂಬ ವೈದ್ಯರ ಶಿಫಾರಸ್ಸು ಇಲ್ಲದೆ ತಜ್ಞ ವೈದ್ಯರನ್ನು ಭೇಟಿಯಾಗಲು ಸಾಧ್ಯವಿಲ್ಲ. ಅಷ್ಟರ ಮಟ್ಟಿಗೆ ಕುಟುಂಬ ವೈದ್ಯ ಪದ್ಧತಿ ಅಲ್ಲಿ ಮನ್ನಣೆ ಪಡೆದಿದೆ. ಅದೇ ರೀತಿ ನಮ್ಮ ನೆರೆ ರಾಷ್ಟ್ರ ಥಾಯ್ಲೆಂಡ್‌ನಲ್ಲಿ ತಜ್ಞ ವೈದ್ಯರ ಸಂಖ್ಯೆ ನಮ್ಮ ಭಾರತ ದೇಶಕ್ಕಿಂತ ಬಹಳ ಕಡಿಮೆ ಇದ್ದರೂ, ಕುಟುಂಬ ವೈದ್ಯ ಪದ್ಧತಿಗೆ ಜನರು ಹೆಚ್ಚು ಒತ್ತು ನೀಡಿದ ಕಾರಣದಿಂದ ಆರೋಗ್ಯ ಸೂಚ್ಯಂಕದಲ್ಲಿ ಥಾಯ್ಲೆಂಡ್ ಭಾರತಕ್ಕಿಂತ ಬಹಳ ಮುಂದೆ ಇದೆ. ಈ ಎಲ್ಲ ಹಿನ್ನೆಲೆಯಲ್ಲಿ ಕುಟುಂಬ ವೈದ್ಯ ಪದ್ಧತಿಗೆ ಹೆಚ್ಚು ಒತ್ತು ನೀಡಬೇಕಾದ ಅನಿವರ?ಯತೆ ಇರುತ್ತದೆ. ಒಬ್ಬ ಮೂಳೆ ತಜ್ಞ ಎಲುಬು ಪರೀಕ್ಷಿಸುತ್ತಾನೆ. ಒಬ್ಬ ಹೃದಯತಜ್ಞ ಹೃದಯ ಪರೀಕ್ಷಿಸುತ್ತಾನೆ. ಕಣ್ಣಿನ ತಜ್ಞ ಕಣ್ಣನ್ನು ಪರೀಕ್ಷಿಸುತ್ತಾನೆ. ಆದರೆ ಒಬ್ಬ ಕುಟುಂಬ ವೈದ್ಯ ರೋಗಿಯನ್ನು ಪರಿಪೂರ್ಣವಾಗಿ ಪರೀಕ್ಷಿಸುತ್ತಾನೆ. ಆತ ರೋಗಿಯ ಅಂಗಾಂಗಗಳನ್ನೆಲ್ಲಾ ಬೇರೆಬೇರೆಯಾಗಿ ವಿಂಗಡಿಸಿ ನೋಡುವುದೇ ಇಲ್ಲ, ಇದು ಒಂದು ರೀತಿಯ ಏಕಗವಾಕ್ಷಿ ಪದ್ಧತಿ ರೀತಿಯಲ್ಲಿ ನಡೆಯುತ್ತದೆ. ಇಲ್ಲಿ ರೋಗಿಯ ಸಂಪೂರ್ಣ ಪರೀಕ್ಷೆ ಒಬ್ಬನೇ ಮಾಡಿ ಅಗತ್ಯವಿದ್ದಲ್ಲಿ ವಿವಿಧ ಪರೀಕ್ಷೆಗಳನ್ನು ಮಾಡಿಸಿ, ರೋಗದ ಅಧ್ಯಯನ ಮಾಡಿ, ಸಮಗ್ರವಾದ ಚಿಂತನೆ ಮಾಡಿ, ರೋಗ ನಿರ್ಣಯ ಆತನೇ ಮಾಡುತ್ತಾನೆ. ಇದೊಂದು ಹೊಲಿಸ್ಟಿಕ್ ಅಪ್ರೋಚ್ ಅಥವಾ ಪರಿಪೂರ್ಣವಾದ ವಿಧಾನವಾಗಿರುತ್ತದೆ. ಈ ರೀತಿ ಮಾಡುವುದರಿಂದ ರೋಗಿಯ ಸಮಯ, ಹಣ ಮತ್ತು ಶ್ರಮದ ಉಳಿತಾಯವಾಗುತ್ತದೆ. ಅನಗತ್ಯವಾದ ಪರೀಕ್ಷೆ

10

ವೈದ್ಯೋ ನಾರಾಯಣೋ ಹರಿಃ

ರಾಷ್ಟ್ರೀಯ ವೈದ್ಯರ ದಿನಾಚರಣೆಯ ಶುಭಾಶಯಗಳು

ಸಾಮಾನ್ಯ ಜನರಿಗೆ ಕೈಗೆಟಕುವ ದರದಲ್ಲಿ ಪ್ರಧಾನ ಮಂತ್ರಿ ಜನ ಔಷಧಿ ಯೋಜನೆ

ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ ಭಾರತ ಸರಕಾರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಔಷಧೀಯ ಇಲಾಖೆಯಿಂದ ಪ್ರಾರಂಭಿಸಲಾದ ಸರ್ಕಾರದ ಉಪಕ್ರಮವಾಗಿದೆ. ಈ ಯೋಜನೆಯು ಪ್ರಧಾನ ಮಂತ್ರಿ ಭಾರತೀಯ ಜನ ಔಷಧಿ ಕೇಂದ್ರಗಳ ಮೂಲಕ ಸಾಮಾನ್ಯ ಜನರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ ಜೆನೆರಿಕ್ ಔಷಧಿಗಳನ್ನು ಮಧುಮೇಹ, ಕ್ಯಾನ್ಸರ್ ಮತ್ತು ಇತರ ಅಗತ್ಯ ಆರೋಗ್ಯ ಅಗತ್ಯಗಳನ್ನು ಒಳಗೊಂಡಂತೆ ವ್ಯಾಪಕ ಶ್ರೇಣಿಯ ಔಷಧಗಳು ಲಭ್ಯವಿದೆ. ಎಲ್ಲಾ ಔಷಧಿಗಳು ಸುರಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಖಾತ್ರಿಪಡಿಸುವ ಮೂಲಕ ವಿಶ್ವ ಆರೋಗ್ಯ ಸಂಸ್ಥೆಯಿಂದ ಪ್ರಮಾಣೀಕೃತವಾಗಿವೆ.

ಸಾಮಾನ್ಯವಾಗಿ ಎಲ್ಲಾ ಔಷದ ಅಂಗಡಿಗಳು, ಖಾಸಗಿ ಆಸ್ಪತ್ರೆಗಳಲ್ಲಿ ಬ್ರ್ಯಾಂಡೆಡ್ ಔಷಧಗಳನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡಲಾಗುತ್ತದೆ. ಇವು ಜೀವ ರಕ್ಷಕ ಔಷಧಗಳು ಬಡವರ ಪಾಲಿಗೆ ಕೈಗೆಟುಕದಂತೆ ಮಾಡಿವೆ. ಮಾರುಕಟ್ಟೆಯಲ್ಲಿ ಸಮಂಜಸವಾದ ಬೆಲೆಯ ಗುಣಮಟ್ಟದ ಜೆನೆರಿಕ್ ಔಷಧಿಗಳನ್ನು ಲಭ್ಯವಾಗುವಂತೆ ಮಾಡುವುದರಿಂದ ಎಲ್ಲರಿಗೂ ಪ್ರಯೋಜನವಾಗುತ್ತದೆ. ಹೀಗಾಗಿ ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ ಔಷಧಗಳನ್ನು ಪೂರೈಸಲು ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಜನೌಷಧ ಕೇಂದ್ರ ಯೋಜನೆ ಹೇಗೆ? ಈ ಯೋಜನೆ ಬಡವರಿಗೆ ಎನೆಲ್ಲಾ ಪ್ರಯೋಜನಗಳಿವೆ ಎಂಬುದನ್ನು ತಿಳಿಯೋಣ ಬನ್ನಿ...

ಏನಿದು ಪ್ರಧಾನ ಮಂತ್ರಿ ಜನ ಔಷಧಿ ಯೋಜನೆ?

ಎಲ್ಲರಿಗೂ ಕೈಗೆಟುಕುವ ಬೆಲೆಯಲ್ಲಿ ಜೆನೆರಿಕ್ ಔಷಧಿಗಳನ್ನು ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ, ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಅಡಿಯಲ್ಲಿ ಔಷಧ ಇಲಾಖೆಯು 'ಜನ ಔಷಧಿ ಯೋಜನೆಯನ್ನು ನವೆಂಬರ್ 2008ರಲ್ಲಿ ಪ್ರಾರಂಭಿಸಿದೆ. ಬ್ರಾಂಡೆಡ್ ಔಷಧಿಗಳಿಗೆ ಸಮಾನವಾದ ಪರಿಣಾಮಕಾರಿತ್ವ ಮತ್ತು ಗುಣಮಟ್ಟದೊಂದಿಗೆ ಕೈಗೆಟುಕುವ ದರದಲ್ಲಿ ಜೆನೆರಿಕ್ ಔಷಧಿಗಳ ಪೂರೈಕೆಗೆ ಹೊಸ ಆಯಾಮವನ್ನು ನೀಡಲು ಈ ಯೋಜನೆಯನ್ನು 2015 ರಲ್ಲಿ "ಪ್ರಧಾನ ಮಂತ್ರಿ ಭಾರತೀಯ ಜನ ಔಷಧಿ ಪರಿಯೋಜನಾ' ಎಂದು ಪರಿಷ್ಕರಿಸಲಾಯಿತು. ಈ ಯೋಜನೆಯು ಆರೋಗ್ಯ ವೆಚ್ಚವನ್ನು ಕಡಿಮೆ ಮಾಡುವುದು, ಜೆನೆರಿಕ್ ಔಷಧಿಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪ್ರವೇಶವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಇದು ಜನ ಔಷಧಿ ಕೇಂದ್ರಗಳನ್ನು ತೆರೆಯುವಲ್ಲಿ ಉದ್ಯಮಿಗಳಿಗೆ ಬೆಂಬಲ ನೀಡುವ ಮೂಲಕ ಸರ್ಕಾರದಿಂದ ಆರ್ಥಿಕ ನೆರವು ಮತ್ತು ಪ್ರೋತ್ಸಾಹದೊಂದಿಗೆ ಸ್ವಯಂ ಉದ್ಯೋಗ ಅವಕಾಶಗಳನ್ನು ಒದಗಿಸುತ್ತದೆ.



ಜನ ಔಷಧಿ ಯೋಜನೆಯ ಉದ್ದೇಶಗಳು

1. ಗುಣಮಟ್ಟದ ಔಷಧಿಗಳು ಮತ್ತು ಶಸ್ತ್ರಚಿಕಿತ್ಸಾ ಸಾಮಗ್ರಿಗಳನ್ನು ಎಲ್ಲರಿಗೂ ಕೈಗೆಟುಕುವ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವುದು ಮತ್ತು ಗ್ರಾಹಕರು/ರೋಗಿಗಳ ಆರ್ಥಿಕ ವೆಚ್ಚವನ್ನು ಕಡಿಮೆ ಮಾಡುವುದು

2. ಪರಿಣಾಮಕಾರಿಯಾಗುತ್ತವೆ ಎಂಬ ಪ್ರಚಲಿತ ಕಲ್ಪನೆಯನ್ನು ಹೋಗಲಾಡಿಸುವುದು.

3. ಭಾರತದಾದ್ಯಂತ ಎಲ್ಲಾ ಮಹಿಳೆಯರಿಗೆ ಮುಟ್ಟಿನ ಆರೋಗ್ಯ ಸೇವೆಗಳ ಸುಲಭ ಲಭ್ಯತೆಯನ್ನು ಖಚಿತಪಡಿಸುವುದು.

4. ಜನ ಔಷಧಿ ಕೇಂದ್ರವನ್ನು ತೆರೆಯುವಲ್ಲಿ ವೈಯಕ್ತಿಕ ಉದ್ಯಮಿಗಳನ್ನು ತೊಡಗಿಸಿಕೊಳ್ಳುವ ಮೂಲಕ ಉದ್ಯೋಗವನ್ನು ಸೃಷ್ಟಿಸುವುದು.

ಜನ ಔಷಧಿ ಯೋಜನೆ ವೈಶಿಷ್ಟ್ಯಗಳು ಏನು?

ಭಾರತೀಯ ಜನ ಔಷಧಿ ಪರಿಯೋಜನಾ ಯೋಜನೆ ಅಡಿಯಲ್ಲಿ ಆರೋಗ್ಯ ರಕ್ಷಣೆಗಾಗಿ ಹಣದ ವೆಚ್ಚವನ್ನು ಕಡಿಮೆ ಮಾಡಲು ದೇಶಾದ್ಯಂತ ಪ್ರಧಾನ ಮಂತ್ರಿ ಭಾರತೀಯ ಜನ ಔಷಧಿ ಕೇಂದ್ರಗಳನ್ನು (ಕಒಃಎಏ) ಸ್ಥಾಪಿಸಲಾಗಿದೆ.

ಔಷಧ ಇಲಾಖೆಯ ಅಡಿಯಲ್ಲಿ ಬರುವ ಭಾರತದ ನಾರ್ವಜನಿಕ ವಲಯದ ಔಷದ ಉದ್ಯಮಗಳ ಬ್ಯೂರೋ (ಃಕಕಖ) ರಿಡಿಠ ಸಂಗ್ರಹಿಸುವುದು, ನರಬರಾಜು ಮಾಡುವುದು ಮತ್ತು ಮಾರಾಟ ಮಾಡುವಲ್ಲಿ ತೊಡಗಿಸಿಕೊಂಡಿದೆ.

ಈ ಯೋಜನೆಯಡಿಯಲ್ಲಿ ಖರೀದಿಸಿದ ಎಲ್ಲಾ ಔಷಧಿಗಳನ್ನು ರಾಷ್ಟ್ರೀಯ ಮಾನ್ಯತೆ ಮಂಡಳಿ ಪರೀಕ್ಷಿಸಲಾಗುತ್ತದೆ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ ಉತ್ತಮ ಉತ್ಪಾದನಾ ಅನುಸರಣೆಗಳ ಮಾನದಂಡಗಳಿಗೆ ಅನುಗುಣವಾಗಿರುತ್ತದೆ. ಜನ ಔಷಧಿ ಕೇಂದ್ರಗಳ ಸ್ಥಾಪನೆಗೆ 2.5 ಲಕ್ಷದವರೆಗೆ ಸರ್ಕಾರಿ ಅನುದಾನವನ್ನು ನೀಡಲಾಗುತ್ತದೆ.

ಜನ ಔಷಧಿ ಕೇಂದ್ರಗಳನ್ನು ವೈದ್ಯರು, ಔಷಧಿ ಕಾರರು, ಉದ್ಯಮಿಗಳು, ಸ್ವಸಹಾಯ ಗುಂಪುಗಳು. ಎನ್.ಜಿ.ಒ.ಗಳು, ದತ್ತಿ ಸಂಘಗಳು ಇತ್ಯಾದಿಗಳು ಯಾವುದೇ ಸೂಕ್ತ ಸ್ಥಳದಲ್ಲಿ ಅಥವಾ ಆಸ್ಪತ್ರೆಯ ಆವರಣದ ಹೊರಗೆ ಸ್ಥಾಪಿಸಬಹುದು.

ಭಾರತೀಯ ಜನ ಔಷಧಿ ಪರಿಯೋಜನಾ ಯೋಜನೆ ಅಡಿಯಲ್ಲಿ ರೈಲ್ವೆ ನಿಲ್ದಾಣಗಳು ಮತ್ತು ಇತರ ರೈಲ್ವೆ ಸಂಸ್ಥೆಗಳಲ್ಲಿ ಜನ ಔಷಧಿ ಕೇಂದ್ರಗಳನ್ನು ತೆರೆಯಲು ರೈಲ್ವೆ ಸಚಿವಾಲಯವು ತಾತ್ವಿಕವಾಗಿ ಅನುಮೋದನೆ ನೀಡಿದೆ. ರೈಲ್ವೆ ನಿಲ್ದಾಣಗಳಲ್ಲಿ ಜೆನೆರಿಕ್ ಔಷಧಿಗಳ ಲಭ್ಯತೆಯು ಅಗತ್ಯ ಔಷಧಿಗಳ ಲಭ್ಯತೆ, ಕೈಗೆಟುಕುವಿಕೆಯನ್ನು ಹೆಚ್ಚಿಸುತ್ತದೆ ಮತ್ತು ಗ್ರಾಹಕರ ಅನುಕೂಲತೆಯನ್ನು ಸುಧಾರಿಸುತ್ತದೆ.



ಬಡರೋಗಿಗಳ ಪಾಲಿಗೆ ಸಂಜೀವಿನಿ ಆಯುಷ್ಮಾನ್ ಭಾರತ್ ಯೋಜನೆ

ಆಯುಷ್ಮಾನ್ ಭಾರತ್ ಯೋಜನೆಯು ಭಾರತ ಸರ್ಕಾರದ ಪ್ರಮುಖ ಆರೋಗ್ಯ ರಕ್ಷಣಾ ಯೋಜನೆಯಾಗಿದ್ದು, ಅರ್ಹ ಕುಟುಂಬಗಳಿಗೆ ವರ್ಷಕ್ಕೆ 5ಲ.ರೂ.ಗಳವರೆಗೆ ನಗದು ರಹಿತ ಉಚಿತ ಚಿಕಿತ್ಸೆಯನ್ನು ಒದಗಿಸುತ್ತದೆ.ದೇಶದಲ್ಲಿ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಲ್ಲಿ ಆರೋಗ್ಯ ಸಮಸ್ಯೆಗಳು ಬಂದಾಗ , ದುಬಾರಿ ಚಿಕಿತ್ಸೆಯಿಂದಾಗಿ ಇಡಿ ಕುಟುಂಬವೇ ತತ್ತರಿಸುವಂತಾಗುತ್ತದೆ. ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ಮಾಡಿಸಲಾಗದೆ ಒದ್ದಾಡುವಂತಾಗುತ್ತದೆ . ಹಾಗೆಯೇ ಹೇಗೋ ಸಾಲ-ಸೋಲ ಮಾಡಿ ಹಣ ಹೊಂದಿಸಿ ಚಿಕಿತ್ಸೆ ಕೊಡಿಸಿದ ಬಳಿಕ ಕುಟುಂಬ ಸಾಲ ತೀರಿಸುವಲ್ಲಿ ಹೈರಾಣಾಗಿಬಿಡುವಂತಾಗುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸಿದ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಬಡ ಮತ್ತು ಮಧ್ಯಮ ವರ್ಗದ ಜನತೆಗೂ ಸೂಕ್ತ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಕೈಗೆಟಕುವಂತಾಗಬೇಕೆಂಬ ನೆಲೆಯಲ್ಲಿ 'ಆಯುಷ್ಮಾನ್ ಭಾರತ್' ಯೋಜನೆಯನ್ನು ರೂಪಿಸಿದ್ದಾರೆ.

ಕರ್ನಾಟಕದಲ್ಲಿ ಇದನ್ನು 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' (ಎಬಿ-ಎಆರ್‌ಕೆ) ಎಂದು ಕರೆಯಲಾಗುತ್ತದೆ.

ಯೋಜನೆಯ ಮುಖ್ಯ ಲಕ್ಷಣಗಳು

■ **ಉಚಿತ ಚಿಕಿತ್ಸೆ:**

ಪ್ರತಿ ಅರ್ಹ ಕುಟುಂಬಕ್ಕೆ ವರ್ಷಕ್ಕೆ 5ಲ.ರೂ.ಗಳ ವರೆಗೆ ಉಚಿತ ವೈದ್ಯಕೀಯ ಚಿಕಿತ್ಸೆ ಲಭ್ಯವಿದೆ.

■ **ವಿಸ್ತೃತ ವ್ಯಾಪ್ತಿ:**

ಎಲ್ಲರಿಗೂ ಅನ್ವಯವಾಗುವುದಾದರೂ, ಇದೀಗ 70 ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ವಯಸ್ಸಿನ ಎಲ್ಲಾ ಹಿರಿಯ ನಾಗರಿಕರು ಆದಾಯವನ್ನು ಲೆಕ್ಕಿಸದೆ ಈ ಯೋಜನೆಯ ಲಾಭವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

■ **ಆಸ್ಪತ್ರೆಗಳು:**

ದೇಶದಾದ್ಯಂತ ಇರುವ ಸರ್ಕಾರಿ ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಈ ಸೌಲಭ್ಯವನ್ನು ಪಡೆಯಬಹುದು.

■ **ಅರ್ಹತೆ:**

ಸಾಮಾಜಿಕ-ಆರ್ಥಿಕ ಜಾತಿ ಗಣತಿ (ಎಸ್ ಇಸಿಸಿ) ಡೇಟಾ ಪ್ರಕಾರ ಗುರುತಿಸಲಾದ ಬಿಪಿಎಲ್ ಕುಟುಂಬಗಳು ಮತ್ತು ಎಪಿಎಲ್ ಕುಟುಂಬಗಳು ಯೋಜನೆಯ ನಿಯಮಗಳಿಗೆ ಅನುಗುಣವಾಗಿ ಅರ್ಹರಾಗಿರುತ್ತಾರೆ.

ಸೌಲಭ್ಯಗಳು: ದ್ವಿತೀಯ ಮತ್ತು ತೃತೀಯ ಹಂತದ ಗಂಭೀರ ಕಾಯಿಲೆಗಳಿಗೆ ಚಿಕಿತ್ಸೆ, ಔಷಧಿ ಮತ್ತು ಆಸ್ಪತ್ರೆ ವೆಚ್ಚಗಳು ಸಂಪೂರ್ಣವಾಗಿ ಉಚಿತ.

■ **ಆಯುಷ್ಮಾನ್ ಕಾರ್ಡ್ ಪಡೆಯುವುದು ಹೇಗೆ?**

ಕೇಂದ್ರ ಪೋರ್ಟಲ್: ನಿಮ್ಮ ಅರ್ಹತೆಯನ್ನು ಪರಿಶೀಲಿಸಲು ಮತ್ತು ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಆಯುಷ್ಮಾನ್ ಭಾರತ್ (ಪಿಎಂಜೆಎವೈ) ಅಧಿಕೃತ ವೆಬ್‌ಸೈಟ್ ಗೆ ಭೇಟಿ ನೀಡಿ.

ಸ್ಥಳೀಯ ನೋಂದಣಿ: ಹತ್ತಿರದ ಸರ್ಕಾರಿ ಆಸ್ಪತ್ರೆಗಳು, ಸಾಮಾಜಿಕ ಸೇವಾ ಕೇಂದ್ರ(ಸಿಎಸ್‌ಸಿ) ಅಥವಾ ನೋಂದಾಯಿತ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಗತ್ಯ ದಾಖಲೆಗಳನ್ನು (ಆಧಾರ್ ಕಾರ್ಡ್, ಪಡಿತರ ಚೀಟಿ) ನೀಡಿ ಕಾರ್ಡ್ ಮಾಡಿಸಿಕೊಳ್ಳಬಹುದು.

ಉಡುಪಿ-ಕಾಸರಗೋಡು ವಿದ್ಯುತ್ ಪ್ರಸರಣದಿಂದ ಭೂಮಿ ಕಳೆದುಕೊಂಡವರ ಸಮಸ್ಯೆ ಆಲಿಸಿದ ಶಾಸಕರು

ಅರ್ಹ ರೈತರಿಗೆ ತ್ವರಿತವಾಗಿ ಪರಿಹಾರ ವಿತರಿಸಿ: ನ್ಯಾಕ್



ಬಂಟ್ವಾಳ: ಉಡುಪಿ-ಕಾಸರಗೋಡು 400 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗ ಯೋಜನೆಯಿಂದ ಕೃಷಿ ಭೂಮಿಯನ್ನು ಕಳೆದುಕೊಂಡು ಇನ್ನೂ ಪರಿಹಾರಕ್ಕಾಗಿ ಕಾಯುತ್ತಿರುವ ರೈತರ ಸಮಸ್ಯೆಗಳ ಕುರಿತು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಅವರು ತಮ್ಮ ಬಿ.ಸಿ.ರೋಡ್ ಕಚೇರಿಯಲ್ಲಿ ಸಂತ್ರಸ್ತ ರೈತರು ಹಾಗೂ ಸಂಬಂಧಿತ ಇಲಾಖೆಯ ಅಧಿಕಾರಿಗಳೊಂದಿಗೆ ಮಂಗಳವಾರ ವಿಶೇಷ ಸಭೆ ನಡೆಸಿ, ಬಾಕಿ ಉಳಿದಿರುವ ಪರಿಹಾರವನ್ನು ತ್ವರಿತವಾಗಿ ವಿತರಿಸುವಂತೆ ಸೂಚಿಸಿದರು.

ಉಡುಪಿ ಜಿಲ್ಲೆಯಿಂದ ಕಾಸರಗೋಡು ಜಿಲ್ಲೆಗೆ ಸಂಪರ್ಕ ಕಲ್ಪಿಸುವ 400 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗವು ಬಂಟ್ವಾಳ ತಾಲೂಕಿನ ಹಲವು ಗ್ರಾಮಗಳ ಮೂಲಕ ಹಾದುಹೋಗಿದ್ದು ಯೋಜನೆಗಾಗಿ ನೂರಾರು ರೈತರ ಕೃಷಿ ಭೂಮಿಯನ್ನು ಬಳಸಿಕೊಳ್ಳಲಾಗಿದೆ. ಯೋಜನೆಯಡಿ ಬಹುತೇಕ ಅರ್ಹ ಫಲಾನುಭವಿಗಳಿಗೆ ಪರಿಹಾರ ವಿತರಿಸಲಾಗಿದ್ದರೂ, ಕೆಲ ಪ್ರಕರಣಗಳಲ್ಲಿ ಜಮೀನಿನ ದಾಖಲೆಗಳ ವ್ಯತ್ಯಾಸ, ತಾಂತ್ರಿಕ ಅಡಚಣೆಗಳು ಹಾಗೂ ಆಡಳಿತಾತ್ಮಕ ಪ್ರಕ್ರಿಯೆಗಳ ಕಾರಣದಿಂದ ಇನ್ನೂ ಪರಿಹಾರ ಬಿಡುಗಡೆಯಾಗದೆ ಬಾಕಿ ಉಳಿದಿದೆ ಎಂದು ರೈತರು ಶಾಸಕರ ಗಮನಕ್ಕೆ ತಂದರು.

ಸಭೆಯಲ್ಲಿ ಮಾತನಾಡಿದ ರೈತರು, ತಮ್ಮ ಕೃಷಿ ಭೂಮಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಯೋಜನೆಗೆ ನೀಡಿದ್ದರೂ, ದೀರ್ಘಕಾಲದಿಂದ ಪರಿಹಾರ ದೊರೆಯದೆ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದಾಗಿ ತಿಳಿಸಿದರು.

ಕೆಲವು ಕುಟುಂಬಗಳು ಸಂಪೂರ್ಣವಾಗಿ ಕೃಷಿಯನ್ನೇ ಅವಲಂಬಿಸಿದ್ದು, ಭೂಮಿ ಕಳೆದುಕೊಂಡ ನಂತರ ಜೀವನೋಪಾಯದ ಮೇಲೆ ಗಂಭೀರ ಪರಿಣಾಮ ಬೀರಿದೆ. ಹೀಗಾಗಿ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ವಿಳಂಬವಿಲ್ಲದೆ ಇತ್ಯರ್ಥಪಡಿಸಿ, ಸರ್ಕಾರದ ನಿಯಮಾನುಸಾರ ಪರಿಹಾರವನ್ನು ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು.

> **ಶೀಘ್ರ ಇತ್ಯರ್ಥಪಡಿಸಿ**
> **ಪರಿಹಾರ ವಿತರಣೆಯಲ್ಲಿ ಎದುರಾಗಿರುವ ತಾಂತ್ರಿಕ ಹಾಗೂ ದಾಖಲೆ ಸಂಬಂಧಿತ ಸಮಸ್ಯೆ ಯನ್ನು ಅಧಿಕಾರಿಗಳು ವೈಯಕ್ತಿಕವಾಗಿ ಪರಿಶೀಲಿಸಿ, ಕಾನೂನು ಹಾಗೂ ಸರ್ಕಾರ ದ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಶೀಘ್ರ ಇತ್ಯರ್ಥಪಡಿಸಬೇಕು.**
> **● ರಾಜೇಶ್ ನ್ಯಾಕ್, ಶಾಸಕರು**

ರೈತರ ಅಹವಾಲುಗಳನ್ನು ಆಲಿಸಿದ ಶಾಸಕ ರಾಜೇಶ್ ನ್ಯಾಕ್, ಸಾರ್ವಜನಿಕ ಅಭಿವೃದ್ಧಿ ಯೋಜನೆಗಳು ಅಗತ್ಯವಾದರೂ, ಅದರ ಹೆಸರಿನಲ್ಲಿ ರೈತರಿಗೆ ಯಾವುದೇ ರೀತಿಯ ಅನ್ಯಾಯವಾಗಬಾರದು. ಈಗಾಗಲೇ ಬಾಕಿ ಉಳಿದಿರುವ ಪ್ರತಿಯೊಂದು ಪ್ರಕರಣದ ಪ್ರಗತಿಯನ್ನು ಪರಿಶೀಲಿಸಿ, ಸಂಬಂಧಪಟ್ಟ ಇಲಾಖೆ ಮತ್ತು ಯೋಜನಾ ಅಧಿಕಾರಿಗಳ ನಡುವೆ ಸಮನ್ವಯ ಸಾಧಿಸುವ ಮೂಲಕ ಪರಿಹಾರ ವಿತರಣೆಯ ಪ್ರಕ್ರಿಯೆಯನ್ನು ವೇಗಗೊಳಿಸಬೇಕು. ಅರ್ಹ ರೈತರಿಗೆ ಅನಗತ್ಯ ವಿಳಂಬವಾಗದಂತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ನಿರ್ದೇಶನ ನೀಡಿದರು.

ಸಭೆಯಲ್ಲಿ ಬಂಟ್ವಾಳ ತಹಶೀಲ್ದಾರ್ ಮಂಜುನಾಥ್, ಕಂದಾಯ ನಿರೀಕ್ಷಕ ಜನಾರ್ದನ, ಯೋಜನೆಯ ಪ್ರಾಜೆಕ್ಟ್ ಹೆಡ್ ವೆಂಕಟೇಶ್ ಪೂಜಾರಿ, ಮ್ಯಾನೇಜರ್‌ಗಳಾದ ಅಭಿಷೇಕ್ ಹಾಗೂ ಆಗ್ನಲ್ ಗೊಂಝಾಲ್ವೆಸ್, ಸಹಾಯಕ ವ್ಯವಸ್ಥಾಪಕರಾದ ರೋಹಿತ್ ಮತ್ತು ಸಚಿನ್, ಅಧಿಕಾರಿ ಝೀರಾಮ್ ಸೇರಿದಂತೆ ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದು, ರೈತರು ಪ್ರಸ್ತಾಪಿಸಿದ ಪ್ರತಿಯೊಂದು ಪ್ರಕರಣವನ್ನು ಪರಿಶೀಲಿಸಿ ಶೀಘ್ರದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ವಿವಿಧ ಗ್ರಾಮಗಳ ಸಂತ್ರಸ್ತ ರೈತರು ಭಾಗವಹಿಸಿ ತಮ್ಮ ಸಮಸ್ಯೆಗಳು ಹಾಗೂ ದಾಖಲೆಗಳಿಗೆ ಸಂಬಂಧಿಸಿದ ಅಡಚಣೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದರು.

ಮಂತ್ರಾಲಯದಲ್ಲಿ ಸರಯೂ ಮಕ್ಕಳ ಮೇಳದ ಯಕ್ಷಗಾನ ಪ್ರದರ್ಶನ



ಮಂಗಳೂರು: ಕಲೆಗಳೆಲ್ಲವೂ ಗೌರವಿಸಪಡಬೇಕಾದುದೇ. ಯಕ್ಷಗಾನವೂ ಅದಕ್ಕೆ ಹೊರತಾಗಿಲ್ಲ. ಮಕ್ಕಳು ಕಲೆಯಲ್ಲಿ ಆಸಕ್ತಿ ತೋರಿಸಿ ಶ್ರೀಮಠದ ವರೆಗೂ ಬಂದು ತಮ್ಮ ಕಲಾ ಜಾಣ್ಮೆಯನ್ನು ಪ್ರದರ್ಶಿಸಿದ್ದಾರೆ. ತಾವೂ ಕೂಡಾ ಶ್ರೀಕ್ಷೇತ್ರದಲ್ಲಿ ವಿವಿಧ ಕಲಾಪ್ರಕಾರಗಳಿಗೆ ಅವಕಾಶವೀಯುತ್ತಾ ಬರುತ್ತಿದ್ದೇವೆ. ಇಂದು ಸರಯೂ ಮಕ್ಕಳ ಮೇಳವು ಶ್ರೀ ಗುರುರಾಯರ ಸನ್ನಿಧಿಯಲ್ಲಿ ಯಕ್ಷಗಾನವನ್ನು ಪ್ರಸ್ತುತಪಡಿಸಿದ್ದಾರೆ. ಮುಂದೆಯೂ ನಾವು ಈ ತಂಡವನ್ನು ಶ್ರೀಮಠಕ್ಕೆ ಕರೆಸಿಕೊಳ್ಳುತ್ತೇವೆ. ಮಕ್ಕಳು ಕಲಾಪ್ರೌಢಿಮೆಯಿಂದ ಬೆಳೆದು ಬೆಳಗಲಿ ಎಂದು ಮಂತ್ರಾಲಯದ ಶ್ರೀ 1008 ವಿಭುದೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಶ್ರೀಮಠದಲ್ಲಿ ನಾದನಮನ ಕಲಾ ಸೇವೆಯ ಪ್ರಯುಕ್ತ ದ.ಕ. ಜಿಲ್ಲೆಯ ಪ್ರಪ್ರಥಮ ಮಕ್ಕಳ ಮೇಳ ಮಂತ್ರಾಲಯದಲ್ಲಿ ಪ್ರಪ್ರಥಮ ಬಾರಿಗೆ ಶ್ರೀರಾಮ ದರ್ಶನ ಎಂಬ ಬಯಲಾಟ ಪ್ರದರ್ಶಿಸಿದ ಸಂದರ್ಭದಲ್ಲಿ ಶ್ರೀಗಳು ಆಶೀರ್ವಚನವಿತ್ತರು.

ಹಿಮ್ಮೇಳದಲ್ಲಿ ರವಿ ಕೃಷ್ಣ ದಂಬೆ, ವರ್ಕಾಡಿ ಮಧುಸೂದನ ಅಲೆವೂರಾಯ, ಅಕ್ಷಯ ರಾವ್ ವಿಟ್ಲ ಸಹಕರಿಸಿದರು.

ನಿರ್ದೇಶಕ ವರ್ಕಾಡಿ ರವಿ ಅಲೆವೂರಾಯ, ವಿಜಯಲಕ್ಷ್ಮೀ ಎಲ್.ಎನ್., ಅಕ್ಷಯ್ ಕೋಡಿಕಲ್, ನಿತ್ಯಶ್ರೀ ಪೂಜಾರಿ, ನೈಶಾ ಭಂಡಾರಿ, ದೃಶಾಲ್ ಕೆ., ಉದಿತ್ ಕೋಟ್ಯಾನ್, ಆಗಮ್ ಶರ್ಮಾ, ಪ್ರಮೋದ್ ಕೆ., ಗೌತಂ ಭಂಡಾರಿ, ದೀಪಕ್ ಶರ್ಮಾ, ಕುಸುಮಾ ತಂಡದಲ್ಲಿದ್ದರು. ಸಹಾಯಕರಾಗಿ ಪೂರ್ಣಿಮಾ ಪ್ರಭಾಕರ ರಾವ್, ಭಾರತೀ, ಜಯಶ್ರೀ ಮನೋಜ್, ಪೂಜಾ ಹಾಗೂ ರೂಪೇಶ್ ಪೂಜಾರಿ ತಂಡದಲ್ಲಿದ್ದರು.

ಮಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಶಾಸಕ ವೇದವ್ಯಾಸ ಕಾಮತ್ ಚಾಲನೆ



ಮಂಗಳೂರು: ರಾಜ್ಯಾದ್ಯಂತ ಎಸ್‌ಐಆರ್ ಪ್ರಕ್ರಿಯೆ ಆರಂಭಗೊಂಡಿದ್ದು ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅಧಿಕಾರಿಗಳ ಸಮ್ಮುಖದೊಂದಿಗೆ ಶಾಸಕ ವೇದವ್ಯಾಸ ಕಾಮತ್ ಅವರು ಮಂಗಳವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ಇಂದಿನಿಂದ ಒಂದು ತಿಂಗಳುಗಳ ಕಾಲ ಬಿಎಲ್‌ಒ ಗಳು ಮನೆ ಮನೆಗೆ ಬರಲಿದ್ದು ಅವರು ನೀಡುವ ನಮೂನೆಗಳನ್ನು ಅಗತ್ಯ ದಾಖಲೆಗಳೊಂದಿಗೆ ಸರಿಯಾಗಿ ಭರ್ತಿ ಮಾಡಿ, ಪರಿಷ್ಕೃತ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಿ. 18 ವರ್ಷ ತುಂಬಿದವರು, ಬೇರೆ ಕಡೆಯಿಂದ ಇಲ್ಲಿ ಬಂದು ನೆಲೆಸಿರುವವರಿಗೂ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಅವಕಾಶವಿದೆ. ಯಾವುದೇ ಒಬ್ಬ ಅರ್ಹನೂ ಸಹ ತನ್ನ ಮತದಾನದ ಹಕ್ಕನ್ನು ಕಳೆದುಕೊಳ್ಳದಂತೆ ಅಧಿಕಾರಿಗಳು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು. ನಾನು ಈ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದು, ನೀವೂ ಸಹ ಭಾಗಿಯಾಗಿ ಬಲಿಷ್ಠ ಪ್ರಜಾಪ್ರಭುತ್ವ ನಿರ್ಮಾಣಕ್ಕೆ ಕೈಜೋಡಿಸಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಈ ವೇಳೆ ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ಉಪ ಆಯುಕ್ತ (ಅಭಿವೃದ್ಧಿ) ನರೇಶ್ ಶೆಣೈ, ದಕ್ಷಿಣ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಅಕ್ಷತಾ, ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಅಶೋಕನಗರ ಎಸ್‌ಡಿಎಂ ಶಾಲೆಯಲ್ಲಿ ಮಾದಕ ವಸ್ತು ವಿರೋಧಿ ದಿನಾಚರಣೆ



ಮಂಗಳೂರು: ತಾಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಮತ್ತು ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ಟ್ರಸ್ಟ್ ವತಿಯಿಂದ ಅಶೋಕ ನಗರದ ಎಸ್‌ಡಿಎಂ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ನಡೆಯಿತು.

ಶಾಲಾ ಸಂಚಾಲಕ ಶ್ರುತಾ ಜಿತೇಶ್, ಉರ್ವಾ ಪೊಲೀಸ್ ಠಾಣೆಯ ಎಎಸ್‌ಐ ಲಕ್ಷ್ಮಣ್, ಪಿಸಿಗಳಾದ ವೆಂಕಟೇಶ್, ಮಹಮ್ಮದ್ ಆಲೀ, ಪ್ರಾಂಶುಪಾಲೆ ಜೋಯ್ ಜೀವನ್ ರೈ, ಪತ್ರಕರ್ತ ಶ್ರೀನಿವಾಸ ನಾಯಕ್ ಇಂದಾಜೆ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್, ಭಾಸ್ಕರ್ ರೈ ಕಟ್ಟ, ಮಂಗಳೂರು ತಾಲೂಕು ಧರ್ಮಸ್ಥಳ ಯೋಜನೆ ಯೋಜನಾಧಿಕಾರಿ ಚಂದ್ರಶೇಖರ್ ಎಸ್. ಉಪಸ್ಥಿತರಿದ್ದರು.

ಯೋಜನಾಧಿಕಾರಿ ಚಂದ್ರಶೇಖರ್ ಎಸ್. ಪ್ರಸ್ತಾವಿಕ ಮಾತನಾಡಿ, ಹಿಂದೆ ಕಷ್ಟದ ದಿನಗಳಿದ್ದವು. ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಕಷ್ಟದ ಅರಿವಿಲ್ಲದ ಕಾರಣ ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ. ಈ ಕುರಿತು ಜಾಗೃತಿ ಮೂಡಿಸುವ ಕಾರ್ಯವನ್ನು ಧರ್ಮಸ್ಥಳ ಖಾವಂದರು ಹಮ್ಮಿಕೊಂಡಿದ್ದಾರೆ ಎಂದರು.

300 ಮಂದಿ ವಿದ್ಯಾರ್ಥಿಗಳು, ಹಾಗೂ ಶಾಲಾ ಶಿಕ್ಷಕ ವೃಂದದವರು, ಈ ವಲಯದ ಮೇಲ್ವಿಚಾರಕರಾದ ಸವಿತಾ ಹೆಗ್ಡೆ ವಸಂತ್ ಪೆರಾಜೆ, ಸೇವಾಪ್ರತಿನಿಧಿ ರೇಖಾ ಸುರೇಖ ಉಪಸ್ಥಿತರಿದ್ದರು. ದೀಪ್ತಿ ಕಾರ್ಯಕ್ರಮ ನಿರೂಪಿಸಿದರು. ಉಷಾ ಹೆಗ್ಡೆ ಕಾರ್ಯಕ್ರಮ ಸಂಘಟಿಸಿದರು.

ಶ್ರೀ ಗೋಕರ್ಣನಾಥೇಶ್ವರ ಪಿಯು ಕಾಲೇಜು: ವಿದ್ಯಾರ್ಥಿ ಪರಿಷತ್ ಉದ್ಘಾಟನೆ



ಮಂಗಳೂರು: ಶ್ರೀ ಗೋಕರ್ಣನಾಥೇಶ್ವರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಪರಿಷತ್‌ಅನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕಾಲೇಜಿನ ಪ್ರಾಂಶುಪಾಲ ಪ್ರೊ. ಜಯವಂತ ನಾಯಕ್ ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಅವರು, ನಾರಾಯಣ ಗುರುಗಳ ತತ್ವದ ಆಶಯದಂತೆ ವಿದ್ಯಾರ್ಥಿಗಳು ತಮ್ಮ ಬದುಕನ್ನು ಒಂದೇ ಎಂಬ ಸಂಕಲ್ಪದಡಿ ರೂಪಿಸಿಕೊಳ್ಳಬೇಕು, ಈ ನಿಟ್ಟಿನಲ್ಲಿ ಎಲ್ಲಾ ವಿದ್ಯಾರ್ಥಿಗಳು ಸಾಮರಸ್ಯವನ್ನು ನಿಮ್ಮಲ್ಲಿ ಮೈಗೂಡಿಸಿಕೊಳ್ಳ ಬೇಕು ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷ, ಕಾಲೇಜಿನ ಹಳೆ ವಿದ್ಯಾರ್ಥಿ ಸಿ.ಎ. ನಂದಗೋಪಾಲ್ ಶೆಣೈ, ವಿದ್ಯಾರ್ಥಿ ಗಳಲ್ಲಿ ಉನ್ನತ ಸ್ಥಾನಕ್ಕೆ ಏರಬೇಕು ಎಂಬ ಹಂಬಲ ಇರಬೇಕು. ಅದರ ಜೊತೆಗೆ ನಮ್ಮ ತಂದೆ-ತಾಯಂದಿರನ್ನು ಗೌರವಿಸುವ ಆಶ್ರಯಿಸುವ ಮನಸ್ಸನ್ನು ಹೊಂದಿರಬೇಕು ಎಂದು ಹೇಳಿದರು.

ಕಾಲೇಜಿನ ಸಂಚಾಲಕ ವಸಂತ್ ಕಾರಂದೂರು, ಉಪಾಧ್ಯಕ್ಷ ಡಾ. ಬಿ.ಜಿ. ಸುವರ್ಣ, ಆಡಳಿತಾಧಿಕಾರಿ ನಾಗೇಶ್ ಕರ್ಕೇರ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಘುರಾಜ್ ಕದ್ರಿ, ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಜಯ ಪ್ರಕಾಶ್, ಬಿ.ಎಡ್ ಕಾಲೇಜಿನ ಪ್ರಾಂಶುಪಾಲ ಉದಯ್ ಕುಮಾರ್, ವಿದ್ಯಾರ್ಥಿ ಸಂಘದ ಸಲಹೆಗಾರ ದಿವ್ಯಾ ಯು, ವಿದ್ಯಾರ್ಥಿ ಪ್ರತಿನಿಧಿ ಜೀವಿಕ ಜೋಗಿ, ಕಾರ್ತಿಕ್ ಶೆಟ್ಟಿ ನಿಶಾ ಉಪಸ್ಥಿತರಿದ್ದರು. ಆಂಗ್ಲ ಭಾಷಾ ಉಪನ್ಯಾಸಕಿ ಅಶ್ವಿನಿ ಶೆಟ್ಟಿ ಸ್ವಾಗತಿಸಿದರು.

ಪ್ರತಿಷ್ಠಿತ ಕೆಂಪೇಗೌಡ ಪ್ರಶಸ್ತಿ ಪುರಸ್ಕೃತ 'ಲ್ಯಾಡರ್ ಮ್ಯಾನ್' ಕೇಶವ ಅಮೈಗೆ ಪುತ್ತೂರಿನಲ್ಲಿ ಸ್ವಾಗತ



ಪುತ್ತೂರು: ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಭಾರತ ಸರ್ಕಾರದ ಉಪ ರಾಷ್ಟ್ರಪತಿಗಳಿಂದ ಹಾಗೂ ಕರ್ನಾಟಕ ರಾಜ್ಯದ ರಾಜ್ಯಪಾಲ, ಮಠಾಧಿಪತಿಗಳು, ವಿವಿಧ ಮಂತ್ರಿಗಳಿಂದ ಪ್ರತಿಷ್ಠಿತ 'ನಾಡ ಪ್ರಭು ಕೆಂಪೇಗೌಡ ರಾಜ್ಯ ಪ್ರಶಸ್ತಿ' ಸ್ವೀಕರಿಸಿ ಪುತ್ತೂರಿಗೆ ಆಗಮಿಸಿದ ಎಸ್.ಆರ್.ಕೆ. ಲ್ಯಾಡರ್ಸ್‌ನ ಮಾಲಕ, ಉದ್ಯಮಿ- ಸಂಶೋಧಕ ಕೇಶವ ಅಮೈ ಅವರನ್ನು ನಗರದ ದರ್ಬೆ ವೃತ್ತದ ಬಳಿ ಸಾರ್ವಜನಿಕರು ಹಾಗೂ ಸಂಘ-ಸಂಸ್ಥೆಗಳ ವತಿಯಿಂದ ಭವ್ಯವಾಗಿ ಸ್ವಾಗತಿಸಿ, ಗೌರವಿಸಲಾಯಿತು.

ಕೃಷಿ ಕ್ಷೇತ್ರದಲ್ಲಿ ಅವರು ನಡೆಸಿರುವ ಅಪೂರ್ವ ಸಂಶೋಧನೆ ಹಾಗೂ ಸಾಧನೆಗಳನ್ನು ಗುರುತಿಸಿ ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನವು ಈ ಬಾರಿಯ ರಾಜ್ಯ ಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಪ್ರಶಸ್ತಿ ಪಡೆದು ಪುತ್ತೂರಿಗೆ ಮರಳಿದ ಸಾಧಕನನ್ನು ಬರಮಾಡಿಕೊಳ್ಳಲು ಪುತ್ತೂರಿನ ದರ್ಬೆ ವೃತ್ತದ ಬಳಿ ನೂರಾರು ಅಭಿಮಾನಿಗಳು ಹಾಗೂ ಪ್ರಮುಖರು ಜಮಾಯಿಸಿದ್ದರು.

ಈ ಸಂದರ್ಭ ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕೇಶವ ಅಮೈ ಅವರಿಗೆ ಕನ್ನಡದ ಹೆಮ್ಮೆಯ ಸಂಕೇತವಾದ ಕನ್ನಡ ಶಾಲು ಹೊದಿಸಿ, ಸಾಂಪ್ರದಾಯಿಕ ಕನ್ನಡ ಪೇಟವನ್ನು ಮುಡಿಗೇರಿಸುವ ಮೂಲಕ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

ಕಳೆದ 27 ವರ್ಷಗಳಿಂದ ಕೃಷಿಕರ ಶ್ರಮವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಅನೇಕ ಯಂತ್ರೋಪಕರಣಗಳನ್ನು ಆವಿಷ್ಕರಿಸಿ, ಕೃಷಿ ರಂಗಕ್ಕೆ ಅಪ್ರತಿಮ ಕೊಡುಗೆ ನೀಡಿ ರುವ ಕೇಶವ ಅಮೈ ಅವರ ಸಾಧನೆ ಪುತ್ತೂರಿಗೆ ಹೆಮ್ಮೆಯ ತಂದಿದೆ. ಅವರು ಕೇವಲ ಉದ್ಯಮಿಯಾಗಿರದೆ ಸಾಮಾಜಿಕ, ಶೈಕ್ಷಣಿಕ ಹಾಗೂ ಸಹಕಾರಿ ಕ್ಷೇತ್ರದಲ್ಲೂ ತೊಡಗಿಸಿಕೊಂಡಿರುವ ಅವರ ಸೇವೆಗೆ ಈ ಪ್ರಶಸ್ತಿ ಅತ್ಯಂತ ಸೂಕ್ತವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ಎಸ್.ಆರ್.ಕೆ. ಸಂಸ್ಥೆಯ ಸಿಬ್ಬಂದಿ ವರ್ಗ ಹಾಗೂ ಸ್ಥಳೀಯ ಮುಖಂಡರು, ರೋಟರಿ ಕ್ಲಬ್‌ನ ಪದಾಧಿಕಾರಿಗಳು, ವರ್ತಕರು ಮತ್ತು ಅಪಾರ ಸಂಖ್ಯೆಯ ಸಾರ್ವಜನಿಕರು ಉಪಸ್ಥಿತರಿದ್ದು, 'ಲ್ಯಾಡರ್ ಮ್ಯಾನ್' ಎಂಬ ಹೆಸರು ಗಳಿಸಿದ ಸಾಧಕನಿಗೆ ಶುಭ ಹಾರೈಸಿದರು.

ಕಾರ್ಮಿಕರು ಶ್ರಮ, ಪರೋಪಕಾರಿ ಜೀವನದ ಸಾಧಕರು: ಡಾ. ಪುನರೂರು



ಮುಲ್ಕಿ: ಕಾರ್ಮಿಕರು ದೇಶದ ರಾಯಭಾರಿಗಳಾಗಿದ್ದು ಶ್ರಮ ಹಾಗೂ ಪರೋಪಕಾರಿ ಜೀವನದ ಮೂಲಕ ಸಮಾಜದಲ್ಲಿ ಉತ್ತಮ ಸಾಧಕರಾಗಿದ್ದಾರೆ ಎಂದು ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಹೇಳಿದರು.

ಮುಲ್ಕಿ ಪುನರೂರು ಟೂರಿಸ್ಟ್ ಹೋಮ್‌ನ ಸಭಾಂಗಣದಲ್ಲಿ ಮಂಗಳವಾರ ನಡೆದ ಹೊಸ ಅಂಗಣ ತಿಂಗಳ ಬೆಳಕು ಹಾಗೂ ಸಾಧಕರಿಗೆ ಗೌರವಾರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವೇದಿಕೆಯಲ್ಲಿ ಅತಿಥಿಗಳಾಗಿ ತುಳು ವರ್ಲ್ಡ್ ಫೌಂಡೇಶನ್ ಅಧ್ಯಕ್ಷೆ ಭಾನುಮತಿ ಶೆಟ್ಟಿ ಕಕ್ವಗುತ್ತು, ಸುರೇಂದ್ರ ಶೆಣೈ ಕಕ್ವ, ಮುಲ್ಕಿ ಲಯನ್ಸ್ ಕ್ಲಬ್ ಅಧ್ಯಕ್ಷ ಹರ್ಷರಾಜ ಶೆಟ್ಟಿ, ಹಬಿಬುಲ್ಲ, ಸರೋಜಿನಿ ಸುವರ್ಣ, ಹೊಸ ಅಂಗಣದ ಹರೀಶ್ಚಂದ್ರ ಪಿ. ಸಾಲ್ಯಾನ್, ವಾಸು ಪೂಜಾರಿ ಚಿತ್ರಾಪು, ಶಶಿ ಅಮೀನ್ ಗೇರುಕಟ್ಟೆ, ವಿಜಯಾ ಹರಿಶ್ಚಂದ್ರ ಸಾಲ್ಯಾನ್, ಸಾಧು ಅಂಚನ್ ಮಟ್ಟು ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸ್ನೇಹಜೀವಿಯಾದ ಪೈಂಟರ್ ವೃತ್ತಿ ನಡೆಸುತ್ತಿರುವ ಸಲ್ವಡೋರ್ ಡಿಸೋಜ ಗೇರುಕಟ್ಟೆ ಅವರನ್ನು ಗೌರವಿಸಲಾಯಿತು. ಹರಿಶ್ಚಂದ್ರ ಪಿ. ಸಾಲ್ಯಾನ್ ಸ್ವಾಗತಿಸಿದರು. ವಾಸು ಪೂಜಾರಿ ವಂದಿಸಿದರು. ದಿನೇಶ್ ಕೋಲ್ನಾಡು ನಿರೂಪಿಸಿದರು.



ಪಕ್ಷಿಕೆರೆ ಕೆಮ್ರಾಲ್‌ನ ಕೊಯ್ಕುಡೆ ದ.ಕ.ಜಿ.ಪಂ. ಹಿ. ಪ್ರಾ.ಶಾಲೆಯ ಎಲ್ಲ ಮಕಳಿಗೆ ಕ್ಯಾಪ್ ಫೌಂಡೇಶನ್ ಬೆಂಗಳೂರು ಇವರ ವತಿಯಿಂದ ಕೊಡೆಗಳನ್ನು ವಿತರಿಸಲಾಯಿತು. ಕೇಶವ ನಾಯ್ಕ್, ಶಾಲೆ ಪ್ರಭಾರ ಮುಖ್ಯ ಶಿಕ್ಷಕಿ ಮಹಮ್ಮಾಯೀ, ವಿನೋದ ಶೆಟ್ಟಿ, ಸುಧಾಕರ ಮಂಜು ಗೌಡ, ಜಯಲಕ್ಷ್ಮೀ ಮೊದಲಾದವರು ಇದ್ದರು.

ಸುತ್ತಮುತ್ತ

ತುಂಬೆ ಡ್ಯಾಮ್‌ನಲ್ಲಿ ಏಕಾಏಕಿ ಏಳೂವರೆ ಮೀಟರ್ ನೀರು ಸಂಗ್ರಹ

ಬಂಟ್ವಾಳ: ಸೋಮವಾರ ರಾತ್ರಿ ತುಂಬೆಡ್ಯಾಮ್‌ನಲ್ಲಿಯವರೆಗೆ ಪೂರ್ವ ಸೂಚನೆ ನೀಡದೆ ಏಕಾಏಕಿ ಏಳೂವರೆ ಮೀಟರ್ ನೀರು ಸಂಗ್ರಹಿಸಿ ನದಿ ತೀರದ ವಿದ್ಯುತ್ ಪಂಪುಸೆಟ್ಟುಗಳು ಜಲಾವೃತಗೊಂಡಿದೆ ಎಂದು ನದಿ ತೀರದ ಸಂತ್ರಸ್ತ ರೈತರು ಆರೋಪಿಸಿದ್ದಾರೆ.

ಮಂಗಳೂರಿಗೆ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿರುವ ಪಟ್ಟಣದಲ್ಲಿ ಜಿಲ್ಲೆಯ ಜೀವನದಿ ನೇತ್ರಾವತಿಗೆ ತುಂಬೆಯಲ್ಲಿ ನಿರ್ಮಿಸಲಾದ ಡ್ಯಾಮ್ ಸೋಮವಾರ ರಾತ್ರಿ ಹೊತ್ತು ಯಾವುದೇ ಪೂರ್ವ ಸೂಚನೆ ನೀಡದೆ ಏಕಾಏಕಿ ಏಳೂವರೆ ಮೀಟರ್ ನೀರು ಶೇಖರಿಸಿದ ಪರಿಣಾಮ ಡ್ಯಾಮ್‌ನ ಮೇಲ್ಭಾಗದ ಸಜೀಪಮುನ್ನೂರು, ಸಂದಾವರ, ಪಾಣೆಮಂಗಳೂರು ಪ್ರದೇಶದ ನದಿ ತೀರದ ಅಕ್ಕಲದ ರೈತರ ವಿದ್ಯುತ್ ಪಂಪ್ ಸೆಟ್‌ಗಳು ಜಲಾವೃತಗೊಂಡು ರೈತರಿಗೆ ಅಪಾರ ನಷ್ಟ ಉಂಟಾಗುತ್ತದೆ ಎಂದು ಬಂಟ್ವಾಳ ತಾಲೂಕು ರೈತ ಸಂಘದ ಅಧ್ಯಕ್ಷ ಎಂ. ಸುಬ್ರಹ್ಮಣ್ಯ ಭಟ್ ಅವರು ದೂರಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆ ಹಾಗೂ ಜಿಲ್ಲಾಡಳಿತ ರೈತರ ಹಿತ ಕಾಪಾಡುವಲ್ಲಿ ಬೇಜವಾಬ್ದಾರಿ, ನಿರ್ಲಕ್ಷ್ಯತನವನ್ನು ಪದೇ ಪದೇ ತೋರಿಸುತ್ತಿದ್ದು, ಡ್ಯಾಮಿನ ಜಲಮಟ್ಟವನ್ನು ಕಾಯ್ದುಕೊಳ್ಳುವಂತೆ ಮತ್ತು ನದೀತೀರದ ಕೃಷಿಯನ್ನೇ ನಂಬಿ ಜೀವಿಸುವ ಅನ್ನದಾತ ಬದುಕಿನಲ್ಲಿ ಚೆಲ್ಲಾಟವಾಡದೆ ರೈತರ ಹಿತವನ್ನು ಕಾಪಾಡುವಂತೆ ಜಿಲ್ಲಾಡಳಿತ ಹಾಗೂ ಮಂಗಳೂರು ಮಹಾನಗರ ಪಾಲಿಕೆ ಎಚ್ಚರಿಕೆಯ ಕ್ರಮವನ್ನು ಕೈಗೊಳ್ಳುವಂತೆ ಮತ್ತು ಶಾಸಕರು, ಸಂಸದರು ಸಂಬಂಧಪಟ್ಟವರಿಗೆ ಗಮನ ಸೆಳೆಯುವಂತೆ ಬಂಟ್ವಾಳ ತಾಲೂಕು ರೈತ ಸಂಘದ ಅಧ್ಯಕ್ಷ ಎಂ. ಸುಬ್ರಹ್ಮಣ್ಯ ಭಟ್ ರೈತರ ಪರವಾಗಿ ಒತ್ತಾಯಿಸಿದ್ದಾರೆ.

ಇಂದು ಮೊಗ್ಲಿಂಗ್ ಸ್ಮರಣೆ

ಮಂಗಳೂರು: ಕರ್ನಾಟಕ ಜರ್ನಲಿಸ್ಟ್ ಯೂನಿಯನ್ ದ.ಕ.ಜಿಲ್ಲಾ ಸಮಿತಿ ವತಿಯಿಂದ ಬಲ್ಮಠದ ಕರ್ನಾಟಕ ಥಿಯೊಲಾಜಿಕಲ್ ಕಾಲೇಜಿನ ಸಹಯೋಗದಲ್ಲಿ ಪತ್ರಿಕಾ ದಿನಾಚರಣೆ ಅಂಗವಾಗಿ ಜು.1ರಂದು ಬೆಳಗ್ಗೆ 10ಕ್ಕೆ ಕನ್ನಡದ ಮೊದಲ ಪತ್ರಿಕೆ ಮಂಗಳೂರು ಸಮಾಚಾರದ ಸಂಸ್ಥಾಪಕ ಡಾ. ಹರ್ಮನ್ ಮೊಗ್ಲಿಂಗ್ ಸ್ಮರಣೆ ಕಾರ್ಯಕ್ರಮ ಥಿಯೊಲಾಜಿಕಲ್ ಕಾಲೇಜ್ ಆವರಣದಲ್ಲಿ ನಡೆಯಲಿದೆ. ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್ ಅವರು ಮೊಗ್ಲಿಂಗ್ ಪ್ರತಿಮೆಗೆ ಹಾರಾರ್ಪಣೆ ಮಾಡಲಿದ್ದಾರೆ. ಥಿಯೊಲಾಜಿಕಲ್ ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಎಂ.ವಾಟ್ಸನ್, ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ಕೆಜೆಯು ಜಿಲ್ಲಾ ಸಮಿತಿಯ ಗೌರವಾಧ್ಯಕ್ಷ ಹರೀಶ್ ಬಂಟ್ವಾಳ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಕೆಜೆಯು ಜಿಲ್ಲಾ ಸಮಿತಿ ಅಧ್ಯಕ್ಷ ಈಶ್ವರ ವಾರಣಾಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜು.7ರಂದು ವಿಶೇಷ ಮಾಹಿತಿ ಕಾರ್ಯಾಗಾರ

ಮಂಗಳೂರು: ಹಿಂದೂ ಸೇವಾ ಸಮಿತಿ ಟ್ರಸ್ಟ್ ಕುಲಶೇಖರ ಹಾಗೂ ಹಿಂದೂ ಸೇವಾ ಸಮಿತಿ ಮತ್ತು ಮಂಡಲ ಇವರ ಸಂಯುಕ್ತ ಆಶ್ರಯದಲ್ಲಿ ಸಾವಯವ ಕೃಷಿಕ ಗ್ರಾಹಕ ಬಳಗ ಮಂಗಳೂರು ಇವರ ಸಹಯೋಗದೊಂದಿಗೆ ಸಾರ್ವಜನಿಕರಿಗಾಗಿ ವಿಶೇಷ ಮಾಹಿತಿ ಕಾರ್ಯಾಗಾರವನ್ನು ಜು.7ರಂದು ಮಧ್ಯಾಹ್ನ 2.30ರಿಂದ 4.30ರವರೆಗೆ ಕುಲಶೇಖರ ಪೋಸ್ಟ್ ಆಫೀಸ್ ಎದುರು ಓಂ ಶ್ರೀ ಶಕ್ತಿ ಗಣಪತಿ ಮಂದಿರದಲ್ಲಿ ಆಯೋಜಿಸಲಾಗಿದೆ. ಕಾರ್ಯಾಗಾರದಲ್ಲಿ 'ತಾರಸಿ ಕೈತೋಟ' ಹಾಗೂ 'ಸ್ವಸ್ಥ ಜೀವನ-ಸ್ವಸ್ಥ ಭೋಜನ' ವಿಷಯಗಳ ಕುರಿತು ಉಪಯುಕ್ತ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ನೀಡಲಾಗುವುದು. ಆಸಕ್ತ ಸಾರ್ವಜನಿಕರು ಈ ಉಚಿತ ಕಾರ್ಯಾಗಾರದಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆಯುವಂತೆ ಕುಲಶೇಖರ ಹಿಂದೂ ಸೇವಾ ಸಮಿತಿ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಹಾವುಕಡಿತ ಸಮಸ್ಯೆಗೆ 4ಎ ಕಾರ್ಯತಂತ್ರ

ಮಂಗಳೂರು: ವಿಷಪೂರಿತ ಹಾವುಗಳು ಕಚ್ಚಿದಾಗ ನೀಡಲಾಗುವ ಜೀವರಕ್ಷಕ ಹಾವಿನ ವಿಷದ ಪ್ರತಿವಿಷ (ಎಎಸ್‌ವಿ) ತಯಾರಿಕಾ ಕಂಪನಿ ಮ್ಯಾಸ್ಕ್ರೆಂಡ್ ಆಂಗಸಂಸ್ಥೆಯಾಗಿರುವ ಬಿಎಸ್‌ವಿ, ಹಾವು ಕಡಿತದ ಸಮಸ್ಯೆಯನ್ನು ದೇಶಾದ್ಯಂತ ಪರಿಣಾಮಕಾರಿಯಾಗಿ ಬಗೆಹರಿಸಲು ಸಮಗ್ರ ಸ್ವರೂಪದ '4ಎ' ಕಾರ್ಯತಂತ್ರ ಜಾರಿಗೆ ತಂದಿದೆ.

ಹಾವು ಕಡಿತದ ಪ್ರಕರಣಗಳಲ್ಲಿ ಚಿಕಿತ್ಸೆಯನ್ನು ಬಲಪಡಿಸಿ, ಸಮಯೋಚಿತ ಚಿಕಿತ್ಸೆ ಹಾಗೂ ಚಿಕಿತ್ಸೆಯ ಫಲಿತಾಂಶಗಳನ್ನು ಸುಧಾರಿಸುವ ಉದ್ದೇಶವನ್ನು ಈ ಕಾರ್ಯಕ್ರಮ ಹೊಂದಿದೆ ಎಂದು ಬಿಎಸ್‌ವಿಯ ಭಾರತ ವಹಿವಾಟಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಒಒ) ಶಿವಾನಿ ಶರ್ಮಾ ದೇವಾ ತಿಳಿಸಿದ್ದಾರೆ. ಹಾವು ಕಡಿತದ ಬಗ್ಗೆ ಗ್ರಾಮೀಣ ಜನರಲ್ಲಿ ಮನೆ ಮಾಡಿರುವ ತಪ್ಪು ಕಲ್ಪನೆಗಳನ್ನು ನಿವಾರಿಸಿ, ಪ್ರಥಮ ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸುವುದು, ಹಾವು ಕಡಿತಕ್ಕೆ ಒಳಗಾದವರನ್ನು ತ್ವರಿತವಾಗಿ ವೈದ್ಯರ ಬಳಿಗೆ ಕರೆದೊಯ್ಯುವುದು, ಹಾವಿನ ವಿಷದ ಪ್ರತಿವಿಷ (ಎಎಸ್‌ವಿ) ಸರ್ವತ್ರ ಸುಲಭವಾಗಿ ಲಭ್ಯವಾಗುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ನೋಡುವುದು ಎಂದು ವಿವರಿಸಿದ್ದಾರೆ. ಸರಿಯಾದ ಚಿಕಿತ್ಸೆಯನ್ನು ನೀಡುವುದು ಸಾವಿನ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡುವುದರ ಜೊತೆಗೆ ನರಮಂಡಲದ ವಿಷಕಾರಿ ಪರಿಣಾಮ (ಪಾರ್ಶ್ವ ವಾಯು), ರಕ್ತ ಹೆಪ್ಪುಗಟ್ಟುವಿಕೆಯ ಅಸ್ವಾಭಾವಿಕತೆ, ತೀವ್ರ ಮೂತ್ರಪಿಂಡದ ಹಾನಿ, ಬಹು ಅಂಗಾಂಗ ವೈಫಲ್ಯ ಹಾಗೂ ಸಾವಿನಂತಹ ಗಂಭೀರ ತೊಂದರೆಗಳನ್ನು ತಡೆಗಟ್ಟಲು ನೆರವಾಗಲಿದೆ ಎಂದು ದೇರಳಕಟ್ಟೆಯ ಯೆನೆಪೋಯ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಪ್ರೊಫೆಸರ್ ಡಾ. ಆರನ್ ಡಿ'ಸೋಜಾ ಹೇಳಿದ್ದಾರೆ.

ಉಜಿರೆಯ ರಬ್ಬರ್ ಸೊಸೈಟಿ ಸಿಇಒ ರಾಜು ಶೆಟ್ಟಿ ಅವರ ಬೀಳ್ಕೊಡುಗೆ ಸಮಾರಂಭ | ಸಂಘ-ಸಂಸ್ಥೆಗಳಿಂದ ಗೌರವ

ಅಸಾಮಾನ್ಯ ಕೆಲಸಕ್ಕೆ ನೀಡುವ ಗೌರವ ಇತರರಿಗೆ ಪ್ರೇರಣೆ: ಸತೀಶ್ಚಂದ್ರ



ಬೆಳ್ತಂಗಡಿ: ರಾಷ್ಟ್ರಮಟ್ಟದಲ್ಲಿ ರಬ್ಬರ್ ಸೊಸೈಟಿ ಹೆಸರು ಆಗಲು ಹಾಗೂ ಸಾಧನೆಗೆ ರಾಜು ಶೆಟ್ಟಿ ಅಕ್ಷರಶಃ ಕಾರಣರಾಗಿದ್ದಾರೆ. ಖರೀದಿ ಸುಲಭ, ಮಾರಾಟ ಕಷ್ಟ ಎಂಬ ಇತ್ತೀಚಿನ ವರ್ಷಗಳ ಪರಿ ಸ್ಥಿತಿಯಲ್ಲಿ ಅವರು ನಿಷ್ಠೆಯಿಂದ ಸೇವೆ ಸಲ್ಲಿಸಿದ್ದಾರೆ ಎಂದು ಕ್ಯಾಂಪ್ಕೊ ಅಧ್ಯಕ್ಷ ಎಸ್. ಆರ್. ಸತೀಶ್ಚಂದ್ರ ಹೇಳಿದರು.

ಶ್ರೀ ಕೃಷ್ಣಾನುಗ್ರಹ ಸಭಾಭವನದಲ್ಲಿ ಮಂಗಳವಾರ ಉಜಿರೆಯ ರಬ್ಬರ್ ಸೊಸೈಟಿಯ ಸಿಇಒ ಆಗಿ ವಯೋನಿವೃತ್ತಿ ಹೊಂದಿದ ರಾಜು ಶೆಟ್ಟಿ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಈಗಿನ ವ್ಯವಸ್ಥೆಗಳ ವಿರುದ್ಧ ಇಂತಹ ಕೆಲಸ ಮಾಡುವುದು ಸಾಹಸವೇ ಆಗಿದೆ. ಅಸಾಮಾನ್ಯ ಕೆಲಸಕ್ಕೆ ನೀಡುವ ಗೌರವ ಇತರರಿಗೆ ಪ್ರೇರಣೆಯಾಗುತ್ತದೆ. ದೇಶದ ಬೆಳವಣಿಗೆಯಲ್ಲಿ ಸಹಕಾರಿ ಕ್ಷೇತ್ರ ಮಹತ್ವದ ಪಾತ್ರ ವಹಿಸಿದೆ. ಭಾರತದ ಹೆಚ್ಚಿನ ಎಲ್ಲಾ ಕೃಷಿ ಉತ್ಪನ್ನಗಳಿಗೆ ಜಗತ್ತು ತೆರೆದುಕೊಂಡಿದೆ. ಆದರೆ ಉತ್ಪನ್ನಗಳ ಬ್ರಾಂಡಿಂಗ್, ಪ್ಯಾಕಿಂಗ್ ಹಾಗೂ ಗುಣಮಟ್ಟ ಕಾಯ್ದುಕೊಳ್ಳುವುದು ಅತಿ ಮುಖ್ಯ ಎಂದು ಹೇಳಿದರು.

ಮಾಜಿ ಸಚಿವ ಗಂಗಾಧರ ಗೌಡ ಮಾತನಾಡಿ, ಉತ್ತಮ ವ್ಯವಹಾರ ಚತುರ ರಾಜು ಶೆಟ್ಟಿ ರಬ್ಬರ್ ಸೊಸೈಟಿಯನ್ನು ಬೆಳೆಸಲು ನಿರಂತರ ಶ್ರಮವಹಿಸಿದ ನಿಷ್ಕಳಂಕ ವ್ಯಕ್ತಿಯಾಗಿದ್ದಾರೆ ಎಂದರು.

ಸಂಘದ ಅಧ್ಯಕ್ಷ ಶ್ರೀಧರ ಜಿ.ಭಿಡೆ ಮಾತನಾಡಿ, 33 ವರ್ಷಗಳಿಂದ ಸಿಇಒ ಆಗಿ ಪ್ರತಿಯೊಂದು ಹಂತದಲ್ಲೂ ಸಂಘದ ಅಭಿವೃದ್ಧಿಯಲ್ಲಿ ರಾಜು ಶೆಟ್ಟಿ ಅವರು ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಇವರ ಸೇವಾವಧಿಯಲ್ಲಿ ಪ್ರತಿ ವರ್ಷವೂ ಸಂಘ ಲಾಭವನ್ನು ಗಳಿಸಿರುವುದು ಹೆಮ್ಮೆಯ ವಿಚಾರ. ಮುಂದಿನ ಎರಡು ವರ್ಷ ಅವಧಿಗೆ ಇವರು ಸಂಘದ ವಿಶೇಷ ಅಧಿಕಾರಿಯಾಗಿ ಸೇವೆ ನೀಡಲಿದ್ದಾರೆ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ರಾಜು ಶೆಟ್ಟಿ ಆಡಳಿತ ಮಂಡಳಿ, ಹಿರಿಯರು, ಸಿಬ್ಬಂದಿ, ಸದಸ್ಯರು ನೀಡಿದ ಪ್ರೋತ್ಸಾಹ ಅಭೂತಪೂರ್ವ. ಇವರೆಲ್ಲರಿಗೂ ಸದಾ ಕೃತಜ್ಞನಾಗಿದ್ದೇನೆ ಎಂದರು.

ಹಿರಿಯ ಅರ್ಥಶಾಸ್ತ್ರಜ್ಞ ಡಾ. ವಿಘ್ನೇಶ್ವರ ವರ್ಮುಡಿ ಶುಭ ಹಾರೈಸಿದರು. ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯ ಉಪಸ್ಥಿತರಿದ್ದರು. ಸಂಘದ ಸಿಬ್ಬಂದಿ ಪ್ರಕಾಶ್ ಗೌಡ ಬಂಗಾಡಿ ಸಿಎ ಬ್ಯಾಂಕ್ ಮಾಜಿ ಅಧ್ಯಕ್ಷ ಲಕ್ಷ್ಮಣಗೌಡ, ರಾಜು ಅವರ ಕಾರ್ಯವೈಖರಿಯನ್ನು ಶ್ಲಾಘಿಸಿ, ಅಭಿನಂದಿಸಿದರು. ಸಂಘ- ಸಂಸ್ಥೆಗಳ ವತಿಯಿಂದ ರಾಜು ಅವರನ್ನು ಗೌರವಿಸಲಾಯಿತು.

ನಿರ್ದೇಶಕರಾದ ಜಯಶ್ರೀ ಡಿ. ಎಂ., ಆರ್. ಸುಭಾಷಿಣಿ, ಬೈರಪ್ಪ, ಕೆ.ರಾಮ ನಾಯ್ಕ, ಬಾಲಕೃಷ್ಣ ಗೌಡ ಕೆ., ಸೋಮನಾಥ ಬಂಗೇರ, ಗ್ರೇಸಿಯನ್ ವೇಗಸ್, ಎಚ್.ಪದ್ಮ ಗೌಡ, ಕೆ.ಜೆ.ಆಗಸ್ಟಿನ್, ತಿಮ್ಮಪ್ಪ ಗೌಡ ಪಿ., ಭರತ್ ಕುಮಾರ್ ಎಚ್., ಶಾಜಿ ಪಿ.ಎ., ಶಶಿಧರ ಡೋಂಗ್ರೆ, ವಿಶೇಷ ಆಹ್ವಾನಿತರಾದ ಅಬ್ರಾಹಾಂ ಬಿ. ಎಸ್., ಹರೀಶ್ ರಾವ್ ಭಾಗವಹಿಸಿದ್ದರು. ಸಂಘದ ಸಿಬ್ಬಂದಿ ಪದ್ಮಾವತಿ ಜೆ. ಶೆಟ್ಟಿ ಸನ್ಮಾನ ಪತ್ರ ವಾಚಿಸಿದರು. ಉಪಾಧ್ಯಕ್ಷ ಅನಂತಭಟ್ ಮಚ್ಚಿಮಲೆ ಸ್ವಾಗತಿಸಿದರು. ನಿಯೋಜಿತ ಸಿಇಒ ಹರಿಪ್ರಸಾದ್ ವಂದಿಸಿದರು. ಪತ್ರಕರ್ತ ಅಶ್ರಫ್ ಆಲಿ ಕುಂಞಿ ಕಾರ್ಯಕ್ರಮ ನಿರೂಪಿಸಿದರು.

ಅಪಾಯಕಾರಿಯಾಗಿದೆ ತುಮ್ಮಿನಮುಲ್ಲಿ ಸಾಲಾಡಿ ಕಿಂಡಿ ಅಣೆಕಟ್ಟೆಯ ಸೇತುವೆ | ಬೇಕಿದೆ ತುರ್ತು ಕ್ರಮ

ಕೊಂಚ ಮೈಮರೆತರೂ 12 ಅಡಿ ಆಳಕ್ಕೆ ಬೀಳುವ ಆತಂಕ!



ಸಂಗಮ ವಿಶೇಷ

ಕುಂದಾಪುರ: ಹೊಸಾಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಸೇನಾಪುರ ಗ್ರಾಮದಲ್ಲಿರುವ ಬೃಹತ್ ತೋಡಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ತುಮ್ಮಿನಮುಲ್ಲಿ ಸಾಲಾಡಿ ಕಿಂಡಿ ಅಣೆಕಟ್ಟಿಗೆ ಸಮರ್ಪಕ ತಡೆಗೋಡೆ ಹಾಗೂ ಸುರಕ್ಷಾ ಕಂಬಗಳು ಇಲ್ಲದ ಪರಿಣಾಮ ಶಾಲಾ ಮಕ್ಕಳು, ವೃದ್ಧರು ಹಾಗೂ ಸಾರ್ವಜನಿಕರು ಜೀವ ಭಯದಿಂದಲೇ ಓಡಾಡುವ ಪರಿಸ್ಥಿತಿ ಎದುರಾಗಿದೆ.

ಪ್ರಮುಖ ಸಂಪರ್ಕ ಕೊಂಡಿ

ಪ್ರಮುಖವಾಗಿ ಸಾಲಾಡಿ, ಹಕ್ಲಾಡಿ – ಹುಬ್ಬಾಲಬೆಟ್ಟು, ಸೇನಾಪುರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ 2022ರಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ತುಮ್ಮಿನಮುಲ್ಲಿ ಸಾಲಾಡಿ ಕಿಂಡಿ ಅಣೆಕಟ್ಟು ನಿರ್ಮಾಣ ಮಾಡಲಾಗಿತ್ತು. ಸೇನಾಪುರ, ಹುಬ್ಬಾಳಬೆಟ್ಟು – ಸಾಲಾಡಿ ನಡುವಿನ ಪ್ರದೇಶದ ಜನರ ಪ್ರಮುಖ ಸಂಪರ್ಕ ಮಾರ್ಗವಾದ ಈ ಸೇತುವೆಯಾಗಿದೆ. ಸುಮಾರು 12 ಅಡಿ ಆಳದ ಈ ತಡೆಗೋಡೆ ಮಾದರಿಯ ಸೇತುವೆಗೆ ಯಾವುದೇ ಸುರಕ್ಷತಾ ಕಂಬಗಳಿಲ್ಲದೇ ಅಪಾಯಕ್ಕೆ ಆಹ್ವಾನಿಸುತ್ತಿದೆ. ಈ ಮಾರ್ಗದಲ್ಲಿ ನಿತ್ಯವೂ 50ಕ್ಕೂ ಹೆಚ್ಚು ಮಂದಿ ಸಂಚರಿಸುತ್ತಿದ್ದು, 20ಕ್ಕೂ ಹೆಚ್ಚು ಶಾಲಾ ಮಕ್ಕಳು ಹಕ್ಲಾಡಿ ಶಾಲೆಗೆ ತೆರಳಲು ಇದೇ ಸೇತುವೆಯನ್ನು ಅವಲಂಬಿಸಿದ್ದಾರೆ. ಮಳೆಗಾಲದ ಸಂದರ್ಭಗಳಲ್ಲಿ ಅಂತೂ ಹೆಚ್ಚಿನ ಅಪಾಯ ಎದುರಾಗುತ್ತದೆ ಎಂಬುದು ಇಲ್ಲಿನ ಸ್ಥಳೀಯರ ಮಾತು.

ಪ್ರಮುಖ ಸಂಪರ್ಕ ಸೇತುವೆ

ಹೊಸಾಡು ಗ್ರಾ.ಪಂ ವ್ಯಾಪ್ತಿಯ ಸೇನಾಪುರದಲ್ಲಿ ಗ್ರಾಮ ಲೆಕ್ಕಾಧಿಕಾರಿ ಕಚೇರಿ ಹಾಗೂ ರೇಷನ್ ವಿತರಣೆ ಕೇಂದ್ರ ಹಾಗೂ ಇನ್ನಿತರ ಕೆಲಸಗಳಿಗೆ ಸಾಲಾಡಿ ಪ್ರದೇಶದಿಂದ ಹಾಗೂ ಸೇನಾಪುರ, ಹುಬ್ಬಾಳಬೆಟ್ಟು ಪ್ರದೇಶದಿಂದ ನಿತ್ಯವೂ ಜನರು ಜೀವ ಪಣಕ್ಕಿಟ್ಟು ಈ ಸೇತುವೆಯ ತಡೆಗೋಡೆ ಮೇಲೆಯೇ ಸಂಚರಿಸುತ್ತಿದ್ದಾರೆ. ಆದ್ದರಿಂದ ಈ ಸೇತುವೆಗೆ ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂಬುದು ಈ ಭಾಗದ ಜನರು ಕೆಲ ವರ್ಷದಿಂದ ಮನವಿಯನ್ನು ಆಡಳಿತಕ್ಕೆ ಸಲ್ಲಿಸುತ್ತಾ ಬಂದಿದ್ದಾರೆ. ಆದರೆ ಇನ್ನೂ ಈಡೇರಿಲ್ಲ.

> ಈವರೆಗೆ ತುಮ್ಮಿನಮುಲ್ಲಿ ಸಾಲಾಡಿ ಕಿಂಡಿ ಸೇತುವೆ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ. ಒಂದೆರೆಡು ದಿನಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗುವುದು. ಅನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.
>
> ● ಶೋಭಾ, ಪಿಡಿಒ

> ತುಮ್ಮಿನಮುಲ್ಲಿ ಸಾಲಾಡಿ ಕಿಂಡಿ ಸೇತುವೆಯ ತಡೆಗೋಡೆ ಮೇಲೆ ನಿತ್ಯವೂ ಶಾಲಾ ಮಕ್ಕಳು ಸೇರಿದಂತೆ 50ಕ್ಕೂ ಮಿಕ್ಕಿ ಜನರು ಸಂಚರಿಸುತ್ತಿದ್ದಾರೆ. ಇಲ್ಲಿ ಸುರಕ್ಷತಾ ಕಂಬಗಳ ಇಲ್ಲದಿರುವುದರಿಂದ ಅಪಾಯ ಹೆಚ್ಚಿದೆ. ಕೂಡಲೇ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಶೀಲಿಸಿ ಸುರಕ್ಷತಾ ಕ್ರಮ ಕೈಗೊಳ್ಳಬೇಕು.
>
> ● ರಾಜು ಸೇನಾಪುರ, ಸಾಮಾಜಿಕ ಕಾರ್ಯಕರ್ತ

ಮಳೆಗಾಲದಲ್ಲಿ ಕಾಲು ಜಾರಿ ಬೀಳುವ ಆತಂಕ!

ಪ್ರತಿ ಮಳೆಗಾಲ ಸಂದರ್ಭದಲ್ಲೂ ಇಲ್ಲಿನ ಸುಮಾರು 12 ಅಡಿ ಆಳದ ತೋಡು ಅಪಾಯದ ಮಟ್ಟ ಮೀರಿ ಹರಿಯುತ್ತದೆ. ಇದೇ ವೇಳೆ ಈ ಮಾರ್ಗದಲ್ಲಿ ಸಂಚರಿಸುವ ಶಾಲಾ ಮಕ್ಕಳು , ಸಾರ್ವಜನಿಕರು ಭಯದಲ್ಲೇ ನಡೆದಾಡಬೇಕಿದೆ. ಕೆಲ ದಿನಗಳ ಹಿಂದೆ ಇಬ್ಬರು ವಯೋವೃದ್ಧರು ಕಾಲುಜಾರಿ ಬಿದ್ದಿದ್ದು, ಅದೃಷ್ಟವಶಾತ್ ತೋಡಿಗೆ ಬೀಳುವ ಅಪಾಯದಿಂದ ಪಾರಾಗಿದ್ದಾರೆ. ಹೀಗಾಗಿ ಹೆಚ್ಚಿನ ಅಪಾಯ ಸಂಭವಿಸುವ ಮುನ್ನ ಸೇತುವೆಗೆ ಅಗತ್ಯ ಸುರಕ್ಷತಾ ಕಂಬ ಅಳವಡಿಸಿ ಕ್ರಮ ಕೈಗೊಳ್ಳಬೇಕು ಎಂದು ಈ ಭಾಗದ ಜನರು ಆಡಳಿತವನ್ನು ಒತ್ತಾಯಿಸಿದ್ದಾರೆ.

ಸುತ್ತಮುತ್ತ

ಕೋಟ: ಕಾವ್ಯ ಹಂದೆ ಅಭಿನಯದ ಏಕವ್ಯಕ್ತಿ ಪ್ರದರ್ಶನ



ಕೋಟ: ಸುವಿಕಾ ಸಾಂಸ್ಕೃತಿಕ ಸಂಘಟನೆ, ಕೋಟ ಸಂಸ್ಥೆಯಿಂದ ಮೈಸೂರಿನ ಭಾರತೀಯ ಶೈಕ್ಷಣಿಕ ರಂಗಭೂಮಿ ಮತ್ತು ಮೈಸೂರಿನ ಆರೋಹ ಕನ್ಸ್ಟ್ರಕ್ಷನ್ ಇವರ ಜಂಟಿ ಆಶ್ರಯದಲ್ಲಿ ಜೂ.27 ಹಾಗೂ ಬೆಂಗಳೂರಿನ ಅಜೀಮ್ ಪ್ರೇಮ್ ಜಿ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕೋರಮಂಗಲದ ಇಂಡಿಯನ್ ಹೆರಿಟೇಜ್ ಅಕಾಡೆಮಿಯ 'ಕಶ್ಯಪ' ಸಭಾಂಗಣದಲ್ಲಿ ಜೂ.28 ರಂದು ರಾಷ್ಟ್ರೀಯ ರಂಗನಿರ್ದೇಶಕ ಡಾ. ಶ್ರೀಪಾದ್ ಭಟ್ ಅವರ ಪರಿಕಲ್ಪನೆ ವಿನ್ಯಾಸ ನಿರ್ದೇಶನದಲ್ಲಿ ಕೋಟ ಕಾವ್ಯ ಹಂದೆ ಅಭಿನಯದ ಏಕವ್ಯಕ್ತಿ ಪ್ರದರ್ಶನ 'ಹಕ್ಕಿ ಮತ್ತು ಅವಳು' ಕಾವ್ಯಾಭಿನಯದ ಎರಡು ಪ್ರದರ್ಶನಗಳು ನಡೆದವು. ಕನ್ನಡದಲ್ಲಿನ ಹಾಗೂ ಕನ್ನಡಕ್ಕೆ ಅನುವಾದ ಗೊಂಡಿರುವ ಆಯ್ದ ಕವನಗಳು ಕಥೆಗಳು ಮತ್ತು ಪ್ರಬಂಧಗಳನ್ನು ಆಧರಿಸಿದ 'ಹಕ್ಕಿ ಮತ್ತು ಅವಳು' ಹೆಣ್ಣಿನ ಅಸ್ತಿತ್ವ, ಸ್ವಾತಂತ್ರ್ಯ, ಬಿಡುಗಡೆಯ ಕನಸು, ಹಾಗೂ ಬದುಕಿನ ಸಂಕೀರ್ಣ ಬಂಧನಗಳನ್ನು ಕಲಾತ್ಮಕವಾಗಿ ಅನಾವರಣಗೊಳಿಸುವ ರಂಗ ಪ್ರಯೋಗವಾಗಿದೆ. 'ಸುವಿಕಾ'ದ ಕಾವ್ಯ ಹಂದೆ ಅಭಿನಯಿಸಿ, ವಿನಿತ ಎಸ್. ಸಂಗೀತ ನಿರ್ವಹಣೆಯಲ್ಲಿ ಸಹಕರಿಸಿ, ನೀನಾಸಂ ಮಧುಸೂದನ್ ಬೆಳಕಿನ ವಿನ್ಯಾಸ ಮಾಡಿದರು. ರಂಗ ಸಜ್ಜಿಕೆಯಲ್ಲಿ ಎಚ್. ಸುಜಯೀಂದ್ರ ಹಂದೆ ಸಹಕರಿಸಿದರು.

ಪಂಚವರ್ಣದ ಆಸಾಡಿ ಒಡ್ರ್ ಸಾಧಕ ಮಹಿಳಾ ಪುರಸ್ಕಾರ: ಜ್ಯೋತಿ ಆಯ್ಕೆ



ಕೋಟ: ಕೋಟ ಪಂಚವರ್ಣ ಮಹಿಳಾ ಮಂಡಲದ ಸಾದರಪಡಿಸುವ ಮಾತೃಸಂಸ್ಥೆ ಪಂಚವರ್ಣ ಯುವಕ ಮಂಡಲದ ಸಂಯೋಜನೆಯೊಂದಿಗೆ ನಡೆಯಲಿರುವ ಐದನೇ ವರ್ಷದ 'ಆಸಾಡಿ ಒಡ್ರ್' ಸಾಧಕ ಪುರಸ್ಕಾರಕ್ಕೆ ರೇಡಿಯೋ ಕುಂದಾಪ್ರ ಮೂಲಕ ಜನಜನಿತರಾದ ನಿರೂಪಕಿ ಜ್ಯೋತಿ ಸಾಲಿಗ್ರಾಮ ಅವರನ್ನು ಆಯ್ಕೆಗೊಳಿಸಲಾಗಿದೆ. ಆಗಸ್ಟ್ 9ಕ್ಕೆ ಬೆಳಿಗ್ಗೆ 9ರಿಂದ ಮಣೂರು ರಾಜಲಕ್ಷ್ಮೀ ಸಭಾಭವನದಲ್ಲಿ ನಡೆಯಲಿರುವ ವಿಶ್ವ ಕುಂದಾಪ್ರ ಕನ್ನಡ ದಿನದ ಅಂಗವಾಗಿ ಹಮ್ಮಿಕೊಳ್ಳಲಿರುವ 'ಆಸಾಡಿ ಒಡ್ರ್' ಕಾರ್ಯಕ್ರಮದಲ್ಲಿ ಈ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಪಂಚವರ್ಣ ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಂದಾಪುರ: ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಗಣೇಶ್ ಆಯ್ಕೆ



ಕುಂದಾಪುರ: ಲಯನ್ಸ್ ಜಿಲ್ಲೆ 317 ಸಿ ವ್ಯಾಪ್ತಿಗೆ ಒಳಪಡುವ ಪ್ರತಿಷ್ಠಿತ ಲಯನ್ಸ್ ಕ್ಲಬ್ ಕುಂದಾಪುರ ಕೋಸ್ಟಲ್‌ನ ನೂತನ ಅಧ್ಯಕ್ಷರಾಗಿ ಯುವ ಉದ್ಯಮಿ, ಕೋಸ್ಟಲ್ ಕ್ಲಬ್‌ನ ಸ್ಥಾಪಕ ಸದಸ್ಯ ಗಣೇಶ ಬೈಂದೂರು ಆಯ್ಕೆಯಾಗಿದ್ದಾರೆ. ಎಂಬಿಎ ಪದವೀಧರರಾಗಿರುವ ಇವರು ದಿ. ವಾಸುದೇವ ಬಳೆಗಾರ ಮತ್ತು ಲಕ್ಷ್ಮೀ ಬಳೆಗಾರ ದಂಪತಿಯ ಪುತ್ರ.

ಯುವ ಬಂಟರ ಸಂಘ: ಅಧ್ಯಕ್ಷರಾಗಿ ಡಾ.ಚೇತನ ಶೆಟ್ಟಿ ಕೋವಾಡಿ ಆಯ್ಕೆ



ಕುಂದಾಪುರ: ಕುಂದಾಪುರ ಪರಿಸರದಲ್ಲಿ ಶಿಕ್ಷಣ, ಕಲೆ, ಸಾಹಿತ್ಯ, ಸಾಂಸ್ಕೃತಿಕ ವಲಯದಲ್ಲಿ ಕ್ರಿಯಾಶೀಲವಾಗಿ ಗುರುತಿಸಿಕೊಂಡಿರುವ ಸಂಘಟನಾ ಚತುರ, ವಾಗ್ಮಿ ಡಾ.ಚೇತನ ಶೆಟ್ಟಿ ಕೋವಾಡಿ ಅವರು ಕುಂದಾಪುರ ತಾಲೂಕಿನ ಯುವ ಬಂಟರ ಸಂಘದ 2026– 28ನೇ ಸಾಲಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಪ್ರಸ್ತುತ ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ಕೃಷಿಕ ಕ್ರೋಢಬೈಲೂರು ಕೆಳಮನೆ ಬಾಲಕೃಷ್ಣ ಶೆಟ್ಟಿ ಹಾಗೂ ಕೋವಾಡಿ ಗೌರಿ ಬಿ. ಶೆಟ್ಟಿ ದಂಪತಿ ಪುತ್ರ.

ವಿದ್ಯಾರ್ಥಿಗಳ ಶಿಕ್ಷಣದ ಕನಸಿಗೆ ದಾನಿಗಳಿಂದ ಸಾಥ್ | ಸಾಧಕರಿಗೆ ಸನ್ಮಾನ

ಇನ್ನಾ ಶಾಲೆಯ ಎಲ್ಲಾ ಮಕ್ಕಳ ಶೈಕ್ಷಣಿಕ ದತ್ತು



ಕಾರ್ಕಳ: ತಾಲೂಕಿನ ಇನ್ನಾ ಗ್ರಾಮದ ಆಯುರ್ವೇದಭೂಷಣ ಎಂ.ವಿ. ಶಾಸ್ತ್ರೀ ಪ್ರೌಢಶಾಲೆಯಲ್ಲಿ ಸಂಸ್ಥಾಪಕರ ದಿನಾಚರಣೆ ಅಂಗವಾಗಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಶೈಕ್ಷಣಿಕ ದತ್ತು ಸ್ವೀಕಾರ, ಪ್ರತಿಭಾ ಪುರಸ್ಕಾರ ಮತ್ತು ದಾನಿಗಳಿಗೆ ಸನ್ಮಾನ ಕಾರ್ಯಕ್ರಮಗಳು ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸುಂಕದಕಟ್ಟೆ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾದ ರಾಘವೇಂದ್ರ ಶೆಟ್ಟಿ ಅವರು ಊರಿನ ವಿವಿಧ ದಾನಿಗಳ ಮೂಲಕ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಶಿಕ್ಷಣದ ವೆಚ್ಚವನ್ನು ಭರಿಸುವ ಶೈಕ್ಷಣಿಕ ದತ್ತು ಸ್ವೀಕಾರವನ್ನು ಘೋಷಣೆ ಮಾಡಿದರು. ಶಾಲೆಯಲ್ಲಿ ಹೆಚ್ಚು ಅಂಕ ಪಡೆದ ಸಮೀಕ್ಷಾ ಮತ್ತು ಕೃಷ್ಣಮೂರ್ತಿ ಅವರಿಗೆ ಶಾಲೆಯ ಸ್ಥಾಪಕ ಕಾರ್ಯದರ್ಶಿ ಡಾ.ಎನ್.ಜೆ . ಉಷಾರಾವ್ ಅವರ ನೆನಪಿನಲ್ಲಿ ತಲಾ 5,000 ರೂಗಳ ವಿದ್ಯಾರ್ಥಿವೇತನಗಳನ್ನು ನೀಡಿ ಅಭಿನಂದಿಸಲಾಯಿತು.

ಎಲ್ಲ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿಗಳನ್ನು ನಿವೃತ್ತ ಶಿಕ್ಷಕ ವಸಂತ್ ಎಂ. ಅವರು ಹಸ್ತಾಂತರಿಸಿದರು. ಬಳಿಕ ಮಾತನಾಡಿದ ಅವರು, ಈ ಕನ್ನಡ ಮಾಧ್ಯಮ ಶಾಲೆಯನ್ನು ಬೆಂಬಲಿಸುತ್ತಿರುವ ಊರಿನ ದಾನಿಗಳನ್ನು ಮತ್ತು ಈ ಶಾಲೆಯ ಆಡಳಿತ ಮಂಡಳಿಯ ಕೊಡುಗೆಯನ್ನು ಅಭಿನಂದಿಸಿದರು.

ಇನ್ನಾ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಕಾಚೂರು ಪರಾಡಿ ದಿವಾಕರ ಆರ್ ಶೆಟ್ಟಿಯವರು ಎಂ ವಿ ಶಾಸ್ತ್ರಿಯವರ ಭಾವಚಿತ್ರದ ಎದುರು ದೀಪವನ್ನು ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು.

ಶಾಲೆಯ ಸಂಚಾಲಕರಾದ ಸತೀಶ್ ಸದಾನಂದ ಅವರು ಸಂಸ್ಥಾಪಕರ ಬದುಕು ಮತ್ತು ಸಾಧನೆಗಳ ಬಗ್ಗೆ ವಿವರಿಸಿದರು. ದಾನಿಗಳಾದ ಇನ್ನಾ ಬೀಡು ದಿನೇಶ್ ಶೆಟ್ಟಿ ಅವರು ಉಪಸ್ಥಿತರಿದ್ದರು. ವಿದ್ಯಾರ್ಥಿವೇತನಗಳ ಪ್ರಾಯೋಜಕ ಜಯ ಎಸ್ ಕೋಟ್ಯಾನ್ ಮತ್ತು ದೀಪಕ್ ಕೋಟ್ಯಾನ್ ಅವರ ಪರವಾಗಿ ಅವರ ತಾಯಿ ಸುಲೋಚನಾ ಕೋಟ್ಯಾನ್ ಅವರನ್ನು ಸನ್ಮಾನಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕ ರಾಜೇಂದ್ರ ಭಟ್ ಕೆ. ಅವರು ಸ್ವಾಗತಿಸಿದರು. ಸಹಶಿಕ್ಷಕಿ ವಾಣಿ ಮತ್ತು ಸೌಮ್ಯಾ ಆರ್ ಶೆಟ್ಟಿ ನಿರ್ವಹಿಸಿದರು. ಶಿಕ್ಷಕ ಉಮೇಶ್ ಆಚಾರ್ಯ ವಂದಿಸಿದರು. ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೆ ಅರಣ್ಯ ಇಲಾಖೆಯಿಂದ ನೀಡಲ್ಪಟ್ಟ ಹಣ್ಣಿನ ಗಿಡಗಳನ್ನು ವಿತರಣೆ ಮಾಡಲಾಯಿತು.

ಸಾಧಕರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ ಕಳೆದ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶಕ್ಕೆ ಕಾರಣರಾದ ಶಾಲೆಯ ಎಲ್ಲಾ ವಿದ್ಯಾರ್ಥಿಗಳನ್ನು ದಾನಿಗಳಾದ ಜಯ ಎಸ್. ಕೋಟ್ಯಾನ್ ಮತ್ತು ದೀಪಕ್ ಕೋಟ್ಯಾನ್ ಅವರ ಕೊಡುಗೆಯಾದ ತಲಾ 2 ಸಾವಿರ ನಗದು ಬಹುಮಾನಗಳ ಜೊತೆಗೆ ಸನ್ಮಾನಿಸಲಾಯಿತು. ಹಾಗೆಯೇ ಶಾಲಾ ಎಲ್ಲಾ ಅಧ್ಯಾಪಕರನ್ನು ಸನ್ಮಾನಿಸಿದರು.

ಮಾದಕ ವಸ್ತು ಸಾಗಾಣಿಕೆ, ಬಳಕೆ ತಡೆಗೆ ಕ್ಯೂ.ಆರ್.ಕೋಡ್ ಅಭಿವೃದ್ಧಿ

ಡ್ರಗ್ಸ್ ಮುಕ್ತ ಜಿಲ್ಲೆಯನ್ನಾಗಿಸಲು ಕೈಜೋಡಿಸಿ: ಡಿಸಿ



ಉಡುಪಿ: ಜಿಲ್ಲೆಯಾದ್ಯಂತ ಮಾದಕ ವಸ್ತುಗಳ ಸಾಗಾಣಿಕೆ, ಬಳಕೆ ಮತ್ತು ಮಾರಾಟದ ಬಗ್ಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಲು ಕ್ಯೂ.ಆರ್ ಕೋಡ್ ಅನ್ನು ಅಭಿವೃದ್ಧಿಗೊಳಿಸಲಾಗಿದೆ. ಸಾರ್ವಜನಿಕರು ಈ ಬಗ್ಗೆ ಮಾಹಿತಿ ಇದ್ದಲ್ಲಿ ಕೂಡಲೇ ಕ್ಯೂ ಆರ್ ಕೋಡ್ ಬಳಕೆ ಮೂಲಕ ಮಾಹಿತಿ ಹಂಚಿಕೊಳ್ಳಬೇಕೆಂದು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಅಧಿಕಾರಿಗಳಿಗೆ ಕರೆ ನೀಡಿದರು.

ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಮಾದಕ ದ್ರವ್ಯ ಕಳ್ಳಸಾಗಣೆ ತಡೆಗೆ ಸಂಬಂಧಿಸಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಾದಕ ವಸ್ತುಗಳ ನಿಯಂತ್ರಣಕ್ಕೆ ಅನುಕೂಲ ವಾಗಲು ಪೊಲೀಸ್ ಇಲಾಖೆಯು ಕ್ಯೂ.ಆರ್. ಕೋಡ್ ಅನ್ನು ಅಭಿವೃದ್ಧಿಗೊಳಿಸಿದೆ. ಮಾಹಿತಿ ನೀಡಿದವರ ವಿವರವನ್ನು ರಹಸ್ಯವಾಗಿ ಇಡಲಾಗುವುದು. ಜಿಲ್ಲೆಯನ್ನು ಮಾದಕ ವಸ್ತು ಮುಕ್ತವನ್ನಾಗಿಸಲು ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದರು. ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಕೈಗಾರಿಕಾ ಕೇಂದ್ರ, ಕಾರ್ಮಿಕ ಇಲಾಖೆಯವರು, ಕ್ಯೂ ಆರ್ ಕೋಡ್ ಅನ್ನು ಸಾರ್ವಜನಿಕವಾಗಿ ಎದ್ದುಕಾಣುವ ಹಾಗೆ, ಬಸ್ ನಿಲ್ದಾಣ, ಕೈಗಾರಿಕಾ ಹಾಗೂ ಕಾರ್ಮಿಕ ಅಸೋಸಿಯೇಷನ್ ಸೇರಿದಂತೆ ಮತ್ತಿತರ ಕಡೆಗಳಲ್ಲಿ ಹಾಗೂ ಸಿನಿಮಾ ಹಾಲ್‌ಗಳಲ್ಲಿ ಪ್ರಚಾರ ಪಡಿಸಬೇಕು ಮಾದಕ ವಸ್ತುಗಳ ಸೇವನೆಯಿಂದ ಮನುಷ್ಯನ ಆರೋಗ್ಯದ ಮೇಲೆ ಗಂಭೀರ ಮಾರಕ ಕಾಯಿಲೆಗಳು ಉಂಟಾಗುವುದರ ಜೊತೆಗೆ ಮಾನಸಿಕ ನೆಮ್ಮದಿ ಹಾಳಾಗುವುದು ಹಾಗೂ ಆರ್ಥಿಕವಾಗಿ ನಷ್ಟ ಉಂಟಾಗುತ್ತದೆ. ಹೆಚ್ಚಾಗಿ ಯುವ ಸಮುದಾಯದವರು ಇಂತಹ ಪೀಡೆಗಳಿಗೆ ಆಕರ್ಷಿತವಾಗುತ್ತಾರೆ. ಶಾಲಾ– ಕಾಲೇಜುಗಳಲ್ಲಿ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮದ ಬಗ್ಗೆ ಹೆಚ್ಚು ಹೆಚ್ಚು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಯುವ ಜನರಲ್ಲಿ ಜಾಗೃತಿ ಮೂಡಿಸಬೇಕೆಂದರು.

ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್, ಸಹಾಯಕ ಕಮಿಷನರ್ ರಶ್ಮಿ, ಅಪರ ಪೊಲೀಸ್ ಅಧೀಕ್ಷಕ ಸುಧಾಕರ್ ನಾಯಕ್, ಪೌರಾಯುಕ್ತ ಮಹಾಂತೇಶ ಹಂಗರಗಿ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

ಗಾಂಜಾ ಬೆಳೆ ಬೆಳೆಯದಂತೆ ನಿಗಾ

ಕೃಷಿ, ತೋಟಗಾರಿಕೆ, ಅರಣ್ಯ ಇಲಾಖೆಯ ಸಿಬ್ಬಂದಿಗಳು ಕೃಷಿ ಜಮೀನುಗಳು, ಕಾಡಂಚಿನ ಪ್ರದೇಶಗಳಿಗೆ ಆಗಿಂದಾಗ್ಗೆ ಅನಿರೀಕ್ಷಿತ ಭೇಟಿ ನೀಡಿ ಗಾಂಜಾ ಬೆಳೆಗಳನ್ನು ಬೆಳೆಯುತ್ತಿರುವ ಬಗ್ಗೆ ಪರಿಶೀಲನೆ ನಡೆಸಬೇಕು. ಅಲ್ಲದೇ ಹೊರ ರಾಜ್ಯದಿಂದ ಬರುವ ಕಾರ್ಮಿಕರ ಬಗ್ಗೆ, ಕರಾವಳಿ ಕಾವಲು ಪಡೆ ಬೋಟ್‌ಗಳನ್ನು ತಪಾಸಣೆ ನಡೆಸಬೇಕು ಎಂದು ಸಭೆಯಲ್ಲಿ ಜಿಲ್ಲಾಧಿಕಾರಿಗಳು ಸೂಚಿಸಿದರು.

ಕೆಎಂಸಿ ಆಸ್ಪತ್ರೆಯಲ್ಲಿ ಆಯುಷ್ಮಾನ್ ಯೋಜನೆಗಾಗಿ ಡಿಸಿಗೆ ಬಿಜೆಪಿ ಮನವಿ



ಉಡುಪಿ: ಜಿಲ್ಲಾ ಬಿಜೆಪಿ ಯುವ ಮೋರ್ಚಾ ನೇತೃತ್ವದಲ್ಲಿ ಉಡುಪಿ ಜಿಲ್ಲೆಯ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಆಯುಷ್ಮಾನ್ ಯೋಜನೆ ಜಾರಿಯಲ್ಲಿನ ಉಂಟಾದ ಅಸಮರ್ಪಕತೆ ಕುರಿತು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಅವರಿಗೆ ಮನವಿ ನೀಡಲಾಯಿತು.

ಈ ಸಂದರ್ಭ ಮಾತನಾಡಿದ ಜಿಲ್ಲಾ ಬಿಜೆಪಿ ಯುವಮೋರ್ಚಾ ಅಧ್ಯಕ್ಷ ಪ್ರಥ್ವಿರಾಜ್ ಶೆಟ್ಟಿ ಬಿಲ್ಲಾಡಿ, ಉಡುಪಿ ಜಿಲ್ಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಯವರ ಆಯುಷ್ಮಾನ್ ಯೋಜನೆಯ ಪ್ರಯೋಜನ ಪಡೆಯಲು ಜನ ಸಾಮಾನ್ಯರು ಪರದಾಡುತ್ತಿದ್ದು, ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮಾನವಿ ನೀಡಿ ಸಮಸ್ಯೆಯ ಬಗ್ಗೆ ಮನವರಿಕೆ ಮಾಡಿದರು.

ಈ ಸಂದರ್ಭ ಜಿಲ್ಲಾ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿ ಅಭಿರಾಜ್ ಸುವರ್ಣ, ಪ್ರದೀಪ್ ಕುಂದರ್, ಜಿಲ್ಲಾ ಯುವಮೋರ್ಚಾ ಉಪಾಧ್ಯಕ್ಷ ಗುರುರಾಜ್ ಮಾಡ, ಗಜೇಂದ್ರ ಎಸ್. ಬೆಳಮನೆ, ಪ್ರಥ್ವಿರಾಜ್ ಮಣಿಪಾಲ, ಕಾರ್ಯದರ್ಶಿ ರಾಕೇಶ್ ಅಮೀನ್ ಕಾರ್ಕಳ, ನಿತೇಶ್ ಶೆಟ್ಟಿ ಕಪ್ಪೆಟ್ಟು, ಯತೀಶ್ ಶೆಟ್ಟಿಕಾರ್ಯಕಾರಿಣಿ ಸದಸ್ಯ ದರ್ಶಿತ್ ಶೆಟ್ಟಿ, ಗಣೇಶ್ ಕುಂದರ್, ನಿತೇಶ್, ಆದಿತ್ಯ ಆಚಾರ್ಯ ಗ್ರಾಮಾಂತರ ಅಧ್ಯಕ್ಷ ಸುಶಾಂತ್ ಪೂಜಾರಿ, ಉಪಾಧ್ಯಕ್ಷ ಆಯುಷ್ ಪೂಜಾರಿ ಉಪಸ್ಥಿತರಿದ್ದರು.

ಹೋರಾಟದ ಹಾದಿ

ಮುಂದಿನ 7 ದಿನಗಳ ಒಳಗೆ ಯೋಜನೆ ಅನುಷ್ಠಾನ ಮಾಡುವಂತೆ ಗಡುವು ನೀಡಿದ್ದು, ಇಲ್ಲವೇ ಡಿಸಿ ಕಚೇರಿ ಎದುರು ಪ್ರತಿಭಟಿಸುವುದಾಗಿ ಬಿಜೆಪಿ ಯುವ ಮೋರ್ಚಾ ಡಿಸಿಗೆ ಸಲ್ಲಿಸಿದ ಮನವಿಯಲ್ಲಿ ತಿಳಿಸಿದ್ದಾರೆ.

ಭತ್ತದ ನೇಜಿ ನೆಟ್ಟು ಸಂಭ್ರಮಿಸಿದ ಮಣೂರು ಪ್ರೌಢಶಾಲಾ ವಿದ್ಯಾರ್ಥಿಗಳು



ಕೋಟ: ಮಣೂರು ಗೀತಾನಂದ ಫೌಂಡೇಶನ್ ವತಿಯಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಮತ್ತು ಸಮೃದ್ಧಿ ಇಕೋ ಕ್ಲಬ್‌ನಿಂದ ಕೃಷಿಯ ಮಹತ್ವವನ್ನುಪರಿಚಯಿಸುವ ಉದ್ದೇಶದಿಂದ ಸಂಭ್ರಮದ ಸಾಗುವಳಿ ಕಾರ್ಯಕ್ರಮ ಶನಿವಾರ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮಕ್ಕೆ ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ ಸಿ. ಕುಂದರ್ ಮುಖ್ಯ ಅತಿಥಿಯಾಗಿ ಆಗಮಿಸಿ, ಕೃಷಿಯು ನಮ್ಮ ದೇಶದ ಬೆನ್ನೆಲುಬಾಗಿದ್ದು ಯುವ ಜನತೆ ಕೃಷಿಯೊಂದಿಗೆ ಬೆಸೆದುಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು.

ಸರ್ಕಾರಿ ಪ್ರೌಢಶಾಲಾ ವಿಭಾಗದ ಹಿರಿಯ ಶಿಕ್ಷಕ ರಾಮದಾಸ್ ನಾಯಕ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯ ಶಿಕ್ಷಣದ ಜೊತೆಗೆ ಕೃಷಿಯಂತಹ ಜೀವನ ಕೌಶಲ್ಯಗಳನ್ನು ಪ್ರಾಯೋಗಿಕವಾಗಿ ಕಲಿಯುವುದು ಅತ್ಯಂತ ಅಗತ್ಯವಾಗಿದೆ ಎಂದು ತಿಳಿಸಿದರು. ಈ ಸಂದರ್ಭ ಜನತಾ ಫಿಶ್ ಮೀಲ್–ಆಯಿಲ್ ಸಂಸ್ಥೆಯ ಎಜಿಎಂ ಶ್ರೀನಿವಾಸ್ ಕುಂದರ್ ಹಾಗೂ ಫ್ಯಾಕ್ಟರಿ ಮ್ಯಾನೇಜರ್ ಮಿಥುನ್ ಕುಮಾರ್ ಭಾಗವಹಿಸಿ, ಕೃಷಿ ಮಹತ್ವ, ರೈತರ ಶ್ರಮ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಯುವಜನರ ಪಾತ್ರದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಗೀತಾನಂದ ಫೌಂಡೇಶನ್ ಸಂಯೋಜಕ ರವಿಕಿರಣ್ ಕೋಟ ಕಾರ್ಯಕ್ರಮ ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭತ್ತದ ನಾಟಿಯಲ್ಲಿ ಪಾಲ್ಗೊಂಡು ಕೃಷಿ ಚಟುವಟಿಕೆಗಳ ನೈಜ ಅನುಭವ ಪಡೆದರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಕೃಷಿಯ ಬಗ್ಗೆ ಆಸಕ್ತಿ, ರೈತರ ಪರಿಶ್ರಮದ ಅರಿವು ಹಾಗೂ ಪರಿಸರದ ಬಗ್ಗೆ ಜವಾಬ್ದಾರಿಯ ಮನೋಭಾವ ಬೆಳೆಸುವಲ್ಲಿ ಯಶಸ್ವಿಯಾಯಿತು. ಶಾಲೆಯ ಶಿಕ್ಷಕ ವೃಂದ, ಗೀತಾನಂದ ಫೌಂಡೇಶನ್ ಸದಸ್ಯರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ದೆಹಲಿಯ ವಸಂತ್ ಕುಂಜ್‌ನಲ್ಲಿ ಪುತ್ತಿಗೆ ಮಠದ ಹೊಸ ಶಾಖೆಯನ್ನು ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿ ಅಮೃತ ಹಸ್ತದಿಂದ ಉದ್ಘಾಟಿಸಿದರು. ವಿದ್ವಾನ್ ದೇವಿಪ್ರಸಾದ್ ಪೌರೋಹಿತ್ಯದಲ್ಲಿ ಸಂಸ್ಥಾನದ ವಿಠ್ಠಲ ದೇವರ ಪ್ರವೇಶೋತ್ಸವದ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು.



ಶಿರ್ವ ಸಹಕಾರಿ ವ್ಯವಸಾಯಿಕ ಸಂಘದಿಂದ ಅಧ್ಯಕ್ಷ ಕುತ್ಯಾರು ಪ್ರಸಾದ್ ಶೆಟ್ಟಿ ನೇತೃತ್ವದಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ನಬಾರ್ಡ್ ಸಂಸ್ಥೆಯು ಎಂಕೆಕೆಸಿಸಿ ಸಾಲದ ಮಿತಿ ನಿಗದಿ ಪಡಿಸಲು ವಿಧಿಸಿದ ಶರತ್ತುಗಳ ಅನ್ವಯ ಈ ಹಿಂದಿನ ಮೊತ್ತದ ಸಾಲ ವಿತರಿಸಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ಮಲ್ಲಿಗೆ ಕೃಷಿಕರ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು, ಈ ಹಿಂದಿನಂತೆಯೇ ಸಾಲ ವಿತರಣೆಗೆ ಅನುಕೂಲ ಮಾಡಿ ಕೊಡುವಂತೆ ಸಂಬಂಧಪಟ್ಟ ಇಲಾಖೆಗೆ ಮನವರಿಕೆ ಮಾಡುವಂತೆ ವಿನಂತಿಸಲಾಯಿತು. ಉಪಾಧ್ಯಕ್ಷ ವೀರೇಂದ್ರ ಪಾಟ್ಕರ್, ನಿರ್ದೇಶಕ ಉಮೇಶ ಆಚಾರ್ಯ, ಹರಿಣಾಕ್ಷ ಶೆಟ್ಟಿ ಉಪಸ್ಥಿತರಿದ್ದರು.

ತಂಬಾಕು ನಿಯಂತ್ರಣ ಕಾಯಿದೆ ಕುರಿತ ತ್ರೈಮಾಸಿಕ ಸಭೆಯಲ್ಲಿ ಡಿಸಿ ಮಾಹಿತಿ

ಒಟ್ಟು 245 ಪ್ರಕರಣಗಳು, 70,000 ರೂ. ದಂಡ



ಉಡುಪಿ: ಜಿಲ್ಲೆಯ ಗ್ರಾಮ ಪಂಚಾಯತ್ ಹಾಗೂ ವಾರ್ಡ್‌ಗಳನ್ನು ತಂಬಾಕು ಮುಕ್ತ ಪ್ರದೇಶವನ್ನಾಗಿಸಿ ಘೋಷಿಸಲು ಸಾರ್ವಜನಿಕರ ಸಹಭಾಗಿತ್ವದಲ್ಲಿ ಮುಂದಾಗಬೇಕೆಂದು ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಅಧಿಕಾರಿಗಳಿಗೆ ಕರೆ ನೀಡಿದರು.

ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಕೋಟ್ಪಾ–2003 ಕಾಯಿದೆಯ ಕುರಿತತ್ರೈಮಾಸಿಕಸಭೆಯ ಅಧ್ಯಕ್ಷತೆವಹಿಸಿ, ಜಿಲ್ಲೆಯಲ್ಲಿ 33ಕ್ಕೂ ಹೆಚ್ಚು ಧಿಡೀರ್ ದಾಳಿಗಳನ್ನು ನಡೆಸಿ, ಸೆಕ್ಷನ್ 4, ಸೆಕ್ಷನ್ 6(ಎ) ಹಾಗೂ 6(ಬಿ) ಅಡಿಯಲ್ಲಿ ಒಟ್ಟು 245 ಕ್ಕೂ ಹೆಚ್ಚು ಪ್ರಕರಣವನ್ನು ದಾಖಲಿಸಿಕೊಂಡು 70,000 ರೂ ದಂಡ ವಸೂಲಿ ಮಾಡಲಾಗಿದೆ. ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿಯೂ ಸಹ ಕೋಟ್ಪಾ ಕಾಯಿದೆಯನ್ನು ಉಲ್ಲಂಘಿಸಿದ 31 ಪ್ರಕರಣಗಳಿಂದ 3,300 ರೂ. ದಂಡ ವಸೂಲಿ ಮಾಡಲಾಗಿದೆ ಎಂದ ಅವರು, ಜಿಲ್ಲೆಯಾದ್ಯಂತ ದಿಢೀರ್ ದಾಳಿಗಳನ್ನು ಮತ್ತಷ್ಟು ಹೆಚ್ಚು ನಡೆಸುವುದರೊಂದಿಗೆ ಕೋಟ್ಪಾ ಕಾಯಿದೆಯ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು ಎಂದರು. ಸಭೆಯಲ್ಲಿ ಅಪರ ಪೊಲೀಸ್ ಅಧೀಕ್ಷಕ ಸುಧಾಕರ್ ನಾಯಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಬಸವರಾಜ್ ಹುಬ್ಬಳ್ಳಿ, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ. ನಾಗರತ್ನ, ತಾಲೂಕು ಆರೋಗ್ಯಾಧಿಕಾರಿಗಳು, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ ನಗರಸಭೆಗೆ ಶಾಸಕ ಯಶ್‌ಪಾಲ್ ದಿಢೀರ್ ಭೇಟಿ, ಪರಿಶೀಲನೆ

ಜನನ, ಮರಣ ಪ್ರಮಾಣ ಪತ್ರ ವಿತರಣೆ ವಿಳಂಬ



ಉಡುಪಿ: ನಗರಸಭೆಯಲ್ಲಿ ಜನನ ಮರಣ ಪ್ರಮಾಣ ಪತ್ರ ವಿಭಾಗದಲ್ಲಿ ಅಧಿಕಾರಿಗಳ ವಿಳಂಬ ಧೋರಣೆ, ಅಸಹಕಾರದ ಬಗ್ಗೆ ಸಾರ್ವಜನಿಕರಿಂದ ದೂರು ಹಾಗೂ ಮಾಧ್ಯಮಗಳಲ್ಲಿ ವರದಿ ಪ್ರಕಟಗೊಂಡ ಬೆನ್ನಲ್ಲೇ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅವರು ನಗರಸಭೆ ಕಚೇರಿಗೆ ದಿಢೀರ್ ಭೇಟಿ ನೀಡಿ ಕಡತಗಳನ್ನು ಪರಿಶೀಲನೆ ನಡೆಸಿದ್ದಾರೆ.

ಜನನ ಮರಣ ಪ್ರಮಾಣ ಪತ್ರ ವಿಭಾಗದಲ್ಲಿ ನೂರಾರು ಕಡತಗಳು ಬಾಕಿ ಇದ್ದು, ಸಿಬ್ಬಂದಿಗಳು ಸಾರ್ವಜನಿಕರೊಂದಿಗೆ ದರ್ಪದಿಂದ ವರ್ತಿಸುತ್ತಾ, ಈ ಬಗ್ಗೆ ಪೂರಕ ಮಾಹಿತಿ ನೀಡಲು ಸಹಕಾರ ನೀಡದಿರುವ ಬಗ್ಗೆ ಅಧಿಕಾರಿಗಳಿಗೆ ಶಾಸಕ ಯಶ್ ಪಾಲ್ ಸುವರ್ಣ ಎಚ್ಚರಿಕೆ ನೀಡಿದರು. ಹೆಚ್ಚಿನ ಸಂಖ್ಯೆಯಲ್ಲಿ ತಿದ್ದುಪಡಿ ಅರ್ಜಿಗಳು ಬರುತ್ತಿದ್ದು, ಜನನ ಪ್ರಮಾಣ ಪತ್ರ ಅರ್ಜಿ ಸ್ವೀಕರಿಸುವಾಗಲೇ ಅರ್ಜಿದಾರರಿಗೆ ಮಾಹಿತಿ ಕೊರತೆ ಇದ್ದಲ್ಲಿ ಈ ಬಗ್ಗೆ ಸೂಕ್ತ ಮಾಹಿತಿ ನೀಡಿ ಸಾರ್ವಜನಿಕರೊಂದಿಗೆ ಸಂಯಮದಿಂದ ವರ್ತಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.ನಗರಸಭೆಯ ಜನನ ಮರಣ ಪ್ರಮಾಣ ಪತ್ರ ವಿಭಾಗಕ್ಕೆ ಅಗತ್ಯವಿರುವ ಹೆಚ್ಚುವರಿ ಸಿಬ್ಬಂದಿ ನಿಯೋಜನೆ ಹಾಗೂ ಕಂಪ್ಯೂಟರ್ ವ್ಯವಸ್ಥೆ ಮಾಡುವಂತೆ ಪೌರಾಯುಕ್ತರಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಉಡುಪಿ ನಗರಸಭೆ ಮಾಜಿ ಅಧ್ಯಕ್ಷರಾದ ಪ್ರಭಾಕರ ಪೂಜಾರಿ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸುತ್ತಮುತ್ತ

ಇಂದು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಧರಣಿ

ಕಾಸರಗೋಡು: ಪಿಂಚಣಿ ಪರಿಷ್ಕರಣೆಯ ಪ್ರಕ್ರಿಯೆಯನ್ನು ಕೂಡಲೇ ಪ್ರಾರಂಭಿಸಬೇಕು, ತುಟ್ಟಿಭತ್ಯೆಯ ಬಾಕಿ ಮೊತ್ತವನ್ನು ಮಂಜೂರುಗೊಳಿಸಬೇಕು ಇತ್ಯಾದಿ ಬೇಡಿಕೆಗಳನ್ನು ಮುಂದಿರಿಸಿ ಕೇರಳ ಸ್ಟೇಟ್ ಪೆನ್ಶನರ್ಸ್ ಸಂಘದ ಕಾಸರಗೋಡು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಜು.1ರಂದು ಬೆಳಗ್ಗೆ 10ರಿಂದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಪ್ರತಿಭಟನಾ ಧರಣಿ ನಡೆಯಲಿದೆ. ಧರಣಿಯನ್ನು ರಾಜ್ಯ ಉಪಾಧ್ಯಕ್ಷ ಉಣ್ಣಿಕೃಷ್ಣನ್ ಉದ್ಘಾಟಿಸುವರು. ಜಿಲ್ಲಾಧ್ಯಕ್ಷ ಬಿ. ನಾಗರಾಜ ಅಧ್ಯಕ್ಷತೆ ವಹಿಸುವರು. ಇದರ ಸಹ ಸಂಘಟನೆಗಳ ಜಿಲ್ಲಾ ಪ್ರಮುಖರು ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ಸಂಘದ ಸದಸ್ಯರು ಭಾಗವಹಿಸಬೇಕೆಂದು ಜಿಲ್ಲಾ ಸಮಿತಿಯ ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ಲಯನ್ಸ್ ಕ್ಲಬ್ ನೂತನ ಪದಾಧಿಕಾರಿಗಳ ಆಯ್ಕೆ



ಉಪ್ಪಳ: ಮಂಜೇಶ್ವರ – ಉಪ್ಪಳ ಲಯನ್ಸ್ ಕ್ಲಬ್‌ನ 2026–27ನೇ ಸಾಲಿನ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ಅಧ್ಯಕ್ಷರಾಗಿ ಮೋಹನನ್ ಕೆ., ಕಾರ್ಯದರ್ಶಿಯಾಗಿ ಪ್ರಸಾದ್ ಕೆ., ಕೋಶಾಧಿಕಾರಿಯಾಗಿ ವಿಜಯನ್ ಕೆ. ನಾಯರ್ ಅವರನ್ನು ಆಯ್ಕೆ ಮಾಡಲಾಯಿತು.

ಇಂದು ಕನ್ನಡ ಪತ್ರಿಕಾ ದಿನಾಚರಣೆ

ಕಾಸರಗೋಡು: ಕೋಟೆಕಣಿ ರಾಮನಗರ ಶ್ರೀ ರಾಮನಾಥ ಸಾಂಸ್ಕೃತಿಕ ಭವನ ಸಮಿತಿ ವತಿಯಿಂದ ಕನ್ನಡ ಪತ್ರಿಕಾ ದಿನಾಚರಣೆಯು ಜುಲೈ 1ರಂದು ಸಂಜೆ 5 ಗಂಟೆಗೆ ಕೋಟೆಕಣಿ ಶ್ರೀ ರಾಮನಾಥ ಸಾಂಸ್ಕೃತಿಕ ಭವನದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಗೀತಾ ಪ್ರಕಾಶನದ ಸಂಪಾದಕ ಕೆ.ವಿ.ರಮೇಶ್ ಉದ್ಘಾಟಿಸುವರು. ಹಿರಿಯ ಕವಿ, ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅಧ್ಯಕ್ಷತೆ ವಹಿಸುವರು. ಕೆಸಿಎನ್ ಚಾನೆಲ್‌ನ ನಿರ್ದೇಶಕ ಪುರುಷೋತ್ತಮ ನಾಯ್ಕ್ ಸಹಿತ ಹಲವರು ಉಪಸ್ಥಿತರಿರುವರು. ಈ ಸಂದರ್ಭ ಕಾಸರಗೋಡು ಹೊಸ ಬಸ್ ನಿಲ್ದಾಣದ ವೈಶಾಲಿ ಬುಕ್ ಸೆಂಟರ್‌ನ ಪತ್ರಿಕಾ ಏಜೆಂಟ್ ವಿಶ್ವಾಸ್ ನುಳ್ಳಿಪ್ಪಾಡಿ ಅವರಿಗೆ ಪತ್ರಿಕಾ ದಿನದ ಗೌರವಾರ್ಪಣೆ ನೀಡಲಾಗುವುದು.

ಜು.4ರಂದು ತಾಲೂಕು ಅಭಿವೃದ್ಧಿ ಸಮಿತಿ ಸಭೆ

ಕಾಸರಗೋಡು: ವೆಳ್ಳರಿಕುಂಡು ತಾಲೂಕು ಅಭಿವೃದ್ಧಿ ಸಮಿತಿ ಸಭೆಯು ಜು.4ರಂದು ಅಪರಾಹ್ನ 2.30ಕ್ಕೆ ವೆಳ್ಳರಿಕುಂಡು ತಾಲೂಕು ಮಿನಿ ಸಿವಿಲ್ ಸ್ಟೇಷನ್ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕಲೆಕ್ಟರೇಟ್‌ನಲ್ಲಿ ರಾಷ್ಟ್ರೀಯ ಅಂಕಿ–ಅಂಶ ದಿನಾಚರಣೆ

ಕಾಸರಗೋಡು: ಕಾಸರಗೋಡು ಜಿಲ್ಲಾ ಕಚೇರಿಯ ಆರ್ಥಿಕ ಅಂಕಿ ಅಂಶ ಇಲಾಖೆ ವತಿಯಿಂದ ಕಾಸರಗೋಡು ಕಲೆಕ್ಟರೇಟ್ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾದ 20ನೇ ರಾಷ್ಟ್ರೀಯ ಅಂಕಿ ಅಂಶ ದಿನವನ್ನು ಆಚರಿಸಲಾಯಿತು. ಎಡಿಎಂ ಪಿ.ಉದಯಕುಮಾರ್ ಸಮಾರಂಭವನ್ನು ಉದ್ಘಾಟಿಸಿದರು. ಆರ್ಥಿಕ ಅಂಕಿ ಅಂಶ ಇಲಾಖೆಯ ಉಪ ನಿರ್ದೇಶಕಿ ಆರ್.ರೇಖಾ ಅಧ್ಯಕ್ಷತೆ ವಹಿಸಿದ್ದರು. ಕಾಞಂಗಾಡು ನೆಹರು ಕಲಾ ಮತ್ತು ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಿಕೆ ಎ.ಸುಮಲತಾ ಮುಖ್ಯ ಭಾಷಣ ಮಾಡಿದರು. ಸಹಾಯಕ ಜಿಲ್ಲಾ ಯೋಜನಾಧಿಕಾರಿ ಸಿ.ಎಂ.ಸುಧೀಶ್‌ಕುಮಾರ್, ಕೃಷಿ ಉಪ ನಿರ್ದೇಶಕ ಕೆ.ಕೆ.ಹೆನ, ಜಿಲ್ಲಾ ಕೈಗಾರಿಕಾ ಕೇಂದ್ರದ ಇ ಮತ್ತು ಐ ವ್ಯವಸ್ಥಾಪಕ ಎಸ್.ಎಸ್.ಅಭಿನೇಶ್ ಮಾತನಾಡಿದರು. ಈ ಸಂದರ್ಭ ಎಲ್ಎಸ್ಎಸ್, ಯುಎಸ್ಎಸ್, ಎಸ್ಎಸ್ಎಲ್‌ಸಿ ಮತ್ತು ಪ್ಲಸ್ ಟು ಪರೀಕ್ಷೆಗಳಲ್ಲಿ ಹೆಚ್ಚಿನ ಫಲಿತಾಂಶ ಗಳಿಸಿದ ಇಲಾಖೆಯ ನೌಕರರ ಮಕ್ಕಳನ್ನು ಸನ್ಮಾನಿಸಲಾಯಿತು. ನಂತರ ವಿಭಾಗದ ನೌಕರರಿಗೆ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಿ ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು. ಜಿಲ್ಲಾ ಮಟ್ಟದ ಅಧಿಕಾರಿ ಪಿ.ಕೆ.ರಮೇಶ್‌ಕುಮಾರ್ ಸ್ವಾಗತಿಸಿ, ಸಂಶೋಧನಾ ಅಧಿಕಾರಿ ಸಿ.ಆರ್.ಅಂಜು ವಂದಿಸಿದರು.

ಮಹಿಳಾ ಸಬಲೀಕರಣಕ್ಕೆ ಕುಟುಂಬಶ್ರೀ ಯೋಜನೆ | 'ದೃಷ್ಟಿ–ವಿಷನ್'ನಲ್ಲಿ ಕೆ.ಕೆ.ಸೋಯಾ ಅಭಿಪ್ರಾಯ

ಮಹಿಳೆಯರ ಸಮಗ್ರ ಅಭಿವೃದ್ಧಿ ಕುಟುಂಬಶ್ರೀಯಿಂದ ಸಾಧ್ಯ



ಕಾಸರಗೋಡು: ಬಡತನದ ಅಂಚಿನಲ್ಲಿರುವ ಸಮುದಾಯಗಳ ಮೇಲೆತ್ತುವಿಕೆ ಮತ್ತು ಮಹಿಳೆಯರ ಸಬಲೀಕರಣದ ಗುರಿಯೊಂದಿಗೆ ಕುಟುಂಬಶ್ರೀ ಕಾಸರಗೋಡು ಜಿಲ್ಲಾ ಮಿಷನ್ ನೇತೃತ್ವದಲ್ಲಿ ಕಾಸರಗೋಡು ನಗರಸಭೆಯ ಸಮ್ಮೇಳನ ಸಭಾಂಗಣದಲ್ಲಿ ದೃಷ್ಟಿ (ತುಡರೆ) – ವಿಷನ್ 2027 ಎಂಬ ವಿನೂತನ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕುಟುಂಬಶ್ರೀ ಘಟಕಗಳ ಹೊಸ ಯೋಜನೆಗಳು ಮತ್ತು ಕುಟುಂಬ ಜೀವನದ ಸಂತೋಷಗಳ ಕುರಿತು ಸಮಗ್ರವಾಗಿ ಸಮಾಲೋಚಿಸಲು ಹಮ್ಮಿಕೊಳ್ಳಲಾದ ಈ ಕಾರ್ಯಾಗಾರವನ್ನು ಕಾಸರಗೋಡು ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಕೆ.ಕೆ. ಸೋಯಾ ಉದ್ಘಾಟಿಸಿ, ಕುಟುಂಬಶ್ರೀ ಮೂಲಕ ಮಹಿಳೆಯರ ಸಬಲೀಕರಣ ಸಾಧ್ಯವಿದೆ ಎಂದರು.

ಮಹಿಳೆಯರು ಸ್ವಾವಲಂಬಿಗಳಾಗಿ ಸಮಾಜದಲ್ಲಿ ಉನ್ನತಸ್ಥಾನಗಳನ್ನುಹೆಚ್ಚೆಚ್ಚುಪಡೆಯುವಂತಾಗಬೇಕು ಎಂದು ಅವರು ತಿಳಿಸಿದರು. ಮಹಿಳೆಯರಸಮಗ್ರ ಅಭಿವೃದ್ಧಿಕುಟುಂಬಶ್ರೀಯಿಂದ ಸಾಧ್ಯವಿದೆ. ಪ್ರತೀ ಗ್ರಾಮಗಳ ಪ್ರಗತಿಗೂ ಕುಟುಂಬಶ್ರೀ ಯೋಜನೆಗಳು ಪೂರಕವಾಗಿವೆ ಎಂದು ಅವರು ನುಡಿದರು.

ಕಾಸರಗೋಡು ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವ ಇ. ಚಂದ್ರಶೇಖರನ್, ಮಾಜಿ ಶಾಸಕ ಎನ್.ಎ. ನೆಲ್ಲಿಕುನ್ನು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕುಟುಂಬಶ್ರೀ ಜಿಲ್ಲಾ ಮಿಷನ್ ಪ್ರಕಟಿಸಿದ ಎರಡು ಪ್ರಮುಖ ಪುಸ್ತಕಗಳನ್ನು ಕೂಡಾ ಈ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು. 2025–26ನೇ ಸಾಲಿನ ಅಭಿವೃದ್ಧಿ ದೃಷ್ಟಿಕೋನವಾದ ಕೈ ಜೋಡಿಸಿ ನಡೆಯೋಣ ಎಂಬ ಧ್ಯೇಯವಾಕ್ಯದೊಂದಿಗೆ ಮಹಿಳೆಯರ ಮಾನಸಿಕ ಬೆಳವಣಿಗೆ ಮತ್ತು ಸಾಮಾಜಿಕ ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲು ಕುಟುಂಬಶ್ರೀ ಕೈಗೊಂಡ ಪರಿವರ್ತನಾ ಪ್ರಕ್ರಿಯೆಗಳ ಪುಸ್ತಕವನ್ನು ಮಾಜಿ ಶಾಸಕ ಎನ್.ಎ.ನೆಲ್ಲಿಕುನ್ನು ಬಿಡುಗಡೆ ಮಾಡಿದರು. ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಕೆ.ಕೆ.ಸೋಯಾ ಪುಸ್ತಕವನ್ನು ಸ್ವೀಕರಿಸಿದರು.

ಮಹಿಳೆಯರ ಸ್ವಾವಲಂಬನೆ ಗುರಿ

ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್ ಪ್ರಾಸ್ತಾವಿಕ ನೀಡಿ, ಸ್ಥಳೀಯ ಏಕೀಕರಣ, ಆರ್ಥಿಕ ಭದ್ರತೆ, ದೊಡ್ಡ ಪ್ರಮಾಣದ ಉದ್ಯಮ ಯೋಜನೆಗಳು ಮತ್ತು ಕೃಷಿ ಹಾಗೂ ಪಶುಸಂಗೋಪನಾ ವಲಯಗಳಲ್ಲಿನ ನಾವೀನ್ಯತೆಗಳ ಮೂಲಕ ಮಹಿಳೆಯರ ಸ್ವಾವಲಂಬನೆಯನ್ನು ಖಚಿತಪಡಿಸಿಕೊಳ್ಳುವುದು ಕುಟುಂಬಶ್ರೀಯ ಗುರಿಯಾಗಿದೆ ಎಂದು ಹೇಳಿದರು.

ಬುಡಕಟ್ಟು ಮಕ್ಕಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಪ್ರತಿಮ ವೇದಿಕೆಯನ್ನು ಒದಗಿಸುವ ಕೊರಗ ತನದ್ ಯೋಜನೆಯ ಭಾಗವಾಗಿ ಕೊರಗ ಸಮುದಾಯದ ಜೀವನವನ್ನು ದಾಖಲಿಸುವ ಒನ್ನಾನಂ ಕುನ್ನಿನ್ಮೇಲ್ ಒರಡಿ ಮನ್ನಿನ್ಮೇಲ್ ಎಂಬ ಪುಸ್ತಕವನ್ನು ಬರಹಗಾರ ಡಾ. ಸಂತೋಷ್ ಪನೆಯಾಲ್ ಬಿಡುಗಡೆ ಮಾಡಿದರು. ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಪುಸ್ತಕವನ್ನು ಸ್ವೀಕರಿಸಿದರು. ಸಂಪಾದಕ ಎಸ್. ಯದುರಾಜ್ ಪುಸ್ತಕ ಪರಿಚಯವನ್ನು ನಡೆಸಿದರು. ಸಹಾಯಕ ಜಿಲ್ಲಾ ಮಿಷನ್ ಸಂಯೋಜಕ ಕೆ.ಎಂ. ಕಿಶೋರ್‌ಕುಮಾರ್ ವಾರ್ಷಿಕ ವರದಿ ಮಂಡಿಸಿದರು. ಸಹಾಯಕ ಜಿಲ್ಲಾ ಮಿಷನ್ ಸಂಯೋಜಕರಾದ ಡಿ. ಹರಿದಾಸ್ ಮತ್ತು ಕೆ.ಎಂ. ಕಿಶೋರ್ ಕುಮಾರ್ ಪ್ರಾದೇಶಿಕ ಮಟ್ಟದ ಚಟುವಟಿಕೆಗಳನ್ನು ಮಂಡಿಸಿದರು. ನಂತರ ನಡೆದ ಚರ್ಚೆಗಳಲ್ಲಿ ಕಣ್ಣೂರು ಜಿಲ್ಲಾ ಮಿಷನ್ ಸಂಯೋಜಕರಾದ ಜಯನ್, ಜತಿನ್ ಕೆ.ಟಿ., ಶಕೀಲಾ ಮಜೀದ್ ಮತ್ತು ರಾಜೇಶ್ ಎ.ವಿ. ಮುಂತಾದವರು ಭಾಗವಹಿಸಿದ್ದರು. ಸಿಡಿಎಸ್ ಅಧ್ಯಕ್ಷೆಯರಾದ ವಿಜಯಲಕ್ಷ್ಮಿ, ಪೂರ್ಣಿಮಾ, ಸನುಜಾ, ಕಾರ್ತಿಯಾನಿ, ಶೋಭನಾ, ಸಿಬ್ಬಂದಿ ಕಾರ್ಯದರ್ಶಿ ಸಚಿನ್‌ರಾಜ್, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಟಿ.ಆದಿರಾ ಮತ್ತು ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಎಂ.ರೇಷ್ಮಾ ಮಾತನಾಡಿದರು.

ಚಿನ್ಮಯ ವಿದ್ಯಾಲಯದಲ್ಲಿ ವಿದ್ಯಾರ್ಥಿ ನಾಯಕರ ಪ್ರಮಾಣ ವಚನ ಸ್ವೀಕಾರ



ಕಾಸರಗೋಡು: ವಿದ್ಯಾನಗರ ಚಿನ್ಮಯ ವಿದ್ಯಾಲಯದಲ್ಲಿ 2026–27ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ನಾಯಕರ ಪ್ರಮಾಣ ವಚನ ಸ್ವೀಕಾರ ಸಮಾರಂಭವು ಚಿನ್ಮಯ ತೇಜಸ್ ಸಭಾಂಗಣದಲ್ಲಿ ನಡೆಯಿತು. ಚಿನ್ಮಯ ಮಿಷನ್ ಕೇರಳ ಘಟಕದ ಮುಖ್ಯಸ್ಥ ಸ್ವಾಮಿ ವಿವಿಕ್ತಾನಂದ ಸರಸ್ವತಿಯವರು ಅಧ್ಯಕ್ಷತೆ ವಹಿಸಿದ್ದರು.

ನಾಯಕತ್ವದ ಕೌಶಲ್ಯ, ಶಿಸ್ತು, ಜವಾಬ್ದಾರಿಯುತ ಮನೋಭಾವ ಹಾಗೂ ಸೇವಾ ಮನೋಭಾವವನ್ನು ಬೆಳೆಸುವಲ್ಲಿ ವಿದ್ಯಾರ್ಥಿ ನಾಯಕತ್ವದ ಮಹತ್ವವನ್ನು ಅವರು ವಿವರಿಸಿದರು. ಮಾತ್ರವಲ್ಲದೆ ವಿದ್ಯಾರ್ಥಿಗಳು ಉತ್ತಮ ನಡತೆಯೊಂದಿಗೆ ದೇಶ ಸೇವೆ ಸಲ್ಲಿಸಬೇಕೆಂದು ಕರೆ ನೀಡಿದರು. ಮುಖ್ಯ ಅತಿಥಿಯಾಗಿದ್ದ ಕೇರಳ ಕೇಂದ್ರೀಯ ವಿವಿ ಜೀವ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ರಾಜೇಂದ್ರ ಪಿಲಾಂಕಟ್ಟೆ ಮಾತನಾಡಿ, ಕರ್ತವ್ಯದ ಸಂಪೂರ್ಣ ಹೊಣೆಗಾರಿಕೆಯನ್ನು ಹೊತ್ತುಕೊಂಡು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳ ಬಲ್ಲವರೇ ನಿಜವಾದ ನಾಯಕರು ಎಂದರು.

ವಿದ್ಯಾಲಯದ ಪ್ರಾಂಶುಪಾಲ ಟಿ.ವಿ. ಸುಕುಮಾರನ್, ಉಪಪ್ರಾಂಶುಪಾಲ ಅಭಿಜಿತ್ ಎಂ.ಕೆ. ಮಾತನಾಡಿದರು. ಪ್ರಾಂಶುಪಾಲ ಟಿ.ವಿ.ಸುಕುಮಾರನ್ ಪ್ರಮಾಣ ವಚನ ಬೋಧಿಸಿದರು. ನೂತನವಾಗಿ ಆಯ್ಕೆಯಾದ ಶಾಲಾ ನಾಯಕರು, ಹೌಸ್ ಕ್ಯಾಪ್ಟನ್‌ಗಳು ಹಾಗೂ ಇತರ ವಿದ್ಯಾರ್ಥಿ ಪ್ರತಿನಿಧಿಗಳು ಪ್ರಮಾಣ ವಚನ ಸ್ವೀಕರಿಸಿ ತಮ್ಮ ಹುದ್ದೆಗಳ ಜವಾಬ್ದಾರಿಯನ್ನು ಅಧಿಕೃತವಾಗಿ ವಹಿಸಿಕೊಂಡರು. ಮುಖ್ಯ ಶಿಕ್ಷಕಿಯರಾದ ಪೂರ್ಣಿಮಾ ಎಸ್.ಆರ್., ಸಿಂಧು ಶಶೀಂದ್ರನ್, ಬೋಧಕ, ಬೋಧಕೇತರ ಸಿಬ್ಬಂದಿ, ಪೋಷಕರು ದ್ದರು.

ಕೊಡ್ಲಮೊಗರು: ಆಧಾರಸ್ತಂಭ ಕುಸಿದ ಬಿದ್ದ ಕಾಲುಸೇತುವೆಯಲ್ಲೇ ಪಯಣ



ಮಂಜೇಶ್ವರ: ಕೊಡ್ಲಮೊಗರು ಗ್ರಾಮದ ಪಿಲಿಕುಂಡೆ ಕೂಟೇಲು ಎಂಬಲ್ಲಿ ಕಾಲುಸೇತುವೆಯ ಕೆಳಭಾಗದ ಆಧಾರಸ್ತಂಭ ಕುಸಿದು ಬಿದ್ದಿದೆ. ಅಪಾಯಕಾರಿಯಾದ ಈ ಕಾಲುಸೇತುವೆಯಲ್ಲೇ ಈ ಭಾಗದ ಜನರು ಸಂಚರಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಕಳೆದ ಮಳೆಗಾಲದಲ್ಲಿ ಬಿರುಸಾದ ಮಳೆಗೆ ಈ ಕಾಲುಸೇತುವೆಯ ತಳ ಭಾಗದ ಒಂದು ಸ್ತಂಭವು ಕುಸಿದು ಸೇತುವೆಯು ಕಲ್ಲಿನ ರಾಶಿಗೆ ಜಾರಿ ನಿಂತಿದೆ. ಈ ಬಗ್ಗೆ ಅಪಾಯದ ಅರಿವಿದ್ದರೂ ಈ ಕಾಲುಸೇತುವೆಯು ಈ ಭಾಗದ ಮುಖ್ಯ ಸಂಪರ್ಕ ಸೇತುವೆಯಾಗಿರುವುದರಿಂದ ಜನರು ಇದರ ಮೇಲೆಯೇ ಓಡಾಟ ನಡೆಸುತ್ತಿದ್ದಾರೆ. ಅಲ್ಲದೆ ಈ ಪ್ರದೇಶದ ಶಾಲಾ ಮಕ್ಕಳು ಕೂಡಾ ಇದೇ ಕಾಲುಸೇತುವೆಯ ಮೇಲೆ ಪಯಣಿಸುತ್ತಿರುವುದು ಆತಂಕವನ್ನುಂಟು ಮಾಡಿದೆ. ಬೋರ್ಕಳ, ಬೂದಿಮೂಲೆ ಕಡೆಯಿಂದ ಪಿಲಿಕುಂಡೆ, ಕಾಯರಡ್ಕ ಕೊಡ್ಲಮೊಗರು ಸಂಧಿಸುವ ಕಾಲು (ಸೇತುವೆ) ಸಂಕ ಇದಾಗಿದ್ದು ಮಳೆಗಾಲದಲ್ಲಿ ಜನರನ್ನು ಇನ್ನಷ್ಟು ಸಂಕಷ್ಟಕ್ಕೀಡು ಮಾಡಿದ್ದು ಕೆಲವರು ಅರ್ಧ ಕಿಲೋ ಮೀಟರ್ ದೂರಕ್ಕಾಗಿ ಏಳೆಂಟು ಕಿಲೋ ಮೀಟರ್ ಸುತ್ತು ಬಳಸಿ ಹೋಗುವಂತಾಗಿದೆ.

ಈ ಸಮಸ್ಯೆಯ ಬಗ್ಗೆ ಸ್ಥಳೀಯರು ಸ್ಥಳೀಯ ಗ್ರಾಮ ಪಂಚಾಯತ್ ಅಧಿಕಾರಿಗಳ ಗಮನಕ್ಕೆ ತಂದು ಅವಘಡ ಎದುರಾಗುವ ಮುನ್ನ ಈ ಕಾಲುಸೇತುವೆಯನ್ನು ಸರಿಪಡಿಸಬೇಕೆಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ. ಇಲ್ಲಿ ಹೆಚ್ಚಿನ ಭಾಗ ಕೃಷಿಭೂಮಿಯಾಗಿರುವುದರಿಂದ ಈ ಹಿಂದೆ ಸ್ಥಳೀಯರೊಬ್ಬರು ಸಣ್ಣ ಅಣೆಕಟ್ಟು ನಿರ್ಮಿಸಲು ಕೇಂದ್ರೀಯ ಆ್ಯಪ್ ಮೂಲಕ ಅರ್ಜಿ ಸಲ್ಲಿಸಿದ್ದು ತಪಾಸಣೆಗೈದ ಅಧಿಕಾರಿಗಳು ಅಣೆಕಟ್ಟು ನಿರ್ಮಿಸಲು ಬೇಕಾಗುವಷ್ಟು ಫಂಡ್ ಬ್ಲಾಕ್ ಮಟ್ಟದಲ್ಲಿ ಇಲ್ಲ ಎಂಬ ಕಾರಣವನ್ನು ನೀಡಿ ಕಾಮಗಾರಿಯನ್ನು ಕೈಬಿಟ್ಟಿದ್ದರು. ಒಟ್ಟಿನಲ್ಲಿ ಅಪಾಯ ಎದುರಾಗುವ ಮುನ್ನ ಸ್ಥಳೀಯಾಡಳಿತ ಸಂಸ್ಥೆಯು ಎಚ್ಚೆತ್ತುಕೊಂಡು ಜನರ ಸಂಪರ್ಕ ವ್ಯವಸ್ಥೆಗೆ ನೂತನ ಸೇತುವೆಯನ್ನು ನಿರ್ಮಿಸಿಕೊಡುವಂತೆ ಒತ್ತಾಯಿಸಲಾಗಿದೆ.

ಬಿಎಂಎಸ್ ಮೊಗ್ರಾಲ್ ಪುತ್ತೂರು ಪಂಚಾಯತ್ ಸಮಿತಿ ಸಮ್ಮೇಳನ



ಕಾಸರಗೋಡು: ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ಮೊಗ್ರಾಲ್ ಪುತ್ತೂರು ಪಂಚಾಯತ್ ಸಮಿತಿ ಸಮ್ಮೇಳನವು ಕೊರುವೈಲು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದ ಸಭಾಂಗಣದಲ್ಲಿ ಜರಗಿತು.

ಸಮ್ಮೇಳನವನ್ನು ಬಿಎಂಎಸ್ ಮಧೂರು ವಲಯ ಅಧ್ಯಕ್ಷ ವಸಂತ ನಾಯ್ಕ್ ಕೊರುವೈಲು ಉದ್ಘಾಟಿಸಿದರು. ಬಿಎಂಎಸ್ ಮೊಗ್ರಾಲ್ ಪುತ್ತೂರು ಪಂಚಾಯತ್ ಸಮಿತಿ ಅಧ್ಯಕ್ಷ ಕೆ.ಕೆ. ಸುರೇಶ್ (ಬಿಇಎಲ್) ಅಧ್ಯಕ್ಷತೆ ವಹಿಸಿದ್ದರು. ಬಿಎಂಎಸ್ ಜಿಲ್ಲಾಧ್ಯಕ್ಷ ಉಪೇಂದ್ರ ಕೋಟೆಕಣಿ, ಜಿಲ್ಲಾ ಕೋಶಾಧಿಕಾರಿ ಬಿ.ಮನೀಶ್, ಜಿಲ್ಲಾ ಜೊತೆ ಕಾರ್ಯದರ್ಶಿ ಗುರುದಾಸ್ ಚೇನಕ್ಕೋಡು, ಮಿನಿ ವಿಜಯನ್ ಮಾತನಾಡಿದರು. ನವೀನ್ ಕಾಯಿಕೊಟ್ಟೆ ವರದಿ ಮಂಡಿಸಿದರು. ಮಧೂರು ವಲಯ ಕಾರ್ಯದರ್ಶಿ ಸಿ.ಎಚ್. ಶ್ರೀಧರ ಚೇನಕ್ಕೋಡು ಸ್ವಾಗತಿಸಿ, ಮೊಗ್ರಾಲ್ ಪಂಚಾಯತ್ ಸಮಿತಿ ಕಾರ್ಯದರ್ಶಿ ಸದಾಶಿವ ಪಂಜದಗುಡ್ಡೆ ವಂದಿಸಿದರು.

ಪ್ರೌಢಶಾಲೆಯ ಕನ್ನಡ ಶಿಕ್ಷಕರ ಹುದ್ದೆಗೆ ನೇಮಕಾತಿ

ಕಾಸರಗೋಡು: ಕಾಸರಗೋಡು ಜಿಎಚ್ಎಸ್ಎಸ್‌ನ ಪ್ರೌಢಶಾಲಾ ವಿಭಾಗದಲ್ಲಿ ಎಚ್ಎಸ್‌ಟಿ ಕನ್ನಡ ಹುದ್ದೆಗೆ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಜು.2ರಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ. ಹೆಚ್ಚಿನ ವಿವರಗಳಿಗೆ 9495955878 ಕರೆ ಮಾಡಬಹುದು.

ಆನೆಕಲ್ಲು ಎಯುಪಿ ಶಾಲೆಯಲ್ಲಿ ರಕ್ಷಕ ಶಿಕ್ಷಕ ಸಂಘದ ಮಹಾಸಭೆ, ಸಮಿತಿ ರಚನೆ



ಮಂಜೇಶ್ವರ: ಆನೆಕಲ್ಲು ಎಯುಪಿ ಶಾಲೆಯಲ್ಲಿ ರಕ್ಷಕ ಶಿಕ್ಷಕ ಸಂಘದ ಮಹಾಸಭೆಯು ಜರಗಿತು.

ಸಭೆಯ ಉದ್ಘಾಟನೆಯನ್ನು ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಪ್ರಶಾಂತ್ ನೆರವೇರಿಸಿದರು. ರಕ್ಷಕ ಶಿಕ್ಷಕ ಸಂಘದ ಉಪಾಧ್ಯಕ್ಷ ಅಶೋಕ್ ಕೊಡ್ಲಮೊಗರು ಅಧ್ಯಕ್ಷತೆ ವಹಿಸಿದ್ದರು.

ಶಾಲಾ ಪ್ರಬಂಧಕ ಪ್ರತಿನಿಧಿ ಮುರಳಿ ಶ್ಯಾಮ್, ಎಸ್ಎಂಸಿ ಅಧ್ಯಕ್ಷ ಅಶ್ರಫ್, ಮಾತೃ ಮಂಡಳಿ ಅಧ್ಯಕ್ಷೆ ಶೋಭಾ ಕತ್ತರಿಕೋಡಿ, ನಿವೃತ್ತ ಮುಖ್ಯೋಪಾಧ್ಯಾಯಿನಿ ರೇಣುಕಾ ಮೊದಲಾದವರು ಉಪಸ್ಥಿತರಿದ್ದು ಶುಭಹಾರೈಸಿದರು.

ಶಾಲಾ ಮುಖ್ಯೋಪಾಧ್ಯಾಯ ರವಿಶಂಕರ ವಾರ್ಷಿಕ ವರದಿ ಹಾಗೂ ಆಯ ವ್ಯಯ ಮಂಡಿಸಿದರು. ಈ ಸಂದರ್ಭ ಶಾಲೆಯ ಶೈಕ್ಷಣಿಕ ಪ್ರಗತಿಯ ಬಗ್ಗೆ ರಕ್ಷಕರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ನಂತರ 2026–27ನೇ ಶೈಕ್ಷಣಿಕ ವರ್ಷದ ನೂತನ ಸಮಿತಿಯನ್ನು ಆರಿಸಲಾಯಿತು.

ಸಮಿತಿಗೆ ನೂತನ ಪದಾಧಿಕಾರಿಗಳ ಆಯ್ಕೆ

ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷರಾಗಿ ಖಾದರ್ ಆನೆಕಲ್ಲು, ಉಪಾಧ್ಯಕ್ಷರಾಗಿ ಅಶೋಕ್ ಕೊಡ್ಲಮೊಗರು, ಮಾತೃಮಂಡಳಿಯ ಅಧ್ಯಕ್ಷೆಯಾಗಿ ಶೋಭಾ ಕತ್ತರಿಕೋಡಿ, ಉಪಾಧ್ಯಕ್ಷೆಯಾಗಿ ಶಾಂಭವಿ ಹಾಗೂ 15 ಮಂದಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಶಾಲಾ ಹಿರಿಯ ಶಿಕ್ಷಕ ಹರೀಶ್ ವಿ. ಸ್ವಾಗತಿಸಿ, ಸಿತಾರ ಟೀಚರ್ ವಂದಿಸಿದರು. ಜೀವನ್ ಮಾಸ್ಟರ್ ಕಾರ್ಯಕ್ರಮ ನಿರೂಪಿಸಿದರು.

ಮುಜುಂಗಾವು ಶಾಲೆಯಲ್ಲಿ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ



ಕುಂಬಳೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಮಂಜೇಶ್ವರ ತಾಲೂಕು, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಬೆಳ್ತಂಗಡಿ ಹಾಗೂ ಶಾಲಾ ಆಡಳಿತ ಮಂಡಳಿಯ ಸಹಯೋಗದಲ್ಲಿ ಡಾ.ಡಿ.ವೀರೇಂದ್ರ ಹೆಗ್ಗಡೆ ಹಾಗೂ ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಿಗೆ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆಯನ್ನು ಆನ್ ಲೈನ್ ಗೂಗಲ್ ಮೀಟ್ ಮೂಲಕ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಮುಜುಂಗಾವು ಶ್ರೀ ಭಾರತಿ ವಿದ್ಯಾಪೀಠದಲ್ಲಿ ಲೈವ್ ವ್ಯವಸ್ಥೆ ಮಾಡಲಾಗಿತ್ತು. ಧರ್ಮಸ್ಥಳದ ಧರ್ಮಾಧಿಕಾರಿಗಳು ಹಾಗೂ ಅಮ್ಮನವರು ವಿದ್ಯಾರ್ಥಿಗಳಿಗೆ ಆಶೀರ್ವಾದ ನೀಡಿದರು. ಯೋಜನೆಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅನಿಲ್‌ಕುಮಾರ್ ಎಸ್.ಎಸ್. ಪ್ರಾಸ್ತಾವಿಕ ನುಡಿಯೊಂದಿಗೆ ಮಾಹಿತಿ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ದೇವಿಪ್ರಸಾದ್ ಶೆಟ್ಟಿ ಬೆಂಗಳೂರು ಮತ್ತು ಡಾ.ವೆಂಕಟೇಶ್ ಪ್ರಸಾದ್ ಎಸ್.ಪಿ. ಬೆಂಗಳೂರು ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮ ಹಾಗೂ ಅದರಿಂದ ಹೇಗೆ ಸಾವು ಸಂಭವಿಸುತ್ತದೆ ಎಂಬ ಕುರಿತು ಸಮಗ್ರ ಮಾಹಿತಿ ನೀಡಿದರು. ಮುಖ್ಯೋಪಾಧ್ಯಾಯ ಶ್ಯಾಮ ಭಟ್ ಧರ್ಬೆಮಾರ್ಗ, ಸಹ ಮುಖ್ಯೋಪಾಧ್ಯಾಯಿನಿ ಚಿತ್ರಾ ಸರಸ್ವತಿ, ಮಂಜೇಶ್ವರ ತಾಲೂಕಿನ ಯೋಜನಾಧಿಕಾರಿ ಶಶಿಕಲಾ ಸುವರ್ಣ, ವಲಯದ ಜನಜಾಗೃತಿ ವೇದಿಕೆ ಅಧ್ಯಕ್ಷ ಮಹೇಶ್ ಪುಣಿಯೂರು, ಮೇಲ್ವಿಚಾರಕ ಅಭಿಷೇಕ್, ಸೇವಾಪ್ರತಿನಿಧಿ ಸ್ವರ್ಣಲತಾ ಉಪಸ್ಥಿತರಿದ್ದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಮಂಜೇಶ್ವರ ತಾಲೂಕಿನ ಕುಂಬಳೆ ವಲಯದ ಕಳತ್ತೂರಿನಲ್ಲಿ ನಡೆಯುವ 2080ನೇ ಮದ್ಯವರ್ಜನ ಶಿಬಿರದ ಆಮಂತ್ರಣ ಪತ್ರಿಕೆಯನು ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ, ರಾಜರ್ಷಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ನೀಡಲಾಯಿತು. ಈ ಸಂಧರ್ಭ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಯಪ್ರಸಾದ್ ರೈ ಕಾರಿಂಜ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಬೆಳ್ತಂಗಡಿ ಪ್ರಾದೇಶಿಕ ನಿರ್ದೇಶಕ ವಿವೇಕ್ ವಿನ್ಸೆಂಟ್ ಪಾಯಸ್ ಇದ್ದರು.



ಕುಂಟಿಕಾನ ದೇವರಮೆಟ್ಟು ಅಂಗನವಾಡಿಯಲ್ಲಿ ಪಲ್ಸ್ ಪೋಲಿಯೋ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಬದಿಯಡ್ಕ ಗ್ರಾಮ ಪಂಚಾಯತ್‌ನ ನೀರ್ಚಾಲು 3ನೇ ವಾರ್ಡ್ ಸದಸ್ಯ ಶ್ಯಾಮಪ್ರಸಾದ ಸರಳಿ ಚಾಲನೆ ನೀಡಿದರು. ಆಶಾ ಕಾರ್ಯಕರ್ತೆಯರು, ಅಂಗನವಾಡಿ ವರ್ಕರ್, ಆರೋಗ್ಯ ಇಲಾಖೆಯ ಸಿಬ್ಬಂದಿ, ಸಾರ್ವಜನಿಕರು ಪಾಲ್ಗೊಂಡಿದ್ದರು.

ಇಂಧನ ಬೆಲೆ ಜೊತೆ ಇತರ ಖರ್ಚು ವೆಚ್ಚಗಳು ಪದೇ ಪದೇ ಏರಿಕೆಯ ಬಿಸಿ

ಅತಂತ್ರ ಸ್ಥಿತಿಯಲ್ಲಿದೆ ಸರಕು ಸಾಗಾಟ ವಲಯ



ಕಾಸರಗೋಡು: ಜಿಲ್ಲೆಯಲ್ಲಿ ಸಾವಿರಾರು ಮಂದಿ ಕಾರ್ಮಿಕರು ದುಡಿಯುತ್ತಿರುವ ಸರಕು ಸಾಗಾಟ ವಲಯ ಸಮಸ್ಯೆಯ ಸುಳಿಯಲ್ಲಿ ಸಿಲುಕಿದೆ. ಇಂಧನ ಬೆಲೆಯೇರಿಕೆ ಹಾಗೂ ಇತರ ಖರ್ಚು ವೆಚ್ಚಗಳು ಪದೇ ಪದೇ ಹೆಚ್ಚುತ್ತಿರುವ ಕಾರಣ ಪ್ರಸ್ತುತ ವಲಯದಲ್ಲಿ ದುಡಿಯುವ ಕಾರ್ಮಿಕರು ಹಾಗೂ ಲಾರಿ ಮಾಲಕರು ನಿತ್ಯ ಜೀವನ ನಡೆಸಲು ಸಂಕಷ್ಟಪಡುವಂತಾಗಿದೆ.

ಡೀಸೆಲ್ ಬೆಲೆಯೇರಿಕೆ ಮಾತ್ರವಲ್ಲದೆ ಟಯರ್, ಬಿಡಿಭಾಗಗಳು, ಟೋಲ್ ಶುಲ್ಕ ವಿಮೆ ಮೊತ್ತ ಪಾವತಿಗಳ ಹೆಚ್ಚಳ ಇತ್ಯಾದಿ ಸಮಸ್ಯೆಗಳು ಸರಕು ಸಾಗಾಟ ವಲಯವನ್ನು ಸಂದಿಗ್ಧ ಪರಿಸ್ಥಿತಿಗೆ ತಳ್ಳಿವೆ.

ರಾಷ್ಟ್ರೀಯ ಹೆದ್ದಾರಿಗಳ ವಿವಿಧೆಡೆ ಟೋಲ್ ದರ ಹೆಚ್ಚಿಸಿರುವುದು, ಘನವಾಹನಗಳ ವಿಮೆ ಪಾವತಿ ಮೊತ್ತ ಏರಿಸಿರುವುದು ವಾಹನ ಮಾಲಕರಿಗೆ ಭಾರೀ ಹೊರೆಯಾಗುತ್ತಿದೆ. ಖರ್ಚುಗಳನ್ನು ನಿಭಾಯಿಸಲಾಗದೆ ಹಲವು ಮಾಲಕರು ಲಾರಿ ಸರ್ವೀಸ್ ನಡೆಸಲಾಗದೆ ರಸ್ತೆ ಬದಿ ಇರಿಸಿ ತಲೆ ಕೆಡಿಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಸಾವಿರಾರು ಮಂದಿ ಕಾರ್ಮಿಕರಿಗೆ ದಿಢೀರನೆ ನೌಕರಿ ಇಲ್ಲದಂತಾಗಿದೆ. ದಿನನಿತ್ಯ ಲಭಿಸುವ ಆದಾಯದಲ್ಲಿ ಭಾರೀ ಕುಸಿತ ಸಂಭವಿಸಿದ ಹಿನ್ನೆಲೆಯಲ್ಲಿ ಲಾರಿ ಚಾಲಕರು, ಕ್ಲೀನರ್‌ಗಳು, ಲೋಡಿಂಗ್ ಕಾರ್ಮಿಕರು, ಏಜೆಂಟ್‌ಗಳ ಕುಟುಂಬಗಳು ತೀವ್ರವಾದ ಆರ್ಥಿಕ ಸಮಸ್ಯೆಗೊಳಗಾಗಿವೆ. ಬಹುತೇಕ ಲಾರಿಗಳನ್ನು ಬ್ಯಾಂಕ್ ಸಾಲ ಮೂಲಕ ಖರೀದಿಸಲಾಗಿದೆ. ಆದಾಯ ಇಲ್ಲದೇ ಇರುವುದರಿಂದ ಸಾಲ ಮರುಪಾವತಿ ಸ್ಥಗಿತಗೊಂಡಿದ್ದು, ಬ್ಯಾಂಕ್‌ಗಳು ವಾಹನಗಳನ್ನು ವಶಕ್ಕೆ ಪಡೆಯುವಂತಹ ಸನ್ನಿವೇಶ ತಲೆದೋರಿದೆ. ಸರಕು ಸಾಗಾಟ ವಲಯವನ್ನು ಮಾತ್ರ ಆಶ್ರಯಿಸಿ ಬದುಕುವ ಸಾವಿರಾರು ಮಂದಿ ಲಾರಿ ಮಾಲಕರು, ಕಾರ್ಮಿಕರು ಹಾಗೂ ಅವರ ಕುಟುಂಬದವರು ಅಕ್ಷರಶಃ ಆರ್ಥಿಕ ಮುಗ್ಗಟ್ಟನ್ನು ಅನುಭವಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕಾಸರಗೋಡು ಜಿಲ್ಲಾಡಳಿತ ಹಾಗೂ ಕೇರಳ ಸರಕಾರವು ಮಧ್ಯ ಪ್ರವೇಶಿಸಿ ಸೂಕ್ತ ವ್ಯವಸ್ಥೆ ಕೈಗೊಳ್ಳಬೇಕೆಂಬ ಆಗ್ರಹ ವ್ಯಾಪಕಗೊಂಡಿದೆ.

ಪೆರಡಾಲದಲ್ಲಿ 'ಶ್ರೀ ಉದನೇಶ್ವರ ಹಸಿರು ನಮನೋತ್ಸವ'ಕ್ಕೆ ಚಾಲನೆ

ಊರ ಜನರಿಂದಲೇ ಸಾಮೂಹಿಕ ಗಿಡ ನಾಟಿ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಆವರಣದಲ್ಲಿ 'ಶ್ರೀ ಉದನೇಶ್ವರ ಹಸಿರು ನಮನೋತ್ಸವ' ಎಂಬ ವನಮಹೋತ್ಸವ ಕಾರ್ಯಕ್ರಮಕ್ಕೆ ಭಾನುವಾರ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು.

ದೇವಸ್ಥಾನದ ಆಡಳಿತ ಸಮಿತಿ ಹಾಗೂ ಬ್ರಹ್ಮಕಲಶೋತ್ಸವ ಸಮಿತಿಯ ಆಶ್ರಯದಲ್ಲಿ ಹಸಿರು ನೆಟ್ಟು ಪುಣ್ಯ ಸಂಪಾದಿಸೋಣ, ಉದನೇಶ್ವರನ ಕೃಪೆಗೆ ಪಾತ್ರರಾಗೋಣ ಎಂಬ ಘೋಷವಾಕ್ಯದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ದೇವರಿಗೆ ಪ್ರಿಯವಾದ ಗಿಡಗಳ ನಾಟಿ

ದೇವರಿಗೆ ಪ್ರಿಯವಾದ ಬಿಲ್ವಪತ್ರೆ, ರುದ್ರಾಕ್ಷಿ, ಶಮಿ, ಪಾಲಾಶ, ಅಶೋಕ ಹಾಗೂ ಹಲಸು, ಮಾವು, ತೆಂಗು, ದೀವಿಹಲಸು, ಚಿಕ್ಕು, ಪೇರಳೆ, ಅಬ್ಬುಕ, ದಂತಪಾಲ, ಮಹಾಗನಿ ಮುಂತಾದ ವಿವಿಧ ಜಾತಿಯ ವೃಕ್ಷಗಳ ಗಿಡಗಳನ್ನು ಸಮರ್ಪಣೆ ಮಾಡಲಾಯಿತು.

ದೇವಸ್ಥಾನದ ಆವರಣದಲ್ಲಿ ಸಮಿತಿಯ ಪದಾಧಿಕಾರಿಗಳು, ಊರಿನ ಹಿರಿಯರು, ಮಹಿಳೆಯರು ಹಾಗೂ ಯುವಕರು ಸೇರಿ ಸಾಮೂಹಿಕ ವನಮಹೋತ್ಸವಕ್ಕೆ ಚಾಲನೆ ನೀಡಿದರು. ಈ ಕಾರ್ಯವು ಇನ್ನೂ ಕೆಲವು ದಿನಗಳ ಕಾಲ ಮುಂದುವರಿಯಲಿದ್ದು ದೇವಸ್ಥಾನದ ಆವರಣವನ್ನು ಸಂಪೂರ್ಣ ಹಸಿರುಮಯ ಮಾಡುವ ಸಂಕಲ್ಪ ಕೈಗೊಳ್ಳಲಾಯಿತು.

ಸಂಭ್ರಮದ ಚಾರ್ಟರ್ಡ್ ಅಕೌಂಟೆಂಟ್ಸ್ ದಿನಾಚರಣೆ

CA INDIA

ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆ

(ಸಂಸತ್ತಿನ ಕಾಯ್ದೆಯಡಿ ರಚಿತ ಸಂಸ್ಥೆ)

ಚಾರ್ಟರ್ಡ್ ಅಕೌಂಟೆಂಟ್ಸ್ ದಿನಾಚರಣೆ

ಲೆಕ್ಕ ಪರಿಶೋಧಕರ ದಿನಾಚರಣೆ

ಜುಲೈ1, 2026

ಸ್ಥಾಪನೆ-ಸಾಧನೆ !

1949ರಲ್ಲಿ ರಾಜಧಾನಿ ದಿಲ್ಲಿಯಲ್ಲಿ ವಿದ್ಯುಕ್ತವಾಗಿ ಆರಂಭಗೊಂಡ ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐ.ಸಿ.ಎ.ಐ.)ವು ಸಂಸತ್ತಿನ ಕಾಯ್ದೆಯಡಿ ಸ್ಥಾಪಿತವಾದ ಒಂದು ಶಾಸನಬದ್ಧ ಸಂಸ್ಥೆಯಾಗಿದೆ. ದೇಶದಲ್ಲಿ ಲೆಕ್ಕಪರಿಶೋಧಕ ವೃತ್ತಿಯ ನಿಯಂತ್ರಣ, ಬೆಂಬಲ ಮತ್ತು ಬೆಳವಣಿಗೆಗಾಗಿ 1949ರ ಚಾರ್ಟರ್ಡ್ ಅಕೌಂಟೆಂಟ್ಸ್ ಕಾಯ್ದೆಯನ್ನು ರೂಪಿಸಲಾಗಿದೆ. ಭಾರತ ಸರಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಆಡಳಿತ ನಿಯಂತ್ರಣದಡಿ ಸಂಸ್ಥೆಯು ಕಾರ್ಯಾಚರಿಸುತ್ತದೆ. ಸಾರ್ವಜನಿಕ ಹಿತಾಸಕ್ತಿಯಡಿ ಭಾರತೀಯ ಆರ್ಥಿಕತೆಗೆ ಸೇವೆ ಸಲ್ಲಿಸುವ ಉನ್ನತ ಪರಂಪರೆ ಹೊಂದಿರುವ ಐ.ಸಿ.ಎ.ಐ.ಯು ವಿಶ್ವದಲ್ಲೇ ಅತ್ಯಂತ ದೊಡ್ಡ ಚಾರ್ಟರ್ಡ್ ಅಕೌಂಟೆಂಟ್‌ಗಳ ವೃತ್ತಿಪರ ಮಂಡಳಿ ಎಂಬ ಹೆಗ್ಗಳಿಕೆಯನ್ನು ಹೊಂದಿದೆ.

ಐ.ಸಿ.ಎ.ಐ. ತಾಂತ್ರಿಕ, ನೈತಿಕ ಕ್ಷೇತ್ರಗಳಲ್ಲಿ ಅತ್ಯುನ್ನತ ಗುಣಮಟ್ಟವನ್ನು ಕಾಪಾಡಿಕೊಳ್ಳುವಲ್ಲಿ ಮತ್ತು ಕಠಿಣ ಪರೀಕ್ಷೆ ಮತ್ತು ಶಿಕ್ಷಣದ ಮಾನದಂಡಗಳನ್ನು ಕಾಪಾಡಿಕೊಳ್ಳುವಲ್ಲಿ ದೇಶದಲ್ಲಿ ಮಾತ್ರವಲ್ಲದೆ ಜಾಗತಿಕವಾಗಿಯೂ ಪ್ರಮುಖ ಲೆಕ್ಕಪರಿಶೋಧಕ ಸಂಸ್ಥೆಯಾಗಿ ಗುರುತಿಸಿಕೊಂಡಿದೆ. 1949ರಿಂದ, ಈ ವೃತ್ತಿಯು ಸದಸ್ಯರು ಮತ್ತು ವಿದ್ಯಾರ್ಥಿ ನೆಲೆಯ ವಿಷಯದಲ್ಲಿ ಬಹಳಷ್ಟು ಪ್ರಗತಿಯನ್ನು ಕಂಡಿದೆ.

ಆಡಳಿತ ವ್ಯವಸ್ಥೆ

ಐ.ಸಿ.ಎ.ಐ.ಯ ವ್ಯವಹಾರಗಳನ್ನು 1949ರ ಚಾರ್ಟರ್ಡ್ ಅಕೌಂಟೆಂಟ್ ಕಾಯ್ದೆ ಮತ್ತು 1988ರ ಚಾರ್ಟರ್ಡ್ ಅಕೌಂಟೆಂಟ್ಸ್ ರೆಗ್ಯುಲೇಶನ್‌ಗಳ ನಿಯಮಾವಳಿಗಳಡಿ ಮಂಡಳಿಯೊಂದು ನಿರ್ವಹಿಸುತ್ತದೆ. ಮಂಡಳಿಯು 40 ಸದಸ್ಯರನ್ನು ಹೊಂದಿದ್ದು, ಈ ಪೈಕಿ 32 ಮಂದಿ ಚಾರ್ಟರ್ಡ್ ಅಕೌಂಟೆಂಟ್‌ಗಳಿಂದ ಆಯ್ಕೆಯಾದರೆ, ಉಳಿದ 8 ಮಂದಿಯನ್ನು ಕೇಂದ್ರ ಸರಕಾರ ನಾಮ ನಿರ್ದೇಶನ ಮಾಡುತ್ತದೆ.

ಐ.ಸಿ.ಎ.ಐ.ಯ ಧ್ಯೇಯವಾಕ್ಯ ಮತ್ತು ಅದರ ಅರ್ಥ

ಐ.ಸಿ.ಎ.ಐ.ಯು ಅತ್ಯಂತ ಕಟ್ಟುನಿಟ್ಟಿನ ನೀತಿ ಸಂಹಿತೆಯೊಂದನ್ನು ಹೊಂದಿರುವ ಸಂಸ್ಥೆ.
"**ಗರುಡ**" ಮತ್ತು ಕಠೋಪನಿಷತ್ತಿನಿಂದ ಪಡೆದ "**ಯ ಯೇಷಃ ಸುಪ್ತೇಷು ಜಾಗರ್ತಿ**" ಸಂಸ್ಥೆಯ ಅಧಿಕೃತ ಲಾಂಛನ ಮತ್ತು ಧ್ಯೇಯವಾಕ್ಯವಾಗಿದೆ.
"**ಎಲ್ಲರೂ ಮಲಗಿದ್ದಾಗ ಆತ ಜಾಗೃತನಾಗಿದ್ದಾನೆ**" ಎಂಬರ್ಥ ನೀಡುವ ಈ ವಾಕ್ಯ ಲೆಕ್ಕಪರಿಶೋಧಕರ ಜವಾಬ್ದಾರಿ ಮತ್ತು ವೃತ್ತಿ ಪಾವಿತ್ರ್ಯವನ್ನು ಸಾರಿ ಹೇಳುತ್ತದೆ.

ಇದು ಪ್ರಪಂಚದ ಅಜ್ಞಾನದ ನಡುವೆ ಶಾಶ್ವತ ಜಾಗರೂಕತೆ, ಅತ್ಯುನ್ನತ ಅರಿವಿನ ಸ್ಥಿತಿಯನ್ನು ವಿವರಿಸುತ್ತದೆ.

ಲೆಕ್ಕಪರಿಶೋಧಕನೊಬ್ಬ ಐ.ಸಿ.ಎ.ಐ.ಯ ನಿಯಮಗಳನ್ನು ಅನುಸರಿಸಲು ಗೌರವದ ಬದ್ಧತೆ ಹೊಂದಿರುವಂತೆ, ಸದಾ ನಿಯಮಗಳಿಗೆ ವಿಧೇಯನಾಗಿ ಜಾಗೃತನಾಗಿಯೂ ಇರುತ್ತಾನೆ. ಸಣ್ಣ ಮತ್ತು ದೊಡ್ಡ ವ್ಯವಹಾರಗಳಿಗೆ ಒಬ್ಬ ತಜ್ಞನ ನೆರವಿನ ಅಗತ್ಯ ಇರುತ್ತದೆ. ಉದ್ಯಮ-ವ್ಯವಹಾರ ಚಿಕ್ಕದಿರಲಿ, ದೊಡ್ಡದಿರಲಿ, ತಜ್ಞರೊಬ್ಬರ ಸಹಕಾರ ಅಗತ್ಯವಿರುತ್ತದೆ. ಇಂತಹ ಸನ್ನಿವೇಶದಲ್ಲಿ ಸದಾ ನೆರವಿಗೆ ಬರುವಂತಹವರು ಲೆಕ್ಕಪರಿಶೋಧಕರು. ಇದು ವೃತ್ತಿಪರರಾಗಿ ಸಿ.ಎ. ಒಬ್ಬರಲ್ಲಿ ಬೇರೂರಿರುವಂತಹ ಅಂಶವಾಗಿದೆ.
ಸಿ.ಎ. ದಿನಾಚರಣೆಯು ದೇಶದ ಆರ್ಥಿಕತೆಗೆ ವೃತ್ತಿಯ ಮಹತ್ವವನ್ನು ಆಚರಿಸಲು ಮತ್ತು ಒಪ್ಪಿಕೊಳ್ಳಲು ಇರುವ ಒಂದು ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ.

2049ರ ಐ.ಸಿ.ಎ.ಐ. ದೃಷ್ಟಿ

ಸಮಗ್ರ ಬೆಳವಣಿಗೆ, ಆರ್ಥಿಕ ಸ್ಥಿತಿಸ್ಥಾಪಕತ್ವ ಮತ್ತು ಸಾಮಾಜಿಕ ಯೋಗಕ್ಷೇಮವನ್ನು ಸಾಧಿಸಬೇಕೆಂಬ ಭಾರತದ ಧ್ಯೇಯಕ್ಕೆ ಅನುಗುಣವಾದ ಭವಿಷ್ಯವನ್ನು ಕಲ್ಪಿಸಿಕೊಂಡು, ಐ.ಸಿ.ಎ.ಐ. - ರಾಷ್ಟ್ರದ ಆರ್ಥಿಕ ಯೋಜನೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಲು ಆಶಿಸುತ್ತದೆ. ಐ.ಸಿ.ಎ.ಐ.ನ ವಿಷನ್ 2049ರ ಅಡಿಯಲ್ಲಿ, ಲೆಕ್ಕ ಪರಿಶೋಧಕರನ್ನು ಆರ್ಥಿಕ ಪ್ರಗತಿಯ ಪ್ರಚೋದಕರಾಗಿ ಸಶಕ್ತಗೊಳಿಸುವ ಹಾಗೂ ಭಾರತದ ಸಮಗ್ರ ಬೆಳವಣಿಗೆಯ ಉದ್ದೇಶಗಳೊಂದಿಗೆ ಸುಗಮವಾಗಿ ಸಂಯೋಜಿಸುವ ಕ್ರಿಯಾತ್ಮಕ ವಾತಾವರಣವನ್ನು ರೂಪಿಸುವ ಗುರಿಯನ್ನು ಹೊಂದಿದೆ. ಉತ್ಕೃಷ್ಟತೆ, ಸ್ವತಂತ್ರ್ಯ ಮತ್ತು ಸಮಗ್ರತೆಗೆ ಬದ್ಧತೆಯ ಮೂಲಕ, ಐ.ಸಿ.ಎ.ಐ. ಭಾರತದ ಪರಿವರ್ತನಾತ್ಮಕ ಹಾದಿಯಲ್ಲಿ ಗಣನೀಯ ಕೊಡುಗೆ ನೀಡಲು ಪ್ರಯತ್ನಿಸುತ್ತದೆ, ಮುಂದಿನ ಪೀಳಿಗೆಗಳಿಗೆ ಆರ್ಥಿಕ ಸಮಗ್ರತೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಖಾತ್ರಿಪಡಿಸುತ್ತದೆ.

ಐ.ಸಿ.ಎ.ಐ. ಮಂಗಳೂರು (ಎಸ್. ಐ.ಆರ್.ಸಿ.)

ದೇಶದಲ್ಲಿ ಐ.ಸಿ.ಎ.ಐ.ಯ 5 ವಲಯಗಳಲ್ಲಿ ಒಂದಾದ ದಕ್ಷಿಣ ಭಾರತೀಯ ವಲಯ ಮಂಡಳಿಯ ಮಂಗಳೂರು ಶಾಖೆಯು 1971ರಲ್ಲಿ ಆರಂಭಗೊಂಡಿತು. 2020ರಲ್ಲಿ ತನ್ನ ಸ್ವರ್ಣ ಮಹೋತ್ಸವ ವರ್ಷವನ್ನು ಆಚರಿಸಿಕೊಂಡಿತು. ಇಂದು ಮಂಗಳೂರು ಶಾಖೆಯು 1000 + ಸದಸ್ಯರು ಮತ್ತು 5000 + ವಿದ್ಯಾರ್ಥಿಗಳನ್ನು ಹೊಂದಿದೆ. ಮಂಗಳೂರಿನ ಪಡೀಲಿನಲ್ಲಿ ಇರುವ ಐ.ಸಿ.ಎ.ಐ. ಭವನ್ ಮತ್ತು ಕರಂಗಲ್ಪಾಡಿ ಬಳಿಯ ಮಹೇಂದ್ರ ಆರ್ಕೇಡಿನಲ್ಲಿ ಅತ್ಯಾಧುನಿಕ ಸೌಲಭ್ಯಗಳುಳ್ಳ ಸ್ವಂತ ಕಚೇರಿಗಳನ್ನು ಹೊಂದಿದ್ದು, ಸಿಎ ಸದಸ್ಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಮೌಲ್ಯವರ್ಧಿತ ತರಬೇತಿಗಳನ್ನು ನೀಡುವ ಮೂಲಕ ತನ್ನದೇ ಆದ ಕೊಡುಗೆ ನೀಡಿ ಗಮನ ಸೆಳೆದಿದೆ.

ROLE OF ICAI

- Regulate the profession of Accountancy
- Education & Examination of Chartered Accountancy Course
- Continuing Professional Education of Members
- Conducting Post Qualification Courses
- Formulation of Accounting Standards
- Prescription of Standard Auditing Procedures
- Laying down Ethical Standards
- Monitoring Quality through Peer Review
- Ensuring Standards of performance of Members
- Exercise Disciplinary Jurisdiction
- Financial Reporting Review
- Input on Policy matters to Government

ICAI MISSION

ICAI will leverage technology and infrastructure and partner with its stakeholders to:

- Impart world class education, training and professional development opportunities to create global professionals
- Develop an independent and transparent regulatory mechanism that keeps pace with the changing times
- Ensure adherence to highest ethical standards
- Conduct cutting edge research and development in the areas of accounting, assurance, taxation, finance and business advisory services
- Establish ICAI members and firms as Indian multi-national service providers

SIGNIFICANCE OF CHARTERED ACCOUNTANTS

The role of Chartered Accountants in India goes beyond individual businesses. They contribute significantly to the nation's economic growth in several ways:

ENHANCING ACCOUNTABILITY
CAs ensure transparency and accountability in financial reporting, which is vital for building trust among investors, lenders, and stakeholders.

SUPPORTING GOVERNMENT REVENUE
By helping businesses and individuals comply with tax laws, CAs play a critical role in increasing government revenue, which, in turn, supports public services and infrastructure development.

FOSTERING ENTREPRENEURSHIP
The guidance and support provided by CAs encourage entrepreneurship and economic growth by making it easier for individuals to start and manage businesses.

GLOBAL COMPETITIVENESS
CAs ensure that Indian businesses are financially competitive on a global scale. Their expertise helps companies navigate international markets, attracting foreign investments and contributing to India's global economic stature.

JOB CREATION
The demand for Chartered Accountants in India continues to rise, leading to job creation and economic opportunities for those pursuing this profession.

While many celebrate the learned CAs for mastering numbers, the deeper truth is every audit you sign, every return you file, every financial advice you give, the peace of mind you bring to those who depend on you — Remember these are sovereign responsibilities bestowed upon you by the Constitution of this great country. May the dedicated fraternity continue to uphold trust, accountability, commitment and ethical professionalism in contributing to nation building, pioneering India's economic progress.



Sri Renga Rajan
Commissioner of Income Tax (Appeals)
Mangaluru

ಪ್ರಾಮಾಣಿಕತೆ, ಪರಿಶ್ರಮ ಮತ್ತು ವೃತ್ತಿಪರತೆಯಿಂದ ದೇಶದ ಆರ್ಥಿಕ ಪ್ರಗತಿಗೆ ಕೊಡುಗೆ ನೀಡುತ್ತಿರುವ ಸಿ. ಎ. ಸಮುದಾಯಕ್ಕೆ ಶುಭಾಶಯಗಳು.



ಶ್ರೀ ರಾಘವೇಂದ್ರ ಎಸ್ ಭಟ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಕಾರ್ಯನಿರ್ವಹಣಾಧಿಕಾರಿ
ಕರ್ಣಾಟಕ ಬ್ಯಾಂಕ್ ಲಿ. ಮಂಗಳೂರು

ದೇಶದ ವ್ಯವಹಾರ, ವಾಣಿಜ್ಯ ಮತ್ತು ಆರ್ಥಿಕ ಪ್ರಗತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್‌ಗಳ ಪಾತ್ರ ಮಹತ್ವದ್ದಾಗಿದೆ ಮಾತ್ರವಲ್ಲದೆ ಅದು ಅಜೇಯವಾಗಿದೆ.
ಚಾರ್ಟರ್ಡ್ ಅಕೌಂಟೆಂಟ್‌ಗಳ ದಿನದಂದು ಎಲ್ಲರಿಗೂ ಹೃತ್ಪೂರ್ವಕ ಶುಭಾಶಯಗಳು.



ಶ್ರೀ ಅಭಿನವ್ ಬನ್ಸಾಲ್
ಅಧ್ಯಕ್ಷರು
ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) – ಮಂಗಳೂರು

Warm greetings from KCCI.
We look forward to continuing this synergy and collaboration between our organizations thereby strengthening industry and contributing meaningfully to the prosperity, growth, and development of our region.



Sri P. B. Ahmed Mudassar
President, Kanara Chamber of Commerce and Industry, Mangaluru

ಚಾರ್ಟರ್ಡ್ ಅಕೌಂಟೆಂಟ್‌ಗಳು ತಮ್ಮ ಜ್ಞಾನ, ಚಾತುರ್ಯ, ಕಾರ್ಯತಂತ್ರ, ಕೌಶಲ್ಯ ಮತ್ತು ಪ್ರಾಮಾಣಿಕತೆಯ ಮೂಲಕ ಇಂದು ನಮ್ಮೆಲ್ಲರ ಜೀವನವನ್ನು ಸುರಕ್ಷಿತವಾಗಿರಿಸಲು ಹಾಗೂ ಉತ್ತಮ ಮತ್ತು ಉಜ್ವಲ ಭವಿಷ್ಯವನ್ನು ರೂಪಿಸಲು ನಿರಂತರವಾಗಿ ಸಹಕರಿಸುತ್ತಿದ್ದಾರೆ. ದೇಶದ ಆರ್ಥಿಕ ಆರೋಗ್ಯವು ಇಂತಹ ನಿಪುಣ ಯೋಜಕರ ಕೈಯಲ್ಲಿದ್ದು, ಅವರು ದೇಶದ ಪ್ರಗತಿ ಮತ್ತು ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ, "ಸಮೃದ್ಧ ಸಶಕ್ತ ಭಾರತ" ನಿರ್ಮಾಣದತ್ತ ನೀಡುತ್ತಿರುವ ಅಮೂಲ್ಯ ಕೊಡುಗೆಗಾಗಿ ಐ.ಸಿ.ಎ.ಐ. ಹಾಗೂ ಅದರ ಸದಸ್ಯರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.



Dr. Chandrashekar J Sorake
Clinical Director & Lead Consultant Gastroenterologist
SCS Hospital, Mangaluru

BEST WISHES FROM

ಗಣೇಶ್ & ಸುಧೀರ್ Ganesh & Sudhir
Chartered Accountants
Mangaluru | Udupi | Bengaluru
www.ganeshandsudhir.in
CA. B N Surendra Bhat, CA. Giridhar Kamath, CA. Narayana, CA. KP Vikas Shenoy, CA. Malavika Kamath, CA. Rajesh Lobo, CA. Aparna Nayak, CA. Reeshma Pereira

G.H.S & ASSOCIATES
Chartered Accountants
CA. G. Hariram Shenoy, CA. G. Rajaram Shenoy, CA. G. Usha Kiran Shenoy, CA. Seershanjana S.
No. 5 & 6, Sevashram Apartments, Bunts Hostel Road, Mangaluru

KNF & ASSOCIATES
Chartered Accountants
CA. K. S. Kamath, CA. Abdul Numan, CA. Faiz Muhammed, CA. Mohammed Thafseer
Mangalore | Kushalnagar | Bangalore

M. Jagannath Kamath & Co.
Chartered Accountants
Mangaluru | Udupi
CA. M. Jagannath Kamath, CA. Sowmya Kamath M., CA. Gautham Pai D., CA. Nayan Shetty, CA. Prathiksha Pai

Nitin J. Shetty & Co.
Chartered Accountants
CA. Nitin J. Shetty, CA. Sunitha R. Furtado, CA. Sriram V. Rao, CA. Dhanush D. Bolar, CA. Lakshmi Viswanath, CA. Joystan Dsouza, CA. Sampath N. Shetty

Prabhu Mallya & Associates
Chartered Accountants
Mangaluru | Bengaluru | Udupi
CA. Sushmitha Prabhu, CA. Sakshi Mallya
www.caprabhumallya.com

Shetty & Co
Chartered Accountants
CA. Vijayakumar Shetty, CA. Subhaschandra Salian, CA. Rajesh Kumar, CA. Nishith Bhandary, CA. Sanjana Subhash

B Shivananda Pai & Co.
Chartered Accountants
CA. B Shivananda Pai, CA. Anil Kumar, CA. Venkataramana Kini, CA. B Krishnananda Pai, CA. Divya Nayak, CA. Anjana, CA. Vinod Udaya Bhat, CA. B Shashidar Pai, CA. Likhitha, CA. Don Alen Dmello

Abdul Samad & Associates
Chartered Accountants
CA. Abdul Samad, CA. Gayathri C. H., CA. Mohammad Rahil
1st Floor, Shalimar Kankanady, Mangaluru

Balasubramanya & Associates
CA. Balasubramanya N., CA. Skanda BS Upadhyaya

M/s Ballakuraya & Associates
CA. Keshava N Ballakuraya, CA. Sabana, CA. Shraddha Sanghvi, CA. Krishnakanth K

Chandramohan K. Y. & Co
Chartered Accountants
CA. Chandramohan K. Y., CA. Ravindra K., CA. Chitra Chandramohan, CA. Shravana Dota

CA. Daniel Marsh Pereira
(NBS & Co)
2nd Floor, Opal Complex, Opp Bejai Church Hall, Mangaluru

CA. Ganesh Rao P., CA. Shreevathsa N. Ballakuraya, CA. Mahesh Shetty
1st Floor, Time Square Building, Shivabagh Circle, Mangaluru

I. V. Sharma & Co
Chartered Accountants
CA. I V Sharma, CA. P S Rao, CA. V J Talithaya, CA. Hitesh Rao K
Mangaluru | Mumbai | Udupi

Naveen Kumar K & Co
Chartered Accountants
Kasaragod | Mangaluru

CA. P Narendra Pai, CA. B Narasimha Kamath

Prasanna Shenoy & Co
Chartered Accountants
CA. Prasanna Shenoy M., CA. Megha Pai, CA. Ramesh D. Prabhu G., CA. Sri Lakshmi Nayak N.

CA. Sacheth Shetty
Bejai, Mangaluru

Shantharama Shetty & Co
Chartered Accountants
CA. Shantharama Shetty, CA. Amit H. Pai, CA. Sumanth Kumar Shetty

Sheikh Abdullah & Co.
Chartered Accountants
CA. Sheikh Abdullah, CA. Abid Ali

M/s A. Umanath Rao & Co.
Chartered Accountants
CA. Ashwin Kini H., CA. Ashwath Shenoy Y., CA. Adithya R. B.

CA. S. S. Nayak & Associates
Chartered Accountants
Mangaluru | Bengaluru

A.R. Hegde & Co.
Chartered Accountants
CA. Gaurav Hegde, CA. Ramachandra Hegde

CA. Kedarnath Shenoy
M/s Manohar Chowdhry & Associates

M. Rayappa Nayak & Co
Chartered Accountants
CA. M. Rayappa Nayak, CA. Gautham Nayak M.

Mamta Rao & Associates
Chartered Accountants
Mangaluru

CA. Manjeshwar Sunil Bhat
Rama Bhavan Complex, Rashtrakavi Manjeshwar, Govinda Pai Circle, Mangaluru

P R Shetty & Associates
Chartered Accountants
CA. Vishveshwara P., CA. Sneha P. G.

CA. Ramdas Rao K., CA. Vignesha M., CA. Shwetha M., CA. Sowmya R Monteiro

CA. Sudesh Kumar Rai B, CA. Vrinda Konnar
2nd Floor, Empire Mall, Mangaluru

CA. U. K. Nayak, CA. U. Jagannath Nayak, CA. M. Vyjayanthi Prabhu
#105, Sai Sharada, Near Sharada Vidyalaya, Kodialbail, Mangaluru

CA. Bantwal Nithin Baliga

Hastha & Co
Chartered Accountants
CA. Hastha Narayan

Krishnamohan S & Co
Chartered Accountants
Kulshekar, Mangalore

Nayak & Bhat
CA. Raghavendra Nayak K., CA. Srinivas Bhat K.

Pramod Krishna & Co LLP
Chartered Accountants

CA. Prashanth Pai K., CA. Vinayak Pai K.

Sathish & Chetan
Chartered Accountants
CA. K. Sathish Kamath, CA. K. Chetan Kamath

CA. V. Shivaram Kamath Mulki

CA. K. Suresh Udupa

CA. U H Ahmed & Co
Chartered Accountants
Millenium Tower, II nd Floor, Highland, Mangalore 575002

Upendra Shenoy & Co, Sumanth N Bhat & Co
Chartered Accountants

Rebello & Associates
Chartered Accountants
CA. Dylan Rebello

ರಾಷ್ಟ್ರೀಯ ವೈದ್ಯರ ದಿನಾಚರಣೆಯ ಶುಭಾಶಯಗಳು

ವೈದ್ಯೋ ನಾರಾಯಣೋ ಹರಿಃ

ಉತ್ತರ ಮಲಬಾರ್‌ನ ಅತ್ಯುತ್ತಮ ಮತ್ತು ಅತ್ಯಂತ ಪ್ರಸಿದ್ಧ ಆಸ್ಪತ್ರೆ ಯುನೈಟೆಡ್ ಮೆಡಿಕಲ್ ಸೆಂಟರ್

- ಕಾಸರಗೋಡು ಮೈತ್ರ ಯುನೈಟೆಡ್ ಹಾರ್ಟ್ ಸೆಂಟರ್ ಆಸ್ಪತ್ರೆಯ ಇತಿಹಾಸದಲ್ಲಿ ಮೊದಲ ತೆರೆದ ಹೃದಯ ಶಸ್ತ್ರಚಿಕಿತ್ಸೆ(ಬೈಪಾಸ್ ಸರ್ಜರಿ) ನಡೆಸಿದೆ.
- ಈ ಸುಸಜ್ಜಿತ 72 ಹಾಸಿಗೆಗಳ ಆಸ್ಪತ್ರೆಯಲ್ಲಿ ಐಸಿಯು, ಎನ್‌ಐಸಿಯು, ಲೇಬರ್ ಥಿಯೇಟರ್, 3 ಆಪರೇಷನ್ ಥಿಯೇಟರ್‌ಗಳು, 24x7 ತುರ್ತು ವಿಭಾಗ, ಡಯಾಲಿಸಿಸ್ ಘಟಕ, ಸುಧಾರಿತ ಪ್ರಯೋಗಾಲಯ ಮತ್ತು ಎಕ್ಸ್‌ರೇ ಘಟಕವೂ ಇದೆ.

ಕಾಸರಗೋಡಿನ ಹೃದಯ ಭಾಗದ ಹೊಸ ಬಸ್ ನಿಲ್ದಾಣ ಬಳಿಯಲ್ಲಿ ಒಂದು ದಶಕಕ್ಕೂ ಹೆಚ್ಚು ಕಾರ್ಯನಿರ್ವಹಿಸುತ್ತಿರುವ ಯುನೈಟೆಡ್ ಮೆಡಿಕಲ್ ಸೆಂಟರ್ ಮೂತ್ರನಾಳದ ಕಾಯಿಲೆಗಳು ಮತ್ತು ಪ್ರಸೂತಿ ಚಿಕಿತ್ಸೆಗಾಗಿ ಉತ್ತರ ಮಲಬಾರ್‌ನ ಅತ್ಯುತ್ತಮ ಮತ್ತು ಅತ್ಯಂತ ಪ್ರಸಿದ್ಧ ಆಸ್ಪತ್ರೆಗಳಲ್ಲಿ ಒಂದಾಗಿದೆ.

ಮೂತ್ರನಾಳದ ಕಾಯಿಲೆಗೆ ಸಂಬಂಧಿಸಿದ ಯಾವುದೇ ಕಾಯಿಲೆಗೆ, ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರಕ್ಷೇತ್ರದಲ್ಲಿ ಡಾ.ಮಂಜುನಾಥ್ ಶೆಟ್ಟಿ ಮತ್ತು ಡಾ.ವೀಣಾ ಮಂಜುನಾಥ್ ಇಲ್ಲಿ ಯಾವುದೇ ಖಾಸಗಿ ಆಸ್ಪತ್ರೆಗಿಂತ ಹೆಚ್ಚು ಕೈಗೆಟುಕುವ ಬೆಲೆಯಲ್ಲಿ ಇತ್ತೀಚಿನ ತಂತ್ರಜ್ಞಾನದೊಂದಿಗೆ ತಜ್ಞ ಚಿಕಿತ್ಸೆಯನ್ನು ಒದಗಿಸುತ್ತಾರೆ.

ಅಲ್ಲದೆ ಹೃದಯ ಚಿಕಿತ್ಸಾ ಕ್ಷೇತ್ರದಲ್ಲಿ ಕಳೆದ ಐದು ವರ್ಷಗಳಿಂದ ಕೋಝಿಕ್ಕೋಡ್ ಮೈತ್ರಾ ಆಸ್ಪತ್ರೆ ಸರಪಳಿಯ ಸಹಯೋಗದೊಂದಿಗೆ ಆಸ್ಪತ್ರೆಯ ಮೂರನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಸರಗೋಡು ಮೈತ್ರ ಯುನೈಟೆಡ್ ಹಾರ್ಟ್ ಸೆಂಟರ್ ಆಸ್ಪತ್ರೆಯ ಇತಿಹಾಸದಲ್ಲಿ ಮೊದಲ ತೆರೆದ ಹೃದಯ ಶಸ್ತ್ರಚಿಕಿತ್ಸೆ(ಬೈಪಾಸ್ ಸರ್ಜರಿ) ನಡೆಸಿದೆ. ಖ್ಯಾತ ಹೃದ್ರೋಗ ತಜ್ಞ ಡಾ.ಯು.ಜಿ.ಭರತೇಶ್ ಅವರ ನೇತೃತ್ವದಲ್ಲಿ ಈಗಾಗಲೇ 5000 ಕ್ಕೂ ಹೆಚ್ಚು ಆಂಜಿಯೋಪ್ಲಾಸ್ಟಿ ಕಾರ್ಯವಿಧಾನಗಳು ಪೂರ್ಣಗೊಂಡಿವೆ.


ಅಲ್ಲದೆ ಜನರಲ್ ಮೆಡಿಸಿನ್, ಪೀಡಿಯಾಟ್ರಿಕ್ಸ್, ಆರ್ಥೋಪೆಡಿಕ್ಸ್, ಇಎನ್‌ಟಿ, ನೆಫ್ರಾಲಜಿ, ಗ್ಯಾಸ್ಟ್ರೋ ಸರ್ಜರಿ, ಜನರಲ್ ಸರ್ಜರಿ, ರೊಬೊಟಿಕ್ ಸರ್ಜರಿ, ಮನೋವೈದ್ಯಶಾಸ್ತ್ರ ಮತ್ತು ದಂತಚಿಕಿತ್ಸಾ ವಿಭಾಗಗಳು




ಕೂಡಾ ಶ್ಲಾಘನೀಯವಾಗಿ ಕಾರ್ಯನಿರ್ವಹಿಸುತ್ತಿವೆ.

ಈ ಸುಸಜ್ಜಿತ 72 ಹಾಸಿಗೆಗಳ ಆಸ್ಪತ್ರೆಯಲ್ಲಿ ಐಸಿಯು, ಎನ್‌ಐಸಿಯು, ಲೇಬರ್ ಥಿಯೇಟರ್, 3 ಆಪರೇಷನ್ ಥಿಯೇಟರ್‌ಗಳು, 24X7 ತುರ್ತು ವಿಭಾಗ, ಡಯಾಲಿಸಿಸ್ ಘಟಕ, ಸುಧಾರಿತ ಪ್ರಯೋಗಾಲಯ ಮತ್ತು ಎಕ್ಸ್‌ರೇ ಘಟಕವೂ ಇದೆ.

ಎರಡು ದಶಕಗಳ ನಂತರವೂ ಮತ್ತು ಅನೇಕ ಆಸ್ಪತ್ರೆಗಳ ಹೊರಹೊಮ್ಮುವಿಕೆಯಿಂದ "ಮಂಜು ಡಾಕ್ಟರ್ / ವೀಣಾ ಡಾಕ್ಟರ್‌ರವರ ಆಸ್ಪತ್ರೆ" ಎಂಬ ಹೆಸರಿನೊಂದಿಗೆ ಕಾಸರಗೋಡಿನ ಹೃದಯ ಮತ್ತು ಮನಸ್ಸನ್ನು ಸೆರೆಹಿಡಿದ ಯುನೈಟೆಡ್ ಮೆಡಿಕಲ್ ಸೆಂಟರ್, ಕಾಸರಗೋಡಿನ ಹೃದಯದಲ್ಲಿ ಇನ್ನೂ ಚಿನ್ನದ ಗರಿಯಂತೆ ನಿಂತಿದೆ. ರೋಗಿಗಳ ಕಡೆಗೆ ಸೌಮ್ಯವಾದ ಚಿಕಿತ್ಸೆ, ಪ್ರೀತಿ, ಗೌರವ, ಕರುಣೆ ಮತ್ತು ಸಹಾನು ಭೂತಿ ಕಾಸರಗೋಡಿನ ಜನರಿಗೆ ಈ ಆಸ್ಪತ್ರೆಯೊಂದಿಗೆ ಸಂಬಂಧ ನೆಲೆನಿಂತಿದೆ.







ಆಧುನಿಕ ಕಾಲದಲ್ಲಿ ಮರ್ಮಚಿಕಿತ್ಸೆ





1 elbow, teno-synovitis ಗಳು ಇತ್ಯಾದಿಗಳು ತೊಂದರೆಗಳಾದಾಗ, ಆ ನೋವುಗಳು ಹಲವರಲ್ಲಿ ವರ್ಷಗಟ್ಟಲೆ ಹಲವು ಚಿಕಿತ್ಸೆ ಪಡೆದ ನಂತರವೂ ದೀರ್ಘಕಾಲಿಕವಾಗಿ ಉಳಿಯುವುದನ್ನು ನಾವಿಂದು ನೋಡುತ್ತೇವೆ. ಅದೇ ರೀತಿ ಬೆನ್ನು ನೋವಿನ, ಡಿಸ್ಕ್ ಸಮಸ್ಯೆಗಳು, ಕುತ್ತಿಗೆ ನೋವಿನ ಸಮಸ್ಯೆಗಳು. ಇವೆಲ್ಲ ಅನೇಕ ಚಿಕಿತ್ಸೆಯ ನಂತರ ಕೂಡ ವರ್ಷಗಟ್ಟಲೆ ನೋವಿನಿಂದಲೇ ನರಳುವಂತಹ, ನೋವು ಉಳಿಯುವಂತಹ ರೋಗಿಗಳನ್ನು ನಾವು ದಿನನಿತ್ಯ ನೋಡುತ್ತೇವೆ.


ಇಂತಹ ರೋಗಗಳಲ್ಲಿ ಮರ್ಮ ಚಿಕಿತ್ಸೆ ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಮರ್ಮ ಚಿಕಿತ್ಸೆ ಮತ್ತು ಆಯುರ್ವೇದ ಔಷಧಿಗಳ ಮೂಲಕ ಅಂತಹ ನೋವುಗಳನ್ನು ಬಹಳ ಶೀಘ್ರವಾಗಿ ಗುಣಪಡಿಸಲು ಸಾಧ್ಯ. ಹಾಗೂ ಇನ್ನೂ ಕೆಲವು ಕಠಿಣ ದೀರ್ಘಕಾಲಿಕ ಸಮಸ್ಯೆಗಳಲ್ಲಿ ಪಂಚಕರ್ಮ ಚಿಕಿತ್ಸೆಯನ್ನು ಸೇರಿಸಿದರೆ ಅಂತಹ ರೋಗಗಳು ಬಹಳ ಶೀಘ್ರವಾಗಿ ಗುಣಮುಖವಾಗುತ್ತವೆ.











ವೈದ್ಯೋ ನಾರಾಯಣೋ ಹರಿಃ

ರಾಷ್ಟ್ರೀಯ ವೈದ್ಯರ ದಿನಾಚರಣೆಯ ಶುಭಾಶಯಗಳು



ನೇಪಥ್ಯದತ್ತ ಕುಟುಂಬ ವೈದ್ಯ ಪದ್ಧತಿ

1 ಅಥವಾ ಯಾವುದೇ ಅತ್ಯಾಧುನಿಕ ಪರೀಕ್ಷೆಗಳ ಕಾಟವೂ ತಪ್ಪುತ್ತದೆ. ಹಾಗಂದ ಮಾತ್ರಕ್ಕೆ ಆತನಿಗೆ ಸಂಶಯವಿದ್ದಲ್ಲಿ, ಪರೀಕ್ಷೆ ಮಾಡಿಸಲು ಅಥವಾ ತಜ್ಞ ವೈದ್ಯರ ಬಳಿ ಕಳುಹಿಸಲು ಹಿಂದೇಟು ಹಾಕುವುದಿಲ್ಲ. ಅನಿವಾರ್ಯವಿದ್ದಲ್ಲಿ ಅಥವಾ ತಕ್ಷಣವೇ ತುರ್ತು ಚಿಕಿತ್ಸೆ ಅಗತ್ಯವಿದ್ದಲ್ಲಿ ಉನ್ನತ ಸ್ತರದ ತಜ್ಞ ವೈದ್ಯರ ಬಳಿ ಅವರೇ ಕಳುಹಿಸಿಕೊಡುತ್ತಾರೆ. ಅಗತ್ಯವಿದ್ದಲ್ಲಿ ರೋಗಿಯ ಜೊತೆ ಅವರೂ ಬರುತ್ತಾರೆ. ಇದು ಕುಟುಂಬ ವೈದ್ಯ ಪದ್ಧತಿಯ ಅತ್ಯಂತ ಸೋಜಿಗದ ಮತ್ತು ವೈದ್ಯ ವೃತ್ತಿಯ ರಾಜಧರ್ಮದ ಪರಮೋಚ್ಚ ಅಭಿವ್ಯಕ್ತತೆ ಆಗಿರುತ್ತದೆ. ಇಲ್ಲಿ ರೋಗಿಯ ಕೌಟುಂಬಿಕ ಹಿನ್ನಲೆ, ಆರ್ಥಿಕ ಪರಿಸ್ಥಿತಿ, ರೋಗಿಯ ರೋಗದ ಚರಿತ್ರೆ, ವೈದ್ಯರ ಆತ್ಮೀಯತೆ, ರೋಗಿಗೆ ಕುಟುಂಬ ವೈದ್ಯರ ಮೇಲಿರುವ ನಂಬಿಕೆ, ಭರವಸೆ ಎಲ್ಲವೂ ಪೂರಕ ಅಂಶಗಳಾಗಿ ರೋಗಿ ಬೇಗನೆ ಗುಣವಾಗಲು ಧನಾತ್ಮಕವಾಗಿ ಸ್ಪಂದಿಸುತ್ತಾರೆ. ಯಾವಾಗ, ಎಲ್ಲಿಗೆ, ಯಾವ ತಜ್ಞರ ಬಳಿ ರೋಗಿಯನ್ನು ಕಳುಹಿಸಬೇಕು ಎಂಬುದರ ಸೈದ್ಧಾಂತಿಕ ಜ್ಞಾನ ಮತ್ತು ಅನುಭವ ಕುಟುಂಬ ವೈದ್ಯರಿಗೆ ಹೆಚ್ಚು ತಿಳಿದಿರುವುದರಿಂದ ರೋಗಿಗಳಿಗೆ ಅನಗತ್ಯವಾಗಿ ಒಬ್ಬ ತಜ್ಞ ವೈದ್ಯರಿಂದ ಇನ್ನೊಬ್ಬ ತಜ್ಞವೈದ್ಯರ ಬಳಿ ಎಡತಾಕುವುದು ತಪ್ಪುತ್ತದೆ. ಇದರಿಂದಾಗಿ ಎಲ್ಲರೂ ತಜ್ಞವೈದ್ಯರ ಬಳಿ ಹೋಗುವುದು ತಪ್ಪಿ, ಅನರ ಮೇಲಿನ ಒತ್ತಡವೂ ಕಡಿಮೆಯಾಗುತ್ತದೆ. ಮತ್ತು ಅಗತ್ಯವಿರುವ ರೋಗಿಗಳಿಗೆ ತಜ್ಞ ವೈದ್ಯರು ಬೇಗನೇ ಸಿಗುವಂತಾಗುತ್ತದೆ.



ಕುಟುಂಬ ವೈದ್ಯರ ಅವಸಾನಕ್ಕೆ ಕಾರಣಗಳು ಏನು?

ವೈದ್ಯಕೀಯ ಶಿಕ್ಷಣ ಇಂದು ಕೇವಲ ಶಿಕ್ಷಣವಾಗಿ ಉಳಿದಿಲ್ಲ, ಅದೊಂದು ಬಹುದೊಡ್ಡ ವ್ಯಾಪಾರದ ಸರಕು ಆಗಿದೆ. ಅತೀ ಹೆಚ್ಚು ಹಣಕ್ಕೆ ಬಿಕರಿಯಾಗುವ ಅಥವಾ ಮಾರಾಟವಾಗುವ ವೈದ್ಯಕೀಯ ಸೀಟು ಇಂದು ದೊಡ್ಡ ಮಾಫಿಯವಾಗಿ ಬೆಳೆದಿದೆ. ಒಬ್ಬ ವಿದ್ಯಾರ್ಥಿ ವೈದ್ಯಕೀಯ ಶಿಕ್ಷಣಕ್ಕೆ ಸೇರಲು ಕೊಡಬೇಕಾದ ಕ್ಯಾಪಿಟೋಕನ್ ಶುಲ್ಕ ಒಂದು ಕೋಟಿಗಿಂತಲೂ ಜಾಸ್ತಿ ಇದೆ. ಇಷ್ಟು ಖರ್ಚು ಮಾಡಿದ ಬಳಿಕ ಯಾರೂ ಕುಟುಂಬ ವೈದ್ಯರಾಗಿ ಹಳ್ಳಿಗಳಲ್ಲಿ ಅಥವಾ ನಗರಗಳಲ್ಲಿ ಸೇವೆ ಮಾಡಲು ತಯಾರಿರುವುದೇ ಇಲ್ಲ.

ತಜ್ಞ ವೈದ್ಯರಿಗೆ ನೀಡುವ ಗೌರವ ಮತ್ತು ಪ್ರಾಮುಖ್ಯತೆಯನ್ನು ಜನರು ಮತ್ತು ಸಮಾಜ, ಕುಟುಂಬ ವೈದ್ಯರಿಗೆ ನೀಡುವುದಿಲ್ಲ. ಈ ಕಾರಣದಿಂದ ಯುವ ವೈದ್ಯರು ಕುಟುಂಬ ವೈದ್ಯರಾಗಲು ಮನಸ್ಸು ಮಾಡುವುದಿಲ್ಲ.

ತಜ್ಞ ವೈದ್ಯರಾಗಿ ಹೆಚ್ಚು ಆರ್ಥಿಕವಾಗಿ ದುಡಿಯಲು ಸಾಧ್ಯವಿರುವ ಕಾರಣ ಕೇವಲ ಕುಟುಂಬ ವೈದ್ಯರಾಗಿ, ಉಳಿಯಲು ಯಾರೂ ಒಪ್ಪುವುದಿಲ್ಲ.

ತಜ್ಞ ವೈದ್ಯರಿಗೆ ಸಿಗುವ ರಾಜಮರ್ಯಾದೆ, ಮನ್ನಣೆ ಕುಟುಂಬ ವೈದ್ಯರಿಗೆ ಸಮಾಜ ನೀಡುವುದಿಲ್ಲ. ಹೆಚ್ಚಿನ ಎಲ್ಲಾ ಕಡೆಗಳಲ್ಲಿ ಕುಟುಂಬ ವೈದ್ಯರು ಸಮಾಜದಿಂದ ತೀರಾ ಅವಗಣನೆಗೆ ಒಳಗಾಗಿದ್ದಾರೆ. ಕುಟುಂಬ ವೈದ್ಯರು ಎಂದರೆ ಏನೋ ಅಸಡ್ಡೆ ಮತ್ತು ತಾತ್ಸಾರ ಭಾವದಿಂದ ನೋಡುವ ಜನರು ನಮ್ಮ ನಡುವೆ ಬಹಳ ಮಂದಿ ಇದ್ದಾರೆ. ಹೂಸಿದ್ದಕ್ಕೆ, ಕೆಮ್ಮಿದ್ದಕ್ಕೆ ತಜ್ಞ ವೈದ್ಯರ ಬಳಿ ಎಡತಾಕುವುದು ಜನರಿಗೆ ಪ್ರತಿಷ್ಠೆಯಾಗಿದೆ. ಸಮಾಜದಿಂದ ನಿರ್ಲಕ್ಷತೆಗೆ ಒಳಗಾದ ಕುಟುಂಬ ವೈದ್ಯರು, ತಮ್ಮ ವೃತ್ತಿ ಘನತೆ ಮತ್ತು ಆತ್ಮಗೌರವ ಕಾಪಾಡಿಕೊಳ್ಳುವುದು ಸವಾಲಾಗಿದೆ ಮತ್ತು ಹೆಚ್ಚಿನ ಕುಟುಂಬ ವೈದ್ಯರು ಕೀಳರಿಮೆಗೆ ತುತ್ತಾಗುತ್ತಿದ್ದಾರೆ. ಇದರ ಜೊತೆಗೆ ಆರ್ಥಿಕವಾಗಿಯೂ ಒಂದು ಪೂರ್ಣಕಾಲಿಕ ವೃತ್ತಿಯಾಗಿ ಕುಟುಂಬ ವೈದ್ಯರು ಬದುಕುವುದು ಇಂದಿನ ಕಾಲಘಟ್ಟದಲ್ಲಿ ಆಕರ್ಷಕವಾಗಿ ಉಳಿದಿಲ್ಲ. ತಜ್ಞ ವೈದ್ಯರ ಬಳಿ ಹೋಗಿ ಸಾವಿರಾರು ರೂಪಾಯಿ ಕೊಟ್ಟು ಬೀಗುವ ಜನರು, ಕುಟುಂಬ ವೈದ್ಯರಿಗೆ ನೂರು ರೂಪಾಯಿ ಸಂದರ್ಶನ ವೆಚ್ಚ ಕೊಡಲು ಹಿಂದೆ ಮುಂದೆ ನೋಡುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಸಾಲ ಕೇಳುವ ರೋಗಿಗಳೂ ಇದ್ದಾರೆ.

ಕುಟುಂಬ ವೈದ್ಯರ ಬಳಿ ಉಚಿತವಾಗಿ ಪರೀಕ್ಷೆ ಮಾಡಿಸಿ, ಉಚಿತ ಸಲಹೆ ಪಡೆದು, ಉಡಾಫೆಯಿಂದ ವರ್ತಿಸಿ, ಎದ್ದು ಹೋಗುವ ರೋಗಿಗಳು ನಮ್ಮ ನಡುವೆ ಇದ್ದಾರೆ. ಅತ್ತ ಸಮಾಜದಿಂದ ಇತ್ತ ಸರಕಾರದಿಂದಲೂ ಯಾವುದೇ ಸಹಕಾರ ಸಿಗದ ಹಿನ್ನಲೆಯಲ್ಲಿ ಕುಟುಂಬ ವೈದ್ಯರು ಹೈರಾಣಾಗಿ ಹೋಗಿ ಗೊಂದಲಕ್ಕೆ ತುತ್ತಾಗುತ್ತಿದ್ದಾರೆ. ಇದರ ಜೊತೆಗೆ ನಕಲಿ ವೈದ್ಯರೂ ಪೈಪೋಟಿಗೆ ನಿಂತು ಕುಟುಂಬ ವೈದ್ಯರ ಜೀವನವನ್ನು ಮತ್ತಷ್ಟು ಕಠಿಣವಾಗಿಸುತಿದ್ದಾರೆ. ಕುಟುಂಬ ವೈದ್ಯರಿಗೆ ಸರಕಾರ ಹತ್ತು ಹಲವು ನಿಯಮ ಜಾರಿ ಮಾಡಿ ಅವರನ್ನು ಹೈರಾಣಾಗಿಸಿದೆ. ಆದರೆ, ನಕಲಿ ವೈದ್ಯರಿಗೆ ಯಾವುದೇ ನಿಯಮಾವಳಿ ಇಲ್ಲದೆ ರಾಜಾರೋಷವಾಗಿ ವಿಜೃಂಭಿಸುತ್ತಿದ್ದಾರೆ.

ಈ ಎಲ್ಲಾ ಕಾರಣಗಳಿಂದ ಯಾವ ವೈದ್ಯ ಪದವೀಧರೂ ಕುಟುಂಬ ವೈದ್ಯಪದ್ಧತಿಯಿಂದ ವಿಮುಖರಾಗುತ್ತಿದ್ದಾರೆ. ಹೊಸ ವೈದ್ಯರು ಕುಟುಂಬ ವೈದ್ಯರಾಗಲು ಹಿಂದೇಟು ಹಾಕುತ್ತಿದ್ದಾರೆ. ಭಾರತದ ಜೀವಾಳವಾಗಿರುವ ಕುಟುಂಬ ವೈದ್ಯ ಪದ್ಧತಿ ಈಗ ನಿಧಾನವಾಗಿ ಅವಸಾನದ ಅಂಚಿಗೆ ಸರಿಯುತ್ತಿದೆ. ಇದರ ನೇರ ಪರಿಣಾಮ ಸಮಾಜದ ಮೇಲೆ ಆಗುತ್ತಿದೆ. ಕುಟುಂಬ ವೈದ್ಯರ ಕೊರತೆಯಿಂದ ಸಣ್ಣಪುಟ್ಟ ಕಾಯಿಲೆಗಳಿಗೆ ಜನರು ತಜ್ಞವೈದ್ಯರ ಬಳಿಗೆ ಹೋಗುವಂತಾಗಿ ಅವರ ಮೇಲೆ ವಿಪರೀತ ಒತ್ತಡ ಉಂಟಾಗಿದೆ. ಜೊತೆಗೆ ಚಿಕಿತ್ಸಾ ವೆಚ್ಚಗಳೂ ಮಿತಿ ಮೀರಿದೆ. ತಜ್ಞವೈದ್ಯರು ಹೆಚ್ಚಿನ ಪರೀಕ್ಷೆ ಮಾಡಿಸಿದರೆ ವೈದ್ಯರ ಮೇಲೆ ಅಸಹನೆ ಮತ್ತು ಅನುಮಾನದಿಂದ ನೋಡುವ ಕಾಲಘಟ್ಟಕ್ಕೆ ತಲುಪಿದ್ದೇವೆ. ಒಂದೇ ಕಾಯಿಲೆಗೆ ಮೂರು ನಾಲ್ಕು ವೈದ್ಯರ ಬಳಿ ಹೋಗಿ ಸಲಹೆ ಕೇಳುವ ಸ್ಥಿತಿಗೆ ಬಂದು ನಿಂತಿದ್ದೇವೆ. ಹಣವಂತ ರೋಗಿಗಳು ಹೇಗಾದರೂ ವ್ಯವಸ್ಥೆ ಮಾಡಿ ಪರಿಸ್ಥಿತಿ ನಿಭಾಯಿಸುತ್ತಿದ್ದಾರೆ. ಆದರೆ ಬಡಜನರು ಅತ್ತ ತಜ್ಞವೈದ್ಯರ ಬಳಿ ಹೋಗಲೂ ಸಾಧ್ಯವಾಗದೆ, ಇತ್ತ ಕುಟುಂಬ ವೈದ್ಯರೂ ಸಿಗದೆ, ನಕಲಿ ವೈದ್ಯರ ಬಳಿ ಹೋಗಿ ಜೀವ, ಹಣ ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದಾರೆ. ಸರಕಾರದ ದಿವ್ಯ ನಿರ್ಲಕ್ಷದಿಂದಾಗಿ ಸ್ಥಾಪಿತ ಹಿತಾಸಕ್ತಿಗಳು ವಿಜೃಂಭಿಸುತ್ತಿವೆ ಮತ್ತು ವೈದ್ಯಕೀಯ ಕ್ಷೇತ್ರಕ್ಕೂ, ಕಾರ್ಪೊರೇಟ್ ಸಂಸ್ಕೃತಿ ಬಂದು ವಕ್ಕರಿಸಿದೆ. ಈ ಹಿನ್ನಲೆಯಲ್ಲಿ ಸಮಾಜ, ಜನರು ಮತ್ತು ಸರಕಾರ ತಕ್ಷಣವೇ ಎಚ್ಚೆತ್ತುಗೊಂಡು ಕುಟುಂಬ ವೈದ್ಯ ಪದ್ಧತಿ ನಶಿಸಿ ಹೋಗದಂತೆ ಪೂರಕವಾದ ಕಾನೂನು ಮಾಡಿ, ಮತ್ತೆ ಸೂಕ್ತ ಪೂರಕ ವಾತಾವರಣ ಆದಷ್ಟು ಬೇಗ ಕಲ್ಪಿಸಬೇಕಾಗಿದೆ.

ಕೊನೆ ಮಾತು:

ಕುಟುಂಬ ವೈದ್ಯ ಪದ್ಧತಿ ನಮ್ಮ ಭಾರತೀಯ ಸಂಸ್ಕೃತಿಯ ಮತ್ತು ಸನಾತನ ಪರಂಪರೆಯ ಜೀವನಾಡಿ. ಒಂದು ಸಮಾಜದ ಸ್ವಾಸ್ಥವನ್ನು ಕಾಪಾಡಲು ಕುಟುಂಬ ವೈದ್ಯ ಪದ್ಧತಿ ಅತೀ ಅಗತ್ಯ ಮತ್ತು ಅನಿವಾರ?ಯ. ನಮ್ಮ ಭಾರತೀಯ ವೈದ್ಯ ಪದ್ಧತಿಯಲ್ಲಿ ನಂಬಿಕೆಗೆ ವಿಶೇಷ ಸ್ಥಾನವಿದೆ ಮತ್ತು ವೈದ್ಯರನ್ನು ದೇವರಂತೆ ಕಾಣುವ ವರ್ಗ ಇನ್ನೂ ಇದೆ. ಈ ಕಾರಣಕ್ಕೆ ಮಗದೊಮ್ಮೆ ಕುಟುಂಬ ವೈದ್ಯ ಪದ್ಧತಿಯನ್ನು ಮರುಸ್ಥಾಪಿಸುವುದು ನಮ್ಮೆಲ್ಲರ ಆದ್ಯತೆಯಾಗಿರುತ್ತದೆ.

ಹಗಲಿರುಳು ರೋಗಿಗಳ ಸೇವೆ ಮಾಡುತ್ತಾ ಸದಾಕಾಲ ವೈದ್ಯ ವೃತ್ತಿಯ ರಾಜಧರ್ಮ ವನ್ನು ಪಾಲಿಸುವ ಎಲ್ಲಾ ಕುಟುಂಬವೈದ್ಯರಿಗೆ ಮತ್ತು ತಜ್ಞ ವೈದ್ಯರುಗಳಿಗೆ ವೈದ್ಯರ ದಿನದ ಶುಭಾಶಯಗಳು

ಸರ್ವರ ಹಿತ ಬಯಸುವವನೇ ವೈದ್ಯ

"ಭಿಷಜಾಂ ಸಾಧು ವೃತ್ತಾನಾಂ ಭದ್ರಮಾಗಮ ಶಾಲಿನಾಂ/ ಅಭ್ಯಸ್ತ ಕರ್ಮಣಃ ವೈದ್ಯಃ" ಎಂಬ ಉಕ್ತಿಗಳಲ್ಲಿ ವೈದ್ಯರ ಗುಣಗಳನ್ನು ವಾಗ್ಭಟರೆಂಬ ಗ್ರಂಥಕಾರರು ಉಲ್ಲೇಖಿಸುವರು. ಭೇಷ ಎಂದರೆ ರೋಗ ಸಮೂಹ, ಅದನ್ನು ಜಯಿಸುವವನೇ ಭಿಷಕ್ ಮತ್ತು ಅವನು ಬಳಸುವ ವಸ್ತುಗಳೇ ಭೇಷಜ. ಆತನ ನಡತೆ ಸಾಧುವಾಗಿರಲಿ. ಆತನಿಗೆ ಅತೀ ಹೆಚ್ಚಿನ ಪ್ರಾಕ್ಟಿಕಲ್(ಕರ್ಮಾಭ್ಯಾಸ) ಪರಿಣತಿ ಇರಲಿ ಎಂದು ಸಾವಿರಾರು ವರ್ಷಗಳ ಹಿಂದೆಯೇ ಮನಗಂಡ ದೇಶ ನಮ್ಮದು. ವೈದ್ಯರನ್ನು ಎರಡು ಬಗೆಯಲ್ಲಿ ವಿಂಗಡಿಸಿದ ಕೀರ್ತಿ ಚರಕರದು. ವೈದ್ಯ ಶಬ್ದ ಹುಟ್ಟಲು ಅವರ ವಿದ್ಯಾ ಪಾರಮ್ಯ, ಪಾರಂಗತ್ಯ ಕಾರಣ. ಚಿಕಿತ್ಸೆಯನ್ನು ನಾಕು ಕಾಲಿನ ಮಂಚಕ್ಕೆ ಹೋಲಿಸಿದ್ದೂ ಚರಕ ಮಹರ್ಷಿಗಳೇ. ಅಂತಹ ಮಂಚದ ಮೊದಲ ಕಾಲು ವೈದ್ಯ. ಕೇಳಿದ ಮತ್ತು ಓದಿದ ಶಾಸ್ತ್ರದಲ್ಲಿ ಸಮ್ಯಕ್ ಆಳವಾದ ಅನುಭವ, ಕೆಲಸ ಸರಿಯಾಗಿ ಮಾಡಿ ತಿಳಿದ ಪ್ರಾಯೋಗಿಕ ಅನುಭವ, ದಕ್ಷತೆ ಮತ್ತು ಶೌಚ ಅಂದರೆ ಕೆಲಸದಲ್ಲಿ ಮಾತ್ರ ಅಲ್ಲ, ದೇಹ ಮತ್ತು ಮನದಲ್ಲಿ ಶುಚಿತ್ವ ಇರಲಿ. ಇವು ವೈದ್ಯನೆಂಬ ಮೊದಲ ಕಾಲಿನ ನಾಕು ಪ್ರಧಾನ ಗುಣಗಳು. ಸದಾ ಕಾಲ ಚಿಕಿತ್ಸೆಗೆ ಒದಗುವ ಭೇಷಜ ಸಂಪತ್ತು ಆತನ ಬಳಿ ಇರಲಿ. ಎಂತಹ ದುರ್ಭರ ಪ್ರಸಂಗದಲ್ಲಿ ಕೂಡಾ ರೋಗಿಯ ಸ್ಥಿತಿಗತಿ ಸುಧಾರಿಸಬಲ್ಲ ನೈಪುಣ್ಯ ಆತನಿಗಿರಲಿ ಎಂಬ ಹೊಸ ಗುಣಗಳನ್ನಿತ್ತವರು ಸುಶ್ರುತರು. ಧೀರತ್ವ ವ್ಯವಸಾಯ ವಿಶಾರದತ್ವ ಸತ್ಯಧರ್ಮ ಪರಾಯಣತೆಗಳನ್ನೂ ವಿಶ್ವದ ಆದಿಮ ಶಸ್ತ್ರವೈದ್ಯ ಸುಶ್ರುತರು ವೈದ್ಯರ ಗುಣಗಳೆಂದು ವಿವರಿಸಿದ್ದಾರೆ. ಅವರಿತ್ತ ವೈದ್ಯ ಗುಣ ಲಕ್ಷಣಗಳು ಮತ್ತೂ ಕೆಲವಿವೆ. ಉತ್ತಮ ಕುಲಜಾತರು, ಧಾರ್ಮಿಕ ಮನೋವೃತ್ತಿಯವರು, ಸ್ನೇಹಾಚಾರ ಶೀಲರು, ಸುಚರಿತರು, ಸದಾ ಜಾಗೃತರು, ಲೋಭರಾಹಿತ್ಯರು, ಹಟ ಸಾಧಕತನ ಇಲ್ಲದವರು, ವಿಶ್ವಾಸ ಇಟ್ಟವರ ಬಗ್ಗೆ ಸದಾ ಉಪಕಾರ ಮನೋಭಾವ ಹೊಂದಿದವರು, ಪ್ರಿಯದರ್ಶಿಗಳು, ಕ್ರೋಧ, ಪಾರುಷ್ಯತನ(ಗಡಸು ವರ್ತನೆ), ಮತ್ಸರ ಗುಣ ರಾಹಿತ್ಯತೆ ವೈದ್ಯರ ಗುಣಗಳು. ಆಲಸ್ಯ ಸುಳಿಯಗೊಡದ ಅವರು ಜಿತೇಂದ್ರಿಯರೂ, ಕ್ಷಮಾಗುಣಾವಿನೀತರೂ, ಶೀಲ, ದಯೆ ಉಳ್ಳವರೂ, ನಿಪುಣರೂ, ದೀನರಲ್ಲಿ ಅನುರಕ್ತರೂ ಆಗಿರಬೇಕು ಎಂಬ ವೈದ್ಯ ಲಕ್ಷಣಗಳು ಸುಶ್ರುತರ ಕೊಡುಗೆ.

ಚರಕರ ಮತ್ತೊಂದು ಸೊಲ್ಲು ಇಲ್ಲಿ ಇಂದು ಪ್ರಸ್ತುತ. ನಾತ್ಮಾರ್ಥಂ ನಾಪಿ ಕಾಮಾರ್ಥಂ ಅಥ ಬೂತದಯಾಂ ಪ್ರತಿಃ ಅಂದರೆ ಚಿಕಿತ್ಸೆ ಕೈಗೊಳ್ಳುವುದು ತನಗೋಸುಗ ಅಥವಾ ತನಗೆ ಸಿಗುವ ಫಲಗಳಿಗೋಸುಗ ಅಲ್ಲ, ಅದು ಕೇವಲ ತನ್ನಂತೆಯೇ ಇರುವ ಇನ್ನೊಂದು ಜೀವಿಯ ದುರಿತ ಕಳೆಯುವ ಮನುಷ್ಯ ಧರ್ಮ. ಭೂತ ದಯೆಯ ಸಹಾನುಭೂತಿ ಅಲ್ಲಿದೆ. ದಾನಶೀಲತೆ, ಸತ್ಯಪರತೆ ಕ್ಷಮಾಗುಣಗಳಿರಲಿ. ವಯೋವೃದ್ಧ ಜ್ಞಾನವೃದ್ಧರನ್ನು ಸದಾ ಗೌರವಿಸುವ ಸ್ವಭಾವವಿರಲಿ. ಅಂತಹ ಮಂದಿಗೆ ಯಾವ ರೋಗಗಳೂ













ಪಂಚಕರ್ಮ ಚಿಕಿತ್ಸೆ ಯಾತಕ್ಕಾಗಿ?

ರಾಷ್ಟ್ರೀಯ ವೈದ್ಯರ ದಿನಾಚರಣೆಯ ಶುಭಾಶಯಗಳು

ವೈದ್ಯೋ ನಾರಾಯಣೋ ಹರಿಃ



■ ಡಾ. ಜಯಗೋವಿಂದ ಉಕ್ಕಿನಡ್ಕ

ಆಯುರ್ವೇದದ ಪ್ರಕಾರ ವಾತ, ಪಿತ್ತ ಮತ್ತು ಕಫ ಎಂಬ ತ್ರಿದೋಷಗಳು ಶರೀರದಲ್ಲಿ ಸಮತೋಲನದಲ್ಲಿದ್ದಾಗ ಆರೋಗ್ಯವನ್ನೂ, ದೋಷಗಳು ಸಮಸ್ಥಿತಿಯಲ್ಲಿ ಇಲ್ಲದೇ ಇದ್ದಾಗ ರೋಗವನ್ನೂ ಉಂಟುಮಾಡುವುದು. ನಮ್ಮ ಆಹಾರ, ವ್ಯಾಯಾಮ, ವೃತ್ತಿ, ವಯಸ್ಸು, ಜೀರ್ಣಕ್ರಿಯೆ, ಮಾನಸಿಕ ಸ್ಥಿತಿ, ಋತು, ಪರಿಸರ ಹಾಗೂ ಹುಟ್ಟಿನಿಂದ ಬಂದಂತಹ ಪ್ರಕೃತಿ ಇತ್ಯಾದಿ ಹಲವು ಕಾರಣಗಳು ದೋಷಗಳ ಸ್ಥಿತಿಯನ್ನು ನಿರ್ಧರಿಸುವುದು. ಈ ರೀತಿ ವಿಷಮಗೊಂಡ ದೋಷಗಳು ಶರೀರದ ವಿವಿಧ ಅಂಗಗಳಲ್ಲಿ ತೊಂದರೆಯನ್ನುಂಟುಮಾಡಿ ಬೇರೆ ಬೇರೆ ರೀತಿಯ ವ್ಯಾಧಿಗಳನ್ನು ಉಂಟುಮಾಡುವುದು. ಆಯುರ್ವೇದ ಚಿಕಿತ್ಸೆ ಇತರ ಎಲ್ಲಾ ಪದ್ಧತಿಗಳಿಂದ ಚಿಕಿತ್ಸಾ ದೃಷ್ಟಿಯಲ್ಲಿ ಭಿನ್ನವಾಗಿದ್ದು ಕೇವಲ ರೋಗಕ್ಕೆ ಚಿಕಿತ್ಸೆ ನೀಡುವ ಬದಲು ರೋಗದ ಕಾರಣ, ಹಾನಿಗೊಂಡ ಭಾಗ ಅಥವಾ ಅಂಗ, ರೋಗ, ರೋಗ ನಡೆದು ಬಂದ ಹಾದಿ (patho physiology) ದೋಷ ಧಾತು ಮಲಗಳ ಸ್ಥಿತಿ, ರೋಗಿಯ ಸ್ಥಿತಿ ಇತ್ಯಾದಿ ಹಲವು ಮಾನದಂಡಗಳನ್ನು ಅಭ್ಯಸಿಸಿ ಚಿಕಿತ್ಸೆಯನ್ನು ನೀಡಲಾಗುತ್ತದೆ. ಈ ರೀತಿ ರೋಗವನ್ನು ಮೂಲದಿಂದಲೇ ಗುಣಪಡಿಸುವ ಆಯುರ್ವೇದ ಚಿಕಿತ್ಸೆ ಇಂದಿಗೂ ಚಿಕಿತ್ಸೆಯಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ.

ಪಂಚಕರ್ಮ ಚಿಕಿತ್ಸೆಯ ಉಪಯೋಗ ಏನು?

ನಮ್ಮ ದೈನಂದಿನ ಜೀವನ ಕ್ರಮದಲ್ಲಿ ವಿವಿಧ ಆಹಾರದ ಕಾರಣದಿಂದ, ವ್ಯಾಯಾಮವಿಲ್ಲದೇ ಇರುವುದರಿಂದ, ಅತಿಯಾದ ವ್ಯಾಯಾಮ ಮಾಡುವುದರಿಂದ, ಅತಿಯಾದ ಶಾರೀರಿಕ ಹಾಗೂ ಮಾನಸಿಕ ಒತ್ತಡದ ಕಾರಣದಿಂದ, ಹಾಗೂ ಶರೀರದ ಚಯಾಪಚಯ ಕ್ರಿಯೆಯ ಸಂದರ್ಭದಲ್ಲಿ, ಆಹಾರ ಜೀರ್ಣಕ್ರಿಯೆಯ ಸಂದರ್ಭದಲ್ಲಿ ಶರೀರದಲ್ಲಿ ನಿರಂತರ ಕಶ್ಮಲಗಳು ಉಂಟಾಗುತ್ತಿರುತ್ತವೆ. ಅದೇ ರೀತಿ ಜೀರ್ಣ ಕ್ರಿಯೆಯ ಸಂದರ್ಭದಲ್ಲಿ ಉಂಟಾಗುವ ಬಹುತೇಕ ಕಶ್ಮಲಗಳು ಮಲದ ಮುಖಾಂತರ, ಚಯಾಪಚಯ ಕ್ರಿಯೆಯಲ್ಲುಂಟಾಗುವ ಕಶ್ಮಲ (metabolic waste) ಬಹುತೇಕ ಮೂತ್ರ ಮಾರ್ಗದ ಮುಖಾಂತರ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಮಲ, ಬೆವರು, ಉಸಿರು, ಜೊಲ್ಲು, ಮೂಗಿನ ಸ್ರಾವಗಳ ಮುಖಾಂತರ ನಿರಂತರವಾಗಿ ಶರೀರದಿಂದ ಹೊರಹಾಕಲ್ಪಡುತ್ತವೆ.

ಸಮತೋಲಿತ ಆಹಾರ ಕ್ರಮ, ಉತ್ತಮ ಜೀರ್ಣ ಕ್ರಿಯೆ, ಕ್ರಮಬದ್ಧ ಮಲಮೂತ್ರ ವಿಸರ್ಜನೆ, ಸಮತೋಲಿತ ವ್ಯಾಯಾಮ, ಉತ್ತಮ ಹಾಗೂ ಉಲ್ಲಾಸ ಭರಿತ ಮಾನಸಿಕ ಸ್ಥಿತಿ ಇದ್ದಾಗ ಈ ಕಶ್ಮಲಗಳು ಬಹುತೇಕ ಪೂರ್ಣ ಪ್ರಮಾಣದಲ್ಲಿ ಶರೀರದಿಂದ ಹೊರದೂಡಲ್ಪಡುತ್ತವೆ ಹಾಗೂ ಉತ್ತಮ ಆರೋಗ್ಯಕ್ಕೆ ಕಾರಣವಾಗುತ್ತದೆ. ಆದರೆ ನಿರಂತರ ಕ್ರಮಬದ್ಧ ಜೀವನ ನಡೆಸುವುದು ಇಂದಿನ ಆಧುನಿಕ ಜೀವನ ಕ್ರಮದಲ್ಲಿ ಬಹಳಷ್ಟು ಜನರಿಗೆ ಕಷ್ಟವೇ ಸರಿ ಹಾಗೂ ವಿವಿಧ ಋತುಗಳಲ್ಲಿ ಹವಾ ವೈಪರೀತ್ಯದಿಂದ ಕ್ರಮಬದ್ಧವಾದ ಜೀವನ ಕ್ರಮವಿದ್ದರೂ ಶರೀರದಲ್ಲಿ ಕಶ್ಮಲಗಳು ಅಧಿಕವಾಗಿ ಶೇಖರಣೆಗೊಳ್ಳುವ ಸಾಧ್ಯತೆ ಜಾಸ್ತಿ, ಅನುವಂಶಿಕ ಕಾರಣದಿಂದಲೂ ಕಶ್ಮಲಗಳು ಅಧಿಕವಾಗಿ ಶರೀರದಲ್ಲಿ ಶೇಖರಣೆಗೊಳ್ಳಬಹುದು ಹಾಗೂ ವಿವಿಧ ರೋಗಗಳ ಉತ್ಪತ್ತಿಗೆ ಕಾರಣವಾಗಬಹುದು.

ನಮ್ಮ ಪ್ರಾಚೀನ ಋಷಿಮುನಿಗಳು ಈ ರೀತಿಯಾಗಿ ಶರೀರದಲ್ಲಿ ರೋಗಗಳು ಉಂಟಾಗುತ್ತವೆ ಎಂದು ಸಾವಿರಾರು ವರ್ಷಗಳ ಮೊದಲೇ ತಿಳಿದಿದ್ದರು ಹಾಗೂ ಅಂತಹ ರೋಗವನ್ನು ತಡೆಗಟ್ಟುವ ವಿಧಾನ ಮತ್ತು ರೋಗಿಗಳಿಗೆ ರೋಗಗಳನ್ನು ಮೂಲದಿಂದಲೇ ಕಿತ್ತೆಸೆಯುವ ವಿಧಾನವನ್ನು ವೇದಗಳ ಆಧಾರದಿಂದ ಆಯುರ್ವೇದ ಗ್ರಂಥಗಳಲ್ಲಿ ತಿಳಿಸಿರುತ್ತಾರೆ. ಆ ಚಿಕಿತ್ಸೆಗಳಲ್ಲಿ ಒಂದು ಮುಖ್ಯ ವಿಧಾನವೇ ಪಂಚಕರ್ಮ ಚಿಕಿತ್ಸೆ.

ಚರಕ ಪಂಚಕರ್ಮ ಚಿಕಿತ್ಸೆಯ ಮಹತ್ವವನ್ನು ವಿವರಿಸುವಾಗ ಯಾವ ರೀತಿ ಜಲಾಶಯಗಳಲ್ಲಿ ನೀರಿನ ಜೊತೆಗೆ ಕೆಸರು ಸೇರಿಕೊಂಡು ಪದೇ ಪದೇ ಶುದ್ದೀಕರಿಸದಿದ್ದಲ್ಲಿ ಉಪಯೋಗ ಶೂನ್ಯವಾಗುವುದೋ ಅದೇ ರೀತಿ ಶರೀರದಲ್ಲಿ ದೈನಂದಿನ ಚಟುವಟಿಕೆಗಳ ಸಂದರ್ಭದಲ್ಲಿ ಕ್ರಮೇಣ ಶರೀರದಲ್ಲಿ ಕಶ್ಮಲ ಸೇರಿಕೊಂಡು ರೋಗದ ಗೂಡು ಆಗುವ ಸಾಧ್ಯತೆಯಿದೆ. ಇದನ್ನು ಪರಿಹರಿಸಲು ಆರೋಗ್ಯವಂತರೂ ಕೂಡ ವರ್ಷಕ್ಕೊಮ್ಮೆ ಪಂಚಕರ್ಮ ಚಿಕಿತ್ಸೆ ಮಾಡಿಸುವುದು ಒಳಿತು ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ವಿವಿಧ ಔಷಧಿಗಳ ಉಪಯೋಗಗಳೊಂದಿಗೆ ರೋಗಕ್ಕೆ ಅನುಗುಣವಾಗಿ ವಾಂತಿ ಮಾಡಿಸುವುದರ ಮೂಲಕ, ಭೇದಿ ಮಾಡಿಸುವುದರ ಮೂಲಕ, ಬಸ್ತಿ ಅಥವಾ ಎನಿಮಾ ಕೊಡುವುದರ ಮೂಲಕ, ಹಾಗೂ ನಸ್ಯ ಚಿಕಿತ್ಸೆಯ ಮೂಲಕ ಇಂತಹ ಕಶ್ಮಲಗಳನ್ನು ಶರೀರದಿಂದ ಸುಲಭವಾಗಿ ನಿವಾರಿಸಿ ರೋಗವನ್ನು ತಡೆಗಟ್ಟುವ ಹಾಗೂ ಮೂಲದಿಂದಲೇ ಗುಣಪಡಿಸುವ ವಿಧಾನವನ್ನು ತಿಳಿಸಿರುತ್ತಾರೆ. ಕೆಲವೊಂದು ರೋಗಗಳಲ್ಲಿ ರಕ್ತನಾಳಗಳಿಂದ ನೇರವಾಗಿ ರಕ್ತವನ್ನು ನಿಯಮಿತ ಪ್ರಮಾಣದಲ್ಲಿ ತೆಗೆಯುವ ವಿಧಾನವನ್ನೂ ಅನುಸರಿಸಲಾಗುತ್ತದೆ. ಪಂಚಕರ್ಮ ಚಿಕಿತ್ಸೆಯ ಜೊತೆಗೆ ವಿವಿಧ ಮೂಲಿಕಾಸಿದ್ಧ ಔಷಧಿಗಳನ್ನು ಉಪಯೋಗಿಸುವುದರ ಮೂಲಕ ಬಹುತೇಕ ರೋಗಗಳನ್ನು ಆಯುರ್ವೇದ ಚಿಕಿತ್ಸೆಯಿಂದ ಸಂಪೂರ್ಣ ಗುಣಪಡಿಸಲು ಸಾಧ್ಯ.

ಪಂಚಕರ್ಮ ಚಿಕಿತ್ಸೆಯ ಜೊತೆಗೆ ಶರೀರಕ್ಕೆ ಅಭ್ಯಂಜನ ಮಾಡುವುದು, ಶಾಖ ಕೊಡುವುದು, ತೈಲ ಕಷಾಯದ ಮೂಲಕ ಶರೀರಕ್ಕೆ ಶಿರಕ್ಕೆ ಧಾರೆ ಎರೆಯುವುದು, ಕಷಾಯ ಸ್ನಾನಗಳು, ಕಿವಿ ಕಣ್ಣಿನ ಚಿಕಿತ್ಸೆಗಳು ಹಾಗೂ ಇನ್ನೂ ಅನೇಕ ಚಿಕಿತ್ಸೆಗಳನ್ನು ಸಂದರ್ಭಾನುಸಾರ ಮಾಡಲಾಗುತ್ತದೆ.

ಆಧುನಿಕ ವಿಜ್ಞಾನವೂ ಇಂದು ಶರೀರದಲ್ಲಿ ಕಶ್ಮಲಗಳು ಸೇರುತ್ತಾ ಹೋಗುವುದರಿಂದ ಬಹಳಷ್ಟು ರೋಗಕ್ಕೆ ಕಾರಣವಾಗುತ್ತದೆ ಎಂದು ಪ್ರತಿಪಾದಿಸುತ್ತಿದೆ. ಇದನ್ನು ಸಾವಿರಾರು ವರ್ಷಗಳ ಮೊದಲೇ ನಮ್ಮ ಋಷಿಮುನಿಗಳು ನಮಗೆ ಆಯುರ್ವೇದದ ಮುಖಾಂತರ ತಿಳಿಸಿರುತ್ತಾರೆ. ಇಂದು ಅನೇಕ ವಿದೇಶೀಯರು ಭಾರತಕ್ಕೆ ಬಂದು ಈ ಪಂಚಕರ್ಮ ಚಿಕಿತ್ಸೆಯನ್ನು ನಿಯಮಿತವಾಗಿ ಪಡೆದು ಅದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಆದರೆ ವಿದೇಶೀಯರಿಗೆ ಹೋಲಿಸಿದಲ್ಲಿ ನಿಯಮಿತವಾಗಿ ಪಂಚಕರ್ಮ ಚಿಕಿತ್ಸೆಯನ್ನು ಪಡೆಯುವ ಭಾರತೀಯರು ಕಡಿಮೆಯೆಂದೇ ಹೇಳಬಹುದು. ಕೇರಳೀಯರು ಮಾತ್ರ ಪಂಚಕರ್ಮದ ಹಲವು ಚಿಕಿತ್ಸಾ ವಿಧಾನವನ್ನು ತಮ್ಮ ಜೀವನ ಕ್ರಮವನ್ನಾಗಿಸಿದ್ದಾರೆ.

ವೇದಜ್ಞಾನದ ಅಧಾರದಲ್ಲಿ ವಿವರಿಸಲ್ಪಟ್ಟ ಪಂಚಕರ್ಮ ಚಿಕಿತ್ಸೆಯನ್ನು ಅನುಸರಿಸುವುದು ದೀರ್ಘ ಆರೋಗ್ಯದ ಕೀಲಿ ಕೈ. ಪ್ರತಿಯೊಬ್ಬರೂ ಪ್ರತೀ ವರ್ಷಕ್ಕೊಮ್ಮೆ ಸಾಧ್ಯವಾಗದಿದ್ದರೂ ಯಾವಾಗಲಾದರೊಮ್ಮೆ ಪಂಚಕರ್ಮ ಚಿಕಿತ್ಸೆ ಪಡೆಯುವುದು ಅತಿ ಸೂಕ್ತ.

ಶಿವನಿಗೆ ಪ್ರಿಯವಾದ ಮನೆಯಂಗಳದ ಪುಣ್ಯಪ್ರದ ಔಷಧೀಯ ಸಸ್ಯ ಬಿಲ್ವಪತ್ರೆ

ಅಥರ್ವವೇದದಲ್ಲಿ ಪವಿತ್ರ ಮರವೆಂದು ಉಲ್ಲೇಖಿಸಲ್ಪಟ್ಟಿದೆ. "ಬಿಲ್ವ" ಎಂದು ಹೇಳಿದರೆ ಸಾಕು, ಆದರೆ ಧಾರ್ಮಿಕವಾಗಿ ಬಿಲ್ವದ ಎಲೆಗೆ ಮಹತ್ವ ಇರುವುದರಿಂದ "ಬಿಲ್ವ ಪತ್ರೆ" ಮರ ಎಂದೇ ಕರೆಯುತ್ತಾರೆ. ಈ ಮರವನ್ನು ಉರಿಸುವುದಿಲ್ಲ, ಉರುವಲಾಗಿ ಉಪಯೋಗಿಸುವುದಿಲ್ಲ, ಮೂರು ಎಲೆಗಳು ಸೇರಿ ಒಂದು ಎಲೆ (ತ್ರಿಪರ್ಣ)ಯಾಗುತ್ತದೆ. ಆದುದರಿಂದ ಇದನ್ನು ಶಿವನ ಕಣ್ಣಿಗೆ ಹೋಲಿಸುತ್ತಾರೆ. ಬ್ರಹ್ಮ ವಿಷ್ಣು ಮಹೇಶ್ವರರಿಗೆ ಹೋಲಿಸುತ್ತಾರೆ. ಸತ್ವ ರಜ ತಮೋಗುಣಗಳೆಂದು ಬಿಂಬಿಸುತ್ತಾರೆ. ಬಿಲ್ವ ಪತ್ರಾರ್ಚನೆಯಿಂದ ಶಿವಲೋಕಪ್ರಾಪ್ತಿ, ಅಷ್ಟಬಿಲ್ವಾರ್ಚನೆಗೆ ವಿಶೇಷ ಮಹತ್ವ, ಬಿಲ್ವ ಪತ್ರೆ ತಿಂದೇ ಜೀವಿಸುವ ಸಾಧುಗಳಿದ್ದರು ಎಂಬ ಉಲ್ಲೇಖ. ಬಿಲ್ವ ಪತ್ರೆ ಮರದ ಅಡಿಯಲ್ಲಿ ಸ್ನಾನ ಮಾಡಿದರೆ ಪುಣ್ಯ, ನದಿಗಳಲ್ಲಿ ಸ್ನಾನ ಮಾಡಿದ ಪುಣ್ಯಪ್ರಾಪ್ತಿ ಇವೆಲ್ಲವೂ ಇದರ ಔಷಧದ ಗುಣಕ್ಕಿಂತ ಹೊರತಾದ ಮಹತ್ವವನ್ನು ತಿಳಿಸುತ್ತದೆ. 23ನೇ ತೀರ್ಥಂಕರ ಬಿಲ್ವ ಮರದಡಿಯಲ್ಲಿ ನಿರ್ವಾಣವಾದ ಕಾರಣ ಜೈನರಿಗೂ ಈ ಮರ ಪವಿತ್ರ. ಬಿಲ್ವ ಚೈತ್ರ ನಕ್ಷತ್ರವನ್ನು ಪ್ರತಿನಿಧಿಸುತ್ತದೆ.



ಡಾ| ಹರಿಕೃಷ್ಣ ಪಾಣಾಜೆ

ಇದು ಮುಳ್ಳುಗಳಿಂದ ಕೂಡಿದ ಮರವಾಗಿದೆ. ಕೊಂಬೆಗಳಲ್ಲಿ ಅಧಿಕ ಮುಳ್ಳುಗಳಿರುತ್ತದೆ. ಕಾಂಡ ಬೂದು ಬಣ್ಣವಾಗಿದ್ದರೆ ಎಲೆಗಳು ತ್ರಿಪರ್ಣ, ಸುಗಂಧ ಯುಕ್ತ ತೈಲಗ್ರಂಥಿಗಳಿಂದ ಕೂಡಿರುತ್ತದೆ. ಹಸಿರು ಮಿಶ್ರಿತಬಿಳಿ ಗೊಂಚಲಿನಲ್ಲಿ ಕಂಡುಬರುವ ಹೂ ಪರಿಮಳಯುಕ್ತವಾಗಿದೆ. ಹಸಿರು ವರ್ಣದ ಫಲ ಬೆಳೆದು ಹಣ್ಣಾದಾಗ ಹಳದಿಯಾಗುತ್ತದೆ. ಇದರ ಚಿಪ್ಪು ಗಟ್ಟಿಯಾಗಿರುತ್ತದೆ. ಆದುದರಿಂದ ಇದಕ್ಕೆ "ವುಡ್ ಆ್ಯಪಲ್" ಎನ್ನುತ್ತಾರೆ.

ದೇವರು ಬಿಲ್ವಪತ್ರೆಯನ್ನು ಇಷ್ಟಪಟ್ಟಂತೆ ಮಾನವ ಶರೀರವೂ ಇಷ್ಟಪಡುತ್ತದೆ. ಇದನ್ನು ಅತಿಸಾರ, ಆಯಾಸ, ಅಜೀರ್ಣ, ತಲೆನೋವು, ಕಿವಿನೋವು, ಹೊಟ್ಟೆನೋವಿನಂತಹ ತೊಂದರೆಗಳಲ್ಲಿ ಇದರ ಹೂ, ಎಲೆ, ಕಾಯಿ, ಹಣ್ಣು, ಬೇರುಗಳನ್ನು ಉಪಯೋಗಿಸಲಾಗುತ್ತದೆ.

ಹೂ:

ನಿತ್ರಾಣ, ಬಾಯಾರಿಕೆಯಾದಾಗ ಹೂವನ್ನು ಹಾಲಿನೊಂದಿಗೆ ಸೇರಿಸಿ. ಮಿಲ್ಕ್‌ಶೇಕ್ ಮಾಡಿ ಕುಡಿಯಬಹುದು, ಯಕೃತ್‌ನ ಕಾರ್ಯಗಳನ್ನು ಉತ್ತಮಗೊಳಿಸಲು ಸಹಾಯ ಮಾಡುವುದು.

ಎಲೆ:

ಇದನ್ನು ಅರೆದು ಹಿಂಡಿ ರಸ ತೆಗೆದು ಸೇವಿಸುವುದರಿಂದ ನಿಧಾನಗತಿಯಲ್ಲಿ ಬರುವ ಜ್ವರ ಕಡಿಮೆಯಾಗುವುದು. ಶರೀರದಲ್ಲಿ ನೋವಿನಿಂದ ಊತವಿದ್ದ ಭಾಗಕ್ಕೆ ಎಲೆಯನ್ನು ಬಿಸಿ ಮಾಡಿ ಶೇಖ ಕೊಡುವುದರಿಂದ ಕಡಿಮೆಯಾಗುವುದು. ಸಣ್ಣ ಪ್ರಮಾಣದ ಮಧುಮೇಹದಲ್ಲಿ 10–15 ಎಂ ಎಲ್ ನಷ್ಟು ರಸವನ್ನು ಕುಡಿಯುವುದರಿಂದ ನಿಯಂತ್ರಿಸಬಹುದು. ಮಲ ಬದ್ಧತೆಯಲ್ಲಿಯೂ ಉಪಯೋಗಿಸಬಹುದು. ಕೆಮ್ಮು ಕಫವಿರುವಾಗ ಕಷಾಯ ಮಾಡಿ ಕುಡಿಯಬೇಕು.

ಹಣ್ಣಾದ ಫಲ:

ಉರುಟಾದ ಹಣ್ಣಾದ ಹಳದಿ ಹಣ್ಣಿನ ಒಳಗಿನ ಮೃದುವಾದ ಭಾಗವನ್ನು ಮಲಬದ್ಧತೆಯಲ್ಲಿ, ಅಜೀರ್ಣ ಇರುವವರಿಗೆ ಸೇವಿಸಲು ಕೊಡಬಹುದು. ಇದರ ಪ್ರತಿ ನಿತ್ಯ ಸೇವನೆಯಿಂದ ಉತ್ತಮ ಮೈ ಬಣ್ಣ ಬರುತ್ತದೆ. ಅಲ್ಲದೆ ದೀರ್ಘಾಯುಷ್ಯ ಹೊಂದುತ್ತಾರೆಂದು ಕೂರ್ಮ ಪುರಾಣದಲ್ಲಿ ಉಲ್ಲೇಖಿಸಿದ್ದಾರೆ.

ಹಣ್ಣಾಗದ ಪಕ್ವಫಲ:

ಸಿಪ್ಪೆ ತೆಗೆದು ಒಣಗಿಸಿ ಪುಡಿಮಾಡಿ ಸಂಗ್ರಹಿಸಬಹುದು. ಕೂವೆಹುಡಿಯೊಂದಿಗೆ ಸ್ವಲ್ಪ ಪುಡಿಯನ್ನು ಸೇರಿಸಿ ಮಣ್ಣಿಮಾಡಿ ಅತಿಸಾರದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಬಹುದು. ಕೆಲವರಿಗೆ ಕೆಲವೊಮ್ಮೆ ಗಟ್ಟಿಯಾಗಿ ಕೆಲವೊಮ್ಮೆ ನೀರಾಗಿ ಹಾಗೂ ಆಗಾಗ ಭೇದಿಬಂದಂತೆ ಆಗುವ ಐಬಿಎಸ್ (ಇರಿಟೇಬಲ್ ಬವಲ್ ಸಿಂಡ್ರೋಮ್)ನಲ್ಲಿ ಪುಡಿಯನ್ನು ಮಜ್ಜಿಗೆಗೆ ಸೇರಿಸಿ ಸ್ವಲ್ಪ ಬೆಲ್ಲ ಹಾಗೂ ಶುಂಠಿ ಪುಡಿ ಸೇರಿಸಿ ದಿನಕ್ಕೆರಡು ಸಲ ಒಂದುವಾರ ಅಥವಾ ಎರಡುವಾರ ಕುಡಿಯಬೇಕು.

ರಕ್ತಭೇದಿಯಾಗುವಾಗ ಪುಡಿಯನ್ನು ಯರಟಿಮಧುರ ಪುಡಿ, ಸಕ್ಕರೆ ಹಾಗೂ ಜೇನಿನೊಂದಿಗೆ ಸೇರಿಸಿ ಸೇವಿಸಬೇಕು. ಕರುಳಿನಲ್ಲಿ ಹುಣ್ಣಾಗಿರುವಾಗ ಹೊಟ್ಟೆನೋವು, ರಕ್ತ ಮಿಶ್ರಿತ ಭೇದಿಯಾಗುತ್ತಿದ್ದರೆ ಪುಡಿಯನ್ನು ನೀರಿನಲ್ಲಿ ಕಲಸಿ ದಿನಕ್ಕೆರಡು ಸಲ ಒಂದು ತಿಂಗಳು ಸೇವಿಸಬೇಕು. ಇದರೊಂದಿಗೆ ಮುಸ್ತಕಾರಿಷ್ಟ ಸೇವನೆ ಉತ್ತಮ ಪರಿಣಾಮಬೀರುವುದು.

ಬೇರು:

ಬೇರಿನ ತೊಗಟೆ ಕಷಾಯ ಮಾಡಿ ಕುಡಿದರೆ ಜ್ವರ ಕಡಿಮೆಯಾಗುತ್ತದೆ. ಬೇರಿನ ಕಷಾಯ ಮಾಡಿ ಕುಡಿಯುವುದರಿಂದ ಔದಾಸೀನ್ಯ ಕಡಿಮೆಯಾಗಿ ಮೆದುಳು ಚುರುಕಾಗುವುದು. ಅತಿಯಾಗಿ ಕಾಡುವ ನಿದ್ದೆಯನ್ನು ಕಡಿಮೆಮಾಡುವುದು. ದಶಮೂಲಗಳಿಗೆ ವಿಶೇಷ ಮಹತ್ವವಿದೆ. ದಶಮೂಲಗಳಲ್ಲಿ ಬಿಲ್ವ ಮೂಲವೂ ಒಂದು. ಇದರ ಬೇರು ಸೇರಿಸಿ ತಯಾರಿಸಿದ ಅಸನಬಿಲ್ವಾದಿ ತೈಲ ತಲೆನೋವು ಶೀತ ಬಾಧೆಗಳಲ್ಲಿ ತಲೆಗೆ ಹಾಕಿ ಸ್ನಾನ ಮಾಡಬೇಕು. ದಶಮೂಲಾರಿಷ್ಟ ಎಲ್ಲರಿಗೂ ತಿಳಿದಿದೆ. ಇದರಲ್ಲಿಯೂ ಬಿಲ್ವದ ಬೇರನ್ನು ಉಪಯೋಗಿಸುತ್ತಾರೆ. ಬಿಲ್ವಫಲದ ತಿರುಳನ್ನು ಗೋಮೂತ್ರದಲ್ಲಿ ಇಟ್ಟು ಆಡಿನ ಹಾಲು ಎಳ್ಳೆಣ್ಣೆಯಲ್ಲಿ ತೈಲ ಪಾಕಮಾಡಿ ತಯಾರಿಸಿ ಸಂಗ್ರಹಿಸಿದರೆ ಅದನ್ನು ಕಿವಿನೋವಿನಲ್ಲಿ ಉಪಯೋಗಿಸಬಹುದು.

- ಎಲ್ಲಾ ವಿಧದ ಮಣ್ಣಿನಲ್ಲಿ ಸುಲಭವಾಗಿ ಬೆಳೆದು ಹೆಮ್ಮರವಾಗುತ್ತದೆ. ಇದರ ಫಲದ ಒಳಗಿರುವ ಬೀಜಗಳಿಂದ ಗಿಡಮಾಡಬಹುದು.
- ಅರಣ್ಯ ಇಲಾಖೆಯವರು ಇದರ ಸಸಿಗಳನ್ನು ಹಂಚುತ್ತಿದ್ದಾರೆ.
- ಆಯುರ್ವೇದ ಫಾರ್ಮಸಿಗಳಿಗೆ ಅತಿ ಬೇಡಿಕೆ ಉಳ್ಳ ಮರವಾಗಿದೆ. ಫಾರ್ಮಸಿಗಳು ಇದರ ಬೇರು, ಕಾಂಡ, ಫಲಗಳನ್ನು ಉಪಯೋಗಿಸುತ್ತಾರೆ.



ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಉಜಿರೆ - 574 240

Ph: 7760397878 /08256-295611/615/616/617 E-mail: sdmhospitalujire@gmail.com Website: www.sdmhospitalujire.com



ವೈದ್ಯರ ದಿನಾಚರಣೆಯ ಶುಭಾಶಯಗಳು

ನೀವು ಅಮೂಲ್ಯರು

ಇಂದು ಮತ್ತು ಪ್ರತಿದಿನ ನಿಮಗೆ ಹೃತ್ಪೂರ್ವಕ **ಧನ್ಯವಾದಗಳು**





- 2025–26ರಲ್ಲಿ 4 ಕೋಟಿಗೂ ಅಧಿಕ ಮೊತ್ತದ ಉಚಿತ ವೈದ್ಯಕೀಯ ಸೇವೆ
- 200 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯಲ್ಲಿ ಮಿತದರದ ಸೇವೆ
- 60+ ಸ್ಪೆಷಾಲಿಟಿ & ಸೂಪರ್ ಸ್ಪೆಷಾಲಿಟಿ ವೈದ್ಯರು

ಸತತ 2ನೇ ಬಾರಿ NABH ಮಾನ್ಯತೆ



MRI ಯಂತ್ರದ ಜೋಡಣಾ ಕಾರ್ಯ ಪೂರ್ಣಗೊಂಡಿದ್ದು, ಶೀಘ್ರದಲ್ಲಿ MRI ಸ್ಕ್ಯಾನಿಂಗ್ ಸೇವೆ ದೊರೆಯಲಿದೆ.

ನಮ್ಮಲ್ಲಿ ಫಿಸಿಯೋಥೆರಪಿ ಸೇವೆಯು ಲಭ್ಯವಿದೆ

ಇನ್ನು ಮುಂದೆ ನರರೋಗ ತಜ್ಞರ (Neuro surgery) ಸೇವೆ ಪ್ರತಿದಿನ ಲಭ್ಯ

ವೆಂಟಿಲೇಟರ್ ವ್ಯವಸ್ಥೆಯೊಂದಿಗೆ ಸುಸಜ್ಜಿತ ತೀವ್ರ ನಿಗಾ ಘಟಕ (ICU), ಡಯಾಲಿಸಿಸ್ ಸೆಂಟರ್ ಮತ್ತು ಬ್ರೋಂಕೋಸ್ಕೋಪಿ ಮೂಲಕ ಕಳೆದ ಒಂದು ವರ್ಷದಲ್ಲಿ 600ಕ್ಕೂ ಅಧಿಕ ಸಂಕೀರ್ಣವಾದ ವೈದ್ಯಕೀಯ ಪ್ರಕರಣಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ.



ಹೃದ್ರೋಗಿಗಳಿಗೆ ಸುಸಜ್ಜಿತ 2 ತೀವ್ರನಿಗಾ ಆಂಬ್ಯುಲೆನ್ಸ್

ಉಚಿತ ಡಯಾಲಿಸಿಸ್ ಸೇವೆ ನೀಡಿದ ಪ್ರಥಮ ಖಾಸಗಿ ಆಸ್ಪತ್ರೆ

SDM ಆಸ್ಪತ್ರೆಯಲ್ಲಿ Free ಡಯಾಲಿಸಿಸ್ ಸೇವೆ!



11 ಹಾಸಿಗೆಗಳ ಸುಸಜ್ಜಿತ ಹವಾನಿಯಂತ್ರಿತ ಡಯಾಲಿಸಿಸ್ ಸೆಂಟರ್‌ನಲ್ಲಿ ಸಂಪೂರ್ಣ ಉಚಿತ ಡಯಾಲಿಸಿಸ್ ಸೇವೆ.

2025 ಜನವರಿ 1ರಿಂದ 31–03–2026 ರವರೆಗೆ ಒಟ್ಟು 1.44 ಕೋಟಿ ರೂಪಾಯಿಗಳ 9644 ಉಚಿತ ಡಯಾಲಿಸಿಸ್ ಸೇವೆ.

ರಾಜ್ಯದಲ್ಲೇ ಮೊದಲ ಬಾರಿಗೆ NEWS18 ಕನ್ನಡ

ಖಾಸಗಿ ಆಸ್ಪತ್ರೆಯಲ್ಲಿ ಉಚಿತ ಡಯಾಲಿಸಿಸ್ ಸೇವೆ



ನುರಿತ ತಜ್ಞ ವೈದ್ಯರು ಮತ್ತು ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳೊಂದಿಗೆ ಪ್ರತಿದಿನ 600ಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ

ಖಾಯಂ ವೈದ್ಯರು

- 4 ಮಂದಿ ಫಿಸಿಷಿಯನ್
- 2 ಮಂದಿ ಪ್ರಸೂತಿ & ಸ್ತ್ರೀರೋಗ ತಜ್ಞರು
- 5 ಮಂದಿ ಮೂಳೆ ಶಸ್ತ್ರಚಿಕಿತ್ಸಾ ತಜ್ಞರು
- 2 ಮಂದಿ ಮಕ್ಕಳರೋಗ ತಜ್ಞರು
- 2 ಮಂದಿ ಶಸ್ತ್ರಚಿಕಿತ್ಸಾ ತಜ್ಞರು
- ನರರೋಗ ಶಸ್ತ್ರಚಿಕಿತ್ಸಾ ತಜ್ಞರು
- ತುರ್ತು ಚಿಕಿತ್ಸಾ ತಜ್ಞರು
- ENT ತಜ್ಞರು
- ಕಣ್ಣಿನ ತಜ್ಞರು
- ಮನೋರೋಗ ತಜ್ಞರು
- ದಂತ ಚಿಕಿತ್ಸಾ ತಜ್ಞರು
- ಚರ್ಮರೋಗ ತಜ್ಞರು
- 3 ಮಂದಿ ಅರೆವಳಿಕೆ ತಜ್ಞರು
- ಪೆಥಾಲಿಜಿಸ್ಟ್

ಇವರೊಂದಿಗೆ 16 ಮಂದಿ ಅನುಭವಿ ಸಹಾಯಕ ವೈದ್ಯರ ತಂಡ

ಸಂದರ್ಶನ ವೈದ್ಯರು

- ಹೃದಯರೋಗ ತಜ್ಞರು
- ಮನೋರೋಗ ತಜ್ಞರು
- ಮೂತ್ರರೋಗ ತಜ್ಞರು
- ನರರೋಗ ತಜ್ಞರು
- ಸ್ಕ್ಯಾನಿಂಗ್ ತಜ್ಞರು
- ಕ್ಯಾನ್ಸರ್ ರೋಗ ತಜ್ಞರು
- ಪ್ಲಾಸ್ಟಿಕ್ ಸರ್ಜರಿ ತಜ್ಞರು
- ಗ್ಯಾಸ್ಟ್ರೋ ಶಸ್ತ್ರಚಿಕಿತ್ಸಾ ತಜ್ಞರು
- ದಂತಚಿಕಿತ್ಸಾ ತಜ್ಞರು
- ಮೂತ್ರಪಿಂಡ ತಜ್ಞರು
- ಬಂಜೆತನ ತಪಾಸಣೆ ಮತ್ತು IVF ತಜ್ಞರು

ಹಲವಾರು ವೈದ್ಯಕೀಯ ಸಮ್ಮೇಳನಗಳಲ್ಲಿ ಖ್ಯಾತ ವೈದ್ಯರ ಸಮ್ಮುಖದಲ್ಲಿ ನಮ್ಮ ವೈದ್ಯರು ವಿಶೇಷ ಭಾಷಣ ಮಂಡಿಸುವ ಮೂಲಕ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಯಶಸ್ವಿ ಶಸ್ತ್ರಚಿಕಿತ್ಸೆಗಳು

2025–26ರಲ್ಲಿ 2624 ಶಸ್ತ್ರಚಿಕಿತ್ಸೆಗಳು

1500ಕ್ಕೂ ಹೆಚ್ಚು ಎಂಡೋಸ್ಕೋಪಿ ಮತ್ತು ಕೊಲೊನೋಸ್ಕೋಪಿ ಮಾಡಲಾಗಿದೆ

ನಮ್ಮ ವೈದ್ಯರ ಸಾಧನೆಗಳು

- ಎಂಡೋಸ್ಕೋಪಿಕ್ ಸ್ಪೈನಲ್ ಸರ್ಜರಿ ಮತ್ತು ಲ್ಯಾಪರೋಸ್ಕೋಪಿಕ್ ಸರ್ಜರಿಗಳು
- Club Foot ಮತ್ತು ಸಂಕೀರ್ಣ ಪಾದದ ಶಸ್ತ್ರಚಿಕಿತ್ಸೆ.
- ಕ್ಲಿಷ್ಟಕರವಾದ ಬಾಯಿ ಕ್ಯಾನ್ಸರ್, ಅನ್ನನಾಳ ಮತ್ತು ಹೊಟ್ಟೆಯ ಕ್ಯಾನ್ಸರ್‌ಗೆ ಶಸ್ತ್ರಚಿಕಿತ್ಸೆ ಮತ್ತು ಕಿಮೋಥೆರಪಿ
- ಉಬ್ಬಿರುವ ರಕ್ತನಾಳಗಳಿಗೆ ಎಂಡೋವೇನಸ್ ಲೇಸರ್ ಶಸ್ತ್ರಚಿಕಿತ್ಸೆ
- ಮೊಣಕಾಲು ಹಾಗೂ ಸೊಂಟದ ಬದಲಿ ಜೋಡಣೆ
- ಏಕಕಾಲಕ್ಕೆ 2 ಮೊಣಕಾಲುಗಳಿಗೆ ಶಸ್ತ್ರಚಿಕಿತ್ಸೆ.
- ವಿಶೇಷ ಪರಿಣತಿ ಹೊಂದಿರುವ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಿಂದ ಲ್ಯಾಪರೋಸ್ಕೋಪಿಕ್ ಶಸ್ತ್ರಚಿಕಿತ್ಸೆ.
- ಬೆನ್ನುಹುರಿಯ ದ್ರವ ತುಂಬಿದ ಚೀಲ (ಅರಕ್ನಾಯಿಡ್ ಸಿಸ್ಟ್)ಗಳಿಗೆ ಶಸ್ತ್ರಚಿಕಿತ್ಸೆ

24hr SERVICE EVERYDAY

- ಅತ್ಯಾಧುನಿಕ ತಾಂತ್ರಿಕ ಉಪಕರಣಗಳಿಂದ ಕೂಡಿದ ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿಗಳು
- 8 ಪ್ರತ್ಯೇಕ ಅತ್ಯಾಧುನಿಕ ವೆಂಟಿಲೇಟರ್‌ನೊಂದಿಗೆ ಅತ್ಯುತ್ತಮ ತೀವ್ರ ನಿಗಾ ಘಟಕ (ICU)
- ಸುಸಜ್ಜಿತ ಹವಾನಿಯಂತ್ರಿತ ಶಸ್ತ್ರಚಿಕಿತ್ಸಾ ಮತ್ತು ಹೆರಿಗೆ ಕೊಠಡಿಗಳು
- ಅಪಘಾತ ಮತ್ತು ತುರ್ತು ಚಿಕಿತ್ಸಾ ವಿಭಾಗ
- ಸೋಂಕುಮುಕ್ತ ಹವಾನಿಯಂತ್ರಿತ ಉಚಿತ ಡಯಾಲಿಸಿಸ್ ಸೇವೆ
- ಸುಧಾರಿತ 32 ಸ್ಲೈಸ್ ಸಿಟಿ ಸ್ಕ್ಯಾನಿಂಗ್
- 5 ಹಾಸಿಗೆಗಳ ನವಜಾತ ಶಿಶುಗಳ NICU ವಿಭಾಗ 6 ಹಾಸಿಗೆಗಳ PICU
- ಔಷಧ ವಿಭಾಗ., ರಕ್ತ ಪರೀಕ್ಷಾ ಪ್ರಯೋಗಾಲಯ, ಎಕ್ಸ್–ರೇ ವಿಭಾಗ.
- ನವೀನ ಉಪಕರಣಗಳು ಮತ್ತು ಸಿಬ್ಬಂದಿ ಸಹಿತ ಸುಸಜ್ಜಿತ 4 ಆಂಬ್ಯುಲೆನ್ಸ್‌ಗಳು ಇದರಲ್ಲಿ 2 ಸುಸಜ್ಜಿತ ICU ಆಂಬ್ಯುಲೆನ್ಸ್



ಸಿಟಿ ಸ್ಕ್ಯಾನ್

ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳು

- ಅತ್ಯಾಧುನಿಕ 32 Slice CT scan
- ಸುಸಜ್ಜಿತ ಅತ್ಯಾಧುನಿಕ C-Arm ಯಂತ್ರ
- 4 BPL Elisa –600 ವೆಂಟಿಲೇಟರ್ ಸೇರಿದಂತೆ ಒಟ್ಟು 8 ವೆಂಟಿಲೇಟರ್‌ಗಳು
- ಟೈಪ್–2 ಮಧುಮೇಹ ಪತ್ತೆ ಹಚ್ಚುವಲ್ಲಿ ಹೆಚ್ಚು ನಿಖರವಾದ ವರದಿ ನೀಡಬಲ್ಲ HPLC ಯಂತ್ರ
- ಶಸ್ತ್ರಚಿಕಿತ್ಸಾ ಸಲಕರಣೆಗಳ ಶುದ್ಧೀಕರಣಕ್ಕೆ ಅತ್ಯಾಧುನಿಕ Ethylene Oxide ಯಂತ್ರ
- ಹಾರ್ಮೋನ್ ಪರೀಕ್ಷೆ, ಬಂಜೆತನ ಪರೀಕ್ಷೆ, ಸೋಂಕು ರೋಗಗಳ ಪತ್ತೆಗಾಗಿ ಅತ್ಯಾಧುನಿಕ ಯಂತ್ರ

ತಜ್ಞ ವೈದ್ಯರ ವಿಶೇಷ ಸಂಜೆ ಕ್ಲಿನಿಕ್

ನಿಗದಿತ ದಿನಗಳಲ್ಲಿ ನಿಗದಿತ ವೈದ್ಯರು ಸಂಜೆ 5 ರಿಂದ 7ರ ತನಕ ಸಂಜೆ ಕ್ಲಿನಿಕ್‌ನಲ್ಲಿ ಲಭ್ಯ.

ಪೂರಕ ವ್ಯವಸ್ಥೆಗಳು

ಕ್ಯಾಂಟೀನ್, ರಕ್ತಸಂಚಯ ನಿಧಿ, ಆಪ್ಟಿಕಲ್ ಮಳಿಗೆ, ಶವಶೈತ್ಯಾಗಾರ, ಮುಕ್ತಿವಾಹನ, ಪ್ರತ್ಯೇಕವಾದ ಫೀಡಿಂಗ್ ರೂಮ್

ವಿಮಾ ಯೋಜನೆಗಳು

3 ಸರಕಾರಿ ಮತ್ತು 60ಕ್ಕೂ ಹೆಚ್ಚು ಖಾಸಗಿ ಆರೋಗ್ಯ ವಿಮಾ ಯೋಜನೆಗಳ ಮೂಲಕ ನಗದುರಹಿತ ಚಿಕಿತ್ಸಾ ಸೌಲಭ್ಯ.

ಅಮ್ಮಾ ಬರ್ತ್ ಸೆಂಟರ್



ಬಾಣಂತಿ ಮತ್ತು ನವಜಾತ ಶಿಶುಗಳ ಆರೈಕೆಗಾಗಿ ಪ್ರತ್ಯೇಕವಾದ ಸುಸಜ್ಜಿತ ಮತ್ತು ವಿಶೇಷ ಸೌಲಭ್ಯಗಳ 8 ಸ್ಪೆಷಲ್ & 6 ಸಾಮಾನ್ಯ ವಾರ್ಡ್‌ಗಳು

ಮುಂದಿನ ಯೋಜನೆಗಳು

ಶೀಘ್ರದಲ್ಲಿ ಈ ಸೇವೆಗಳು ದೊರೆಯಲಿದೆ.

ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಅಂತರರಾಷ್ಟ್ರೀಯ ಗುಣಮಟ್ಟದ ಮಾಡ್ಯೂಲರ್ ಆಪರೇಶನ್ ಥಿಯೇಟರ್

ಅತ್ಯಂತ ಸುರಕ್ಷಿತ ಆಪರೇಶನ್ ಥಿಯೆಟರ್ ಇದಾಗಿದ್ದು, ಶಸ್ತ್ರಚಿಕಿತ್ಸೆಯ ನಂತರದ ಸೋಂಕಿನ ಪ್ರಮಾಣವನ್ನು ಗರಿಷ್ಠ ಮಟ್ಟದಲ್ಲಿ ಕಡಿಮೆ ಮಾಡಲು ಸಹಕಾರಿಯಾಗಿದೆ. ಇದರಿಂದ ಶಸ್ತ್ರಚಿಕಿತ್ಸೆಗೆ ಒಳಪಡುವ ರೋಗಿಗಳಿಗೆ ಅನಗತ್ಯವಾಗಿ ಆ್ಯಂಟಿಬಯಾಟಿಕ್ ಲಸಿಕೆ ನೀಡುವುದನ್ನು ತಪ್ಪಿಸಬಹುದಾಗಿದೆ.

ಕಣ್ಣಿನ ಶಸ್ತ್ರಚಿಕಿತ್ಸೆಗೆ ಅತ್ಯಾಧುನಿಕ ಫ್ಯಾಕೋ ಕ್ಯಾಟರಾಕ್ಟ್ ಸರ್ಜರಿ

ಫ್ಯಾಕೋ ಮೆಶಿನ್ ಕಣ್ಣಿನ ಪೊರೆ ತೆಗೆಯಲು ಬಳಸುವ ಅತ್ಯಾಧುನಿಕ ವೈದ್ಯಕೀಯ ಸಾಧನ. ಇದರಿಂದ ಕೇವಲ 2–3 ಮಿ.ಮೀ. ನಷ್ಟು ಸಣ್ಣ ಛೇದನವನ್ನು ಮಾಡಿ ಶಸ್ತ್ರಚಿಕಿತ್ಸೆ ನಡೆಸಬಹುದಾಗಿದೆ. ಸರಳ ಮತ್ತು ಪರಿಣಾಮಕಾರಿ ಶಸ್ತ್ರಚಿಕಿತ್ಸೆ ಇದಾಗಿದ್ದು, ಉತ್ತಮ ದೃಷ್ಟಿಯೊಂದಿಗೆ ಶೀಘ್ರ ಚೇತರಿಕೆ ಇದರ ವಿಶೇಷತೆ.